# ಅಧ್ಯಾಯ-೫

# ಕೈಗಾರಿಕೆಗಳು

ತುಮಕೂರು ಜಿಲ್ಲೆಯು ವ್ಯವಸಾಯ ಪ್ರಧಾನವಾಗಿದ್ದು, ವ್ಯವಸಾಯೋತ್ಪನ್ನಗಳಾದ ಬತ್ತ, ರಾಗಿ, ನೆಲಗಡಲೆ, ರೇಷ್ಮೆ, ಹತ್ತಿ, ಎಣ್ಣೆ ಬೀಜಗಳು ಮೊದಲಾದವುಗಳನ್ನು ಅಧಿಕ ಪ್ರಮಾಣದಲ್ಲಿ ಬೆಳೆಯಲಾಗುತ್ತಿದೆ. ಜಿಲ್ಲೆಯ ಮಧುಗಿರಿ, ಕೊರಟಗೆರೆ, ಶಿರಾ ಮತ್ತು ಪಾವಗಡ ತಾಲೂಕುಗಳಲ್ಲಿ ನೆಲಗಡಲೆಯನ್ನು ವಾಣಿಜ್ಯ ಬೆಳೆಯಾಗಿ ಬೆಳೆಯಲಾಗುತ್ತಿದೆ. ತುಮಕೂರು, ಗುಬ್ಬಿ ಮತ್ತು ಕುಣಿಗಲ್ ತಾಲೂಕುಗಳಲ್ಲಿ ಬತ್ತ, ರಾಗಿ, ಹಿಪ್ಪುನೇರಳೆಯನ್ನು ಪ್ರಮುಖವಾಗಿ ಬೆಳೆಯಲಾಗುತ್ತಿದೆ. ತಿಪಟೂರು, ಚಿಕ್ಕನಾಯಕನಹಳ್ಳಿ, ಗುಬ್ಬಿ ಮತ್ತು ತುರುವೇಕೆರೆ ತಾಲೂಕುಗಳಲ್ಲಿ ತೆಂಗನ್ನು ವಾಣಿಜ್ಯ ಬೆಳೆಯಾಗಿ ಬೆಳೆಯಲಾಗುತ್ತಿದೆ. ಜಿಲ್ಲೆಯಲ್ಲಿ ೨೦೧೦-೧೧ರಲ್ಲಿ ೨,೪೦,೬೫೮ ಹೆಕ್ಟೇರ್ ಪ್ರದೇಶದಲ್ಲಿ ಏಕದಳ ಮತ್ತು ಉಪತೃಣ ಧಾನ್ಯಗಳನ್ನು, ೬೭,೨೫೭ ಹೆಕ್ಟೇರ್ ಪ್ರದೇಶದಲ್ಲಿ ದ್ವಿದಳ ಧಾನ್ಯಗಳನ್ನು, ಒಟ್ಟು ೩,೦೭,೯೧೫ ಹೆ. ಪ್ರದೇಶದಲ್ಲಿ ಆಹಾರ ಧಾನ್ಯಗಳನ್ನು ಬೆಳೆಯಲಾಗಿತ್ತು. ೧,೩೫,೦೧೯ ಹೆ. ಪ್ರದೇಶದಲ್ಲಿ ನೆಲಗಡಲೆ, ೪೧೯೭ ಹೆ. ಪ್ರದೇಶದಲ್ಲಿ ಸೂರ್ಯಕಾಂತಿ ಮೊದಲಾದವು ಸೇರಿ ಒಟ್ಟು ೧,೪೪,೯೨೯ ಹೆ. ಪ್ರದೇಶದಲ್ಲಿ ಎಣ್ಣೆ ಬೀಜಗಳನ್ನು ೪೩೮೮ ಹೆ. ಪ್ರದೇಶದಲ್ಲಿ ಹಣ್ಣುಗಳನ್ನು, ೨೨,೨೪೯ ಹೆ. ಪ್ರದೇಶದಲ್ಲಿ ತರಕಾರಿಗಳನ್ನು ಮತ್ತು ೧೨,೫೩೮ ಹೆ. ಪ್ರದೇಶದಲ್ಲಿ ವಾಣಿಜ್ಯ ಬೆಳೆಗಳಾದ ಕಬ್ಬು, ಹತ್ತಿ, ಹೊಗೆಸೊಪ್ಪು ಮೊದಲಾದವುಗಳನ್ನು ಬೆಳೆಯಲಾಗಿತ್ತು. ಜಿಲ್ಲೆಯ ಆಹಾರ ಮತ್ತು ಆಹಾರೇತರ ಬೆಳೆಗಳೆರಡೂ ಇಲ್ಲಿನ ಪ್ರಮುಖ ಕೈಗಾರಿಕೆಗಳಾದ ಅಕ್ಕಿಗಿರಣಿ, ಹಿಟ್ಟಿನ ಗಿರಣಿ, ಎಣ್ಣೆ ಮಿಲ್ಲುಗಳು, ಕೈಮಗ್ಗ ಮತ್ತು ವಿದ್ಯುತ್ ಮಗ್ಗ ಮೊದಲಾದವುಗಳಿಗೆ ಕಚ್ಚಾ ವಸ್ತುಗಳನ್ನು ಒದಗಿಸುತ್ತಿವೆ. ೨೦೧೧-೧೨ರಲ್ಲಿ ಜಿಲ್ಲೆಯಲ್ಲಿ ೩೦೫೩.೪೨ ಹೆಕ್ಟೇರ್ ವಿಸ್ತೀರ್ಣದಲ್ಲಿ ಹಿಪ್ಪುನೇರಳೆ ಬೆಳೆ ಬೆಳೆಯಲಾಗುತ್ತಿದ್ದು, ೨೩೦೦.೯೭೩ ಟನ್ ರೇಷ್ಮೆಗೂಡಿನ ಉತ್ಪಾದನೆ ಮಾಡಲಾಗಿತ್ತು. ಜಿಲ್ಲೆಯಲ್ಲಿ ೮೬೫೧ ಮಂದಿ ರೇಷ್ಮೆ ಕಸುಬು ಕೈಗೊಂಡು, ರೂ. ೪೬೭೩.೯೫ ಲಕ್ಷ ಮೌಲ್ಯದ ರೇಷ್ಮೆಗೂಡು ಉತ್ಪಾದಿಸಿ ರೇಷ್ಮೆ ಉತ್ಪಾದನೆಯಲ್ಲಿ ಜಿಲ್ಲೆಯು ಪ್ರಮುಖ ಸ್ಥಾನ ಪಡೆದುಕೊಂಡು ಕೃಷಿ ಆಧಾರಿತ ಕೈಗಾರಿಕೆಗಳ ಸ್ಥಾಪನೆಗೆ ಸಹಕಾರಿಯಾಗಿದೆ.

ಜಿಲ್ಲಾ ಕೈಗಾರಿಕಾ ಪ್ರಗತಿಯು ವ್ಯವಸಾಯೋತ್ಪನ್ನಗಳನ್ನೇ ಅಲ್ಲದೇ ಅರಣ್ಯ ಸಂಪತ್ತು, ಖನಿಜ ಸಂಪತ್ತು ಮತ್ತು ಇತರೆ ಸೌಲಭ್ಯಗಳಾದ ಕೈಗಾರಿಕಾ ಕ್ಷೇತ್ರ, ಕೈಗಾರಿಕಾ ವಸಾಹತು, ಸಾರಿಗೆ-ಸಂಪರ್ಕ, ಹಣಕಾಸು, ಮಾರುಕಟ್ಟೆ, ತಾಂತ್ರಿಕತೆ, ಕಾರ್ಮಿಕರು, ಮೊದಲಾದ ಮೂಲ ಸೌಕರ್ಯಗಳನ್ನು ಸಹ ಅವಲಂಬಿಸಿರುತ್ತದೆ. ಜಿಲ್ಲೆಯಲ್ಲಿ ಕಬ್ಬಿಣದ ಅದಿರು,

ಮ್ಯಾಂಗನೀಸ್, ಡೊಲೊಮೈಟ್, ಸುಣ್ಣಕಲ್ಲು, ಅಲಂಕಾರಿಕ ಶಿಲೆಗಳು ಮೊದಲಾದ ಖನಿಜಗಳು ದೊರಕುತ್ತಿದ್ದು, ಕೆಲವು ಖನಿಜಗಳನ್ನು ಜಿಲ್ಲೆಯಲ್ಲಿ ಉಪಯೋಗಿಸಿಕೊಳ್ಳಲಾಗುತ್ತಿದೆ. ಅಮ್ಮಸಂದ್ರ ಸಿಮೆಂಟ್ ಫ್ಯಾಕ್ಟರಿ ಜಿಲ್ಲೆಯಲ್ಲಿ ದೊರಕುವ ಸುಣ್ಣದಕಲ್ಲನ್ನು ಉಪಯೋಗಿಸಿಕೊಂಡು ಅನೇಕ ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿದೆ. ೨೦೧೧-೧೨ರಲ್ಲಿ ೪೫,೧೭೭ ಹೆಕ್ಟೇರ್ ಅರಣ್ಯ ಪ್ರದೇಶವಿದ್ದು, ಬೆಲೆಬಾಳುವ ಅರಣ್ಯ ಸಂಪತ್ತನ್ನು ಹೊಂದಿದೆ. ಇದರ ನೆರವಿನೊಂದಿಗೆ ಅನೇಕ ಸಾಮಿಲ್ಲುಗಳು ಕಾರ್ಯನಿರ್ವಹಿಸುತ್ತಿವೆ. ಜಿಲ್ಲೆಯಾದ್ಯಂತ ಸಾಂಪ್ರದಾಯಿಕ ಕೈಗಾರಿಕೆ ಎನಿಸಿರುವ ವ್ಯವಸಾಯೋಪಕರಣಗಳ ತಯಾರಿಕಾ ಘಟಕಗಳು, ಗೃಹೋಪಕರಣಗಳ ತಯಾರಿಕಾ ಘಟಕಗಳು ಹಾಗೂ ಪೀಠೋಪಕರಣಗಳ ತಯಾರಿಕಾ ಘಟಕಗಳು ಕಾರ್ಯನಿರ್ವಹಿಸುತ್ತಿವೆ.

ಜಿಲ್ಲೆಯು ೨೦೧೧-೧೨ರಲ್ಲಿ ೧೦,೬೪,೭೫೫ ಹೆಕ್ಟೇರ್ ಭೌಗೋಳಿಕ ಪ್ರದೇಶ ಹೊಂದಿದ್ದು, ಇದರಲ್ಲಿ ೪೫,೧೭೭ ಹೆ. ಅರಣ್ಯ ಪ್ರದೇಶ, ೧,೫೨,೪೯೫ ಹೆ. ಸಾಗುವಳಿಗೆ ಲಭ್ಯವಿಲ್ಲದಿರುವ ಭೂಮಿ, ೧,೯೦,೩೩೧ ಹೆ. ಸಾಗುವಳಿ ಮಾಡದಿರುವ ಇತರೆ ಭೂಮಿ (ಇದರಲ್ಲಿ ೧,೬೩,೪೬೩ ಹೆ. ಖಾಯಂ ಗೋಮಾಳ ಮತ್ತು ಇತರೆ ಹುಲ್ಲುಗಾವಲು ಪ್ರದೇಶ ಹಾಗೂ ೨೬,೮೬೮ ಹೆ. ಇತರೆ ಬೆಳೆ ಮತ್ತು ವೃಕ್ಷತೋಪುಗಳು ಸೇರಿವೆ), ೧,೯೭,೪೧೩ ಹೆ. ಬೀಳು ಭೂಮಿ (ಇದರಲ್ಲಿ ೧,೬೭,೭೨೯ ಚಾಲ್ತಿ ಬೀಳು ಭೂಮಿ ಹಾಗೂ ೨೯,೬೮೪ ಹೆ. ಇತರೆ ಬೀಳು ಭೂಮಿ ಸೇರಿವೆ), ೫,೦೮,೫೪೨ ಹೆ. ನಿವ್ವಳ ಬಿತ್ತನೆ ಪ್ರದೇಶ, ೫,೭೫,೯೬೧ ಹೆ. ಒಟ್ಟು ಬಿತ್ತನೆಯಾದ ಪ್ರದೇಶ ಹಾಗೂ ೬೬,೪೧೯ ಹೆ. ಒಂದಕ್ಕಿಂತ ಹೆಚ್ಚು ಭಾರಿ ಬಿತ್ತನೆಯಾದ ಪ್ರದೇಶವನ್ನು ಹೊಂದಿತ್ತು. ವ್ಯವಸಾಯಕ್ಕೆ ಯೋಗ್ಯವಲ್ಲದ ಪ್ರದೇಶದಲ್ಲಿ ಕೈಗಾರಿಕಾ ಕ್ಷೇತ್ರ ಮತ್ತು ಕೈಗಾರಿಕಾ ವಸಾಹತುಗಳನ್ನು ನಿರ್ಮಿಸಿ, ಕೈಗಾರಿಕೋದ್ಯಮಿಗಳಿಗೆ ವಿತರಿಸುವುದರ ಮೂಲಕ ಕೈಗಾರಿಕಾ ಬೆಳವಣಿಗೆಯನ್ನು ಸಾಧಿಸಲು ಸಹಕಾರಿಯಾಗಿದೆ.

ಜಿಲ್ಲಾ ಕೈಗಾರಿಕೆಯು ಪ್ರಗತಿ ಪಥದಲ್ಲಿ ಸಾಗಲು ಸಾರಿಗೆ ಮತ್ತು ಸಂಪರ್ಕ ಸೌಲಭ್ಯಗಳು ಪ್ರಮುಖ ಪಾತ್ರ ವಹಿಸುತ್ತವೆ. ೩೧-೦೩-೨೦೧೨ರ ಅಂತ್ಯಕ್ಕೆ ಜಿಲ್ಲೆಯಲ್ಲಿ ಒಟ್ಟು ೯೭ ಕಿ.ಮೀ ಉದ್ದದ ಬ್ರಾಡ್‌ಗೇಜ್ ರೈಲು ಮಾರ್ಗವಿದ್ದು, ತುಮಕೂರು, ಗುಬ್ಬಿ, ತುರವೇಕೆರೆ ಮತ್ತು ತಿಪಟೂರು ತಾಲೂಕುಗಳ ಮೂಲಕ ಹಾದು ಹೋಗಿದೆ. ಜಿಲ್ಲೆಯಲ್ಲಿ ಸರಕು ಮತ್ತು ಸಾಗಣೆಗೆ ಅನುಕೂಲ ಕಲ್ಪಿಸಿರುವ ರೈಲು ನಿಲ್ದಾಣಗಳು ತುಮಕೂರು ತಾಲೂಕಿನಲ್ಲಿ ೦೫, ಗುಬ್ಬಿ ತಾಲೂಕಿನಲ್ಲಿ ೦೨, ತುರುವೇಕೆರೆ ತಾಲೂಕಿನಲ್ಲಿ ೦೩ ಮತ್ತು ತಿಪಟೂರು ತಾಲೂಕಿನಲ್ಲಿ ೦೬ ಇದ್ದು, ಒಟ್ಟು ೧೬ ನಿಲ್ದಾಣಗಳು ಕಾರ್ಯನಿರ್ವಹಿಸುತ್ತಿವೆ. ಜಿಲ್ಲೆಯಲ್ಲಿ ೩೨೫.೯ ಕಿ.ಮೀ. ರಾಷ್ಟ್ರೀಯ ಹೆದ್ದಾರಿ, ೬೩೨.೨೧ ಕಿ.ಮೀ. ರಾಜ್ಯ ಹೆದ್ದಾರಿ, ೩೭೩೨.೪೮ ಕಿ.ಮೀ. ಜಿಲ್ಲಾ ಮುಖ್ಯ ರಸ್ತೆಗಳು, ೪೭.೨೦ ಕಿ.ಮೀ. ಇತರೆ ಜಿಲ್ಲಾ ರಸ್ತೆಗಳು, ೧೨೨೯.೩೫ ಕಿ.ಮೀ. ಮುನಿಸಿಪಾಲಿಟಿ ರಸ್ತೆಗಳು, ೫೮೮೧ ಕಿ.ಮೀ. ನೀರಾವರಿ ರಸ್ತೆಗಳು ಹಾಗೂ ೬೮.೪೦ ಕಿ.ಮೀ ಅರಣ್ಯ ರಸ್ತೆಗಳಿದ್ದು ಸರಕು ಮತ್ತು ಸಾರ್ವಜನಿಕರ ಸಾಗಾಣಿಕೆಗೆ ಅನುಕೂಲ ಕಲ್ಪಿಸಿವೆ. ಇದೇ ಕಾಲಾವಧಿಯಲ್ಲಿ ಜಿಲ್ಲೆಯಲ್ಲಿ ೫೬೪ ಅಂಚೆ ಕಚೇರಿಗಳು, ೧೧೨ ದೂರವಾಣಿ ವಿನಿಮಯ ಕೇಂದ್ರಗಳು, ಎರಡು ತಂತಿ ಕಛೇರಿಗಳು ಮತ್ತು ೪೨,೮೪೯ ದೂರವಾಣಿಗಳು ಸಂಪರ್ಕ ಕಲ್ಪಿಸಿದ್ದವು.

ಜಿಲ್ಲೆಯಲ್ಲಿ ೧೬೪ ರಾಷ್ಟ್ರೀಕೃತ ಬ್ಯಾಂಕ್ ಶಾಖೆಗಳು, ೪೬ ಗ್ರಾಮೀಣ ಬ್ಯಾಂಕ್ ಶಾಖೆಗಳು, ೨೨ ಡಿ.ಸಿ.ಸಿ ಬ್ಯಾಂಕ್ ಶಾಖೆಗಳು ಮತ್ತು ೧೦ ಕಾಸ್ಕರ್ಡ್ ಬ್ಯಾಂಕ್ (KSCARD) ಶಾಖೆಗಳು, ಕೈಗಾರಿಕೆಗಳಿಗೆ ಆರ್ಥಿಕ ನೆರವನ್ನು ಒದಗಿಸಿ ಜಿಲ್ಲೆಯ ಸರ್ವತೋಮುಖ ಬೆಳವಣಿಗೆಗೆ ಕಾರಣವಾಗಿವೆ. ಜಿಲ್ಲೆಯಲ್ಲಿ ಎಂಟು ಎಂಜಿನಿಯರಿಂಗ್ ಕಾಲೇಜುಗಳು, ೧೨ ಪಾಲಿಟೆಕ್ನಿಕ್ ಕಾಲೇಜುಗಳು ವಿದ್ಯಾರ್ಥಿಗಳಿಗೆ ತಾಂತ್ರಿಕ ಬೋಧನೆ ಹಾಗೂ ತರಬೇತಿ ಕಾರ್ಯದಲ್ಲಿ ನಿರತವಾಗಿವೆ. ಇವುಗಳೇ ಅಲ್ಲದೇ ಕೈಗಾರಿಕಾ ತರಬೇತಿ ಸಂಸ್ಥೆಗಳು ಮತ್ತು ಕುಶಲ ಕಾರ್ಮಿಕರ ತರಬೇತಿ ಸಂಸ್ಥೆಗಳು ಸಾಕಷ್ಟು ಕುಶಲಕರ್ಮಿಗಳನ್ನು ಸೃಷ್ಟಿ ಮಾಡುತ್ತಿವೆ. ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮತ್ತು ಪ್ರಾರಂಭಗೊಳ್ಳುತ್ತಿರುವ ಕೈಗಾರಿಕೆಗಳು ಇವರ ಸೇವೆಯನ್ನು ಪಡೆದುಕೊಳ್ಳುವುದರ ಮೂಲಕ ಸ್ಥಳೀಯ ಬೇಡಿಕೆಯನ್ನು ಪೂರೈಸಲು ಹೆಚ್ಚಿನ ಅವಕಾಶವಿರುತ್ತದೆ.

೨೦೧೧ರ ಜನಗಣತಿಯ ಪ್ರಕಾರ ಜಿಲ್ಲೆಯಲ್ಲಿ ಒಟ್ಟು ೨೬,೭೮,೯೮೦ ಜನಸಂಖ್ಯೆ ಇದ್ದು, ಇವರಲ್ಲಿ ೧೩,೫೪,೬೪೬ ಮಂದಿ ಒಟ್ಟು ಕೆಲಸಗಾರರಿದ್ದರು. ಇವರಲ್ಲಿ ೧೦,೭೮,೪೩೧ ಮಂದಿ ಮುಖ್ಯ ಕೆಲಸಗಾರರು, ೨,೭೬,೨೧೫ ಮಂದಿ ಸೀಮಾಂತ(Marginal) ಕೆಲಸಗಾರರಾಗಿರುವರು. ೧೦,೭೮,೪೩೧ ಮಂದಿ ಮುಖ್ಯ ಕೆಲಸಗಾರರಲ್ಲಿ ೪,೫೯,೬೪೪ ಮಂದಿ

ಸಾಗುವಳಿದಾರರು, ೨,೨೦,೦೧೮ ಮಂದಿ ಕೃಷಿ ಕಾರ್ಮಿಕರು, ೩೭,೮೩೬ ಮಂದಿ ಗೃಹ ಕೈಗಾರಿಕೆಗಳಲ್ಲೂ, ೩,೬೦,೯೩೩ ಮಂದಿ ಇತರೇ ಕೆಲಸಗಾರರ ಗುಂಪಿಗೆ ಸೇರಿರುವರು. ೨,೭೬,೨೧೫ ಮಂದಿ ಸೀಮಾಂತ ಕೆಲಸಗಾರರಲ್ಲಿ ೪೬,೨೬೬ ಮಂದಿ ಸಾಗುವಳಿದಾರರು, ೧,೩೨,೨೬೮ ಮಂದಿ ಕೃಷಿ ಕಾರ್ಮಿಕರು, ೧೬,೬೮೭ ಮಂದಿ ಗೃಹ ಕೈಗಾರಿಕೆಗಳಲ್ಲೂ, ೮೦,೯೪ ಇತರೆ ಕೆಲಸಗಾರರ ಗುಂಪಿಗೆ ಸೇರಿದವರಾಗಿದ್ದರು.

ಜಿಲ್ಲೆಯಲ್ಲಿ ಸಣ್ಣ ಮತ್ತು ಅತೀ ಸಣ್ಣ ಭೂ-ಹಿಡುವಳಿದಾರರು ಮತ್ತು ಕೃಷಿಕಾರ್ಮಿಕರಿಗೆ ವರ್ಷ ಪೂರ್ತಿ ಉದ್ಯೋಗ ನೀಡುವ ಕ್ಷೇತ್ರದ ಅವಶ್ಯಕತೆಯಿದೆ. ಜಿಲ್ಲೆಯಲ್ಲಿ ಪ್ರಾರಂಭಗೊಳ್ಳುವ ಕೈಗಾರಿಕೆಗಳು ಕಾರ್ಮಿಕರ ಕೊರತೆಯನ್ನು ಕೃಷಿ ಕ್ಷೇತ್ರದಿಂದ ತುಂಬಿಕೊಳ್ಳಬಹುದು. ಜಿಲ್ಲೆಯಲ್ಲಿ ವ್ಯವಸಾಯೋತ್ಪನ್ನವನ್ನುಳಿದು ಇತರ ಕ್ಷೇತ್ರಗಳಾದ ಖನಿಜ ಸಂಪತ್ತು, ಅರಣ್ಯ ಸಂಪತ್ತು, ಜಲಸಂಪತ್ತು ಮತ್ತು ತೋಟಗಾರಿಕೆಗಳ ಬೆಂಬಲವಿಲ್ಲದಿರುವುದರಿಂದ ಜಿಲ್ಲೆಯನ್ನು ರಾಜ್ಯದ ಕೈಗಾರಿಕಾ ಕ್ಷೇತ್ರದಲ್ಲಿ ಹಿಂದುಳಿದ ಜಿಲ್ಲೆಗಳಲ್ಲೊಂದೆಂದು ಘೋಷಿಸಲ್ಪಟ್ಟಿರುವುದರಿಂದ ನೂತನ ಕೈಗಾರಿಕೆಯನ್ನು ಸ್ಥಾಪಿಸುವ ಉದ್ದಿಮೆದಾರರಿಗೆ ಸರ್ಕಾರದ ವತಿಯಿಂದ ಕೆಲವು ಸವಲತ್ತು ಮತ್ತು ರಿಯಾಯಿತಿ ಸೌಲಭ್ಯವನ್ನು ಘೋಷಿಸಲಾಗಿದೆ.

## ಹಳೆಯ ಕೈಗಾರಿಕೆಗಳು

ಜಿಲ್ಲೆಗೆ ವಿದ್ಯುತ್ ಪೂರೈಕೆಯಾಗುವುದಕ್ಕೂ (೧೯೨೯) ಪೂರ್ವದಲ್ಲಿ ಕೆಲವು ಕೈಗಾರಿಕೆಗಳು ಸ್ಥಳೀಯ ಬೇಡಿಕೆಯನ್ನು ಪೂರೈಸುತ್ತಿದ್ದವು. ೧೯೧೩-೧೪ಕ್ಕೂ ಹಿಂದೆಯೇ ವೆಸ್ಲಿಯನ್ ಮಿಷನ್ ವರ್ಕ್‌ಶಾಪ್ ಉತ್ತಮ ಗುಣಮಟ್ಟದ ಪೀಠೋಪಕರಣಗಳನ್ನು ತಯಾರಿಸುವ ಕಾರ್ಯದಲ್ಲಿ ತೊಡಗಿತ್ತು. ವ್ಯವಸಾಯೋಪಕರಣಗಳು, ಎತ್ತಿನಗಾಡಿ ತಯಾರಿಕಾ ಘಟಕಗಳು ಜಿಲ್ಲೆಯಾದ್ಯಂತ ಹರಡಿದ್ದವು. ತುಮಕೂರು ನಗರದಲ್ಲಿ ಬಳಪದ ಕಾರ್ಖಾನೆ, ದಿಬ್ಬೂರಿನಲ್ಲಿ ಗಾಜಿನ ಬಳೆಗಳ ತಯಾರಿಕಾ ಘಟಕ, ಸೀತಕಲ್ ಮತ್ತು ಊರ್ಡಗೆರೆಗಳಲ್ಲಿ ಹಿತ್ತಾಳೆ ಪಾತ್ರೆಗಳನ್ನು ತಯಾರಿಸುವ ಕುಲುಮೆಗಳಿದ್ದವು. ಪಾವಗಡ ಮತ್ತು ಕೊರಟಗೆರೆಗಳಲ್ಲಿ ಗಾಜಿನ ಬಳೆಗಳನ್ನು ತಯಾರಿಸುತ್ತಿದ್ದರು. ಇಲ್ಲಿ ಬಟ್ಟೆಗೆ ಹಾಕುವ ಬಣ್ಣವನ್ನು ಸಹ ತಯಾರಿಸಲಾಗುತ್ತಿತ್ತು. ತುಮಕೂರು ತಾಲೂಕಿನ ಹೆಬ್ಬೂರು ಹೋಬಳಿಯಲ್ಲಿ ರೇಷ್ಮೆ ಹುಳು ಸಾಕಣೆ ಮತ್ತು ರೇಷ್ಮೆ ನೂಲು ತೆಗೆಯುವ ಕಾರ್ಯ ಸಣ್ಣ ಪ್ರಮಾಣದಲ್ಲಿ ನಡೆಯುತ್ತಿತ್ತು. ಮಧುಗಿರಿಯಲ್ಲಿ ಗಾಣಗಳ ಸಹಾಯದಿಂದ ಎಣ್ಣೆ ತೆಗೆಯುವುದು ಮತ್ತು ಹಿಂಡಿಯ ಉತ್ಪಾದನಾ ಕಾರ್ಯ ನಡೆಯುತ್ತಿತ್ತು. ಸ್ಥಳೀಯವಾಗಿ ತಯಾರಿಸುವ ಷೂಗಳಿಗೆ ಮಧುಗಿರಿ ಹೆಸರುವಾಸಿಯಾಗಿತ್ತು. ತಾಲೂಕಿನ ಅನೇಕ ಕಡೆಗಳಲ್ಲಿ ಹತ್ತಿನೂಲಿನಿಂದ ಬಟ್ಟೆ ತಯಾರಿಸುತ್ತಿದ್ದರು. ಶಿರಾ ಷೂ ತಯಾರಿಕೆಗೆ ಪ್ರಸಿದ್ಧಿ ಹೊಂದಿತ್ತು. ತಾಲೂಕಿನ ಅನೇಕ ಕಡೆಗಳಲ್ಲಿ ಉಣ್ಣೆ ಬಟ್ಟೆ (ಕಂಬಳಿ)ಯನ್ನು ತಯಾರಿಸುತ್ತಿದ್ದರು. ಪಾವಗಡ ತಾಲೂಕಿನಲ್ಲಿ ಉಣ್ಣೆ ಕಂಬಳಿಗಳನ್ನು ನೇಯುತ್ತಿದ್ದರು. ಹತ್ತಿ ಬಟ್ಟೆ ತಯಾರಿಕೆಗೆ ಕೃಷ್ಣಪುರ ಹೆಸರುವಾಸಿಯಾಗಿತ್ತು. ಗುಬ್ಬಿ ತಾಲೂಕಿನ ಕಲ್ಲೂರಿನಲ್ಲಿ ನೂಲುವ ಮತ್ತು ನೇಯ್ಗೆ ಕಾರ್ಯ ಬಹಳ ಹಿಂದಿನಿಂದಲೂ ನಡೆಯುತ್ತಿತ್ತು. ಗುಬ್ಬಿಯಲ್ಲಿ ಎತ್ತಿನ ಗಾಡಿ ಮತ್ತು ಮರದ ಸಾಮಾನುಗಳನ್ನು ತಯಾರಿಸುತ್ತಿದ್ದರು. ಎಣ್ಣೆ ಮಿಲ್ಲು ಮತ್ತು ಅಕ್ಕಿ ಗಿರಣಿಗಳು ಸಹ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ತಿಪಟೂರು ತಾಲೂಕಿನ ಅಣ್ಣಾಪುರ ಮತ್ತು ಕೆಲವು ಹಳ್ಳಿಗಳಲ್ಲಿ ಹತ್ತಿ ಬಟ್ಟೆ ತಯಾರಿಸಲಾಗುತ್ತಿತ್ತು. ಹಗ್ಗ ಮತ್ತು ಎತ್ತಿನ ಗಾಡಿಯನ್ನು ಸಹ ಇಲ್ಲಿ ತಯಾರಿಸುತ್ತಿದ್ದರು. ತುರುವೇಕೆರೆ ತಾಲೂಕಿನಲ್ಲಿ ಹತ್ತಿಬಟ್ಟೆ, ಹಗ್ಗ, ಎತ್ತಿನಗಾಡಿ ಮತ್ತು ಬಟ್ಟೆಗೆ ಹಾಕುವ ಬಣ್ಣವನ್ನು ತಯಾರಿಸಲಾಗುತ್ತಿತ್ತು. ಕುಣಿಗಲ್ ತಾಲೂಕು ಹಿಪ್ಪುನೇರಳೆ ಬೆಳೆಯುವುದು, ರೇಷ್ಮೆ ಹುಳು ಸಾಕುವುದು, ರೇಷ್ಮೆ ನೂಲು ತೆಗೆಯುವುದು. ಕಬ್ಬಿಣದ ಸಾಮಾನು ತಯಾರಿಸುವುದು, ಮೊದಲಾದವುಗಳಿಗೆ ಬಹಳ ಹಿಂದಿನಿಂದಲೂ ಪ್ರಸಿದ್ಧಿ ಪಡೆದಿರುವುದು. ಕುಣಿಗಲ್ ತಾಲೂಕಿನ ಬಿದನಗೆರೆ ಮತ್ತು ಗೊಟ್ಟಿಗೆರೆಗಳಲ್ಲಿ ಕಬ್ಬಿಣದ ಸಾಮಾನುಗಳನ್ನು ತಯಾರಿಸಲಾಗುತ್ತಿತ್ತು. ಕುಣಿಗಲ್ ಮತ್ತು ಅಮೃತೂರು ಚಾಪೆ ತಯಾರಿಕೆಗೆ ಹೆಸರುವಾಸಿಯಾಗಿದ್ದವು.

ಜಿಲ್ಲೆಯ ಅಜ್ಜೇನಹಳ್ಳಿ ಮತ್ತು ಬೆಳ್ಳಾರಗಳಲ್ಲಿ ಚಿನ್ನದ ಒಡವೆಗಳನ್ನು ತಯಾರಿಸುತ್ತಿದ್ದುದ್ದನ್ನು ಹೊರತು ಪಡಿಸಿದರೆ ಬಹಳ ಹಿಂದೆ ದೊಡ್ಡ ಪ್ರಮಾಣದ ಕೈಗಾರಿಕೆಗಳಿದ್ದುದು ಯಾವ ದಾಖಲೆಯಲ್ಲೂ ಕಂಡುಬರುವುದಿಲ್ಲ. ಜಿಲ್ಲೆಯಲ್ಲಿ ದೊರಕುತ್ತಿದ್ದ ಕಚ್ಚಾವಸ್ತುಗಳನ್ನು ಉಪಯೋಗಿಸಿಕೊಂಡು ಸಿದ್ಧ ವಸ್ತುಗಳನ್ನು ತಯಾರಿಸುವುದಕ್ಕೆ ಇದ್ದ ಅಡಚಣೆ ವಿದ್ಯುತ್ ಮತ್ತು ಇತರ ಉತ್ಪಾದನಾ ಪರಿಕರಗಳ ಅಭಾವ. ಆದರೆ ಸ್ಥಳೀಯ ಬೇಡಿಕೆಯನ್ನಾಧರಿಸಿದ ಗೃಹ ಕೈಗಾರಿಕೆಗಳು ಜಿಲ್ಲೆಯಾದ್ಯಂತ ಇದ್ದುದನ್ನು ಕಾಣಬಹುದು. ಇವುಗಳಲ್ಲಿ ಬಹಳ ಮುಖ್ಯವಾದದ್ದು ನೇಯ್ಗೆ. ಜಿಲ್ಲೆಯ ಅನೇಕ ಕಡೆಗಳಲ್ಲಿ ಕೈಮಗ್ಗಗಳಿದ್ದವು. ಚಿಕ್ಕನಾಯಕನಹಳ್ಳಿಯ ಉಜುಗಂಬಳಿ ಉತ್ತಮ ಗುಣಮಟ್ಟದಿಂದ ಕೂಡಿದ್ದಾಗಿತ್ತು. ಉಣ್ಣೆ ಸರಕಿನ

ಉತ್ಪಾದನೆಯನ್ನು ಬಿಟ್ಟರೆ ಹತ್ತಿ ನೂಲಿನ ದುಪ್ಪಟಿಗಳು ಮತ್ತು ಬೆಡ್‌ಷೀಟ್‌ಗಳ ನೇಯ್ಗೆ ಕಾರ್ಯವು ಜಿಲ್ಲೆಯ ಅನೇಕ ಕಡೆಗಳಲ್ಲಿ ಇದ್ದದ್ದು ಕಾಣಬರುತ್ತಿತ್ತು. ಇದು ಸ್ಥಳೀಯ ಬೇಡಿಕೆಗನುಗುಣವಾಗಿರುತ್ತಿತ್ತು. ಇವೆರಡರ ನಂತರದ ಸ್ಥಾನವನ್ನು ಕುಂಬಾರಿಕೆ, ಮರಗೆಲಸ, ಎಣ್ಣೆಗಾಣಗಳು, ಮರದ ಬಾಚಣಿಗೆ, ಬಳಪ ತಯಾರಿಕೆ ಮೊದಲಾದವುಗಳು ಪಡೆದುಕೊಂಡಿದ್ದವು. ಬಳಪ ತಯಾರಿಕೆಗೆ ತುಮಕೂರು, ಸ್ತ್ರೀಯರು ತೊಡುವ ಬಳೆಗಳ ತಯಾರಿಕೆಗೆ ಕೊರಟಗೆರೆ ಮತ್ತು ಪಾವಗಡ, ಎತ್ತಿನಗಾಡಿ ತಯಾರಿಕೆಗೆ ತಿಪಟೂರು ಮತ್ತು ಗುಬ್ಬಿ ಹೆಸರುವಾಸಿಯಾಗಿದ್ದವು. ಕೊಬ್ಬರಿ ಮತ್ತು ಇತರೆ ಎಣ್ಣೆ ಬೀಜಗಳಿಂದ ಎಣ್ಣೆ ತೆಗೆಯುವ ಗಾಣಗಳು ಮತ್ತು ಎಣ್ಣೆ ಮಿಲ್ಲುಗಳು ತಿಪಟೂರು ಮತ್ತು ಅದರ ಸುತ್ತಮುತ್ತ ಪಸರಿಸಿದ್ದವು. ಕುಣಿಗಲ್ ತಾಲೂಕಿನ ಅನೇಕ ಕಡೆಗಳಲ್ಲಿ ರೇಷ್ಮೆಗೂಡಿನ ನೂಲು ತೆಗೆಯುವ ಕಾರ್ಯ ನಡೆಯುತ್ತಿತ್ತು. ವ್ಯವಸಾಯೋಪಕರಣಗಳಿಗೆ ಉಪಯೋಗಿಸುತ್ತಿದ್ದ ಬೀಡು ಕಬ್ಬಿಣವನ್ನು ಚಿಕ್ಕನಾಯಕನಹಳ್ಳಿ ತಾಲೂಕಿನ ದವಣದ ಹೊಸಹಳ್ಳಿಯಲ್ಲಿ ಅಲ್ಪ ಪ್ರಮಾಣದಲ್ಲಿ ಉತ್ಪಾದಿಸಲಾಗುತ್ತಿತ್ತು.

## ಆಧುನಿಕ ಕೈಗಾರಿಕೆಗಳು

ತುಮಕೂರಿಗೆ ಮೊಟ್ಟಮೊದಲ ವಿದ್ಯುತ್ ಪೂರೈಕೆಯಾದದ್ದು ೧೯೨೯ರಲ್ಲಿ. ಇದಕ್ಕೂ ಪೂರ್ವದಲ್ಲಿ ಸಣ್ಣ ಪ್ರಮಾಣದ ವೆಸ್ಲಿಯನ್ ಮಿಷನ್ ವರ್ಕ್‌ಶಾಪ್ ತುಮಕೂರಿನಲ್ಲಿ ಪ್ರಾರಂಭಗೊಂಡು ಪೀಠೋಪಕರಣಗಳ ತಯಾರಿಕಾ ಕಾರ್ಯದಲ್ಲಿ ತೊಡಗಿತ್ತು. ಶಿರಾ ತಾಲೂಕಿನ ಅಜ್ಜೇನಹಳ್ಳಿ ಮತ್ತು ಬೆಳ್ಳಾರಗಳಲ್ಲಿ ಚಿನ್ನದ ಗಣಿ ಕಾರ್ಯ ೧೯೧೨ರಲ್ಲೇ ಪ್ರಾರಂಭಗೊಂಡಿತ್ತಾದರೂ ಆರ್ಥಿಕವಾಗಿ ಮುಂದುವರಿಸಲು ಸಾಧ್ಯವಿಲ್ಲವೆಂಬ ಕಾರಣದಿಂದ ೧೯೫೬ರಲ್ಲಿ ಪೂರ್ಣವಾಗಿ ಮುಚ್ಚಲ್ಪಟ್ಟಿತು. ಸ್ಥಳೀಯ ಬೇಡಿಕೆಯನ್ನಾಧರಿಸಿ ಸರಕುಗಳನ್ನು ಉತ್ಪಾದಿಸುವ ಸಣ್ಣ ಪ್ರಮಾಣದ ಕೈಗಾರಿಕೆಗಳು ಬಹಳ ಹಿಂದಿನಿಂದಲೂ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿವೆ. ತುರುವೇಕೆರೆ ತಾಲೂಕಿನ ಅಮ್ಮಸಂದ್ರದಲ್ಲಿ ಸ್ಥಾಪನೆಗೊಂಡ ಮೈಸೂರು ಸಿಮೆಂಟ್ಸ್ ಕಾರ್ಖಾನೆಯೇ (೧೯೫೮) ಜಿಲ್ಲೆಯ ಮೊಟ್ಟಮೊದಲ ಬೃಹತ್ ಕಾರ್ಖಾನೆಯಾಗಿದೆ. ಕೈಗಾರಿಕೋದ್ಯಮಿಗಳಿಗೆ ಬೇಕಾಗುವ ಅನೇಕ ತರಹದ ಸೌಲಭ್ಯಗಳನ್ನು ಒಂದೇ ನೆಲೆಯಲ್ಲಿ ಪಡೆಯಲು ಅನುಕೂಲ ಕಲ್ಪಿಸಿಕೊಡುವುದು, ನಶಿಸಿಹೋಗುತ್ತಿರುವ ಕೈಗಾರಿಕೆಗಳನ್ನು ಪುನಶ್ಚೇತನಗೊಳಿಸುವುದು. ಕೈಗಾರಿಕೋದ್ಯಮಿಗಳಿಗೆ ತರಬೇತಿ ಸೌಲಭ್ಯವನ್ನೊದಗಿಸುವ ಉದ್ದೇಶದಿಂದ ಜಿಲ್ಲಾ ಕೈಗಾರಿಕಾ ಕೇಂದ್ರ ೧೯೭೮ರಲ್ಲಿ ಪ್ರಾರಂಭಗೊಂಡ ಮೇಲೆ ಸಿದ್ಧಗಂಗಾ ಆಯಿಲ್ ಎಕ್ಸ್‌ಟ್ರಾಕ್ಷನ್ (೧೯೭೪) ಹೊರತುಪಡಿಸಿ, ಅನೇಕ ಮಧ್ಯಮ ಪ್ರಮಾಣದ ಕೈಗಾರಿಕೆಗಳು ಹುಟ್ಟಿಕೊಂಡವು. ೧೯೭೯ರಲ್ಲಿ ಪ್ರಾರಂಭಿಸಲ್ಪಟ್ಟ ಹೆಚ್.ಎಂ.ಟಿ.ವಾಚ್ ಫ್ಯಾಕ್ಟರಿ, ತುಮಕೂರು; ಮೆ॥ ಜಮ್ ಪ್ರಾಪರ್ಟಿಸ್ ಪ್ರೈ.ಲಿ., ಸತ್ಯಮಂಗಲ, ತುಮಕೂರು (೧೯೮೦), ಮೆ॥ ಎಚ್.ಆರ್. ಜಾನ್‌ಸನ್ ಅಂಡ್ ಜಾನ್‌ಸನ್ ಲಿ., ಅಂಚೆಪಾಳ್ಯ, ಕುಣಿಗಲ್ (೧೯೮೪), ಮೆ॥ ಕಾರ್ಮೊಬೈಲ್ಸ್ ಪ್ರೈ. ಲಿ., ಹಿರೇಹಳ್ಳಿ ಕೈಗಾರಿಕಾ ಪ್ರದೇಶ, ತುಮಕೂರು (೧೯೮೪), ಮೆ॥ ಡಿಶಾ ಇಂಡಿಯಾ ಮತ್ತು ಮೆ॥ ಇಂಡೋಸ್ವಿಸ್ ಆಂಟಿ ಶಾಕ್ ಲಿ., ಸತ್ಯಮಂಗಲ ಕೈಗಾರಿಕಾ ಪ್ರದೇಶ, ತುಮಕೂರು (೧೯೮೬), ಮೆ॥ ಟಿ.ವಿ.ಎಸ್. ಎಲೆಕ್ಟ್ರಾನಿಕ್ಸ್ ಲಿ., ಪಂಡಿತನಹಳ್ಳಿ, ತುಮಕೂರು ತಾಲೂಕು (೧೯೮೭), ಮೆ॥ ವಿಪ್ರೋ ಲಿ., ಅಂತರಸನಹಳ್ಳಿ ಕೈಗಾರಿಕಾ ಪ್ರದೇಶ, ತುಮಕೂರು (೧೯೯೩), ಮೆ॥ ಮೈನಿ ಗ್ರಾನೈಟ್ಸ್, ಹಿರೇಹಳ್ಳಿ ಕೈಗಾರಿಕಾ ಪ್ರದೇಶ (೧೯೯೩), ಮೆ॥ ಸೀತಾ ಗ್ರಾನೈಟ್ ಇಂಡಸ್ಟ್ರೀಸ್ ಲಿ., ಸತ್ಯಮಂಗಲ ಕೈಗಾರಿಕಾ ಪ್ರದೇಶ, ತುಮಕೂರು (೧೯೯೬), ಮೆ॥ ಸೆಮಿಲ್ಯಾಬ್ ಪ್ರೈ.ಲಿ., ಮತ್ತು ಮೆ॥ ಎಕೋ ವೀನಲ್ ಇಂಟರ್‌ನ್ಯಾಷನಲ್, ಅಂಚೆಪಾಳ್ಯ ಕೈಗಾರಿಕಾ ಪ್ರದೇಶ, ಕುಣಿಗಲ್ (೨೦೦೨), ಮೆ॥ ಸನ್.ವೀಕ್ ಸ್ಟೀಲ್ಸ್ ಪ್ರೈ.ಲಿ., ಜೋಡಿದೇವರಹಳ್ಳಿ, ಶಿರಾ ತಾಲೂಕು (೨೦೦೪), ಮೆ॥ ರಿಟ್ ಜೆಲ್ ಪ್ರೈ.ಲಿ., ಅಂಚೆಪಾಳ್ಯ ಕುಣಿಗಲ್, ಮೆ॥ ಬೇಲೂರು ಬಾಯ್ಲರ್ಸ್ ಲಿ., ಅಂತರಸನಹಳ್ಳಿ ಕೈಗಾರಿಕಾ ಪ್ರದೇಶ, ತುಮಕೂರು ಮತ್ತು ವಿಶಾಕ್ ಇಂಡಸ್ಟ್ರೀಸ್ ಲಿ., ನಾಗೇನಹಳ್ಳಿ, ತುಮಕೂರು ತಾಲೂಕು, ಇವು ೨೦೦೫ರಲ್ಲಿ ಪ್ರಾರಂಭಗೊಂಡಿವೆ. ೨೦೦೬ರಲ್ಲಿ ಪ್ರಾರಂಭಗೊಂಡ ಮಧ್ಯಮ ಪ್ರಮಾಣದ ಕೈಗಾರಿಕೆಗಳಲ್ಲಿ ಎಂ.ಎಚ್.ಟಿ. ಫಿಲ್ಟರ್ಸ್ ಇಂಡಿಯಾ ಪ್ರೈ.ಲಿ. ಮನ್ ಅಂಡ್ ಹ್ಯೂಮೆಲ್ ಫಿಲ್ಟರ್ಸ್ ಪ್ರೈ.ಲಿ., ನಿಯೋಫುಟ್ಸ್ ಪ್ರೈ.ಲಿ ಮತ್ತು ಕಿರಣ್ ಲಿಬರ್ಸ್ ಪ್ರೈ.ಲಿ., ಅಂತರಸನಹಳ್ಳಿ ಕೈಗಾರಿಕಾ ಪ್ರದೇಶ, ತುಮಕೂರು ಹಾಗೂ ವಿಜಯ ಸ್ಟೀಲ್ಸ್ ಪ್ರೈ.ಲಿ., ಕುಣಿಗಲ್ ಇವು ಪ್ರಮುಖವಾಗಿವೆ.

## ಕೈಗಾರಿಕಾ ನೀತಿ

ಕೈಗಾರಿಕಾ ಬೆಳವಣಿಗೆಯು ಬಡತನವನ್ನು ನಿರ್ಮೂಲನೆ ಮಾಡಿ, ನಿರುದ್ಯೋಗವನ್ನು ನಿವಾರಿಸುವ ಒಂದು ಅತ್ಯುತ್ತಮ ಸಾಧನವಾಗಿದೆಯೆಂದು ರಾಜ್ಯ ಸರ್ಕಾರ ಮನಗಂಡಿದೆ. ಕೈಗಾರಿಕೆ, ವ್ಯಾಪಾರ ಮತ್ತು ಸೇವಾ ವಲಯಗಳ ಬೆಳವಣಿಗೆಯು ಅಧಿಕ ಬಂಡವಾಳ ಹೂಡಿಕೆಯನ್ನು ಉತ್ತೇಜಿಸುತ್ತದೆ. ತಲಾವಾರು ವರಮಾನ ಮಟ್ಟವನ್ನು ಸುಧಾರಿಸುತ್ತದೆ ಹಾಗೂ ದುಡಿಯುವ ಕೈಗಳಿಗೆ ಉದ್ಯೋಗ ನೀಡುತ್ತದೆ. ಈ ಪ್ರಯೋಜನಗಳನ್ನು ಸಾಕಾರಗೊಳಿಸಿ, ಸಾಮಾಜಿಕ-ಆರ್ಥಿಕ ಬದಲಾವಣೆಗಳನ್ನು ಚುರುಕುಗೊಳಿಸಲು, ರಾಜ್ಯವು ಕೈಗಾರಿಕಾಭಿವೃದ್ಧಿಗೆ ಪರಮ ಆದ್ಯತೆ ನೀಡುತ್ತದೆ. ಈ ಕಾರ್ಯವಿಧಾನದಲ್ಲಿ ಎಲ್ಲಾ ರಂಗಗಳನ್ನು ಒಳಪಡಿಸುವಿಕೆ, ಸಮತೋಲನದ ಕೈಗಾರಿಕೀಕರಣ, ಸಮಾಜದ ವಿವಿಧ ಗುಂಪುಗಳಿಗೆ ಎಲ್ಲೆಡೆ ಉದ್ಯೋಗಾವಕಾಶಗಳನ್ನು ಕಲ್ಪಿಸುವ ಧ್ಯೇಯವಿದೆ. ಕರ್ನಾಟಕವು ಕೈಗಾರಿಕಾ ನೀತಿಯನ್ನು ರೂಪಿಸಿದ ಮೊದಲ ರಾಜ್ಯವಾಗಿದ್ದು, ಕೈಗಾರಿಕೀಕರಣದ ಮಟ್ಟವನ್ನು ಸದಾ ಹೆಚ್ಚಿಸಿ, ಕೈಗಾರಿಕಾ ಬೆಳವಣಿಗೆಯನ್ನು ಪೋಷಿಸುವ ಏಕೈಕ ಗುರಿಯಿಂದ ರಾಜ್ಯವು ಆನಂತರವೂ ಕಾಲಕಾಲಕ್ಕೆ ಕೈಗಾರಿಕಾ ನೀತಿಗಳನ್ನು ಜಾರಿಗೆ ತರುತ್ತಿದೆ.

ರಾಜ್ಯ ಸರ್ಕಾರವು, ರಾಜ್ಯದಲ್ಲಿ ಉತ್ಪಾದನಾ ಮತ್ತು ಆಯ್ದ ಸೇವಾ ಕೈಗಾರಿಕೆಗಳನ್ನು ಉತ್ತೇಜಿಸುವ ಸಲುವಾಗಿ ೨೮.೦೨.೨೦೦೯ ರಂದು ಸರ್ಕಾರಿ ಆದೇಶ ಸಂ. ಸಿಐ ೨೩೩ ಎಸ್‌ಪಿಐ ೨೦೦೮ ರೀತ್ಯಾ ಕರ್ನಾಟಕ ಕೈಗಾರಿಕಾ ನೀತಿ ೨೦೦೯-೨೦೧೪ನ್ನು ಪ್ರಕಟಿಸಿತ್ತು. ಈ ನೀತಿ, ೦೧.೦೪.೨೦೦೯ ರಿಂದ ಜಾರಿಗೆ ಬಂದು ೩೧.೦೩.೨೦೧೪ ರವರೆಗೆ ಊರ್ಜಿತವಾಗಿದ್ದರೂ, ೨೦೧೪-೧೯ರ ನೀತಿ ಜಾರಿಯಾಗುವವರೆಗೆ ಇದನ್ನು ವಿಸ್ತರಿಸಲಾಯಿತು.

### ೨೦೦೯-೧೪ ರ ನೀತಿಯ ಅವಧಿಯಲ್ಲಿ ಸಾಧಿಸಲಾದ ಪ್ರಗತಿ

ನೀತಿಯ ಅವಧಿಯಲ್ಲಿ ರೂ. ಮೂರು ಲಕ್ಷ ಕೋಟಿ ಬಂಡವಾಳ ಹೂಡಿ, ಸುಮಾರು ೧೦ ಲಕ್ಷ ಜನರಿಗೆ ಉದ್ಯೋಗ ಕಲ್ಪಿಸುವ ಗುರಿಗೆ ಪ್ರತಿಯಾಗಿ ರೂ. ೧.೦೮ ಲಕ್ಷ ಕೋಟಿ ಬಂಡವಾಳ ಹೂಡಿ, ಸುಮಾರು ೧೬೯ ಪ್ರಸ್ತಾವನೆಗಳನ್ನು ಅನುಷ್ಠಾನಕ್ಕೆ ತಂದು ಸುಮಾರು ೧.೪೭ ಲಕ್ಷ ಜನರಿಗೆ ಉದ್ಯೋಗಗಳನ್ನು ಕಲ್ಪಿಸಲಾಯಿತು. ಇದಲ್ಲದೆ, ರೂ. ೯೦೩೭ ಕೋಟಿಗಳ ಬಂಡವಾಳ ಹೂಡಿ, ಸುಮಾರು ೬.೭೭ ಲಕ್ಷ ಜನರಿಗೆ ಉದ್ಯೋಗ ಒದಗಿಸುವ ೧.೦೭ ಲಕ್ಷ ಎಮ್‌ಎಸ್‌ಎಮ್‌ಇಗಳು ಈ ಅವಧಿಯಲ್ಲಿ ನೋಂದಣಿಯಾಗಿವೆ.

### ೨೦೦೯-೧೪ರ ಕೈಗಾರಿಕಾ ನೀತಿಯಡಿ ನೀಡಿರುವ ಸವಲತ್ತುಗಳು

- ಜಿಲ್ಲಾ ಮತ್ತು ರಾಜ್ಯ ಮಟ್ಟದ ಏಕಗವಾಕ್ಷಿ ಮಂಜೂರಾತಿ (ಡಿಎಲ್‌ಎಸ್‌ಡಬ್ಲ್ಯುಸಿಸಿ/ ಎಸ್‌ಎಲ್‌ಡಬ್ಲ್ಯುಸಿಸಿ) ಗಳಿಗೆ ಹೆಚ್ಚಿನ ಅಧಿಕಾರವನ್ನು ನೀಡಲು, ಕೈಗಾರಿಕಾ (ಫೆಸಿಲಿಟೇಶನ್) ಕಾಯ್ದೆ-೨೦೦೨ಕ್ಕೆ ತಿದ್ದುಪಡಿಗಳನ್ನು ತರಲಾಯಿತು
- ಆನ್‌ಲೈನ್ ಅರ್ಜಿ ಸಲ್ಲಿಸುವಿಕೆ ಮತ್ತು ನಿಗಾ ವ್ಯವಸ್ಥೆಗಾಗಿ ಕರ್ನಾಟಕ ಉದ್ಯೋಗ ಮಿತ್ರದಲ್ಲಿ ಇ-ಉದ್ಯಮಿ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.
- ಕೈಗಾರಿಕೆಗಳು ಎದುರಿಸುವ ವಿವಿಧ ಸಮಸ್ಯೆಗಳನ್ನು ಪರಿಹರಿಸಲು, ಕೈಗಾರಿಕಾ ಅದಾಲತ್‌ಗಳನ್ನು ಜಿಲ್ಲಾ ಮತ್ತು ವಿಭಾಗೀಯ ಮಟ್ಟದಲ್ಲಿ ನಡೆಸಲಾಯಿತು.
- ರಾಜ್ಯದಲ್ಲಿ ಬಂಡವಾಳ ಅವಕಾಶವನ್ನು ಪ್ರಚುರಪಡಿಸಲು, ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ (ಜಿಐಎಮ್) ೨೦೧೦ ಮತ್ತು ಜಿಐಎಮ್ ೨೦೧೨ಗಳನ್ನು ಯಶಸ್ವಿಯಾಗಿ ನಡೆಸಲಾಯಿತು.

### ಪ್ರೋತ್ಸಾಹಗಳು ಮತ್ತು ವಿನಾಯಿತಿಗಳು

೪೦೦೦ ಕ್ಕೂ ಅಧಿಕ ಘಟಕಗಳಿಗೆ ರೂ. ೨೫೦ ಕೋಟಿಗಳ ಪ್ರೋತ್ಸಾಹಗಳು ಮತ್ತು ವಿನಾಯಿತಿಗಳನ್ನು ನೀಡಲಾಯಿತು.

### ಕುಶಲತೆಯ ಅಭಿವೃದ್ಧಿ

ಕುಶಲತೆಯನ್ನು ಬೆಳಸಿ, ಉತ್ತಮ ಉದ್ಯೋಗಾವಕಾಶಗಳನ್ನು ಕಲ್ಪಿಸಲು, ಪಿ.ಪಿ.ಪಿ. ನಮೂನೆಯಡಿ, ಖಾಸಗಿ ಸಂಸ್ಥೆಗಳ ಸಹಯೋಗದೊಂದಿಗೆ ೧೩ ಕುಶಲತಾ ಅಭಿವೃದ್ಧಿ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲಾಯಿತು.

**ಕೈಗಾರಿಕೆಗಳಿಗೆ ಸಕಾಲಿಕ ಸೇವೆ**

ಕೈಗಾರಿಕೆಗಳಿಗೆ ಸಕಾಲಿಕ ಸೇವೆ ಸಲ್ಲಿಸುವ ಸಲುವಾಗಿ ಕೈಗಾರಿಕಾ ಇಲಾಖೆಯ ಆರು ಸೇವೆಗಳನ್ನು ಕರ್ನಾಟಕ ಸಕಾಲ ಸೇವೆಗಳ ಕಾಯ್ದೆ-೨೦೧೧ರ ವ್ಯಾಪ್ತಿಗೆ ತರಲಾಯಿತು.

೧೧ನೆಯ ಪಂಚವಾರ್ಷಿಕ ಯೋಜನೆಯಡಿ ಭಾರತದ ಒಟ್ಟಾರೆ ಆರ್ಥಿಕ ಸ್ಥಿತಿ, ೨೦೦೮ರ ಆರಂಭದಿಂದ ತಲೆದೋರಿದ ಜಾಗತಿಕ ಹಿನ್ನಡೆಯ ಕಾರಣ, ನಿರೀಕ್ಷಿತ ಗತಿಯಲ್ಲಿ ಬೆಳೆಯಲಿಲ್ಲ. ಕರ್ನಾಟಕವೂ ಇದಕ್ಕೆ ಹೊರತಾಗಿರಲಿಲ್ಲ. ಸಾಮಾನ್ಯವಾಗಿ, ಕರ್ನಾಟಕದ ಕೈಗಾರಿಕಾ ಬೆಳವಣಿಗೆ ೨೦೦೯-೧೪ ರ ನೀತಿ ಅವಧಿಯಲ್ಲಿ ನಿಧಾನವಾಗಿತ್ತು. ರಾಜ್ಯದಲ್ಲಿ ಉಂಟಾದ ವ್ಯಾಪಕ ಅನಾವೃಷ್ಟಿಯೂ ಈ ಮಂದಗತಿಗೆ ಮತ್ತಷ್ಟು ಕಾರಣವಾಯಿತು.

## ಕೈಗಾರಿಕಾ ನೀತಿ ೨೦೧೪-೨೦೧೯

### ದೃಷ್ಟಿಕೋನ

ಸರ್ವರನ್ನೂ ಒಳಗೊಂಡ, ಸುಸ್ಥಿರ ಮತ್ತು ಸಮತೋಲನದ ಕೈಗಾರಿಕಾ ಅಭಿವೃದ್ಧಿಯ ಮೂಲಕ ಸಮೃದ್ಧ ಕರ್ನಾಟಕವನ್ನು ನಿರ್ಮಿಸಿ ತನ್ಮೂಲಕ ವಿಫುಲ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು.

### ಧ್ಯೇಯ

ಉತ್ಪಾದನಾ ವಲಯಕ್ಕೆ ವಿಶೇಷ ಆದ್ಯತೆ ನೀಡಿ, ಕೈಗಾರಿಕಾ ಬಂಡವಾಳ ಹೂಡಿಕೆಗಾಗಿ ಕರ್ನಾಟಕವನ್ನು ಪ್ರಾಶಸ್ತ್ಯದ ತಾಣವನ್ನಾಗಿ ಮಾಡುವುದು. ಕೈಗಾರಿಕಾ ಅಭಿವೃದ್ಧಿಗಾಗಿ ರಾಜ್ಯದ ಎಲ್ಲೆಡೆ ಅವಕಾಶಗಳನ್ನು ಕಲ್ಪಿಸಿ, ಖಾಸಗಿ ವಲಯದ ಮೂಲಕ ಸ್ಥಳೀಯರಿಗೆ ಬೃಹತ್ ಪ್ರಮಾಣದಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು. ಕೈಗಾರಿಕೆಗಳ ಅಗತ್ಯಗಳನ್ನು ಪೂರೈಸಲು ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸುವುದು. ಸುಸ್ಥಿರವಾದ ಕೈಗಾರಿಕಾ ಅಭಿವೃದ್ಧಿಗಾಗಿ ನೈಸರ್ಗಿಕ ಸಂಪನ್ಮೂಲಗಳ ಗರಿಷ್ಠ ಬಳಕೆಯನ್ನು ಸಾಧಿಸುವ ಪೂರಕ ಪರಿಸರವನ್ನು ಸೃಷ್ಟಿಸುವುದು.

**ಉದ್ದೇಶಗಳು**

ಕೈಗಾರಿಕಾ ಬೆಳವಣಿಗೆಯನ್ನು ವಾರ್ಷಿಕ ಶೇ ೧೨ ರ ಗತಿಯಲ್ಲಿ ಮುಂದುವರೆಸುವುದು, ರಾಜ್ಯ ಜಿ.ಡಿ.ಪಿ ಯಲ್ಲಿ ಪ್ರಸಕ್ತ ಶೇ. ೧೬.೮೭ ಇರುವ ಉತ್ಪಾದನಾ ವಲಯದ ಪಾಲನ್ನು, ನೀತಿಯ ಅವಧಿಯ ಅಂತ್ಯದ ವೇಳೆಗೆ ಶೇ.೨೦ ಗೆ ಹೆಚ್ಚಿಸುವುದು. ರೂ. ೫ ಲಕ್ಷ ಕೋಟಿಗಳ ಬಂಡವಾಳವನ್ನು ಆಕರ್ಷಿಸುವುದು, ೧೫ ಲಕ್ಷ ಜನರಿಗೆ ಉದ್ಯೋಗಾವಕಾಶವನ್ನು ಕಲ್ಪಿಸುವುದು ಹಾಗೂ ರಾಜ್ಯದಲ್ಲಿ ಸುಸೂತ್ರವಾಗಿ ಉದ್ಯಮ-ವ್ಯವಹಾರ ಕೈಗೊಳ್ಳುವಂತಹ ವಾತಾವರಣವನ್ನು ಕಲ್ಪಿಸುವುದು.

**ಕಾರ್ಯತಂತ್ರಗಳು**

ಸಮಗ್ರ ಸೌಲಭ್ಯಗಳಿರುವ ಉತ್ತಮ ಗುಣಮಟ್ಟದ ಮೂಲಭೂತ ಸೌಕರ್ಯವನ್ನು ಕಲ್ಪಿಸುವುದು, ಸಾಮರ್ಥ್ಯವರ್ಧನೆ ಮತ್ತು ಕುಶಲತೆಯ ಆಧುನೀಕರಣದ ಮೂಲಕ ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸುವುದು, ಅನುಕೂಲಕರ ವ್ಯವಸ್ಥೆ ಮತ್ತು ನೀತಿ ನಿಯಮಗಳ ಸುಧಾರಣೆ, ತಾಲೂಕುಗಳ ವರ್ಗೀಕರಣ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಕೈಗಾರಿಕಾಭಿವೃದ್ಧಿಗೆ ಉತ್ತೇಜನ, ಎಮ್‌ಎಸ್‌ಎಮ್‌ಇಗಳಿಗೆ ಉತ್ತೇಜನ ಪರಿಶಿಷ್ಟಜಾತಿ / ಪಂಗಡಗಳನ್ನು ಉತ್ತೇಜಿಸಲು ವಿಶೇಷ ಒತ್ತು ಮಹಿಳಾ ಉದ್ಯಮಶೀಲರಿಗೆ ಉತ್ತೇಜನ, ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳು, ಅಂಗವಿಕಲರು, ಮಾಜಿ ಯೋಧ ಉದ್ಯಮಶೀಲರಿಗೆ ಉತ್ತೇಜನ, ಅನಿವಾಸಿ ಕನ್ನಡಿಗರಿಗೆ (ಎನ್ ಆರ್ ಕೆಗಳು) ಉತ್ತೇಜನ, ರಫ್ತು ವಲಯಕ್ಕೆ ಉತ್ತೇಜನ, ಇಂಧನ ಉಳಿತಾಯ ಕ್ರಮಗಳನ್ನು ಅಳವಡಿಸುವ ಘಟಕಗಳಿಗೆ ಉತ್ತೇಜನ, ಪುನರ್ ಬಳಕೆ ಇಂಧನ ಯೋಜನೆಗಳಿಗೆ ಉತ್ತೇಜನ, ಪರಿಸರಸ್ನೇಹಿ ಹಸಿರು ಮತ್ತು ಸ್ವಚ್ಛಯೋಜನೆಗಳಿಗೆ ಉತ್ತೇಜನ, ಆರ್ ಅಂಡ್ ಡಿ ಹಾಗೂ ಡಿಜಿಟಲ್ ಡೈರೆಕ್ಟ್ ತಯಾರಿಕೆಗೆ ಬೆಂಬಲ ಇಂಟಲೆಕ್ಚುವಲ್ ಪ್ರಾಪರ್ಟಿ ರೈಟ್ಸ್‌ಗಾಗಿ ಉಪಕ್ರಮ, ಬಂಡವಾಳ ಮತ್ತು ವ್ಯಾಪಾರಕ್ಕೆ ಪ್ರೋತ್ಸಾಹ, ಆ್ಯಂಕರ್ ಕೈಗಾರಿಕೆಗಳಿಗೆ ಉತ್ತೇಜನ ದೊಡ್ಡ, ಬೃಹತ್, ಅತಿ ಬೃಹತ್, ಅತ್ಯಂತ ಬೃಹತ್ ಉದ್ಯಮಗಳಿಗಾಗಿ ಪ್ರೋತ್ಸಾಹಗಳು ಮತ್ತು ವಿನಾಯಿತಿಗಳು, ಪ್ರಮುಖ ಒತ್ತಾಸೆಯ ಕೈಗಾರಿಕೆಗಳು ಹಾಗೂ ಅಯವ್ಯಯದ ಬೆಂಬಲ.

**ನೀತಿಯ ಕ್ರಮಗಳು**

ಸಮಗ್ರ ಸೌಲಭ್ಯಗಳಿರುವ ಉತ್ತಮ ಗುಣಮಟ್ಟದ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದು, ಕೆಐಎಡಿಬಿ ಮೂಲಕ ಹೊಸ ಕೈಗಾರಿಕಾ ಪ್ರದೇಶಗಳ ಸ್ಥಾಪನೆ, ಕೈಗಾರಿಕಾಭಿವೃದ್ಧಿಗಾಗಿ ಸಾಕಷ್ಟು ವಿಸ್ತೀರ್ಣದ, ಬಳಸಲು ಸಿದ್ಧವಾದ ಭೂಮಿ ಪೂರ್ವಾಗತ್ಯವಾಗಿದೆ. ರಾಜ್ಯದ ಎಲ್ಲೆಡೆ ಬಂಡವಾಳ ಹೂಡಿಕೆದಾರರಿಗೆ ಸಮಗ್ರ ಮೂಲಸೌಕರ್ಯಗಳಿರುವ ಕೈಗಾರಿಕಾ ಭೂಮಿಯನ್ನು ಒದಗಿಸುವತ್ತ ರಾಜ್ಯವು ಹೆಚ್ಚಿನ ಗಮನವನ್ನು ನೀಡಲಿದೆ.

ಕೈಗಾರಿಕಾ ಉದ್ದೇಶಗಳಿಗಾಗಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಭಾರತ ಸರ್ಕಾರ "The transparency in land acquisition, rehabilitation and resettlement Act ೨೦೧೩" ರಲ್ಲಿ ಘೋಷಿಸಿರುವ ಮಾರ್ಗದರ್ಶನಗಳನ್ನು ಅನುಸರಿಸಲಾಗುವುದು. ಕೈಗಾರಿಕಾ ಉದ್ದೇಶಗಳಿಗಾಗಿ ನಿಷ್ಕ್ರಿಯ, ಬಂಜರು, ಖರಾಬ್, ಒಣ ಮತ್ತು ಒಂದು ಬೆಳೆಯ ಭೂಮಿಯನ್ನು ಮಾತ್ರ ಸ್ವಾಧೀನಪಡಿಸಿಕೊಳ್ಳಲಾಗುವುದೆಂದು ಖಾತರಿಪಡಿಸಲಾಗುವುದು. ಕೆಐಎಡಿಬಿಯು ಕೈಗಾರಿಕೆಗಳಿಗೆ ಭೂಮಿಯನ್ನು ಸ್ವಾಧೀನಪಡಿಸುವ ಸಂದರ್ಭದಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಭೂಮಿ ಕಳೆದುಕೊಳ್ಳುವ ಪ್ರತಿ ಕುಟುಂಬದಲ್ಲಿ ಕನಿಷ್ಠ ಒಬ್ಬರಿಗಾದರೂ ಉದ್ಯೋಗವನ್ನು ದೊರಕಿಸುವ ನಿಟ್ಟಿನಲ್ಲಿ ಯತ್ನಿಸಲಿದೆ.

ಪ್ರತಿ ಕೈಗಾರಿಕಾ ಪ್ರದೇಶವನ್ನು, ಸೂಕ್ತ ಸಂಪರ್ಕ, ಸಮರ್ಪಕ ನೀರು ಪೂರೈಕೆ, ವಿದ್ಯುಚ್ಛಕ್ತಿ ಹಾಗೂ ಇತರ ಅತ್ಯವಶ್ಯಕ ಸೌಕರ್ಯಗಳೊಂದಿಗೆ ಆರ್ಥಿಕವಾಗಿ ಲಾಭದಾಯಕವಾಗುವಂತೆ ಮಾತ್ರ ನಿರ್ಮಿಸಲಾಗುವುದು. ಕೈಗಾರಿಕಾ ಪ್ರದೇಶದ ಸಂಪೂರ್ಣ ಅಭಿವೃದ್ಧಿಯ ನಂತರವೇ ನಿವೇಶನಗಳನ್ನು ಹಂಚಿಕೆ ಮಾಡಲಾಗುವುದು. ಒಂದು ಸಾವಿರ ಎಕರೆಗಳನ್ನು ಮೀರಿದ ವಿಸ್ತೀರ್ಣದ ಎಲ್ಲಾ ಮುಂಬರುವ ಕೆಐಎಡಿಬಿ ಕೈಗಾರಿಕಾ ಪ್ರದೇಶಗಳಲ್ಲಿ ವಸತಿ, ಸರ್ವಿಸ್ ಅಪಾರ್ಟ್‌ಮೆಂಟ್ಸ್, ಆಸ್ಪತ್ರೆಗಳು, ಷಾಪಿಂಗ್ ಸಮುಚ್ಚಯಗಳು, ಉಪಾಹಾರಗೃಹಗಳು ಮುಂತಾದ ಬೆಂಬಲಾತ್ಮಕ ಸಾಮಾಜಿಕ ಸೌಲಭ್ಯಗಳಿಗಾಗಿ ಶೇ೧೦ ರಷ್ಟು ಜಾಗವನ್ನು ಮೀಸಲಾಗಿಡಲು ಉದ್ದೇಶಿಸಲಾಗಿದೆ.

ಕೆಐಎಡಿಬಿ ಕೈಗಾರಿಕಾ ಪ್ರದೇಶಗಳಲ್ಲಿ ವಿದ್ಯುತ್ ಉತ್ಪಾದನಾ ಘಟಕಗಳಿಗೆ ಭೂಮಿ ಒದಗಿಸುವತ್ತ ಆದ್ಯತೆ ನೀಡಲಾಗುವುದು. ಲಭ್ಯವಿರುವ ಭೂಮಿಯನ್ನು ಗರಿಷ್ಠವಾಗಿ ಉಪಯೋಗಿಸಿಕೊಳ್ಳಲಾಗುತ್ತದೆ ಎನ್ನುವುದನ್ನು ಖಚಿತಪಡಿಸಿಕೊಳ್ಳಲು ಸರ್ಕಾರವು ಅನುಮೋದನೆಗೆ ಮುಂಚಿತವಾಗಿ ಯೋಜನೆಯ ಭೂ ಅಗತ್ಯತೆಗಳನ್ನು ಪರಿಶೀಲಿಸಲಾಗುವುದು.ಇನ್ನು ಮುಂದೆ ಕೆಐಎಡಿಬಿ, ಯೋಜನಾ ಪ್ರತಿಪಾದಕರಿಗೆ ೯೯ ವರ್ಷಗಳ ಗುತ್ತಿಗೆಯ ಆಧಾರದ ಮೇಲೆ ಮಾತ್ರ ಕೈಗಾರಿಕಾ ಭೂಮಿಯನ್ನು ನೀಡುತ್ತದೆ. ಕೈಗಾರಿಕಾ ಬಳಕೆಗಾಗಿ ಕೈಗಾರಿಕಾ ಪ್ರದೇಶಗಳಿಗೆ ಕೆಐಎಡಿಬಿಯು ಸಂಸ್ಕರಿತ ನೀರನ್ನು ಪೂರೈಸುತ್ತದೆ. ಕೆಐಎಡಿಬಿ, ಕುಡಿಯುವ ನೀರಿನ ಪೂರೈಕೆಗಾಗಿಯೂ ಸೂಕ್ತ ಏರ್ಪಾಡುಗಳನ್ನು ಮಾಡುತ್ತದೆ.

ಕೆಪಿಟಿಸಿಎಲ್, ಈಗಿನ ಮತ್ತು ಮುಂಬರುವ ಕೆಐಎಡಿಬಿ ಕೈಗಾರಿಕಾ ಪ್ರದೇಶಗಳಿಗಾಗಿ ಸೂಕ್ತ ಸಾಮರ್ಥ್ಯಗಳ ವಿದ್ಯುತ್ ಉಪ ಕೇಂದ್ರಗಳನ್ನು ನಿರ್ಮಿಸುತ್ತದೆ ಮತ್ತು ಇದರ ವೆಚ್ಚವನ್ನು ಸರ್ಕಾರದ ವತಿಯಿಂದ ಅಥವಾ ಟ್ಯಾರಿಫ್ ಮೂಲಕ ಭರಿಸಲಾಗುವುದು. ೩೩ಕೆವಿ/೬೬ಕೆವಿ/೧೧೦ಕೆವಿ/೨೨೦ಕೆವಿಗಳ ಎಲ್ಲಾ ಕೈಗಾರಿಕಾ ಫೀಡರ್‌ಗಳನ್ನು ೨೪/೭ ವಿದ್ಯುತ್ ಪೂರೈಕೆ ಇರುವ ಎಕ್ಸ್‌ಪ್ರೆಸ್ ಫೀಡರ್‌ಗಳೆಂದು ಪರಿಗಣಿಸಲಾಗುವುದು.

ಕೆಐಎಡಿಬಿ, ತನ್ನ ವೆಬ್‌ಸೈಟ್ ಮೂಲಕ ಸಾರ್ವಜನಿಕರಿಗೆ ಭೂಮಿ/ ನಿವೇಶನದ ಲಭ್ಯತೆಯ ಬಗ್ಗೆ ತಾಜಾ ಮಾಹಿತಿಯನ್ನು ಒದಗಿಸುತ್ತದೆ. ಕೆಐಎಡಿಬಿ, ನೀತಿಯ ಅವಧಿಯಲ್ಲಿ ಕೈಗಾರಿಕಾ ಅಗತ್ಯಗಳಿಗಾಗಿ ರಾಜ್ಯದ ಎಲ್ಲೆಡೆ ಸುಮಾರು ೪೦,೦೦೦ ಎಕರೆಗಳಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿದೆ. ಕೈಗಾರಿಕಾ ಪ್ರದೇಶಗಳನ್ನು ರೂಪಿಸಲು ಪ್ರತಿ ವರ್ಷ ೮,೦೦೦ ಎಕರೆಗಳಷ್ಟು ಭೂಮಿಯನ್ನು (ಎಸ್‌ಯುಸಿಗಳು ಒಳಪಟ್ಟಂತೆ) ಹಂತಾನುಹಂತವಾಗಿ ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಲಾಗಿದೆ.

ಹಣದ ಅಗತ್ಯತೆಗಳನ್ನು ಪೂರೈಸಲು ಕೆಐಎಡಿಬಿ, ಒಂದು ಕಾರ್ಪಸ್ ಫಂಡ್‌ನ್ನು ರಚಿಸಲಿದ್ದು, ಇದನ್ನು ಸ್ವಂತ ಹಣಕಾಸು ಸಾಮರ್ಥ್ಯವನ್ನು ಮೈಗೂಡಿಸಿಕೊಳ್ಳುವಂತೆ ರಿವಾಲ್ವಿಂಗ್ ಆಧಾರದ ರೀತ್ಯ ರೂಪಿಸಲಾಗುವುದು.

## ಕೈಗಾರಿಕಾ ಕಾರಿಡರ್‌ಗಳ ಸ್ಥಾಪನೆ

ಚೆನ್ನೈ-ಬೆಂಗಳೂರು-ಚಿತ್ರದುರ್ಗ ಕೈಗಾರಿಕಾ ಕಾರಿಡಾರ್ (ಸಿಬಿಸಿಐಸಿ) ಮತ್ತು ಬೆಂಗಳೂರು-ಮುಂಬೈ ಆರ್ಥಿಕ ಕಾರಿಡಾರ್ (ಬಿಎಮ್‌ಇಸಿ)-ಇವುಗಳ ಮೇಲಿನ ಕಾರ್ಯವನ್ನು ದೆಹಲಿ-ಮುಂಬೈ ಕೈಗಾರಿಕಾ ಕಾರಿಡಾರ್ ರೀತಿಯಲ್ಲಿ, ಭಾರತ ಸರ್ಕಾರದ ಬೆಂಬಲದೊಂದಿಗೆ ತ್ವರಿತಗೊಳಿಸಲಾಗುವುದು. ಈ ಕಾರಿಡಾರ್‌ಗಳ ಉದ್ದಕ್ಕೆ ಕೈಗಾರಿಕಾ ಬೆಳವಣಿಗೆಯನ್ನು ಸಾಧಿಸಲು, ಜಪಾನ್ ಇಂಟರ್‌ನ್ಯಾಷನಲ್ ಕೋ-ಆಪರೇಷನ್ ಏಜೆನ್ಸಿ (ಜೆಐಸಿಎ) ಮೂಲಕ ಲಭ್ಯವಿರುವ ತಾಂತ್ರಿಕ ಮತ್ತು ಹಣಕಾಸು ನೆರವನ್ನು ಬಳಸಿಕೊಳ್ಳಲು ಉದ್ದೇಶಿಸಲಾಗಿದೆ.

ಇದಲ್ಲದೇ, ರಾಜ್ಯವು ಹಿಂದುಳಿದ ಪ್ರದೇಶಗಳಿಗೆ ಪ್ರಯೋಜನ ತಂದು ರಾಜ್ಯದ ಉದ್ದಗಲಕ್ಕೆ ಸತತ ಕೈಗಾರಿಕಾ ಬೆಳವಣಿಗೆಯನ್ನು ಕಲ್ಪಿಸಲು, ಕೆಳಗಿನ ರಾಜ್ಯ ಕೈಗಾರಿಕಾ ಕಾರಿಡಾರ್ (ಎಸ್‌ಐಸಿ)ಗಳನ್ನು ಸ್ಥಾಪಿಸುವ ಅವಕಾಶಗಳನ್ನು ಸಹ ಪರಿಶೀಲಿಸುತ್ತದೆ.

i) ಬೆಂಗಳೂರು-ಮಂಡ್ಯ-ಮೈಸೂರು-ಚಾಮರಾಜನಗರ

ii) ಚಿತ್ರದುರ್ಗ-ಬಳ್ಳಾರಿ-ಕಲಬುರಗಿ-ಬೀದರ

iii) ಧಾರವಾಡ-ಕೊಪ್ಪಳ-ರಾಯಚೂರು

iv) ಬೆಂಗಳೂರು-ಹಾಸನ-ಮಂಗಳೂರು

v) ಚಿತ್ರದುರ್ಗ-ಹಾವೇರಿ-ಕಾರವಾರ

vi) ತುಮಕೂರು-ಶಿವಮೊಗ್ಗ-ಹೊನ್ನಾವರ

vii) ರಾಯಚೂರು-ಬಾಗಲಕೋಟೆ-ಬೆಳಗಾವಿ

ಭಾರತ ಸರ್ಕಾರವು ತುಮಕೂರು, ಕೋಲಾರ, ಕಲಬುರಗಿ, ಬೀದರ ಜಿಲ್ಲೆಗಳಲ್ಲಿ ನಾಲ್ಕು ರಾಷ್ಟ್ರೀಯ ಬಂಡವಾಳ ಮತ್ತು ಉತ್ಪಾದನಾ ವಲಯಗಳ (ಎನ್‌ಐಎಮ್‌ಜೆಡ್) ಸ್ಥಾಪನೆಗೆ ತ್ವತಶಃ ಅನುಮತಿ ನೀಡಿದೆ. ಸಿಬಿಸಿಐಸಿ/ಎಸ್‌ಐಸಿಯ ಉದ್ದಕ್ಕೆ ಈ ಸ್ಥಳಗಳಲ್ಲಿನ ಎನ್‌ಐಎಮ್‌ಜೆಡ್‌ಗಳು ಅಥವಾ ಕೈಗಾರಿಕಾ ಕೇಂದ್ರ ತಾಣಗಳು, ಎಲ್ಲೆಡೆ ಉತ್ಪಾದನಾ ವಲಯದ ಬೆಳವಣಿಗೆಗೆ ಚಾಲನೆ ನೀಡುತ್ತವೆ.

## ತಾಲೂಕುಗಳನ್ನು ವಲಯಗಳಾಗಿ ವರ್ಗೀಕರಿಸುವಿಕೆ

ಈ ನೀತಿಯ ಧ್ಯೇಯವೆಂದರೆ ಸರ್ವರನ್ನೂ ಒಳಗೊಂಡ, ಸುಸ್ಥಿರ ಮತ್ತು ಸಮತೋಲನವುಳ್ಳ ಕೈಗಾರಿಕಾ ಬೆಳವಣಿಗೆಯ ಮೂಲಕ ಸಮೃದ್ಧ ಕರ್ನಾಟಕವನ್ನು ನಿರ್ಮಿಸುವುದು. ರಾಜ್ಯದ ಅನೇಕ ತಾಲೂಕುಗಳು ಕೈಗಾರಿಕಾ ದೃಷ್ಟಿಯಿಂದ ಹಿಂದುಳಿದಿವೆ ಎನ್ನುವ ಅಂಶವು ಕೈಗಾರಿಕೆಗಳು ಮಾಡಿದ ಬಂಡವಾಳ ಹೂಡಿಕೆಗಳ ಬಗ್ಗೆ ಮಾಡಲಾದ ಒಂದು ವಿಶ್ಲೇಷಣೆಯಿಂದ ತಿಳಿದುಬಂದಿದೆ. ಈ ಧ್ಯೇಯವನ್ನು ಸಾಕಾರಗೊಳಿಸಲು ಕೈಗಾರಿಕವಾಗಿ ಹಿಂದುಳಿದ ತಾಲೂಕುಗಳಲ್ಲಿ ಕೈಗಾರಿಕೆಗಳ ಪ್ರಸರಣೆಗಾಗಿ ತೀವ್ರ ಗಮನದ ಅಗತ್ಯವಿದೆ. ತಾಲೂಕುಗಳಲ್ಲಿ ಸರಾಸರಿ ತಲಾವಾರು ಕೈಗಾರಿಕಾ ಬಂಡವಾಳ ಮತ್ತು ತಲಾವಾರು ಉದ್ಯೋಗವನ್ನು ಗಮನಿಸಿ, ತಾಲೂಕುಗಳನ್ನು ವಿವಿಧ ವಲಯಗಳಾಗಿ ವರ್ಗೀಕರಿಸಲಾಗಿದೆ. ಸಂವಿಧಾನದ ಅನುಚ್ಛೇದ ೩೭೧(ಜೆ)ನ ಕಲಮುಗಳ ರೀತ್ಯ ಪ್ರತ್ಯೇಕವಾದ ಹೈದರಾಬಾದ್ ಕರ್ನಾಟಕ ವಲಯವನ್ನು ರೂಪಿಸಿರುವ ದೃಷ್ಟಿಯಿಂದ ರಾಜ್ಯವನ್ನು ಎರಡು ಪ್ರದೇಶಗಳು ಅಂದರೆ ಹೈದರಾಬಾದ್ ಕರ್ನಾಟಕ ಪ್ರದೇಶ ಮತ್ತು ಹೈದರಾಬಾದ್-ಕರ್ನಾಟಕೇತರ ಪ್ರದೇಶ ಎಂದು ವರ್ಗೀಕರಿಸಲಾಗಿದೆ. ರಾಜ್ಯದ ಸಮಗ್ರ ಅಭಿವೃದ್ಧಿಗಾಗಿ ಸರಿಸಮಾನ ಹಣ ಸಂಪನ್ಮೂಲಗಳೊಂದಿಗೆ ಒಂದು ಬಲಿಷ್ಠ ಕೈಗಾರಿಕಾ ನೆಲೆಯನ್ನು ರಚಿಸುವ ಉದ್ದೇಶದಿಂದ, ತಾಲೂಕುಗಳನ್ನು ಕೆಳಕಂಡಂತೆ ವಿಂಗಡಿಸಿದ್ದು, ವಿವಿಧ ವಲಯಗಳಲ್ಲಿ ಪ್ರತ್ಯೇಕ ಪ್ರೋತ್ಸಾಹಗಳು ಮತ್ತು ವಿನಾಯಿತಿಗಳನ್ನು ಪ್ರಸ್ತಾಪಿಸಲಾಗಿದೆ.

i) ಹೈದರಾಬಾದ್ ಕರ್ನಾಟಕ ಪ್ರದೇಶವನ್ನು ಎರಡು ವಲಯಗಳಾಗಿ ಅಂದರೆ ಹೆಚ್‌ಕೆ ವಲಯ-೧ ಮತ್ತು ಹೆಚ್‌ಕೆ ವಲಯ-೨ ಎಂದು ವರ್ಗೀಕರಿಸಲಾಗಿದೆ.

ii) ಇದೇ ರೀತಿ ಹೈದರಾಬಾದ್ ಕರ್ನಾಟಕೇತರ ಪ್ರದೇಶದಲ್ಲಿನ ತಾಲೂಕುಗಳನ್ನು ನಾಲ್ಕು ವಲಯಗಳಾಗಿ ಅಂದರೆ ವಲಯ–೧, ೨, ೩, ಮತ್ತು ೪ ಎಂದು ವರ್ಗೀಕರಿಸಲಾಗಿದೆ.

iii) ಅತ್ಯಂತ ಹಿಂದುಳಿದ ತಾಲೂಕುಗಳು ವಲಯ–೧ ರಲ್ಲಿವೆ, ಸ್ವಲ್ಪ ಹಿಂದುಳಿದ ತಾಲೂಕುಗಳು ವಲಯ–೨ ರಲ್ಲಿವೆ, ಹಿಂದುಳಿದ ತಾಲೂಕುಗಳು ವಲಯ–೩ ರಲ್ಲಿವೆ ಮತ್ತು ಕೈಗಾರಿಕವಾಗಿ ಹಿಂದುಳಿದ ತಾಲೂಕುಗಳು ವಲಯ–೪ ರಲ್ಲಿವೆ. ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಅತ್ಯಂತವಾಗಿ ಹಿಂದುಳಿದ ತಾಲೂಕುಗಳು ಹೆಚ್ಕೆ ವಲಯ–೧ ರಲ್ಲಿವೆ ಮತ್ತು ಸ್ವಲ್ಪ ಹಿಂದುಳಿದ ತಾಲೂಕುಗಳು ಹೆಚ್ಕೆ ವಲಯ–೨ ರಲ್ಲಿವೆ.

iv) ತ್ವರಿತ ನಗರೀಕರಣ, ಕೈಗಾರಿಕಾಭಿವೃದ್ಧಿಗಾಗಿ ಸಾಧ್ಯತೆಗಳು ಹಾಗೂ ಹಂತ–೨ ರಲ್ಲಿನ ನಗರಗಳಿಗೆ ವಿಸ್ತರಣೆಯನ್ನು ಗಮನದಲ್ಲಿಟ್ಟುಕೊಂಡು, ಮೈಸೂರು, ಮಂಗಳೂರು, ತುಮಕೂರು, ನಂಜನಗೂಡು, ಹುಬ್ಬಳ್ಳಿ–ಧಾರವಾಡ ಮತ್ತು ಬೆಳಗಾವಿ ಮುಂತಾದ ತಾಲೂಕುಗಳನ್ನು ವಲಯ–೩ಕ್ಕೆ ಒಳಪಡಿಸಲಾಗಿದೆ.

v) ತುಮಕೂರು ಜಿಲ್ಲೆಯು ಹೈದರಾಬಾದ್ ಕರ್ನಾಟಕೇತರ ಪ್ರದೇಶದಲ್ಲಿನ ವ್ಯಾಪ್ತಿಯಲ್ಲಿದೆ. ಹೈದರಾಬಾದ್ ಕರ್ನಾಟಕೇತರ ಪ್ರದೇಶದಲ್ಲಿನ ತಾಲೂಕುಗಳನ್ನು ನಾಲ್ಕು ವಲಯಗಳನ್ನಾಗಿ ವಿಂಗಡಿಸಿದ್ದು, ಜಿಲ್ಲೆಯ ಮಧುಗಿರಿ, ಕೊರಟಗೆರೆ, ಗುಬ್ಬಿ, ಶಿರಾ ಮತ್ತು ಪಾವಗಡ ತಾಲೂಕುಗಳು (ಕೈಗಾರಿಕೆಯಲ್ಲಿ ಸ್ವಲ್ಪ ಹಿಂದುಳಿದ ತಾಲೂಕುಗಳು) ವಲಯ–೨ರಲ್ಲೂ, ತುಮಕೂರು, ತುರುವೇಕೆರೆ, ತಿಪಟೂರು, ಚಿಕ್ಕನಾಯಕನಹಳ್ಳಿ ಮತ್ತು ಕುಣಿಗಲ್ (ಕೈಗಾರಿಕೆಯಲ್ಲಿ ಹಿಂದುಳಿದ ತಾಲೂಕುಗಳು) ಇವುಗಳು ವಲಯ–೩ರ ವ್ಯಾಪ್ತಿಗೆ ಸೇರುತ್ತವೆ.

**ಸಾಮಾನ್ಯ ವರ್ಗದ ಉದ್ಯಮಶೀಲರು ಹಮ್ಮಿಕೊಳ್ಳುವ ಎಂಎಸ್ಎಂಇಗಳಿಗಾಗಿ ಪ್ರೋತ್ಸಾಹಕಗಳು ಮತ್ತು ವಿನಾಯಿತಿಗಳು. ಎಂಎಸ್ಎಂಇಗಳಿಗಾಗಿ ನೀಡಲಾಗುವ ಪ್ರೋತ್ಸಾಹಗಳು ಮತ್ತು ರಿಯಾಯಿತಿ ವಿವರಗಳು ಕೆಳಕಂಡಂತಿವೆ.**

ಅ) ಬಂಡವಾಳ ಉತ್ತೇಜನ ಸಬ್ಸಿಡಿ

ಆ) ಅತಿ ಸಣ್ಣ ಕೈಗಾರಿಕೆಗಳು

**ಹೈದರಾಬಾದ್–ಕರ್ನಾಟಕೇತರ ಪ್ರದೇಶ**

**ವಲಯ–೧ :** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್ಎ) ಶೇ ೨೫ರಷ್ಟು (ಗರಿಷ್ಠ ರೂ.೧೫.೦೦ ಲಕ್ಷ), **ವಲಯ–೨ :** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್ಎ) ಶೇ ೨೦ರಷ್ಟು (ಗರಿಷ್ಠ ರೂ.೧೨.೦೦ ಲಕ್ಷ), **ವಲಯ–೩ :** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್ಎ) ಶೇ ೧೫ರಷ್ಟು (ಗರಿಷ್ಠ ರೂ.೯.೦೦ ಲಕ್ಷ), **ವಲಯ–೪ :** ಇಲ್ಲ.

೧) **ಹೈದರಾಬಾದ್–ಕರ್ನಾಟಕ ಪ್ರದೇಶ**

೨) **ಹೆಚ್ಕೆ ವಲಯ–೧ :** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್ಎ) ಶೇ ೩೦ರಷ್ಟು (ಗರಿಷ್ಠ ರೂ.೧೮.೦೦ ಲಕ್ಷ)
**ಹೆಚ್ಕೆ ವಲಯ–೨ :** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್ಎ) ಶೇ ೨೫ರಷ್ಟು (ಗರಿಷ್ಠ ರೂ.೧೫.೦೦ ಲಕ್ಷ)

**ಆ) ಸಣ್ಣ ಉದ್ಯಮಗಳು**

**ಹೈದರಾಬಾದ್–ಕರ್ನಾಟಕೇತರ ಪ್ರದೇಶ: ವಲಯ–೧ :** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್ಎ) ಶೇ ೨೦ರಷ್ಟು (ಗರಿಷ್ಠ ರೂ.೪೦.೦೦ ಲಕ್ಷ); **ವಲಯ–೨ :** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್ಎ) ಶೇ ೧೫ರಷ್ಟು (ಗರಿಷ್ಠ ರೂ.೩೦.೦೦ ಲಕ್ಷ); **ವಲಯ–೩ :** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್ಎ) ಶೇ ೧೦ರಷ್ಟು (ಗರಿಷ್ಠ ರೂ.೨೦.೦೦ ಲಕ್ಷ); **ವಲಯ–೪ :** ಇಲ್ಲ.

೧) **ಹೈದರಾಬಾದ್–ಕರ್ನಾಟಕ ಪ್ರದೇಶ**
**ಹೆಚ್ಕೆ ವಲಯ–೧ :** ಸ್ಥಿರಾಸ್ತಿಗಳ ಮೌಲ್ಯದ ಶೇ ೨೫ರಷ್ಟು (ವಿಎಫ್ಎ) (ಗರಿಷ್ಠ ರೂ.೪೫.೦೦ ಲಕ್ಷ);
**ಹೆಚ್ಕೆ ವಲಯ–೨ :** ಸ್ಥಿರಾಸ್ತಿಗಳ ಮೌಲ್ಯದ ಶೇ ೨೦ರಷ್ಟು (ವಿಎಫ್ಎ) (ಗರಿಷ್ಠ ರೂ.೪೦.೦೦ ಲಕ್ಷ)

**ಇ) ಮಧ್ಯಮ ವಲಯದ ಉತ್ಪಾದನಾ ಘಟಕಗಳು (ಎಂಎಸ್ಎಂಇ ಆ್ಯಕ್ಟ್‌ನಲ್ಲಿ ವಿವರಿಸುವಂತೆ ಹಾಗೂ ಕನಿಷ್ಠ ೨೫ ನೇರ ಉದ್ಯೋಗಗಳನ್ನು ಒದಗಿಸುವ ಘಟಕಗಳು)**

೧) **ಹೈದರಾಬಾದ್-ಕರ್ನಾಟಕ ಯೇತರ ಪ್ರದೇಶ**
**ವಲಯ-೧**: ರೂ.೫೦ ಲಕ್ಷ; **ವಲಯ-೨**: ರೂ.೪೦ ಲಕ್ಷ; **ವಲಯ-೩**: ರೂ.೪೦ ಲಕ್ಷ; **ವಲಯ-೪**: ಇಲ್ಲ.

೨) ಹೈದರಾಬಾದ್-ಕರ್ನಾಟಕ ಪ್ರದೇಶ
**ಹೆಚ್ಕೆ ವಲಯ-೧ : ರೂ.೫೫ ಲಕ್ಷ; ಹೆಚ್ಕೆ ವಲಯ-೨ : ರೂ.೫೦ ಲಕ್ಷ**

ಬಿ) **ಸ್ಟ್ಯಾಂಪ್ ಡ್ಯೂಟಿಯಿಂದ ವಿನಾಯಿತಿ**

**ಎಂಎಸ್ಎಂಇಗಳು:**

ಆರಂಭಿಕ ಐದು ವರ್ಷಗಳಿಗಾಗಿ ಇಲಾಖೆಯಿಂದ ವ್ಯಾಟ್ ಲೋನ್ ಒಳಪಟ್ಟಂತೆ ಮತ್ತು/ಅಥವಾ ರಾಜ್ಯ ಹಣಕಾಸು ನಿಗಮ, ಕೈಗಾರಿಕಾ ಬಂಡವಾಳ ಅಭಿವೃದ್ಧಿ ನಿಗಮ, ರಾಷ್ಟ್ರೀಯ ಮಟ್ಟದ ಹಣಕಾಸು ಸಂಸ್ಥೆಗಳು, ವಾಣಿಜ್ಯ ಬ್ಯಾಂಕುಗಳು, ಆರ್ಆರ್ಬಿಗಳು, ಸಹಕಾರಿ ಬ್ಯಾಂಕಗಳು, ಕೆವಿಐಬಿ/ಕೆವಿಐಸಿ, ಕರ್ನಾಟಕ ರಾಜ್ಯ ಎಸ್‌ಸಿ/ಎಸ್‌ಟಿ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮ ಹಾಗೂ ಸರ್ಕಾರ ಕಾಲಕಾಲಕ್ಕೆ ಪ್ರಕಟಿಸುವ ಇತರ ಯಾವುದೇ ಸಂಸ್ಥೆಯಿಂದ ಸಾಲಗಳನ್ನು ಪಡೆಯಲು ಸಹಿ ಹಾಕಲಾದ ಸಾಲ ಒಪ್ಪಂದಗಳು, ಕ್ರೆಡಿಟ್ ಡೀಡ್‌ಗಳು, ಭೋಗ್ಯ ಮತ್ತು ಒತ್ತೆ ಕಾಗದ ಪತ್ರಗಳಿಗೆ ಸಂಬಂಧಪಟ್ಟಂತೆ ಹಾಗೂ (೧೧) ಕೆಐಎಡಿಬಿ, ಕೆಎಸ್ಎಸ್ಐಡಿಸಿ, ಕಿಯೋನಿಕ್ಸ್, ಕೆಎಸ್ಐಐಡಿಸಿ, ಕೈಗಾರಿಕಾ ಸಹಕಾರಿಗಳು ಮತ್ತು ಅನುಮೋದಿತ ಖಾಸಗಿ ಕೈಗಾರಿಕಾ ನಿವೇಶನಗಳಿಂದ ಕೈಗಾರಿಕಾ ನಿವೇಶನಗಳು, ಶೆಡ್‌ಗಳು, ಕೈಗಾರಿಕಾ ವಸಾಹತುಗಳಿಗೆ ಸಂಬಂಧಪಟ್ಟಂತೆ ಕೈಗಾರಿಕಾ ಸಂಸ್ಥೆಗಳು ಸಹಿ ಹಾಕಿರುವ ಲೀಸ್ ಡೀಡ್‌ಗಳು, ಲೀಸ್ ಮತ್ತು ಮಾರಾಟ ಹಾಗೂ ಸಂಪೂರ್ಣ ಮಾರಾಟದ ಕಾಗದ ಪತ್ರಗಳಿಗೆ ಸಂಬಂಧಪಟ್ಟಂತೆ ಸ್ಟ್ಯಾಂಪ್ ಶುಲ್ಕವನ್ನು ಕೆಳಕಂಡಂತೆ ಮನ್ನಾ ಮಾಡಲಾಗಿದೆ.

೧) **ಹೈದರಾಬಾದ್-ಕರ್ನಾಟಕೇತರ ಪ್ರದೇಶ**
**ವಲಯ-೧** : ಶೇ. ೧೦೦ರಷ್ಟು; **ವಲಯ-೨** : ಶೇ. ೧೦೦ರಷ್ಟು; **ವಲಯ-೩** : ಶೇ. ೭೫ರಷ್ಟು; **ವಲಯ-೪** : ಇಲ್ಲ

೨) **ಹೈದರಾಬಾದ್-ಕರ್ನಾಟಕ ಪ್ರದೇಶ**
**ಹೆಚ್ಕೆ ವಲಯ-೧** : ಶೇ. ೧೦೦ರಷ್ಟು; **ಹೆಚ್ಕೆ ವಲಯ-೨** : ಶೇ. ೧೦೦ರಷ್ಟು

ಸಿ) ನೋಂದಣಿ ಶುಲ್ಕದಲ್ಲಿ ರಿಯಾಯಿತಿ:

**ಎಂಎಸ್ಎಂಇಗಳು:**

ಮೇಲೆ 'ಬಿ' ಯಲ್ಲಿ ನಿರ್ದಿಷ್ಟಪಡಿಸಿರುವ ಎಲ್ಲಾ ಸಾಲ ದಾಸ್ತವೇಜುಗಳು, ಗುತ್ತಿಗೆ ಕಾಗದ ಪತ್ರಗಳು ಮತ್ತು ಮಾರಾಟ ಕಾಗದ ಪತ್ರಗಳಿಗಾಗಿ ನೋಂದಣಿ ಶುಲ್ಕ ಪ್ರತಿ ರೂ.೧೦೦೦/-ಕ್ಕಾಗಿ ರೂ.೧/-ರ ರಿಯಾಯಿತಿ ದರದಲ್ಲಿರುತ್ತವೆ.

ಡಿ) **ಭೂಪರಿವರ್ತನೆ ಶುಲ್ಕದ ಮರುಪಾವತಿ**

**ಎಂಎಸ್ಎಂಇಗಳು:**

ಭೂಮಿಯನ್ನು ಕೃಷಿ ಬಳಕೆಯಿಂದ ಕೈಗಾರಿಕಾ ಬಳಕೆಗೆ ಪರಿವರ್ತಿಸಲು ಸೂಚಿತವಾಗಿರುವ ಭೂಪರಿವರ್ತನಾ ಶುಲ್ಕವನ್ನು ಕೆಳಗೆ ವಿವರಿಸಿರುವಂತೆ ಮರುಪಾವತಿ ಮಾಡಲಾಗುವುದು.

೧) **ಹೈದರಾಬಾದ್-ಕರ್ನಾಟಕೇತರ ಪ್ರದೇಶ**
**ವಲಯ-೧** : ಶೇ. ೧೦೦ರಷ್ಟು; **ವಲಯ-೨** : ಶೇ. ೧೦೦ರಷ್ಟು; **ವಲಯ-೩** : ಶೇ. ೭೫ರಷ್ಟು; **ವಲಯ-೪** : ಇಲ್ಲ

೨) **ಹೈದರಾಬಾದ್-ಕರ್ನಾಟಕ ಪ್ರದೇಶ**
**ಹೆಚ್ಕೆ ವಲಯ-೧** : ಶೇ. ೧೦೦ರಷ್ಟು; **ಹೆಚ್ಕೆ ವಲಯ-೨** : ಶೇ. ೧೦೦ರಷ್ಟು

ಇ) **ಪ್ರವೇಶ ತೆರಿಗೆಯಿಂದ ವಿನಾಯಿತಿ**

**ಎಂಎಸ್‌ಎಂಇಗಳು**

**ವಲಯ-೧, ೨, ೩ ಮತು ಹೆಚ್‌ಕೆ ವಲಯ-೧ ಮತ್ತು ೨,** ಯೋಜನಾ ಅನುಷ್ಠಾನದ ಆರಂಭ ದಿನಾಂಕದಿಂದ ಮೂರು ವರ್ಷಗಳ ಪ್ರಾರಂಭಿಕ ಅವಧಿಗಾಗಿ **"ಸ್ಥಾವರ ಮತ್ತು ಯಂತ್ರೋಪಕರಣ ಮತ್ತು ಕ್ಯಾಪಿಟಲ್ ಗೂಡ್ಸ್"** ಮೇಲೆ ಪ್ರವೇಶ ತೆರಿಗೆಯನ್ನು ಕಟ್ಟುವಲ್ಲಿ ಶೇ. ೧೦೦ರಷ್ಟು ವಿನಾಯಿತಿಗೆ ಅರ್ಹವಾಗುತ್ತವೆ. ಈ ಉದ್ದೇಶಕ್ಕಾಗಿ ಸ್ಥಾವರ ಮತ್ತು ಯಂತ್ರೋಪಕರಣ ಮತ್ತು ಕ್ಯಾಪಿಟಲ್ ಗೂಡ್ಸ್ ಸಾಮಗ್ರಿಗಳನ್ನು ಕುರಿತ ಅರ್ಥ ವಿವರಣೆಯಲ್ಲಿ ಕ್ಯಾಪ್ಟಿವ್ ವಿದ್ಯುತ್ ಉತ್ಪಾದನೆಗೆ ಅಗತ್ಯವಾಗುವ ಯಂತ್ರೋಪಕರಣಗಳು ಇತ್ಯಾದಿ ಸಹ ಸೇರಿರುತ್ತವೆ.

ಕಚ್ಚಾ ಸಾಮಗ್ರಿಗಳು, ಉಪಕರಣಗಳು, ಬಿಡಿ ಭಾಗಗಳು ಮತ್ತು ಇತರ ಸಾಮಗ್ರಿಗಳು (ಪೆಟ್ರೋಲಿಯಂ ಉತ್ಪನ್ನಗಳನ್ನು ಹೊರತುಪಡಿಸಿ) (ಅನ್ವಯಿತವಾದೆಡೆ) ವಾಣಿಜ್ಯ ಉತ್ಪಾದನೆಯ ಆರಂಭ ದಿನಾಂಕದಿಂದ ಐದು ವರ್ಷಗಳ ಅವಧಿಗಾಗಿ.

**ಎಫ್) ತಾಜ್ಯ ನೀರಿನ ಸಂಸ್ಕರಣಾ ಘಟಕವನ್ನು ಸ್ಥಾಪಿಸಲು ಸಬ್ಸಿಡಿ (ಇಟಿಪಿ)**

**ಉತ್ಪಾದನಾ ಎಂಎಸ್‌ಎಂಇಗಳು**

**ಹೆಚ್‌ಕೆ ವಲಯ-೧** ಮತ್ತು ೨ರಲ್ಲಿ ಹಾಗು ಹೆಚ್‌ಕೆ ಕರ್ನಾಟಕೇತರ **ವಲಯ ೧, ೨** ಮತ್ತು ೩ರಲ್ಲಿ ರೂ. ೫೦ ಲಕ್ಷಗಳ ಪರಿಮಿತಿಗೆ ಒಳಪಟ್ಟಂತೆ ಹಾಗೂ ಹೆಚ್.ಕೆ ಕರ್ನಾಟಕೇತರ **ವಲಯ ೪** ರಲ್ಲಿ ರೂ.೨೫ ಲಕ್ಷಗಳು ಪರಿಮಿತಿಗೆ ಒಳಪಟ್ಟಂತೆ ಇಟಿಪಿ ವೆಚ್ಚದ ಶೇ. ೫೦ರವರೆಗೆ ಏಕಕಾಲದ ಬಂಡವಾಳ ಸಬ್ಸಿಡಿ.

**ಜಿ) ಬಡ್ಡಿ ಸಹಾಯಧನ**

ಅತಿಸಣ್ಣ ಮತ್ತು ಸಣ್ಣ ಸಂಸ್ಥೆಗಳಿಗೆ ನೀಡಲಾಗುವ ಅವಧಿ ಸಾಲಗಳ ಮೇಲೆ ಶೇ. ೫ ರಷ್ಟು ಬಡ್ಡಿ ಸಬ್ಸಿಡಿ. ಈ ಬಡ್ಡಿ ಸಬ್ಸಿಡಿಯನ್ನು ಉದ್ಯಮವು ಅಸಲು ಅಥವಾ ಬಡ್ಡಿ ಕಂತುಗಳ ಪಾವತಿಯನ್ನು ತಪ್ಪದೇ ಕಟ್ಟಿದ್ದಲ್ಲಿ ಮಾತ್ರ, ಉದ್ಯಮದ ಪರವಾಗಿ ಹಣಕಾಸು ಸಂಸ್ಥೆಗೆ ಪಾವತಿ ಮಾಡಲಾಗುತ್ತದೆ. ಬಡ್ಡಿ ಸಹಾಯಧನವು ಪರಿಣಾಮಕಾರಿ ಬಡ್ಡಿ ದರವಾಗಿರುತ್ತದೆ. (ಬಡ್ಡಿ ಸಹಾಯಧನವನ್ನು ಕಳೆದ ನಂತರ) (ಯಾವುದೇ ಸಂಸ್ಥೆಯಿಂದ ಬರತಕ್ಕ/ ಭಾರತ ಸರಕಾರದ ಯಾವುದೇ ಯೋಜನೆಯನ್ವಯ ಲಭಿಸುವ ಅಥವಾ ವಾರ್ಷಿಕ ಶೇ. ೫ರಷ್ಟು : ಇದರಲ್ಲಿ ಯಾವುದು ಕಡಿಮೆಯೋ ಆ ಮೊತ್ತಕ್ಕೆ ಸಮ). ಬಡ್ಡಿ ಸಹಾಯಧನದ ಅವಧಿಯು ಹೆಚ್‌ಕೆ ಕರ್ನಾಟಕೇತರ **ವಲಯ-೧, ವಲಯ-೨** ಮತ್ತು **ವಲಯ-೩**ಕ್ಕಾಗಿ ಅನುಕ್ರಮವಾಗಿ ೬ ವರ್ಷಗಳು, ೫ ವರ್ಷಗಳು ಮತ್ತು ೪ ವರ್ಷಗಳಾಗಿರುತ್ತವೆ ಹಾಗೂ ಹೆಚ್‌ಕೆ **ವಲಯ-೧** ಮತ್ತು **ವಲಯ-೨** ಕ್ಕಾಗಿ ಅನುಕ್ರಮವಾಗಿ ೭ ವರ್ಷಗಳು ಮತ್ತು ೬ ವರ್ಷಗಳಾಗಿರುತ್ತವೆ.

**ಹೆಚ್) ವಿದ್ಯುಚ್ಛಕ್ತಿ ದರಗಳ ಮೇಲಿನ ತೆರಿಗೆಯಿಂದ ವಿನಾಯಿತಿ**

**ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಉತ್ಪಾದನಾ ಘಟಕಗಳಿಗೆ**

**ವಲಯ-೧, ವಲಯ-೨,** ಮತ್ತು ಹೆಚ್‌ಕೆ **ವಲಯ-೧** ಮತ್ತು **ವಲಯ-೨** ಕ್ಕಾಗಿ ಅನುಕ್ರಮವಾಗಿ ೬ ವರ್ಷಗಳು, ೫ ವರ್ಷಗಳು, ೪ ವರ್ಷಗಳು, ೭ ವರ್ಷಗಳು, ಮತ್ತು ೬ ವರ್ಷಗಳ ಆರಂಭಿಕ ಅವಧಿಗಾಗಿ ವಿದ್ಯುತ್ ತೆರಿಗೆಯಿಂದ ಶೇ.೧೦೦ ರಷ್ಟು ವಿನಾಯಿತಿ.

**ಐ) ತಂತ್ರಜ್ಞಾನ ನವೀಕರಣ, ಗುಣಮಟ್ಟ ಪ್ರಾಮಾಣೀಕರಣ**
**ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಉತ್ಪಾದನಾ ಕೈಗಾರಿಕೆಗಳು**

**೧) ತಂತ್ರಜ್ಞಾನ ನವೀಕರಣ ಸಾಲದ ಮೇಲಿನ ಬಡ್ಡಿ ಸಹಾಯಧನ**

**ವಲಯ-೧, ೨, ೩ ಮತ್ತು ಹೆಚ್‌ಕೆ ವಲಯ-೧,** ೨: ಭಾರತ ಸರ್ಕಾರದ ಸಿಎಲ್‌ಸಿಎಸ್‌ಎಸ್‌ಗೆ ಒಳಪಡದೆ, ಕೆಎಸ್‌ಎಫ್‌ಸಿ ಹಾಗೂ ಶೆಡ್ಯೂಲ್ಡ್ ವಾಣಿಜ್ಯ ಬ್ಯಾಂಕುಗಳಿಂದ ಮೇಲೆ ಪಡೆದ ಸಾಲದ ಮೇಲೆ ಶೇ. ೫ರಷ್ಟು.

**೨) ಐಎಸ್‌ಓ ಸರಣಿಯ ಪ್ರಮಾಣೀಕರಣ ವೆಚ್ಚ**

**ವಲಯ-೧, ೨, ೩ ಮತ್ತು ಹೆಚ್‌ಕೆ ವಲಯ-೧,** ೨: ವೆಚ್ಚದ ಶೇ. ೭೫ರಷ್ಟು, (ಗರಿಷ್ಠ ೭೫,೦೦೦ ರೂ.ಗಳು)

**೩) ಬಿಐಎಸ್ ಪ್ರಮಾಣ ಪತ್ರ**

ಬಿಐಎಸ್‌ಗೆ ನೀಡಲಾದ ಶುಲ್ಕದ ಶೇ. ೫೦ರಷ್ಟು (ಗರಿಷ್ಠ ೨೦,೦೦೦ ರೂ ಗಳು) ಮತ್ತು ಬಿಐಎಸ್‌ನಿಂದ ಅನುಮೋದಿತವಾದ ಪರೀಕ್ಷಣಾ ಉಪಕರಣಗಳ ಖರೀದಿ ವೆಚ್ಚದ ಶೇ. ೨೫ರಷ್ಟು (ಗರಿಷ್ಠ ೫೦,೦೦೦ ರೂ.ಗಳು).

**೪) ತಂತ್ರಜ್ಞಾನದ ಅಳವಡಿಕೆ**

ಮಾನ್ಯತೆ ಪಡೆದ ರಾಷ್ಟ್ರೀಯ ಪ್ರಯೋಗಾಲಯಗಳ ತಂತ್ರಜ್ಞಾನ ಅಳವಡಿಕೆ ವೆಚ್ಚದ ಶೇ. ೨೫ರಷ್ಟು (ಗರಿಷ್ಠ ೫೦,೦೦೦).

**೫) ಟೆಕ್ನಾಲಜಿ ಬಿಸಿನೆಸ್ ಇಂಕ್ಯುಬೇಷನ್ ಸೆಂಟರ್**

ವೆಚ್ಚದ ಶೇ. ೨೫ರಷ್ಟು (ಗರಿಷ್ಠ ೫೦ ಲಕ್ಷ ರೂ ಗಳು).

೬) ಎಲೆಕ್ಟ್ರಾನಿಕ್ ತ್ಯಾಜ್ಯಗಳು ಮತ್ತು ಪ್ಲಾಸ್ಟಿಕ್ ತ್ಯಾಜ್ಯಗಳ ಪುನರ್ ಬಳಕೆ

**ವಲಯ-೧, ೨, ೩** ಮತ್ತು ಹೆಚ್ಕೆ **ವಲಯ-೧,** ೨ರಲ್ಲಿ ರೂ.೧೦ ಲಕ್ಷಗಳ ಪರಿಮಿತಿಗೆ ಒಳಪಟ್ಟಂತೆ ೫ರಷ್ಟು ಹೆಚ್ಚುವರಿ ಬಂಡವಾಳ ಉತ್ತೇಜನ ಸಹಾಯಧನ.

**ಜೆ. ಮಳೆ ಕೊಯ್ಲು ಮತ್ತು ಜಲ ಸಂರಕ್ಷಣೆ ಕ್ರಮಗಳು**

**ವಲಯ-೧, ೨, ೩ ಮತ್ತು ಹೆಚ್‌ಕೆ ವಲಯ-೧, ೨ ರಲ್ಲಿ** ಚಿಕ್ಕ ಮತ್ತು ಮಧ್ಯಮ ಉತ್ಪಾದನಾ ಘಟಕಗಳು

(೧) ಮಳೆ ಕೊಯ್ಲು: ಉಪಕರಣ ವೆಚ್ಚದ ಶೇ. ೫೦ರಷ್ಟು (ಗರಿಷ್ಠ ರೂ.೧.೦೦ ಲಕ್ಷ)

(೨) ತ್ಯಾಜ್ಯ ನೀರಿನ ಪುನರ್ ಬಳಕೆ : ಉಪಕರಣ ವೆಚ್ಚದ ಶೇ. ೫೦ರಷ್ಟು (ಗರಿಷ್ಠ ರೂ.೫.೦೦ ಲಕ್ಷ)

(೩) ಶೂನ್ಯ ತ್ಯಾಜ್ಯ ಸಂಸ್ಕರಣಾ ಕಾರ್ಯ ವಿಧಾನ : ಉಪಕರಣ ವೆಚ್ಚದ ಶೇ. ೫೦ರಷ್ಟು (ಗರಿಷ್ಠ ರೂ.೫.೦೦ ಲಕ್ಷ)

ಕೆ) ಇಂಧನ ಸಂರಕ್ಷಣೆ

ಎಲ್ಲಾ ವಲಯಗಳಲ್ಲಿನ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಉತ್ಪಾದನಾ ಕೈಗಾರಿಕೆಗಳು

ಇಂಧನ ಉಳಿತಾಯದ ಕ್ರಮಗಳನ್ನು ಬಳಸಿ, ಈ ಮೊದಲು ಬಳಸಲಾಗುತ್ತಿದ್ದ ಇಂಧನದ ಕನಿಷ್ಠ ಶೇ. ೧೦ರಷ್ಟು ಉಳಿತಾಯವಾದಲ್ಲಿ: ಬಂಡವಾಳ ವೆಚ್ಚದ ಶೇ. ೧೦ರಷ್ಟು (ಗರಿಷ್ಠ ರೂ.೫ ಲಕ್ಷ); ಅಸಾಂಪ್ರದಾಯಿಕ ಇಂಧನ ಮೂಲಗಳ ಬಳಕೆ: ಬಂಡವಾಳ ವೆಚ್ಚದ ಶೇ. ೧೦ರಷ್ಟು (ಗರಿಷ್ಠ ರೂ.೫ ಲಕ್ಷ); ಕ್ಯಾಪ್ಟಿವ್ ವಿದ್ಯುತ್ ಉತ್ಪಾದನೆ ಸೌರ ಹಾಗೂ ವಾಯು ಇಂಧನ ಮೂಲಗಳ ಬಳಕೆ: ಪ್ರತಿ ಯುನಿಟ್‌ಗೆ ರೂ.೦.೫೦ ಸಹಾಯಧನ.

**ಎಸ್‌ಸಿ/ಎಸ್‌ಟಿ ಉದ್ಯಮಶೀಲರಿಗೆ ವಿಶೇಷ ಒತ್ತಾಸೆ**

ಎಸ್‌ಸಿ/ಎಸ್‌ಟಿ ಉದ್ಯಮಶೀಲರಲ್ಲಿ ಉದ್ಯಮ ಆಸಕ್ತಿ ಮತ್ತು ಕೈಗಾರಿಕಾ ಸಾಮರ್ಥ್ಯವನ್ನು ಉತ್ತೇಜಿಸುವ ಉದ್ದೇಶದಿಂದ ಮಾಲೀಕತ್ವ ಸಂಸ್ಥೆಯಾಗಿ ಅಥವಾ ಪಾಲುಗಾರಿಕೆ ಸಂಸ್ಥೆಯಾಗಿ/ಖಾಸಗಿ ನಿಯಮಿತ ಕಂಪನಿಯಾಗಿ ಸ್ಥಾಪಿತವಾಗಿ ಎಲ್ಲಾ ಪಾಲುಗಾರರು ಅಥವಾ ನಿರ್ದೇಶಕರು ಎಸ್‌ಸಿ/ಎಸ್‌ಟಿ ಸಮುದಾಯಕ್ಕೆ ಸೇರಿದವರಾಗಿದ್ದಲ್ಲಿ, ಕೆಳಗಿನ ಉತ್ತೇಜನಗಳನ್ನು ನೀಡಲಾಗುತ್ತದೆ.

೧) ಎಲ್ಲಾ ಹೊಸ ಕೈಗಾರಿಕಾ ಪ್ರದೇಶಗಳು/ನಿವೇಶನಗಳಲ್ಲಿ ಎಸ್‌ಸಿ/ಎಸ್‌ಟಿ ಉದ್ಯಮಶೀಲರಿಗಾಗಿ ವಿತರಣಾ ಸೂಕ್ತ ಭೂಮಿ/ಶೆಡ್‌ಗಳ ಶೇ. ೨೨.೫ರಷ್ಟು ಭಾಗವನ್ನು ಮೀಸಲಾಗಿಡಬೇಕೆಂದು ಕೆಐಎಡಿಬಿ ಮತ್ತು ಕೆಎಸ್‌ಎಸ್‌ಐಡಿಸಿಗೆ ಆದೇಶ ನೀಡಲಾಗುವುದು. ಇದಕ್ಕಾಗಿ ಪ್ರತ್ಯೇಕ ಮಾರ್ಗದರ್ಶನಗಳನ್ನು ನೀಡಲಾಗುವುದು.

೨) ಕೆಐಎಡಿಬಿ ಮತ್ತು ಕೆಎಸ್‌ಎಸ್‌ಐಡಿಸಿ, ಸಬ್ಸಿಡಿ ದರಗಳಲ್ಲಿ ಭೂಮಿ ಮತ್ತು ಶೆಡ್‌ಗಳನ್ನು ಒದಗಿಸತಕ್ಕದ್ದು.

೩) ಸರ್ಕಾರದ ನಿಧಿಯಿಂದ ಬೆಂಬಲಿತ ಇನ್‌ಕ್ಯೂಬೇಷನ್ ಕೇಂದ್ರಗಳು ಮತ್ತು ಕುಶಲತೆ ಅಭಿವೃದ್ಧಿ ಕೇಂದ್ರಗಳಲ್ಲಿ ಎಸ್‌ಸಿ/ಎಸ್‌ಟಿ ಎಮ್‌ಎಸ್‌ಎಮ್‌ಇ ಉದ್ಯಮಶೀಲರಿಗಾಗಿ ಸ್ಥಳದ ಮೀಸಲಾತಿ.

೪) ಸಿಡಾಕ್ ಅಥವಾ ಮಾನ್ಯತೆ ಪಡೆದ ತರಬೇತಿ ಸಂಸ್ಥೆಗಳಲ್ಲಿ ತರಬೇತಿ ಪಡೆದ ಉದ್ಯಮಶೀಲರಿಗೆ ಲೋ ಇಂಟೆರೆಸ್ಟ್ ಸ್ಟಾರ್ಟ್ ಆಫ್ ಸಾಲ (ಬಡ್ಡಿ ಸಹಾಯಧನದೊಂದಿಗೆ) ಮರುಪಾವತಿ ವೇಳಾ ಪಟ್ಟಿಯಲ್ಲಿ ಸಡಿಲತೆ ನೀಡಲಾಗುವುದು.

೫) ರಾಜ್ಯವು ಸಂಭಾವ್ಯ ಉದ್ಯಮಶೀಲರಿಗಾಗಿ ಉದ್ಯಮಶೀಲ ಅಭಿವೃದ್ಧಿ ಕಾರ್ಯಕ್ರಮವನ್ನು ವಿಶೇಷವಾಗಿ ಆರಂಭಿಸಲಿದೆ.

೬) ಎಸ್‌ಸಿ/ಎಸ್‌ಟಿ ಉದ್ಯಮಶೀಲರು ಹೂಡುವ ಎಮ್‌ಎಸ್‌ಎಮ್‌ಇಗಳಿಗೆ ಕೊಡಲಾಗುವ ಪ್ರೋತ್ಸಾಹಗಳು ಮತ್ತು ರಿಯಾಯಿತಿಗಳ ವಿಶೇಷ ಪ್ಯಾಕೇಜ್ ಕೆಳಕಂಡಂತೆ ಇರುತ್ತವೆ:

**ಎ) ಬಂಡವಾಳ ಪ್ರೋತ್ಸಾಹ ಸಹಾಯಧನ**

**ಅ) ಅತಿ ಸಣ್ಣ ಕೈಗಾರಿಕೆಗಳು**

**೧) ಹೈದರಾಬಾದ್–ಕರ್ನಾಟಕೇತರ ಪ್ರದೇಶ**

**ವಲಯ–೧ :** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೩೦ರಷ್ಟು (ಗರಿಷ್ಠ ರೂ.೧೮.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೩೫ರಷ್ಟು (ಗರಿಷ್ಠ ರೂ.೨೦.೦೦ ಲಕ್ಷ)– ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ

**ವಲಯ–೨ :** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೨೫ರಷ್ಟು (ಗರಿಷ್ಠ ರೂ.೧೫.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೩೦ರಷ್ಟು (ಗರಿಷ್ಠ ರೂ.೧೮.೦೦ ಲಕ್ಷ)– ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ

**ವಲಯ–೩ :** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೨೦ರಷ್ಟು (ಗರಿಷ್ಠ ರೂ.೧೨.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೨೫ರಷ್ಟು (ಗರಿಷ್ಠ ರೂ.೧೫.೦೦ ಲಕ್ಷ) –ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ

**ವಲಯ–೪ :** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೧೦ರಷ್ಟು (ಗರಿಷ್ಠ ರೂ.೮.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೧೫ರಷ್ಟು (ಗರಿಷ್ಠ ರೂ.೧೨.೦೦ ಲಕ್ಷ) –ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ

೨) ಹೈದರಾಬಾದ್– ಕರ್ನಾಟಕ ಪ್ರದೇಶ

**ಹೆಚ್‌ಕೆ ವಲಯ–೧ :** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೩೫ರಷ್ಟು (ಗರಿಷ್ಠ ರೂ.೨೦.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೪೦ರಷ್ಟು (ಗರಿಷ್ಠ ರೂ.೨೨.೦೦ ಲಕ್ಷ) –ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ

**ಹೆಚ್‌ಕೆ ವಲಯ–೨ :** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೩೦ರಷ್ಟು (ಗರಿಷ್ಠ ರೂ.೧೮.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೩೫ರಷ್ಟು (ಗರಿಷ್ಠ ರೂ.೨೦.೦೦ ಲಕ್ಷ) –ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ

**ಆ) ಸಣ್ಣ ಉದ್ಯಮಗಳು**

೧) ಹೈದರಾಬಾದ್–ಕರ್ನಾಟಕಯೇತರ ಪ್ರದೇಶ

**ವಲಯ–೧ :** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೨೫ರಷ್ಟು (ಗರಿಷ್ಠ ರೂ.೪೫.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೩೦ರಷ್ಟು (ಗರಿಷ್ಠ ರೂ.೫೦.೦೦ ಲಕ್ಷ) – ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ

**ವಲಯ–೨ :** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೨೦ರಷ್ಟು (ಗರಿಷ್ಠ ರೂ.೩೫.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೨೫ರಷ್ಟು (ಗರಿಷ್ಠ ರೂ.೪೦.೦೦ ಲಕ್ಷ)– ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ

**ವಲಯ–೩ :** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೧೫ರಷ್ಟು (ಗರಿಷ್ಠ ರೂ.೨೫.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೨೦ರಷ್ಟು (ಗರಿಷ್ಠ ರೂ.೩೦.೦೦ ಲಕ್ಷ) –ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ

**ವಲಯ–೪ :** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೧೦ರಷ್ಟು (ಗರಿಷ್ಠ ರೂ.೧೦.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ

(ವಿಎಫ್‌ಎ) ಶೇ ೧೫ರಷ್ಟು (ಗರಿಷ್ಠ ರೂ.೧೫.೦೦ ಲಕ್ಷ) –ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ

೨) ಹೈದರಾಬಾದ್– ಕರ್ನಾಟಕ ಪ್ರದೇಶ

**ಹೆಚ್‌ಕೆ ವಲಯ–೧ :** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೩೦ರಷ್ಟು (ಗರಿಷ್ಠ ರೂ.೫೦.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೩೫ರಷ್ಟು (ಗರಿಷ್ಠ ರೂ.೫೫.೦೦ ಲಕ್ಷ) –ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ

**ಹೆಚ್‌ಕೆ ವಲಯ–೨ :** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೨೫ರಷ್ಟು (ಗರಿಷ್ಠ ರೂ.೪೫.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೩೦ರಷ್ಟು (ಗರಿಷ್ಠ ರೂ.೫೦.೦೦ ಲಕ್ಷ) –ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ

ಇ) ಮಧ್ಯಮ ವಲಯದ ಉತ್ಪಾದನಾ ಘಟಕಗಳು (ಎಮ್‌ಎಸ್‌ಎಮ್‌ಇ ಕಾಯ್ದೆಯಲ್ಲಿ ವಿವರಿಸಿದಂತೆ ಕನಿಷ್ಠ ೨೫ ನೇರ ಉದ್ಯೋಗಗಳನ್ನು ಒದಗಿಸುವ ಘಟಕಗಳು)

**೧) ಹೈದರಾಬಾದ್–ಕರ್ನಾಟಕೇತರ ಪ್ರದೇಶ**

**ವಲಯ–೧ :** ರೂ.೫೫ ಲಕ್ಷ; ರೂ.೬೦ ಲಕ್ಷ – ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ

**ವಲಯ–೨ :** ರೂ.೪೫ ಲಕ್ಷ; ರೂ.೫೦ ಲಕ್ಷ – ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ

**ವಲಯ–೩ :** ರೂ.೩೫ ಲಕ್ಷ; ರೂ.೪೦ ಲಕ್ಷ – ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ

**ವಲಯ–೪ :** ರೂ.೨೦ ಲಕ್ಷ; ರೂ.೨೫ ಲಕ್ಷ – ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ

**೨) ಹೈದರಾಬಾದ್–ಕರ್ನಾಟಕ ಪ್ರದೇಶ**

**ಹೆಚ್‌ಕೆ ವಲಯ–೧ :** ರೂ.೬೦ ಲಕ್ಷ; ರೂ.೬೫ ಲಕ್ಷ – ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ

**ಹೆಚ್‌ಕೆ ವಲಯ–೨ :** ರೂ.೫೦ ಲಕ್ಷ; ರೂ.೫೫ ಲಕ್ಷ – ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ

**ಬಿ) ಸ್ಟ್ಯಾಂಪ್ ಡ್ಯೂಟಿಯಿಂದ ವಿನಾಯಿತಿ**

**ಎಂಎಸ್‌ಎಂಇಗಳು**

(i) ಆರಂಭಿಕ ೫ ವರ್ಷಗಳಿಗಾಗಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ವ್ಯಾಟ್ ಲೋನ್ ಒಳಪಟ್ಟಂತೆ ಮತ್ತು/ಅಥವಾ ರಾಜ್ಯ ಹಣಕಾಸು ನಿಗಮ, ಕೈಗಾರಿಕಾ ಬಂಡವಾಳ ಅಭಿವೃದ್ಧಿ ನಿಗಮ, ರಾಷ್ಟ್ರೀಯ ಮಟ್ಟದ ಹಣಕಾಸು ಸಂಸ್ಥೆಗಳು, ವಾಣಿಜ್ಯ ಬ್ಯಾಂಕಗಳು, ಆರ್‌ಆರ್‌ಬಿಗಳು, ಸಹಕಾರಿ ಬ್ಯಾಂಕಗಳು, ಕೆವಿಐಬಿ/ಕೆವಿಐಸಿ, ಕರ್ನಾಟಕ ರಾಜ್ಯ ಎಸ್‌ಸಿ/ಎಸ್‌ಟಿ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮ ಹಾಗೂ ಸರ್ಕಾರ ಸಮಯಕ್ಕೆ ತಕ್ಕಂತೆ ಪ್ರಕಟಿಸುವ ಇತರ ಯಾವುದೇ ಸಂಸ್ಥೆಯಿಂದ ಸಾಲಗಳನ್ನು ಪಡೆಯಲು ಸಹಿ ಹಾಕಲಾದ ಸಾಲ ಒಪ್ಪಂದಗಳು, ಕ್ರೆಡಿಟ್ ಡೀಡ್‌ಗಳು, ಭೋಗ್ಯ ಮತ್ತು ಒತ್ತೆ ಕಾಗದ ಪತ್ರಗಳಿಗೆ ಸಂಬಂಧಪಟ್ಟಂತೆ ಹಾಗೂ (ii) ಕೆಐಎಡಿಬಿ, ಕೆಎಸ್‌ಎಸ್‌ಐಡಿಸಿ, ಕಿಯೋನಿಕ್ಸ್, ಕೈಗಾರಿಕಾ ಸಹಕಾರಿಗಳು ಮತ್ತು ಅನುಮೋದಿತ ಖಾಸಗಿ ಕೈಗಾರಿಕಾ ನಿವೇಶನಗಳಿಂದ ಕೈಗಾರಿಕಾ ನಿವೇಶನಗಳು, ಶೆಡ್‌ಗಳು, ಕೈಗಾರಿಕಾ ವಸಾಹತುಗಳಿಗೆ ಸಂಬಂಧಪಟ್ಟಂತೆ ಕೈಗಾರಿಕಾ ಸಂಸ್ಥೆಗಳು ಸಹಿ ಹಾಕಿರುವ ಲೀಸ್ ಡೀಡ್‌ಗಳು, ಲೀಸ್ ಮತ್ತು ಮಾರಾಟ ಹಾಗೂ ಸಂಪೂರ್ಣ ಮಾರಾಟದ ಕಾಗದ ಪತ್ರಗಳಿಗೆ ಸಂಬಂಧಪಟ್ಟಂತೆ ಸ್ಟ್ಯಾಂಪ್ ಶುಲ್ಕವನ್ನು ಕೆಳಕಂಡಂತೆ ಮನ್ನಾ ಮಾಡಲಾಗಿದೆ.

**೧) ಹೈದರಾಬಾದ್–ಕರ್ನಾಟಕೇತರ ಪ್ರದೇಶ**

ವಲಯ–೧,೨,೩ : ಶೇ. ೧೦೦ರಷ್ಟು; ವಲಯ–೪ : ಶೇ. ೭೫ರಷ್ಟು

**೨) ಹೈದರಾಬಾದ್-ಕರ್ನಾಟಕ ಪ್ರದೇಶ**

ವಲಯ-೧ ಮತ್ತು ೨ : ಶೇ. ೧೦೦ರಷ್ಟು

**ಮಹಿಳಾ ಉದ್ಯಮಶೀಲರಿಗಾಗಿ ಉತ್ತೇಜನ**

ಮಹಿಳಾ ಉದ್ಯಮಶೀಲರಿಗೆ ವಿಶೇಷ ಆದ್ಯತೆ ನೀಡಿ, ಮುಂದಿನ ಐದು ವರ್ಷಗಳಲ್ಲಿ ರಾಜ್ಯದಲ್ಲಿ ಇನ್ನೂ ಹೆಚ್ಚು ಮಹಿಳಾ ಉದ್ಯಮಗಳ ಸ್ಥಾಪನೆಯನ್ನು ಸುಗಮಗೊಳಿಸಿ, ಅವರುಗಳ ಕೊಡುಗೆಯನ್ನು ಉತ್ತಮಪಡಿಸಲು, ಮಾಲಿಕತ್ವ ಸಂಸ್ಥೆಯಾಗಿ ಅಥವಾ ಪಾಲುಗಾರಿಕೆ ಸಂಸ್ಥೆಯಾಗಿ/ ಖಾಸಗಿ ನಿಯಮಿತ ಕಂಪನಿಯಾಗಿ ಸ್ಥಾಪಿತವಾಗಿ, ಅದರ ಎಲ್ಲಾ ಪಾಲುಗಾರರು ಅಥವಾ ನಿರ್ದೇಶಕರು ಮಹಿಳೆಯರಾಗಿದ್ದಲ್ಲಿ ಕೆಳಗಿನ ಉತ್ತೇಜನಗಳನ್ನು ನೀಡಲು ಉದ್ದೇಶಿಸಲಾಗಿದೆ.

(i) ಮಹಿಳೆಯರಿಗಾಗಿ ಹುಬ್ಬಳ್ಳಿ/ ಧಾರವಾಡ ಮತ್ತು ಕನಕಪುರದ ಹಾರೋಹಳ್ಳಿ ಮುಂತಾದ ಸಂಭಾವ್ಯ ನಿವೇಶನಗಳಲ್ಲಿ ಎರಡು ಕೈಗಾರಿಕಾ ಪ್ರದೇಶಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. (ii) ಎಲ್ಲಾ ಹೊಸ ಕೈಗಾರಿಕಾ ಪ್ರದೇಶಗಳು/ ನಿವೇಶನಗಳಲ್ಲಿ ವಿತರಣಾ ಸೂಕ್ತ ಭೂಮಿ/ಶೆಡ್‌ಗಳ ಶೇ. ೫ರಷ್ಟು ಭಾಗವನ್ನು ಕೆಐಎಡಿಬಿ ಮಹಿಳಾ ಉದ್ಯಮಶೀಲರಿಗಾಗಿ ಗೊತ್ತುಪಡಿಸಲಿದೆ. (iii) ಜವಳಿ, ಬೆಲೆಬಾಳುವ ಹರಳುಗಳು ಮತ್ತು ಆಭರಣ ಕ್ಷೇತ್ರಗಳಲ್ಲಿ ಮಹಿಳೆಯರಿಗಾಗಿ ವಿಶೇಷ ಸಮೂಹ. (iv) ಸಿಡಾಕ್ ಅಥವಾ ಮಾನ್ಯತೆ ಪಡೆದ ತರಬೇತಿ ಸಂಸ್ಥೆಗಳಲ್ಲಿ ತರಬೇತಿ ಪಡೆದ ಉದ್ಯಮಶೀಲರಿಗೆ ಲೋ ಇಂಟೆರೆಸ್ಟ್ ಸ್ಟಾರ್ಟ್ ಅಪ್ ಸಾಲ (ಬಡ್ಡಿ ಸಹಾಯಧನದೊಂದಿಗೆ) ಮರುಪಾವತಿ ವೇಳಾ ಪಟ್ಟಿಯಲ್ಲಿ ಸಡಿಲತೆ ನೀಡಲಾಗುವುದು. (v) ರಾಜ್ಯವು ಸಂಭಾವ್ಯ ಮಹಿಳಾ ಉದ್ಯಮಶೀಲರಿಗಾಗಿ ಉದ್ಯಮಶೀಲ ಅಭಿವೃದ್ಧಿ ಕಾರ್ಯಕ್ರಮವನ್ನು ವಿಶೇಷವಾಗಿ ಆರಂಭಿಸಲಿದೆ. (vi) ಮಹಿಳಾ ಉದ್ಯಮಶೀಲರು ಹೂಡುವ ಎಮ್‌ಎಸ್‌ಎಮ್‌ಇಗಳಿಗೆ ಕೆಳಕಂಡಂತೆ ಆಕರ್ಷಕ ಪ್ರೋತ್ಸಾಹಗಳು ಮತ್ತು ವಿನಾಯಿತಿಗಳನ್ನು ಕೊಟ್ಟು ಉತ್ತೇಜಿಸಲಾಗುವುದು.

**ಎ) ಬಂಡವಾಳ ಪ್ರೋತ್ಸಾಹ ಸಹಾಯಧನ**

**ಅ) ಅತಿ ಸಣ್ಣ ಘಟಕಗಳು**

**೧) ಹೈದರಾಬಾದ್ – ಕರ್ನಾಟಕೇತರ ಪ್ರದೇಶ**

**ವಲಯ-೧ :** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೩೦ರಷ್ಟು (ಗರಿಷ್ಠ ರೂ.೧೮.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೩೫ರಷ್ಟು (ಗರಿಷ್ಠ ರೂ.೨೦.೦೦ ಲಕ್ಷ)–ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ.

**ವಲಯ-೨ :** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೨೫ರಷ್ಟು (ಗರಿಷ್ಠ ರೂ.೧೫.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೩೦ರಷ್ಟು (ಗರಿಷ್ಠ ರೂ.೧೮.೦೦ ಲಕ್ಷ)–ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ

**ವಲಯ-೩ :** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೨೦ರಷ್ಟು (ಗರಿಷ್ಠ ರೂ.೧೨.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೨೫ರಷ್ಟು (ಗರಿಷ್ಠ ರೂ.೧೫.೦೦ ಲಕ್ಷ)–ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ.

**ವಲಯ-೪ :** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೧೦ರಷ್ಟು (ಗರಿಷ್ಠ ರೂ.೮.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೧೫ರಷ್ಟು (ಗರಿಷ್ಠ ರೂ.೧೨.೦೦ ಲಕ್ಷ)–ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ.

೨) ಹೈದರಾಬಾದ್ – ಕರ್ನಾಟಕ ಪ್ರದೇಶ

**ಹೆಚ್‌ಕೆ ವಲಯ-೧:** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೩೫ರಷ್ಟು (ಗರಿಷ್ಠ ರೂ.೨೦.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ.೪೦ರಷ್ಟು(ಗರಿಷ್ಠ ರೂ.೨೨.೦೦ ಲಕ್ಷ)–ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ.

**ಹೆಚ್‌ಕೆ ವಲಯ-೨:** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೩೦ರಷ್ಟು (ಗರಿಷ್ಠ ರೂ.೧೮.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ.೩೫ರಷ್ಟು(ಗರಿಷ್ಠ ರೂ.೨೦.೦೦ ಲಕ್ಷ)–ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ.

**ಆ) ಸಣ್ಣ ಉದ್ಯಮಗಳು**

೧. ಹೈದರಾಬಾದ್ – ಕರ್ನಾಟಕೇತರ ಪ್ರದೇಶ

**ವಲಯ–೧ :** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್ಎ) ಶೇ ೨೫ರಷ್ಟು (ಗರಿಷ್ಠ ರೂ.೪೫.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್ಎ) ಶೇ ೩೦ರಷ್ಟು (ಗರಿಷ್ಠ ರೂ.೫೦.೦೦ ಲಕ್ಷ)–ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ.

**ವಲಯ–೨ :** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್ಎ) ಶೇ ೨೦ರಷ್ಟು (ಗರಿಷ್ಠ ರೂ.೩೫.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್ಎ) ಶೇ ೨೫ರಷ್ಟು (ಗರಿಷ್ಠ ರೂ.೪೦.೦೦ ಲಕ್ಷ)–ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ.

**ವಲಯ–೩ :** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್ಎ) ಶೇ ೧೫ರಷ್ಟು (ಗರಿಷ್ಠ ರೂ.೨೫.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್ಎ) ಶೇ ೨೦ರಷ್ಟು (ಗರಿಷ್ಠ ರೂ.೩೦.೦೦ ಲಕ್ಷ)–ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ.

**ವಲಯ–೪ :** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್ಎ) ಶೇ ೧೦ರಷ್ಟು (ಗರಿಷ್ಠ ರೂ.೧೦.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್ಎ) ಶೇ ೧೫ರಷ್ಟು (ಗರಿಷ್ಠ ರೂ.೧೫.೦೦ ಲಕ್ಷ)–ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ.

**೨) ಹೈದರಾಬಾದ್–ಕರ್ನಾಟಕ ಪ್ರದೇಶ**

**ಹೆಚ್‌ಕೆ ವಲಯ–೧ :** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್ಎ) ಶೇ ೩೦ರಷ್ಟು (ಗರಿಷ್ಠ ರೂ.೫೦.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್ಎ) ಶೇ ೩೫ರಷ್ಟು (ಗರಿಷ್ಠ ರೂ.೫೫.೦೦ ಲಕ್ಷ)–ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ.

**ಹೆಚ್‌ಕೆ ವಲಯ–೨ :** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್ಎ) ಶೇ ೨೫ರಷ್ಟು (ಗರಿಷ್ಠ ರೂ.೪೫.೦೦ ಲಕ್ಷ); ಸ್ಥಿರಾಸ್ತಿಗಳ ಮೌಲ್ಯದ (ವಿಎಫ್ಎ) ಶೇ ೩೦ರಷ್ಟು (ಗರಿಷ್ಠ ರೂ.೫೦.೦೦ ಲಕ್ಷ)–ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ.

ಇ) ಮಧ್ಯಮ ಉತ್ಪಾದನಾ ಘಟಕಗಳು (ಎಮ್‌ಎಸ್‌ಎಮ್‌ಇ ಕಾಯ್ದೆಯಲ್ಲಿ ನಮೂದಿಸಿದಂತೆ ಹಾಗೂ ಕನಿಷ್ಠ ೨೫ ನೇರ ಉದ್ಯೋಗಗಳನ್ನು ಒದಗಿಸುವ ಘಟಕಗಳು)

**೧) ಹೈದರಾಬಾದ್–ಕರ್ನಾಟಕೇತರ ಪ್ರದೇಶ**

**ವಲಯ–೧ : ರೂ.೫೫.೦೦ ಲಕ್ಷ; ರೂ.೬೦.೦೦ ಲಕ್ಷ – ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ.**

**ವಲಯ–೨ :** ರೂ.೪೫.೦೦ ಲಕ್ಷ; ರೂ.೫೦.೦೦ ಲಕ್ಷ – ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ.

**ವಲಯ–೩ :** ರೂ.೩೫.೦೦ ಲಕ್ಷ; ರೂ.೪೦.೦೦ ಲಕ್ಷ – ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ.

**ವಲಯ–೪ :** ರೂ.೨೦.೦೦ ಲಕ್ಷ; ರೂ.೨೫.೦೦ ಲಕ್ಷ – ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ.

**೨) ಹೈದರಾಬಾದ್ – ಕರ್ನಾಟಕ ಪ್ರದೇಶ**

**ಹೆಚ್‌ಕೆ ವಲಯ–೧ :** ರೂ. ೬೦.೦೦ ಲಕ್ಷ; ರೂ.೬೫.೦೦ ಲಕ್ಷ – ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ.

**ಹೆಚ್‌ಕೆ ವಲಯ–೨ :** ರೂ. ೫೫.೦೦ ಲಕ್ಷ; ರೂ.೬೦.೦೦ ಲಕ್ಷ – ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಶೀಲರಿಗೆ ಸಂಬಂಧಪಟ್ಟಂತೆ.

**ಬಿ) ಸ್ಟ್ಯಾಂಪ್ ಡ್ಯೂಟಿಯಿಂದ ವಿನಾಯಿತಿ**

**ಎಂಎಸ್‌ಎಂಇಗಳು:**

(i) ಆರಂಭಿಕ ೫ ವರ್ಷಗಳಿಗಾಗಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ವ್ಯಾಟ್ ಲೋನ್ ಒಳಪಟ್ಟಂತೆ ಮತ್ತು ಅಥವಾ ರಾಜ್ಯ ಹಣಕಾಸು ನಿಗಮ, ಕೈಗಾರಿಕಾ ಬಂಡವಾಳ ಅಭಿವೃದ್ಧಿ ನಿಗಮ, ರಾಷ್ಟ್ರೀಯ ಮಟ್ಟದ ಹಣಕಾಸು ಸಂಸ್ಥೆಗಳು, ವಾಣಿಜ್ಯ ಬ್ಯಾಂಕುಗಳು, ಆರ್‌ಆರ್‌ಬಿಗಳು, ಸಹಕಾರಿ ಬ್ಯಾಂಕುಗಳು, ಕೆವಿಐಬಿ/ಕೆವಿಐಸಿ, ಕರ್ನಾಟಕ

ರಾಜ್ಯ ಎಸ್‌ಸಿ/ಎಸ್‌ಟಿ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮ ಹಾಗೂ ಸರ್ಕಾರ ಸಮಯಾಸಮಯಕ್ಕೆ ಪ್ರಕಟಿಸುವ ಇತರ ಯಾವುದೇ ಸಂಸ್ಥೆಯಿಂದ ಸಾಲಗಳನ್ನು ಪಡೆಯಲು ಸಹಿ ಹಾಕಲಾದ ಸಾಲ ಒಪ್ಪಂದಗಳು, ಕ್ರೆಡಿಟ್ ಡೀಡ್‌ಗಳು, ಭೋಗ್ಯ ಮತ್ತು ಒತ್ತೆ ಕಾಗದ ಪತ್ರಗಳಿಗೆ ಸಂಬಂಧಪಟ್ಟಂತೆ ಹಾಗೂ (ಬಿ) ಕೆಐಎಡಿಬಿ, ಕೆಎಸ್‌ಐಡಿಸಿ, ಕಿಯೋನಿಕ್ಸ್, ಕೈಗಾರಿಕಾ ಸಹಕಾರಿ ಮತ್ತು ಅನುಮೋದಿಸಿ ಖಾಸಗಿ ಕೈಗಾರಿಕಾ ನಿವೇಶನಗಳಿಂದ ಕೈಗಾರಿಕಾ ನಿವೇಶನಗಳು, ಶೆಡ್‌ಗಳು, ಕೈಗಾರಿಕಾ ವಸಾಹತುಗಳಿಗೆ ಸಂಬಂಧಪಟ್ಟಂತೆ ಕೈಗಾರಿಕಾ ಸಂಸ್ಥೆಗಳು ಸಹಿ ಹಾಕಿರುವ ಲೀಸ್ ಮತ್ತು ಮಾರಾಟ ಹಾಗೂ ಸಂಪೂರ್ಣ ಮಾರಾಟದ ಕಾಗದ ಪತ್ರಗಳಿಗೆ ಸಂಬಂಧಪಟ್ಟಂತೆ ಸ್ಟ್ಯಾಂಪ್ ಶುಲ್ಕವನ್ನು ಕೆಳಕಂಡಂತೆ ಮನ್ನಾ ಮಾಡಲಾಗಿದೆ.

೧) ಹೈದರಾಬಾದ್ – ಕರ್ನಾಟಕೇತರ ಪ್ರದೇಶ

**ವಲಯ–೧, ೨, ೩ :** ಶೇ. ೧೦೦ರಷ್ಟು; **ವಲಯ–೪ :** ಶೇ. ೭೫ರಷ್ಟು

**೨) ಹೈದರಾಬಾದ್ – ಕರ್ನಾಟಕ ಪ್ರದೇಶ**

**ಹೆಚ್ಚಿನ ವಲಯ – ೧ ಮತ್ತು ೨ :** ಶೇ. ೧೦೦ರಷ್ಟು

**ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳು (ವರ್ಗ–೧ ಮತ್ತು ೨ಎ ಮಾತ್ರ) ದೈಹಿಕ ಅಂಗವಿಕಲರು ಮತ್ತು ಮಾಜಿ–ಯೋಧರಲ್ಲಿ ಉದ್ಯಮಶೀಲತೆಗೆ ಉತ್ತೇಜನ**

ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳು ಆರಂಭಿಸಲಿರುವ ಮತ್ತು ಮಾಜಿ–ಯೋಧರು ಹೂಡುವ ಎಮ್‌ಎಸ್‌ಎಮ್‌ಇಗಳಿಗೆ ಕೆಳಕಂಡಂತೆ ಆಕರ್ಷಕ ಪ್ರೋತ್ಸಾಹಗಳು ಮತ್ತು ರಿಯಾಯಿತಿಗಳನ್ನು ಕೊಟ್ಟು ಉತ್ತೇಜಿಸಲಾಗುವುದು.

ಎ) ಬಂಡವಾಳ ಪ್ರೋತ್ಸಾಹ ಸಹಾಯಧನ

ಅ) ಅತಿ ಸಣ್ಣ ಕೈಗಾರಿಕೆಗಳು

೧) ಹೈದರಾಬಾದ್–ಕರ್ನಾಟಕೇತರ ಪ್ರದೇಶ

**ವಲಯ–೧:** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ೩೦ರಷ್ಟು (ಗರಿಷ್ಠ ರೂ. ೧೭.೦೦ ಲಕ್ಷ); **ವಲಯ–೨:** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ.೨೫ರಷ್ಟು (ಗರಿಷ್ಠ ರೂ.೧೫.೦೦ ಲಕ್ಷ); **ವಲಯ–೩:** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ೨೦ರಷ್ಟು (ಗರಿಷ್ಠ ರೂ. ೧೨.೦೦ ಲಕ್ಷ); **ವಲಯ–೪:** ಇಲ್ಲ

**೨) ಹೈದಾರಾಬಾದ್–ಕರ್ನಾಟಕ ಪ್ರದೇಶ**

**ಹೆಚ್ಚಿನ ವಲಯ–೧:** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೩೫ರಷ್ಟು (ಗರಿಷ್ಠ ರೂ. ೨೦.೦೦ ಲಕ್ಷ); **ಹೆಚ್ಚಿನ ವಲಯ–೨:** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೩೦ರಷ್ಟು (ಗರಿಷ್ಠ ರೂ. ೧೮.೦೦ ಲಕ್ಷ)

**ಆ) ಸಣ್ಣ ಕೈಗಾರಿಕೆಗಳು**

**೧) ಹೈದಾರಾಬಾದ್–ಕರ್ನಾಟಕೇತರ ಪ್ರದೇಶ**

**ವಲಯ–೧:** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ. ೨೫ರಷ್ಟು (ಗರಿಷ್ಠ ರೂ. ೪೫.೦೦ ಲಕ್ಷ); **ವಲಯ–೨:** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೨೦ರಷ್ಟು (ಗರಿಷ್ಠ ರೂ. ೩೫.೦೦ ಲಕ್ಷ); **ವಲಯ–೩:** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೧೫ರಷ್ಟು (ಗರಿಷ್ಠ ರೂ. ೨೫.೦೦ ಲಕ್ಷ); **ವಲಯ–೪:** ಇಲ್ಲ

**೨) ಹೈದಾರಾಬಾದ್– ಕರ್ನಾಟಕ ಪ್ರದೇಶ**

**ಹೆಚ್ಚಿನ ವಲಯ–೧:** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೩೦ರಷ್ಟು (ಗರಿಷ್ಠ ರೂ. ೫೦.೦೦ ಲಕ್ಷ); **ಹೆಚ್ಚಿನ ವಲಯ–೨** ಸ್ಥಿರಾಸ್ತಿಗಳ ಮೌಲ್ಯದ (ವಿಎಫ್‌ಎ) ಶೇ ೨೫ರಷ್ಟು (ಗರಿಷ್ಠ ರೂ. ೪೫.೦೦ ಲಕ್ಷ)

ಇ) ಮಧ್ಯಮ ಉತ್ಪಾದನಾ ಘಟಕಗಳು (ಎಮ್‌ಎಸ್‌ಎಮ್‌ಇ ಕಾಯ್ದೆಯಲ್ಲಿ ನಮೂದಿಸಿದಂತೆ ಕನಿಷ್ಠ ೨೫ ನೇರ ಉದ್ಯೋಗಗಳನ್ನು ಒದಗಿಸುವ ಘಟಕಗಳು)

೧) **ಹೈದಾರಾಬಾದ್-ಕರ್ನಾಟಕೇತರ ಪ್ರದೇಶ**

**ವಲಯ-೧:** ರೂ.೫೫ ಲಕ್ಷ, **ವಲಯ-೨:** ರೂ.೪೫ ಲಕ್ಷ **ವಲಯ-೩:** ರೂ.೩೫ಲಕ್ಷ, **ವಲಯ-೪:** ಇಲ್ಲ

೨) **ಹೈದಾರಾಬಾದ್-ಕರ್ನಾಟಕ ಪ್ರದೇಶ**

**ಹೆಚ್ಚ್‌ಕೆ ವಲಯ-೧** : ರೂ.೬೦ ಲಕ್ಷ, **ಹೆಚ್ಚ್‌ಕೆ ವಲಯ-೨** : ರೂ.೫೫ ಲಕ್ಷ

ಬಿ) ಸ್ಟ್ಯಾಂಪ್ ಡ್ಯೂಟಿಯಿಂದ ವಿನಾಯಿತಿ

**ಎಂಎಸ್‌ಎಂಇಗಳು;**

(i) ಆರಂಭಿಕ ಐದು ವರ್ಷಗಳಿಗಾಗಿ ಸಿ ಅಂಡ್ ಐ ಇಲಾಖೆಯಿಂದ ವ್ಯಾಟ್ ಲೋನ್ ಒಳಪಟ್ಟಂತೆ ಮತ್ತು/ ಅಥವಾ ರಾಜ್ಯ ಹಣಕಾಸು ನಿಗಮ, ಕೈಗಾರಿಕಾ ಬಂಡವಾಳ ಅಭಿವೃದ್ಧಿ ನಿಗಮ, ರಾಷ್ಟ್ರೀಯ ಮಟ್ಟದ ಹಣಕಾಸು ಸಂಸ್ಥೆಗಳು, ವಾಣಿಜ್ಯ ಬ್ಯಾಂಕುಗಳು, ಆರ್‌ಆರ್‌ಬಿಗಳು, ಸಹಕಾರಿ ಬ್ಯಾಂಕುಗಳು, ಕೆವಿಐಬಿ/ಕೆವಿಐಸಿ, ಕರ್ನಾಟಕ ರಾಜ್ಯ ಎಸ್‌ಸಿ/ಎಸ್‌ಟಿ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮ ಹಾಗೂ ಸರ್ಕಾರ ಕಾಲಕಾಲಕ್ಕೆ ಪ್ರಕಟಿಸುವ ಇತರ ಯಾವುದೇ ಸಂಸ್ಥೆಯಿಂದ ಸಾಲಗಳನ್ನು ಪಡೆಯಲು ಸಹಿ ಹಾಕಲಾದ ಸಾಲ ಒಪ್ಪಂದಗಳು, ಕ್ರೆಡಿಟ್ ಡೀಡ್‌ಗಳು, ಭೋಗ್ಯ ಮತ್ತು ಒತ್ತೆ ಕಾಗದ ಪತ್ರಗಳಿಗೆ ಸಂಬಂಧಪಟ್ಟಂತೆ ಹಾಗೂ (ii) ಕೆಐಎಡಿಬಿ, ಕೆಎಸ್‌ಎಸ್‌ಐಡಿಸಿ, ಕಿಯೋನಿಕ್ಸ್, ಕೈಗಾರಿಕಾ ಸಹಕಾರಿಗಳು ಮತ್ತು ಅನುಮೋದಿತ ಖಾಸಗಿ ಕೈಗಾರಿಕಾ ನಿವೇಶನಗಳಿಂದ ಕೈಗಾರಿಕಾ ನಿವೇಶನಗಳು, ಶೆಡ್‌ಗಳು, ಕೈಗಾರಿಕಾ ವಸಾಹತುಗಳಿಗೆ ಸಂಬಂಧಪಟ್ಟಂತೆ ಕೈಗಾರಿಕಾ ಸಂಸ್ಥೆಗಳು ಸಹಿ ಹಾಕಿರುವ ಲೀಸ್ ಡೀಡ್‌ಗಳು, ಲೀಸ್ ಮತ್ತು ಮಾರಾಟ ಹಾಗೂ ಸಂಪೂರ್ಣ ಮಾರಾಟದ ಕಾಗದ ಪತ್ರಗಳಿಗೆ ಸಂಬಂಧಪಟ್ಟಂತೆ ಸ್ಟ್ಯಾಂಪ್ ಶುಲ್ಕವನ್ನು ಕೆಳಕಂಡಂತೆ ಮನ್ನಾ ಮಾಡಲಾಗಿದೆ.

೧) **ಹೈದರಾಬಾದ್-ಕರ್ನಾಟಕೇತರ ಪ್ರದೇಶ**

**ವಲಯ-೧,೨,೩** : ಶೇ ೧೦೦ರಷ್ಟು, ವಲಯ-೪: ಇಲ್ಲ

**೨) ಹೈದರಾಬಾದ್-ಕರ್ನಾಟಕ ಪ್ರದೇಶ**

**ಹೆಚ್ಚ್‌ಕೆ ವಲಯ- ೧ ಮತ್ತು ೨** : ಶೇ.೧೦೦ರಷ್ಟು

ಸಿ) ನೋಂದಣಿ ಶುಲ್ಕದಲ್ಲಿ ರಿಯಾಯಿತಿ

**ಎಂಎಸ್‌ಎಂಇಗಳು**

ಮೇಲಿನ "ಬಿ" ದಲ್ಲಿ ನಿರ್ದಿಷ್ಟಪಡಿಸಿರುವ ಎಲ್ಲಾ ಸಾಲ ದಾಸ್ತಾವೇಜುಗಳು ಮತ್ತು ಮಾರಾಟ ಕಾಗದ ಪತ್ರಗಳಿಗಾಗಿ ನೋಂದಣಿ ಶುಲ್ಕಗಳು ಪ್ರತಿ ರೂ. ೧೦೦೦/-ಕ್ಕಾಗಿ ರೂ.೦.೫೦ ರಿಯಾಯಿತಿ ದರದಲ್ಲಿರುತ್ತವೆ.

ಡಿ) ಭೂ ಪರಿವರ್ತನೆ ಶುಲ್ಕದ ಮರುಪಾವತಿ

ಎಂಎಸ್‌ಎಂಇಗಳು:

ಭೂಮಿಯನ್ನು ಕೃಷಿ ಬಳಕೆಯಿಂದ ಕೈಗಾರಿಕಾ ಬಳಕೆಗೆ ಪರಿವರ್ತಿಸಲು ಸೂಚಿತವಾಗಿರುವ ಭೂಪರಿವರ್ತನಾ ಶುಲ್ಕವನ್ನು ಕೆಳಗೆ ವಿವರಿಸಿರುವಂತೆ ಮರುಪಾವತಿ ಮಾಡಲಾಗುವುದು.

೧) **ಹೈದಾರಾಬಾದ್-ಕರ್ನಾಟಕೇತರ ಪ್ರದೇಶ**

**ವಲಯ-೧,೨,೩:** ಶೇ.೧೦೦ರಷ್ಟು, **ವಲಯ-೪:** ಇಲ್ಲ

೨) **ಹೈದಾರಾಬಾದ್-ಕರ್ನಾಟಕ ಪ್ರದೇಶ**

**ಹೆಚ್ಚ್‌ಕೆ ವಲಯ-೧ ಮತ್ತು ೨:** ಶೇ.೧೦೦ರಷ್ಟು

ಇ) ಪ್ರವೇಶ ತೆರಿಗೆಯಿಂದ ವಿನಾಯಿತಿ

**ಎಂಎಸ್‌ಎಂಇಗಳು:**

**ವಲಯ-೧.೨.೩** ಮತ್ತು **ಹೆಚ್‌ಕೆ ವಲಯ- ೧ ಮತ್ತು ೨.** ಯೋಜನಾ ಅನುಷ್ಠಾನದ ಆರಂಭ ದಿನಾಂಕದಿಂದ ಮೂರು ವರ್ಷಗಳ ಪ್ರಾರಂಭಿಕ ಅವಧಿಗಾಗಿ **"ಕಾರ್ಯಾಗಾರ ಮತ್ತು ಯಂತ್ರೋಪಕರಣ ಮತ್ತು ಬಂಡವಾಳ ಸಾಮಗ್ರಿಗಳ"** ಮೇಲೆ ಪ್ರವೇಶ ತೆರಿಗೆಯನ್ನು ಕಟ್ಟುವಲ್ಲಿ ಶೇ. ೧೦೦ರಷ್ಟು ವಿನಾಯಿತಿಗೆ ಅರ್ಹವಾಗುತ್ತವೆ. ಈ ಉದ್ದೇಶಕ್ಕಾಗಿ ಕಾರ್ಯಾಗಾರ ಮತ್ತು ಯಂತ್ರೋಪಕರಣ ಮತ್ತು ಕ್ಯಾಪಿಟಲ್ ಗೂಡ್ಸ್ ಕುರಿತ ಅರ್ಥ ವಿವರಣೆಯಲ್ಲಿ ಕ್ಯಾಪ್ಟಿವ್ ವಿದ್ಯುತ್ ಉತ್ಪಾದನೆಗೆ ಅಗತ್ಯವಾಗುವ ಯಂತ್ರೋಪಕರಣಗಳು ಒಳಪಟ್ಟಂತೆ ಕಾರ್ಯಾಗಾರ ಮತ್ತು ಯಂತ್ರೋಪಕರಣ, ಸಲಕರಣೆ ಇತ್ಯಾದಿ ಸಹ ಸೇರಿರುತ್ತದೆ. ಕಚ್ಚಾ ಸಾಮಗ್ರಿಗಳು, ಉಪಕರಣಗಳು, ಬಿಡಿ ಭಾಗಗಳು ಮತ್ತು ಇತರ ಸಾಮಗ್ರಿಗಳು (ಪೆಟ್ರೋಲಿಯಂ ಉತ್ಪನ್ನಗಳನ್ನು ಹೊರತುಪಡಿಸಿ) (ಅನ್ವಯಿತವಾದೆಡೆ) ಮೇಲಿನ ತೆರಿಗೆ ವಿನಾಯಿತಿ ವಾಣಿಜ್ಯ ಉತ್ಪಾದನೆಯ ಆರಂಭ ದಿನಾಂಕದಿಂದ ಆರು ವರ್ಷಗಳ ಅವಧಿಗಾಗಿ ಇರುತ್ತದೆ.

**ಎಫ್) ಇಟಿಪಿಗಳನ್ನು ಸ್ಥಾಪಿಸಲು ಸಬ್ಸಿಡಿ**

**ಉತ್ಪಾದನಾ ಎಂಎಸ್‌ಎಂಇಗಳು:**

**ಹೆಚ್‌ಕೆ ವಲಯ-೧** ಮತ್ತು **೨** ಕ್ಕಾಗಿ ಹಾಗೂ ಹೈದರಾಬಾದ್ ಕರ್ನಾಟಕೇತರ **ವಲಯ-೧, ೨, ೩** ಕ್ಕಾಗಿ ರೂ. ೧೦೦ ಲಕ್ಷಗಳ ಮತ್ತು ಹೈದರಾಬಾದ್ ಕರ್ನಾಟಕೇತರ ಪ್ರದೇಶದ **ವಲಯ-೪** ಕ್ಕಾಗಿ ರೂ. ೫೦ ಲಕ್ಷಗಳ ಪರಿಮಿತಿಗೆ ಒಳಪಟ್ಟಂತೆ ಇಟಿಪಿ ವೆಚ್ಚದ ಶೇ. ೭೫ ರವರೆಗೆ ಏಕಕಾಲದ ಬಂಡವಾಳ ಸಬ್ಸಿಡಿ.

**ಜಿ) ಅತಿ ಸಣ್ಣ ಉತ್ಪಾದನಾ ಘಟಕಗಳಿಗೆ ಮಾತ್ರ ಬಡ್ಡಿ ಸಹಾಯಧನ**

ಅತಿಸಣ್ಣ ಘಟಕಗಳಿಗೆ ನೀಡಲಾಗುವ ಅವಧಿ ಸಾಲಗಳ ಮೇಲೆ ಶೇ. ೬ರಷ್ಟು ಬಡ್ಡಿ ಸಬ್ಸಿಡಿ. ಈ ಬಡ್ಡಿ ಸಬ್ಸಿಡಿಯನ್ನು ಉದ್ಯಮವು ಅಸಲು ಅಥವಾ ಬಡ್ಡಿ ಕಂತುಗಳ ಪಾವತಿಯನ್ನು ತಪ್ಪದೇ ಕಟ್ಟಿದಲ್ಲಿ ಮಾತ್ರ, ಉದ್ಯಮದ ಪರವಾಗಿ ಹಣಕಾಸು ಸಂಸ್ಥೆಗೆ ಪಾವತಿ ಮಾಡಲಾಗುತ್ತದೆ. ಬಡ್ಡಿ ಸಹಾಯಧನವು ಪರಿಣಾಮಕಾರಿ ಬಡ್ಡಿ ದರವಾಗಿರುತ್ತದೆ. (ಬಡ್ಡಿ ಸಹಾಯಧನವನ್ನು ಕಳೆದ ನಂತರ) (ಯಾವುದೇ ಸಂಸ್ಥೆಯಿಂದ ಬರತಕ್ಕ/ಭಾರತ ಸರ್ಕಾರದ ಯಾವುದೇ ಯೋಜನೆಯನ್ವಯ ಲಭಿಸುವ ಅಥವಾ ವಾರ್ಷಿಕ ಶೇ. ೬ರಷ್ಟು ಇದರಲ್ಲಿ ಯಾವುದು ಕಡಿಮೆಯೋ ಆ ಮೊತ್ತಕ್ಕೆ ಸಮ).ಬಡ್ಡಿ ಸಹಾಯಧನದ ಅವಧಿಯು **ವಲಯ-೧, ವಲಯ-೨** ಮತ್ತು **ವಲಯ-೩** ಕ್ಕಾಗಿ ಅನುಕ್ರಮವಾಗಿ ೬ ವರ್ಷಗಳು, ೫ ವರ್ಷಗಳು ಮತ್ತು ೪ ವರ್ಷಗಳಾಗಿರುತ್ತವೆ ಹಾಗೂ ಹೆಚ್‌ಕೆ **ವಲಯ-೧** ಮತ್ತು **ವಲಯ-೨** ಕ್ಕಾಗಿ ಅನುಕ್ರಮವಾಗಿ ೭ ವರ್ಷಗಳು ಮತ್ತು ೬ ವರ್ಷಗಳಾಗಿರುತ್ತದೆ.

**ಹೆಚ್) ವಿದ್ಯುಚ್ಛಕ್ತಿ ದರಗಳ ಮೇಲಿನ ತೆರಿಗೆಯಿಂದ ವಿನಾಯಿತಿಗಳು**

**ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಉತ್ಪಾದನಾ ಘಟಕಗಳಿಗೆ**

ಹೈದರಾಬಾದ್ ಕರ್ನಾಟಕೇತರ ಪ್ರದೇಶದ **ವಲಯ-೧, ವಲಯ-೨, ವಲಯ-೩ ಮತ್ತು ವಲಯ-೪, ಹೆಚ್ ಕೆ ವಲಯ-೧** ಮತ್ತು -೨ಕ್ಕಾಗಿ ಅನುಕ್ರಮವಾಗಿ ೭- ವರ್ಷಗಳು, ೬ ವರ್ಷಗಳು ೫ ವರ್ಷಗಳು, ೪ ವರ್ಷಗಳು, ೮ ವರ್ಷಗಳು ಮತ್ತು ೭ ವರ್ಷಗಳ ಆರಂಭಿಕ ಅವಧಿಗಾಗಿ ವಿದ್ಯುತ್ ತೆರಿಗೆಯಿಂದ ಶೇ. ೧೦೦ ರಷ್ಟು ವಿನಾಯಿತಿ.

**ಐ) ತಂತ್ರಜ್ಞಾನ ನವೀಕರಣ, ಗುಣಮಟ್ಟ ಪ್ರಮಾಣೀಕರಣ**

ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉತ್ಪಾದನಾ ಘಟಕಗಳು

**೧) ತಂತ್ರಜ್ಞಾನ ನವೀಕರಣ ಸಾಲದ ಮೇಲಿನ ಬಡ್ಡಿ ಸಹಾಯಧನ**

ಹೈದರಾಬಾದ್ ಕರ್ನಾಟಕೇತರ ಪ್ರದೇಶದ **ವಲಯ-೧, ೨, ೩,** ಮತ್ತು **ಹೆಚ್‌ಕೆ ವಲಯ-೧, ೨** : ಭಾರತ ಸರ್ಕಾರದ ಸಿಎಲ್‌ಸಿಎಸ್‌ಎಸ್ ಗೆ ಒಳಪಡದೆ, ಕೆಎಸ್‌ಎಫ್‌ಸಿ, ಶೆಡ್ಯೂಲ್ಡ್ ವಾಣಿಜ್ಯ ಬ್ಯಾಂಕುಗಳಿಂದ ಪಡೆದ ಸಾಲಗಳ ಮೇಲೆ ೫ರಷ್ಟು.

**೨) ಐಎಸ್‌ಓ ಸರಣಿಯ ಪ್ರಮಾಣೀಕರಣ ವೆಚ್ಚ**

ಹೈದರಾಬಾದ್ ಕರ್ನಾಟಕೇತರ ಪ್ರದೇಶದ **ವಲಯ ೧, ೨, ೩** ಮತ್ತು ಹೆಚ್ ಕೆ **ವಲಯ ೧,೨:** ವೆಚ್ಚದ ಶೇ ೭೫ರಷ್ಟು (ಗರಿಷ್ಠ ೧ ಲಕ್ಷ ರೂ.ಗಳು)

**ಡಿ) ಬಿಐಎಸ್ ಪ್ರಮಾಣ ಪತ್ರ :**

ಬಿಐಎಸ್‌ಗೆ ನೀಡಲಾದ ಶುಲ್ಕದ ೫೦ರಷ್ಟು (ಗರಿಷ್ಠ ೨೦,೦೦೦ ರೂ ಗಳು) ಮತ್ತು ಬಿಐಎಸ್ ನಿಂದ ಅನುಮೋದಿತವಾದ ಪರೀಕ್ಷಣಾ ಉಪಕರಣಗಳ ಖರೀದಿ ವೆಚ್ಚದ ಶೇ.೫೦ರಷ್ಟು (ಗರಿಷ್ಠ ೧ ಲಕ್ಷ ರೂಗಳು).

**ಇ) ತಂತ್ರಜ್ಞಾನದ ಅಳವಡಿಕೆ**

ಮಾನ್ಯತೆ ಪಡೆದ ರಾಷ್ಟ್ರೀಯ ಪ್ರಯೋಗಾಲಯಗಳ ತಂತ್ರಜ್ಞಾನ ಅಳವಡಿಕೆ ವೆಚ್ಚದ ಶೇ.೫೦ ರಷ್ಟು (ಗರಿಷ್ಠ ೧ ಲಕ್ಷ ರೂ ಗಳು).

**ಎಫ್) ಟೆಕ್ನಾಲಜಿ ಬಿಸಿನೆಸ್ ಇಂಕ್ಯುಬೇಷನ್ ಸೆಂಟರ್:**

ವೆಚ್ಚದ ಶೇ.೫೦ರಷ್ಟು (ಗರಿಷ್ಠ ೭೫ ಲಕ್ಷ ರೂ ಗಳು)

**ಜಿ) ಎಲೆಕ್ಟ್ರಾನಿಕ್ ತ್ಯಾಜ್ಯಗಳು ಮತ್ತು ಪ್ಲಾಸ್ಟಿಕ್ ತ್ಯಾಜ್ಯಗಳನ್ನು ಪುನರ್‌ಬಳಸಿ ಸ್ಥಾಪಿಸಲಾಗುವ ಎಮ್ಎಸ್ಎಮ್ಇಗಳಿಗಾಗಿ:**

ಹೈದರಾಬಾದ್ ಕರ್ನಾಟಕೇತರ ಪ್ರದೇಶದ **ವಲಯ-೧, ೨, ೩** ಮತ್ತು **ಹೆಚ್‌ಕೆ ವಲಯ-೧, ೨** ರಲ್ಲಿ ರೂ.೧೫ ಲಕ್ಷಗಳ ಪರಿಮಿತಿಗೆ ಒಳಪಟ್ಟಂತೆ ಶೇ.೫ರಷ್ಟು ಬಂಡವಾಳ ಉತ್ತೇಜನ ಸಹಾಯಧನ

**ಹೆಚ್. ಮಳೆ ಕೊಯ್ಲು ಮತ್ತು ಜಲಸಂರಕ್ಷಣೆ ಕ್ರಮಗಳು**

**ಹೈದರಾಬಾದ್ ಕರ್ನಾಟಕೇತರ ಪ್ರದೇಶದ ವಲಯ-೧, ೨, ೩ ಮತ್ತು ಹೆಚ್‌ಕೆವಲಯ-೧, ೨ ರಲ್ಲಿ ಸಣ್ಣ ಮತ್ತು ಮಧ್ಯಮ ಉತ್ಪಾದನಾ ಸಂಸ್ಥೆಗಳು**

(೧) **ಮಳೆ ಕೊಯ್ಲು :** ಉಪಕರಣಾ ವೆಚ್ಚದ ಶೇ.೭೫ (ಗರಿಷ್ಠ ರೂ.೧.೫೦ ಲಕ್ಷ) (೨) ತ್ಯಾಜ್ಯ ನೀರಿನ ಪುನರ್ **ಬಳಕೆ:**ಉಪಕರಣಾ ವೆಚ್ಚದ ಶೇ. ೭೫ (ಗರಿಷ್ಠ ರೂ. ೭.೫೦ ಲಕ್ಷ) (೩) ಶೂನ್ಯ ತ್ಯಾಜ್ಯ ಸಂಸ್ಕರಣಾ ಕಾರ್ಯವಿಧಾನ ಉಪಕರಣಾ ವೆಚ್ಚದ ಶೇ.೭೫ (ಗರಿಷ್ಠ ರೂ.೭.೫೦ ಲಕ್ಷ)

**ಕೆ) ಇಂಧನ ಸಂರಕ್ಷಣೆ**

**ಎಲ್ಲಾ ವಲಯಗಳಲ್ಲಿನ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉತ್ಪಾದನಾ ಘಟಕಗಳು**

ಇಂಧನ ಉಳಿತಾಯದ ಕ್ರಮಗಳನ್ನು ಬಳಸಿ, ಮೊದಲು ಬಳಸಲಾಗುತ್ತಿದ್ದ ಇಂಧನದ ಕನಿಷ್ಠ ಶೇ.೧೦ರಷ್ಟು ಉಳಿತಾಯವಾದಲ್ಲಿ: ಬಂಡವಾಳ ವೆಚ್ಚದ ಶೇ.೧೫ (ಗರಿಷ್ಠ ರೂ. ೭.೫೦ ಲಕ್ಷ); ಕ್ಯಾಪ್ಟಿವ್ ಅಸಾಂಪ್ರದಾಯಿಕ ಇಂಧನ ಮೂಲಗಳ ಬಳಕೆ: ಬಂಡವಾಳ ವೆಚ್ಚದ ಶೇ.೧೫ (ಗರಿಷ್ಠ ರೂ. ೭.೫೦ ಲಕ್ಷ) ವಿದ್ಯುತ್ ಉತ್ಪಾದನೆ ಮತ್ತು ಸೌರ ಹಾಗೂ ವಾಯು ಇಂಧನ ಮೂಲಗಳ ಬಳಕೆ: ಪ್ರತಿ ಯೂನಿಟ್‌ಗೆ ರೂ. ೦.೭೫ ಸಹಾಯಧನ

**ಎಲ್) ಯೋಜನಾ ವರದಿಗಳನ್ನು ಸಿದ್ಧಪಡಿಸುವ ವೆಚ್ಚದ ಮರುಪಾವತಿ**

ಟೆಕ್ಸಾಕ್ ಮತ್ತು ಸಿಡಾಕ್ ಸಿದ್ಧಪಡಿಸಿದ ಯೋಜನಾ ವರದಿಗಳ ವೆಚ್ಚದ ಶೇ. ೭೫ರಷ್ಟನ್ನು ಪ್ರತಿ ಘಟಕಕ್ಕೆ ರೂ.೨.೦೦ ಲಕ್ಷದವರೆಗೆ ಮರುಪಾವತಿ ಮಾಡಲಾಗುವುದು. ಇದಕ್ಕಾಗಿ ಬ್ಯಾಂಕ್ ಸಾಲಗಳು ಮಂಜೂರಾಗಿರಬೇಕು.

## ಅನಿವಾಸಿ ಕನ್ನಡಿಗರಿಗೆ ಉತ್ತೇಜನ (ಎನ್‌ಆರ್‌ಕೆಗಳು)

ಇತರೆ ದೇಶಗಳಲ್ಲಿ ವಾಸ ಮಾಡುತ್ತಿರುವ ಅನೇಕ ಅನಿವಾಸಿ ಕನ್ನಡಿಗರು, ಕರ್ನಾಟಕದ ಅಭಿವೃದ್ಧಿಗಾಗಿ ತಮ್ಮ ಪರಿಣತಿ ಮತ್ತು ಪರಿಜ್ಞಾನವನ್ನು ಹಂಚಿಕೊಳ್ಳಲು ರಾಜ್ಯಕ್ಕೆ ಹಿಂತಿರುಗಲು ಬಯಸುತ್ತಾರೆ.

**ಪ್ರಸಕ್ತ ನಿಯಮಗಳ ಪ್ರಕಾರ ಎನ್‌ಆರ್‌ಐಗಳಿಗೆ ಕೆಳಗಿನ ಸವಲತ್ತುಗಳಿವೆ:**

ಎ) ಅನೇಕ ಕೈಗಾರಿಕಾ ವಲಯಗಳಲ್ಲಿ ವಾಪಸಾತಿಯ ಪೂರ್ಣ ಪ್ರಯೋಜನಗಳೊಂದಿಗೆ ಶೇ.೧೦೦ರಷ್ಟು ಈಕ್ವಿಟಿಯವರೆಗೆ ಬಂಡವಾಳ ಹೂಡಲು ಎನ್.ಆರ್.ಐಗಳಿಗೆ ಅನುಮತಿಸಲಾಗುವುದು.

ಬಿ) ಒಬ್ಬ ಎನ್ಆರ್ಐ ಒಂದು ಎಂಎಸ್ಎಂಇ ಘಟಕದಲ್ಲಿ ವೈಯಕ್ತಿಕನಾಗಿ/ಪಾಲುದಾರನಾಗಿ ಹೊಂದಬಹುದಾದ ಈಕ್ವಿಟಿಯ ಪ್ರಮಾಣದ ಮೇಲೆ ಯಾವುದೇ ನಿರ್ಬಂಧವಿರುವುದಿಲ್ಲ.

ಸಿ) ಎನ್ಆರ್ಐಗಳು ಹಾಗೂ ಅವರು ಬಹುತೇಕ ಮಾಲಿಕತ್ವ ಪಡೆದಿರುವ ಸಾಗರೋತ್ತರ ಕಾರ್ಪೋರೇಟ್ ಸಂಸ್ಥೆಗಳು (ಒಸಿಬಿ), ಸಂಪೂರ್ಣ ವಾಪಸಾತಿ ಪ್ರಯೋಜನಗಳೊಂದಿಗೆ ಅತ್ಯಂತ ಆದ್ಯತೆಯುಳ್ಳ ಕೈಗಾರಿಕೆಗಳಲ್ಲಿ ಶೇ.೧೦೦ರಷ್ಟು ವಿದೇಶಿ ಈಕ್ವಿಟಿಯವರೆಗೆ ಬಂಡವಾಳ ಹೂಡುವುದನ್ನು ಅನುಮತಿಸಲಾಗುವುದು.

ಡಿ) ಎಂಎಸ್ಎಂಇ ಪ್ರಮಾಣದ ವಲಯಕ್ಕಾಗಿ ಮೀಸಲಾಗಿಟ್ಟ ಉತ್ಪನ್ನಗಳನ್ನು ತಯಾರಿಸಲು ಬೃಹತ್ ಕೈಗಾರಿಕಾ ಉದ್ಯಮಿಗಳನ್ನು ಹೂಡಬೇಕೆಂದಲ್ಲಿ ಘಟಕವು ಶೇ.೫೦ ರಫ್ತು ಜವಾಬ್ದಾರಿಯನ್ನು ಹೊಂದಿರಬೇಕು.

ಎನ್.ಆರ್.ಕೆಗಳು ರಾಜ್ಯದಲ್ಲಿ ಬಂಡವಾಳ ಹೂಡುವುದನ್ನು ಉತ್ತೇಜಿಸಿ, ವಿದೇಶಿ ಬಂಡವಾಳ ಸೂಚನೆಗಳ ಅನುಮತಿ ಕುರಿತಂತೆ ಪ್ರಸಕ್ತ ಸೂತ್ರದ ಕಲಮುಗಳಿಗೆ ಒಳಪಡದೆ, ಅದರ ಅರ್ಥವ್ಯವಸ್ಥೆಗೆ ಪ್ರಯೋಜನ ತರುವಂತಹ ಯೋಜನೆಗಳಲ್ಲಿ, ಅವರು ಆರಂಭಿಕ ಕ್ಯಾಪಿಟಲ್ ಫಂಡ್ ಹೂಡುವುದನ್ನು ಉತ್ತೇಜಿಸಲು ಉದ್ದೇಶಿಸಲಾಗಿದೆ.

ಎನ್ ಆರ್ ಐ ಕಂಪನಿಗಳು/ ಸಂಸ್ಥೆಗಳ ಸಹಯೋಗದೊಂದಿಗೆ ಸ್ಟಾರ್ಟ್–ಅಪ್‌ಗಳಿಗಾಗಿ ಏಂಜಿಲ್ ಫಂಡಿಂಗ್ ಒದಗಿಸಲು ಸಹ ಉದ್ದೇಶಿಸಲಾಗಿದೆ.

ಹಲವಾರು ಅಭಿವೃದ್ಧಿಶೀಲ ನಗರಗಳು ವ್ಯಾಪಾರ, ಬಂಡವಾಳ ಮತ್ತು ಸಂಸ್ಕೃತಿಯ ಉತ್ತೇಜನಕ್ಕಾಗಿ ಬೆಂಗಳೂರಿನೊಂದಿಗೆ ಎಂಒಯುಗಳಿಗೆ ಸಹಿ ಹಾಕಿವೆ ಮತ್ತು ಇತರ ಅನೇಕ ನಗರಗಳು ಇದೇ ರೀತಿಯ ಆಸಕ್ತಿಯನ್ನು ತೋರಿಸಿವೆ. ರಾಜ್ಯದ ಎರಡನೇಯ ಹಂತದ ಎರಡು ನಗರಗಳಿಗೆ ಎಂ.ಒ.ಯು ಗಳಿಗೆ ಸಹಿ ಹಾಕುವುದನ್ನು ಇನ್ನು ಮುಂದೆ ಉತ್ತೇಜಿಸಿ, ರಾಜ್ಯಕ್ಕೆ ಎನ್ಆರ್ಕೆ ಬಂಡವಾಳವನ್ನು ತರುವ ಈ ಅವಕಾಶವನ್ನು ಅಭಿವೃದ್ಧಿಗಾಗಿ ಬಳಸಿಕೊಳ್ಳಲು ಉದ್ದೇಶಿಸಲಾಗಿದೆ.

ಈ ನೀತಿಯಲ್ಲಿ ವಿವರಿಸಲಾಗಿರುವ ಇತರ ಎಲ್ಲಾ ವರ್ಗಗಳ ಕೈಗಾರಿಕೆಗಳಿಗೆ ಅನ್ವಯಿತವಾಗುವ ಪ್ರೋತ್ಸಾಹಕಗಳು ಮತ್ತು ವಿನಾಯಿತಿಗಳು, ಎನ್.ಆರ್.ಐ ಗಳ ಬಂಡವಾಳ ಹೂಡಿಕೆಗಳಿಗೆ ಸಹ ಅನ್ವಯಿಸುತ್ತದೆ.

ಕರ್ನಾಟಕ ಎನ್ಆರ್ಐ ವೇದಿಕೆಯ ಸಹಯೋಗದೊಂದಿಗೆ ಕೆಯುಎಮ್‌ದಲ್ಲಿ ಒಂದು ವಿಶೇಷ ಎನ್ಆರ್ಕೆ ಬಂಡವಾಳ ಉತ್ತೇಜನ ವಿಭಾಗವನ್ನು ಸ್ಥಾಪಿಸಲಾಗುವುದು ಹಾಗೂ ಉದ್ಯಮ ಸೂಚನೆಗಳು, ಭೂ ನಿಗದಿಪಡಿಸುವಿಕೆಯಲ್ಲಿ ಆದ್ಯತೆ ಮತ್ತು ಇತರ ಬೆಂಬಲಾತ್ಮಕ ಸೇವೆಗಳಿಗಾಗಿ ತ್ವರಿತ ಅನುಮತಿಯನ್ನು ನೀಡಿ ಕ್ರಮಗಳನ್ನು ಸುಸೂತ್ರಗೊಳಿಸಲಾಗುವುದು.

**ಬೃಹತ್, ಮೆಗಾ, ಅಲ್ಟ್ರಾಮೆಗಾ ಮತ್ತು ಸೂಪರ್ ಮೆಗಾ ಸಂಸ್ಥೆಗಳಿಗಾಗಿ ಪ್ರೋತ್ಸಾಹಕಗಳು ಮತ್ತು ವಿನಾಯಿತಿಗಳು**

ಬೃಹತ್, ಮೆಗಾ, ಅಲ್ಟ್ರಾಮೆಗಾ ಮತ್ತು ಸೂಪರ್ ಮೆಗಾ ಸಂಸ್ಥೆಗಳ ವರ್ಗಗಳಡಿ ಕೈಗಾರಿಕೆಗಳ ಸ್ಥಾಪನೆಗಾಗಿ ಒದಗಿಸಲಾಗುವ ನಿಗದಿತ ಪ್ರೋತ್ಸಾಹಕಗಳ ಮತ್ತು ವಿನಾಯಿತಿಗಳ ವಿವರಗಳು ಕೆಳಕಂಡಂತಿವೆ:

**ಎ. ಸ್ಟ್ಯಾಂಪ್ ಡ್ಯೂಟಿಯಿಂದ ವಿನಾಯಿತಿ**

(i) ಆರಂಭಿಕ ಐದು ವರ್ಷಗಳಿಗಾಗಿ ಇಲಾಖೆಯಿಂದ ವ್ಯಾಟ್ ಲೋನ್ ಒಳಪಟ್ಟಂತೆ ಮತ್ತು / ಅಥವಾ ರಾಜ್ಯ ಹಣಕಾಸು ನಿಗಮ, ಕೈಗಾರಿಕಾ ಬಂಡವಾಳ ಅಭಿವೃದ್ಧಿ ನಿಗಮ, ರಾಷ್ಟ್ರೀಯ ಮಟ್ಟದ ಹಣಕಾಸು ಸಂಸ್ಥೆಗಳು, ವಾಣಿಜ್ಯ ಬ್ಯಾಂಕುಗಳು, ಆರ್ಆರ್‌ಬಿಗಳು, ಸಹಕಾರಿ ಬ್ಯಾಂಕುಗಳು ಮತ್ತು ಕಾಲ ಕಾಲಕ್ಕೆ ಸರ್ಕಾರ ಪ್ರಕಟಿಸುವ ಇತರೆ ಸಂಸ್ಥೆಗಳು.

(ii) ಕೆಐಎಡಿಬಿ, ಕಿಯೋನಿಕ್ಸ್, ಕೆಎಸ್ಐಐಡಿಸಿ, ಕೈಗಾರಿಕಾ ಸಹಕಾರಿಗಳು ಮತ್ತು ಅನುಮೋದಿತ ಖಾಸಗಿ ಕೈಗಾರಿಕಾ ನಿವೇಶನಗಳಿಂದ ಕೈಗಾರಿಕಾ ನಿವೇಶನಗಳು–ಇವುಗಳಿಗೆ ಸಂಬಂಧಪಟ್ಟ ಸಾಲ ಒಪ್ಪಂದಗಳು, ಕ್ರೆಡಿಟ್ ಕಾಗದ ಪತ್ರಗಳು, ಗುತ್ತಿಗೆ ಮತ್ತು ಭೋಗ್ಯ ದಸ್ತಾವೇಜುಗಳು.

(iii) ಖಾಸಗಿ ಕೈಗಾರಿಕಾ ಪ್ರದೇಶಗಳು/ ಪಾರ್ಕ್‌ಗಳ ಅಭಿವೃದ್ಧಿಗಾಗಿ ಖರೀದಿಸಲಾದ ಭೂಮಿಗೆ ಸಂಬಂಧಪಟ್ಟಂತೆ ಡೆವಲಪರ್ ಸಹಿ ಹಾಕುವ ಲೀಸ್‌ಡೀಡ್‌ಗಳು ಲೀಸ್ ಮತ್ತು ಮಾರಾಟ ಹಾಗೂ ಸಂಪೂರ್ಣ ಮಾರಾಟದ ಕಾಗದ ಪತ್ರಗಳಿಗೆ ಸಂಬಂಧಪಟ್ಟಂತೆ ಸ್ಟ್ಯಾಂಪ್ ಶುಲ್ಕವನ್ನು ಕೆಳಕಂಡಂತೆ ಮನ್ನಾ ಮಾಡಲಾಗಿದೆ.

೧) **ಹೈದರಾಬಾದ್-ಕರ್ನಾಟಕೇತರ ಪ್ರದೇಶ**

**ವಲಯ-೧** : ಶೇ. ೧೦೦ರಷ್ಟು; **ವಲಯ-೨** : ಶೇ. ೧೦೦ರಷ್ಟು; **ವಲಯ-೩** : ಶೇ. ೭೫ರಷ್ಟು; **ವಲಯ-೪** : ಇಲ್ಲ

**೨) ಹೈದರಾಬಾದ್ ಕರ್ನಾಟಕ ಪ್ರದೇಶ**

**ಹೆಚ್‌ಕೆ ವಲಯ-** ೧ : ಶೇ. ೧೦೦ರಷ್ಟು; ಹೆಚ್‌ಕೆ **ವಲಯ- ೨** : ಶೇ. ೧೦೦ರಷ್ಟು

**ಬಿ) ನೋಂದಣಿ ಶುಲ್ಕದಲ್ಲಿ ರಿಯಾಯಿತಿ :**

ಮೇಲೆ 'ಎ' ಯಲ್ಲಿ ನಿರ್ದಿಷ್ಟಪಡಿಸಿರುವ ಎಲ್ಲಾ ಸಾಲ ದಸ್ತಾವೇಜುಗಳು, ಗುತ್ತಿಗೆ ಕಾಗದ ಪತ್ರಗಳು ಮತ್ತು ಮಾರಾಟ ಕಾಗದ ಪತ್ರಗಳಿಗಾಗಿ ನೋಂದಣಿ ಶುಲ್ಕ ಪ್ರತಿ ರೂ.೧೦೦೦/- ಕ್ಕಾಗಿ ರೂ.೧/- ರಿಯಾಯಿತಿ ದರದಲ್ಲಿರುತ್ತದೆ.

ಸಿ) ಭೂಪರಿವರ್ತನೆ ಶುಲ್ಕದ ಮರುಪಾವತಿ

ಖಾಸಗಿ ಹೂಡಿಕೆದಾರರು ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸುವುದು ಒಳಪಟ್ಟಂತೆ, ಭೂಮಿಯನ್ನು ಕೃಷಿ ಬಳಕೆಯಿಂದ ಕೈಗಾರಿಕಾ ಬಳಕೆಗೆ ಪರಿವರ್ತಿಸಲು ಸೂಚಿತವಾಗಿರುವ ಭೂ-ಪರಿವರ್ತನಾ ಶುಲ್ಕವನ್ನು ಕೆಳಗೆ ವಿವರಿಸಿರುವಂತೆ ಮರುಪಾವತಿಸಲಾಗುವುದು.

೧) ಹೈದರಾಬಾದ್-ಕರ್ನಾಟಕೇತರ ಪ್ರದೇಶ

ಹೈದರಾಬಾದ್-ಕರ್ನಾಟಕೇತರ ಪ್ರದೇಶ **ವಲಯ - ೧** : ಶೇ. ೧೦೦ರಷ್ಟು; **ವಲಯ - ೨** ; ಶೇ. ೧೦೦ರಷ್ಟು; **ವಲಯ-೩** : ಶೇ. ೭೫ರಷ್ಟು; **ವಲಯ - ೪** : ಇಲ್ಲ

೨) ಹೈದರಾಬಾದ್ ಕರ್ನಾಟಕ ಪ್ರದೇಶ

**ಹೆಚ್‌ಕೆ ವಲಯ** - ೧ : ಶೇ. ೧೦೦ರಷ್ಟು; ಹೆಚ್‌ಕೆ **ವಲಯ - ೨** : ಶೇ. ೧೦೦ರಷ್ಟು

**ಡಿ) ಪ್ರವೇಶ ತೆರಿಗೆಯಿಂದ ವಿನಾಯಿತಿ**

**ಬೃಹತ್, ಮೆಗಾ ಅಲ್ಟ್ರಾಮೆಗಾ ಮತ್ತು ಸೂಪರ್ ಮೆಗಾ ಸಂಸ್ಥೆಗಳು**

**ವಲಯ-೧,೨,೩** ಮತ್ತು **ಹೆಚ್‌ಕೆ ವಲಯ-೧** ಮತ್ತು **೨** ರಲ್ಲಿ ಬೃಹತ್ ಮತ್ತು ಮೆಗಾ ಉದ್ಯಮಗಳು ಮೂರು ವರ್ಷಗಳ ಪ್ರಾರಂಭಿಕ ಅವಧಿಗಾಗಿ, ಅಲ್ಟ್ರಾಮೆಗಾ ಮತ್ತು ಸೂಪರ್ ಮೆಗಾ ಸಂಸ್ಥೆಗಳು ಯೋಜನಾ ಅನುಷ್ಠಾನದ ಆರಂಭಿಕ ದಿನಾಂಕದಿಂದ ಐದು ವರ್ಷಗಳ ಅವಧಿಗಾಗಿ "ಸ್ಥಾವರ ಮತ್ತು ಯಂತ್ರೋಪಕರಣ ಮತ್ತು ಬಂಡವಾಳ ಸಾಮಗ್ರಿ"ಗಳ ಮೇಲೆ ಪ್ರವೇಶ ತೆರಿಗೆಯನ್ನು ಪಾವತಿಸುವಲ್ಲಿ ಶೇ.೧೦೦ರಷ್ಟು ವಿನಾಯಿತಿಗೆ ಅರ್ಹವಾಗುತ್ತವೆ. ಈ ಉದ್ದೇಶಕ್ಕಾಗಿ ಸ್ಥಾವರ ಮತ್ತು ಯಂತ್ರೋಪಕರಣ ಮತ್ತು ಬಂಡವಾಳ ಸಾಮಗ್ರಿಗಳನ್ನು ಕುರಿತ ಅರ್ಥ ವಿವರಣೆಯಲ್ಲಿ ಕ್ಯಾಪಿಟಲ್ ವಿದ್ಯುತ್ ಉತ್ಪಾದನೆಗೆ ಅಗತ್ಯವಾಗುವ ಯಂತ್ರೋಪಕರಣಗಳು ಒಳಪಟ್ಟಂತೆ ಸ್ಥಾವರ ಮತ್ತು ಯಂತ್ರೋಪಕರಣ, ಉಪಕರಣ ಇತ್ಯಾದಿ ಸಹ ಸೇರಿರುತ್ತದೆ.

ಕಚ್ಚಾ ಸಾಮಗ್ರಿಗಳು, ಉಪಕರಣಗಳು, ಬಿಡಿ ಭಾಗಗಳು ಮತ್ತು ಇತರ ಸಾಮಗ್ರಿಗಳು (ಪೆಟ್ರೋಲಿಯಂ ಉತ್ಪನ್ನಗಳನ್ನು ಹೊರತುಪಡಿಸಿ) ಅನ್ವಯಿತವಾದೆಡೆ ವಾಣಿಜ್ಯ ಉತ್ಪಾದನೆಯ ಆರಂಭ ದಿನಾಂಕದಿಂದ ಐದು ವರ್ಷಗಳ ಅವಧಿಗಾಗಿ ವಿನಾಯಿತಿ ಇರುತ್ತದೆ. ಬೃಹತ್, ಮೆಗಾ, ಅಲ್ಟ್ರಾಮೆಗಾ ಮತ್ತು ಸೂಪರ್ ಮೆಗಾ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ, ಕಾರ್ಯಚರಣೆಯ ಅವಧಿಗಾಗಿ ೧, ೨ ಮತ್ತು ೩ ವರ್ಷಗಳ ಹೆಚ್ಚುವರಿ ಅವಧಿಯನ್ನು ಅನುಕ್ರಮವಾಗಿ ಅನುಮತಿಸಲಾಗುವುದು.

**ಇ) ಇಟಿಪಿಗಳನ್ನು ಸ್ಥಾಪಿಸಲು ಸಹಾಯಧನ**

ಬೃಹತ್, ಮೆಗಾ ಅಲ್ಟ್ರಾಮೆಗಾ ಮತ್ತು ಸೂಪರ್ ಮೆಗಾ ಸಂಸ್ಥೆಗಳು ಹಾಗೂ ಖಾಸಗಿ ಕೈಗಾರಿಕಾ ಪ್ರದೇಶ ಲೇಔಟ್‌ಗಳಿಗಾಗಿ (ಸಿಇಟಿಪಿ):

**ಹೆಚ್‌ಕೆ ವಲಯ-೧** ಮತ್ತು **೨,** ಇತರ **ವಲಯಗಳು ೧, ೨** ಮತ್ತು ೩ ಕ್ಕೆ ಸಂಬಂಧಪಟ್ಟಂತೆ ರೂ.೨.೦೦ ಕೋಟಿಗಳ ಮತ್ತು **ವಲಯ-೪** ಕ್ಕಾಗಿ ರೂ.೧.೦೦ ಕೋಟಿಗಳ ಪರಿಮಿತಿಗೆ ಒಳಪಟ್ಟಂತೆ ಇಟಿಪಿ ವೆಚ್ಚದ ಏಕಕಾಲದ ಬಂಡವಾಳ ಸಹಾಯಧನ.

**ಎಫ್) ಬೃಹತ್, ಮೆಗಾ, ಅಲ್ಟ್ರಾಮೆಗಾ ಮತ್ತು ಸೂಪರ್ ಮೆಗಾ ಸಂಸ್ಥೆಗಳಿಗಾಗಿ ಅನುದಾನ ಕೊಡಲಾಗುವ ನಿವ್ವಳ ವ್ಯಾಟ್ ಮತ್ತು ಸಿಎಸ್‌ಟಿಯ ಮರುಪಾವತಿ**

ಹೈದರಾಬಾದ್ ಕರ್ನಾಟಕೇತರ ಪ್ರದೇಶ **ವಲಯ-೧,೨,೩** ಮತ್ತು ಹೆಚ್‌ಕೆ **ವಲಯ-೧** ಮತ್ತು **೨** ರಲ್ಲಿ ಸ್ಥಾಪಿಸಲಾಗುವ ಎಲ್ಲಾ ಬೃಹತ್. ಮೆಗಾ. ಅಲ್ಟ್ರಾಮೆಗಾ, ಸೂಪರ್ ಮೆಗಾ ಸಂಸ್ಥೆಗಳಿಗೆ, ನೇರ ಉದ್ಯೋಗ ಒದಗಿಸುವ ಕನಿಷ್ಠ ಸಂಖ್ಯೆಯ ಆಧಾರದ ಮೇಲೆ ನಿವ್ವಳ ರಿಯಾಯಿತಿ ಮತ್ತು ಸಿಎಸ್‌ಟಿಯನ್ನು ಅನುದಾನವಾಗಿ ಮರುಪಾವತಿ ಮಾಡಲಾಗುವುದು.

## ವಿದ್ಯುಚ್ಛಕ್ತಿ

ಕೈಗಾರಿಕಾ ಪ್ರಗತಿಯು ಪ್ರಧಾನವಾಗಿ ಶಕ್ತಿಯ ಪೂರೈಕೆಯನ್ನವಲಂಬಿಸಿರುತ್ತದೆ. ಜಿಲ್ಲೆಯಲ್ಲಿ ಜಲಪಾತಗಳಾಗಲಿ ಅಥವಾ ಅಣುಸ್ಥಾವರಗಳಾಗಲಿ ಇಲ್ಲದಿರುವುದರಿಂದ ಸಾಂಪ್ರದಾಯಕ ವಿದ್ಯುತ್ ಉತ್ಪಾದನೆಗೆ ಅವಕಾಶವಿರುವುದಿಲ್ಲ. ಆದರೆ ತುಮಕೂರು ತಾಲೂಕಿನ ಬಳ್ಳಾಪುರದಲ್ಲಿ ಕೊನಾರ್ಕ್ ಪವರ್ ಪ್ರಾಜೆಕ್ಟ್ಸ್ ರವರು ಬಯೋಮಾಸ್‌ನಿಂದ ೭.೫ ಮೆ. ವ್ಯಾ: ಕೊರಟಗೆರೆ ತಾಲೂಕಿನ ಕಬ್ಬಿಗೆರೆಯಲ್ಲಿ ಬೆರಿ ಪ್ರಾಜೆಕ್ಟ್‌ರವರು ಗ್ಯಾಸಿಫೈಡ್‌ನಿಂದ ೦.೫ ಮೆ.ವ್ಯಾ; ಮಧುಗಿರಿ ತಾಲೂಕಿನ ಬೋರನಕುಂಟೆಯಲ್ಲಿ ಹಾಗೂ ಸೀಬಯ್ಯನಪಾಳ್ಯದಲ್ಲಿ ಕ್ರಮವಾಗಿ ಬಯೋಮಾಸ್ ಎನರ್ಜಿಯು, ಬಯೋಮಾಸ್‌ನಿಂದ ೦.೨೫ ಮೆ.ವ್ಯಾ ಮತ್ತು ೦.೨೫ ಮೆ.ವ್ಯಾ; ಚಿಕ್ಕನಾಯಕನಹಳ್ಳಿ ತಾಲೂಕಿನ ದಸೂಡಿಯಲ್ಲಿ ಎನರ್ಕಾನ್ ಕಂಪನಿಯು ಗಾಳಿ ಯಂತ್ರದ ಮೂಲಕ ೮೮ ಮೆ.ವ್ಯಾ. ವಿದ್ಯುತ್ತನ್ನು ಅಸಂಪ್ರದಾಯಿಕ ರೀತಿಯಲ್ಲಿ ಉತ್ಪಾದಿಸುತ್ತಿವೆ.

ಜಿಲ್ಲೆಗೆ ಶರಾವತಿ ಜಲವಿದ್ಯುತ್ ಉತ್ಪಾದನಾ ಕೇಂದ್ರ, ನಾಗಝರಿ ಜಲವಿದ್ಯುತ್ ಉತ್ಪಾದನಾ ಕೇಂದ್ರ, ರಾಯಚೂರು ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಕೇಂದ್ರ, ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಕೇಂದ್ರ ಹಾಗೂ ಕೇಂದ್ರೀಯ ವಿದ್ಯುತ್ ಗ್ರಿಡ್‌ನಿಂದ ವಿದ್ಯುತ್ ಸರಬರಾಜಾಗುತ್ತಿದ್ದು, ಅಂತರಸನಹಳ್ಳಿ, ಅಂಚೆಪಾಳ್ಯ, ನಿಟ್ಟೂರು, ಕೆ.ಬಿ.ಕ್ರಾಸ್ ಮತ್ತು ಮಧುಗಿರಿ ಪವರ್ ಸ್ಟೇಷನ್‌ಗಳಿಂದ ೨೨೦ ಕೆ.ವಿ. ಲೈನ್‌ಗಳ ಮೂಲಕ ವಿತರಿಸಲಾಗುತ್ತದೆ. ಇವು ಜಿಲ್ಲೆಯ ವಿದ್ಯುತ್ ಸರಬರಾಜು ವಿಭಾಗಗಳಾಗಿದ್ದು, ಪ್ರತಿಯೊಂದು ೨೦೦ ಎಂ.ವಿ.ಎ. ಸಾಮರ್ಥ್ಯವನ್ನು ಹೊಂದಿದವುಗಳಾಗಿವೆ.

ಜಿಲ್ಲೆಗೆ ಮೊಟ್ಟಮೊದಲು ವಿದ್ಯುತ್ ಸರಬರಾಜಾದದ್ದು ೧೯೨೯ರಲ್ಲಿ. ಮಂಡ್ಯ ಜಿಲ್ಲೆ ಶಿವನ ಸಮುದ್ರದಲ್ಲಿರುವ, ಸರ್ ಶೇಷಾದ್ರಿ ಅಯ್ಯರ್ ಜಲವಿದ್ಯುತ್ ಉತ್ಪಾದನಾ ಕೇಂದ್ರದಿಂದ ವಿದ್ಯುತ್ ಸರಬರಾಜನ್ನು ತುಮಕೂರಿನವರೆಗೂ ವಿಸ್ತರಿಸಿದ್ದರಿಂದ ಮೇ ೧೨, ೧೯೨೯ರಂದು ತುಮಕೂರು ನಗರ ವಿದ್ಯುತ್ ಸೌಲಭ್ಯ ಪಡೆಯುವಂತಾಯಿತು.

ಜಿಲ್ಲೆಯ ಇತರ ಪಟ್ಟಣಗಳು ಜೋಗ್ ವಿದ್ಯುತ್ ಉತ್ಪಾದನಾ ಕೇಂದ್ರದಿಂದ ಬೆಂಗಳೂರಿಗೆ ಹೆಚ್.ಟಿ. ವಿದ್ಯುತ್ ಜಾಲವು ತುಮಕೂರು ಮಾರ್ಗವಾಗಿ ಹೋದ ಮೇಲೆ ವಿದ್ಯುದೀಕರಣಗೊಂಡವು. ಆದರೆ ತಿಪಟೂರು, ಜಿಲ್ಲೆಯ ಪ್ರಮುಖ ವ್ಯಾಪಾರ ಕೇಂದ್ರವಾಗಿದ್ದರಿಂದ ತುಮಕೂರಿನ ವಿದ್ಯುತ್ ಜಾಲವನ್ನು ತಿಪಟೂರಿನವರೆಗೂ ವಿಸ್ತರಿಸಿ, ಆಗಸ್ಟ್ ೨೩, ೧೯೪೦ರಲ್ಲಿ ವಿದ್ಯುತ್ ಪೂರೈಕೆ ಮಾಡಿ, ಹಾಸನದ ವಿದ್ಯುತ್ ಸರಬರಾಜು ಮತ್ತು ಪೂರೈಕೆಯ ವಿಭಾಗದ ಅಧೀನಕ್ಕೊಳಪಡಿಸಲಾಯಿತು. ಜೋಗದ ವಿದ್ಯುತ್ ಉತ್ಪಾದನೆ ಆರಂಭಗೊಂಡ ಮೇಲೆ ನೊಣವಿನಕೆರೆ (೧೯೫೧), ತುರುವೇಕೆರೆ (೧೯೫೨), ಚಿಕ್ಕನಾಯಕನಹಳ್ಳಿ (೧೯೫೩), ವಿದ್ಯುದೀಕರಣಗೊಂಡವು. ಬೆಳ್ಳಾವಿ ಚಿನ್ನದಗಣಿಗೆ ೧೯೫೩ರಲ್ಲಿ ವಿದ್ಯುತ್ ಪೂರೈಕೆ ಮಾಡಲಾಯಿತು. ಕುದುರೆ ತಳಿ ಅಭಿವೃದ್ಧಿ ಕೇಂದ್ರವಾಗಿದ್ದ ಕುಣಿಗಲ್ ೧೯೩೯ರಲ್ಲಿ ಕಾವೇರಿ ಜಲ ವಿದ್ಯುತ್ ಯೋಜನೆಯಿಂದ ವಿದ್ಯುತ್ ಸೌಲಭ್ಯ ಪಡೆದುಕೊಂಡಿತು. ಜಿಲ್ಲೆಯ ಪೂರ್ವಭಾಗದ ಪಟ್ಟಣಗಳಾದ ಕೊರಟಗೆರೆ (೧೯೪೦), ಮಧುಗಿರಿ(೧೯೪೦), ಪಾವಗಡ(೧೯೫೧) ಮತ್ತು ಶಿರಾ (೧೭ನೇ ಆಗಸ್ಟ್ ೧೯೫೧)ರಂದು ವಿದ್ಯುತ್ ಸೌಲಭ್ಯ ಪಡೆದುಕೊಂಡವು. ಗುಬ್ಬಿ ಮತ್ತು ಕ್ಯಾತಸಂದ್ರ ೧೯೫೪ರಲ್ಲಿ ವಿದ್ಯುದೀಕರಣಗೊಂಡವು.

ವಿದ್ಯುತ್ ಸರಬರಾಜಿಗೆ ಸಂಬಂಧಿಸಿದಂತೆ ಆರಂಭದಲ್ಲಿ ತುಮಕೂರು ಚಿಕ್ಕಬಳ್ಳಾಪುರ ವಿಭಾಗಕ್ಕೆ ಸೇರಿಕೊಂಡ ಒಂದು ಉಪವಿಭಾಗವನ್ನು ಹೊಂದಿತ್ತು. ಜಿಲ್ಲೆಯಲ್ಲಿ ಸಣ್ಣ ಕೈಗಾರಿಕೆಗಳು ಹೆಚ್ಚಿ ವಿದ್ಯುತ್ ಬೇಡಿಕೆಯು ಅಧಿಕಗೊಂಡುದರ ಪರಿಣಾಮವಾಗಿ ಜನವರಿ ೧, ೧೯೫೮ರಲ್ಲಿ ಕಾರ್ಯಪಾಲಕ ಅಭಿಯಂತರರ ಅಧೀನದಲ್ಲಿ ಒಂದು ವಿಭಾಗ ಪ್ರಾರಂಭಗೊಂಡಿತು. ೧೯೬೭ರಲ್ಲಿ ಕಾರ್ಯಪಾಲಕ ಅಭಿಯಂತರರ ಅಧೀನದಲ್ಲಿ ಎರಡು ಉಪವಿಭಾಗಗಳು ತಿಪಟೂರು ಮತ್ತು ಶಿರಾಗಳಲ್ಲಿ ಪ್ರಾರಂಭಿಸಲ್ಪಟ್ಟು ಸಹಾಯಕ ಅಭಿಯಂತರರ ಅಧೀನಕ್ಕೊಳಪಡಿಸಲಾಯಿತು. ಈ ಎರಡು ಸಹಾಯಕ ಅಭಿಯಂತರರ ಜೊತೆಗೆ ಇನ್ನು ಎರಡು ಸಹಾಯಕ ಅಭಿಯಂತರರ ಹುದ್ದೆಗಳನ್ನು ಸೃಷ್ಟಿಸಿ ತುಮಕೂರು ಮತ್ತು ಕುಣಿಗಲ್‌ಗಳಲ್ಲಿ ಗೃಹನಿರ್ಮಾಣ, ಗ್ರಾಮಾಂತರ ವಿದ್ಯುದೀಕರಣ ಮತ್ತು ನೀರಾವರಿ ಪಂಪ್‌ಸೆಟ್ಟುಗಳ ವಿದ್ಯುದೀಕರಣಗಳ ಕಾರ್ಯನಿರ್ವಾಹಣಾ ಕಾರ್ಯವನ್ನು ವಹಿಸಲಾಯಿತು. ಜಿಲ್ಲೆಯ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳ ವಿದ್ಯುತ್ ಬೇಡಿಕೆ ಅಧಿಕಗೊಂಡ ಪರಿಣಾಮವಾಗಿ ೧೯೬೫ರಲ್ಲಿ ಒಂದು ಸರ್ಕಲ್ ಕಛೇರಿಯನ್ನು ಸ್ಥಾಪಿಸಿ ಅಧೀಕ್ಷಕ ಅಭಿಯಂತರರನ್ನು ಅದರ ಮೇಲಧಿಕಾರಿಯನ್ನಾಗಿ ನೇಮಿಸಲಾಯಿತು. ಈ ಕಛೇರಿಯ ಅಧೀನಕ್ಕೆ ಕೋಲಾರದ ಚಿನ್ನದಗಣಿ ಮತ್ತು ಚಿಕ್ಕಬಳ್ಳಾಪುರಗಳನ್ನು ಸೇರಿಸಲಾಯಿತು. ಎರಡನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಮೂರು ಸ್ಟೆಪ್‌ಡೌನ್ ಸ್ಟೇಷನ್‌ಗಳು ತುಮಕೂರು, ತಿಪಟೂರು ಮತ್ತು ಶಿರಾಗಳಲ್ಲಿ ಪ್ರಾರಂಭಗೊಂಡವು. ಮೂರನೆ ಪಂಚವಾರ್ಷಿಕ ಯೋಜನೆಯಲ್ಲಿ ಮತ್ತೆ ಮೂರು ಸ್ಟೆಪ್‌ಡೌನ್ ಸ್ಟೇಷನ್‌ಗಳನ್ನು ಮಧುಗಿರಿ, ಅಮ್ಮಸಂದ್ರ ಮತ್ತು ಪಾವಗಡಗಳಲ್ಲಿ ಪ್ರಾರಂಭಿಸಿ ಹೆಚ್ಚಿನ ನೀರಾವರಿ ಪಂಪ್‌ಸೆಟ್ಟುಗಳಿಗೆ ವಿದ್ಯುತ್ ಸೌಲಭ್ಯವನ್ನು ಒದಗಿಸಲಾಯಿತು. ಶಿವಮೊಗ್ಗದಿಂದ ಬೆಂಗಳೂರಿಗೆ ನಿರ್ಮಿಸಲಾದ ೨೨೦ ಕೆ.ವಿ ವಿದ್ಯುತ್ ಸರಬರಾಜು ಜಾಲವು ತುಮಕೂರು ಸಮೀಪದಲ್ಲೇ ಹಾದು ಹೋಗಿದೆ. ಇದು ತಮಿಳುನಾಡಿನ ಗಡಿಯವರೆಗೂ ಮುಂದುವರಿದಿರುವುದರಿಂದ ಇದು ಒಂದು ಅಂತರ ರಾಜ್ಯ ಸಂಪರ್ಕದ ಜಾಲವಾಗಿರುವುದು. ಜಿಲ್ಲೆಯ ಮತ್ತೊಂದು ಅಂತರರಾಜ್ಯ ಸಂಪರ್ಕ ಜಾಲವು ಪಾವಗಡ ಸಮೀಪದಲ್ಲಿರುವ ವಿಠಲಾಪುರದಲ್ಲಿರುತ್ತದೆ. ಜಿಲ್ಲೆಯಲ್ಲಿರುವ ವಿಭಾಗವಾರು ಟ್ರಾನ್ಸ್‌ಫಾರ್ಮರ್ಸ್‌ಗಳ ವಿವರಗಳನ್ನು ಕೋಷ್ಟಕ ೫.೧ ರಲ್ಲೂ, ವರ್ಗವಾರು ವಿದ್ಯುತ್ ಬಳಕೆಯ ವಿವರವನ್ನು ಕೋಷ್ಟಕ ೫.೨ ರಲ್ಲೂ, ತಾಲ್ಲೂಕುವಾರು ವಿದ್ಯುತ್ ಪಡೆದ ಗ್ರಾಮಗಳು, ಉಪಗ್ರಾಮಗಳು ಹಾಗೂ ನೀರಾವರಿ ಪಂಪುಸೆಟ್ಟುಗಳ ವಿವರಗಳನ್ನು ಕೋಷ್ಟಕ ೫.೩ ರಲ್ಲೂ, ತಾಲ್ಲೂಕುವಾರು ವಿದ್ಯುತ್ ಬಳಕೆದಾರರ ಸಂಖ್ಯೆಯ ವಿವರಗಳನ್ನು ಕೋಷ್ಟಕ ೫.೪ ರಲ್ಲೂ, ತಾಲ್ಲೂಕುವಾರು, ವರ್ಗವಾರು ವಿದ್ಯುತ್ ಬಳಕೆದಾರರ(ಮಿ. ಯುನಿಟ್‌ಗಳಲ್ಲಿ) ವಿವರಗಳನ್ನು ಕೋಷ್ಟಕ ೫.೫ ರಲ್ಲೂ ಹಾಗೂ ತಾಲ್ಲೂಕುವಾರು ವಿದ್ಯುತ್ ಬೇಡಿಕೆ, ನೀಡಿಕೆ ಹಾಗೂ ಕೊರತೆಯ ವಿವರಗಳನ್ನು ಕೋಷ್ಟಕ ೫.೬ ರಲ್ಲೂ ನೀಡಲಾಗಿದೆ.

**ಕೋಷ್ಟಕ ೫.೧ ಜಿಲ್ಲೆಯಲ್ಲಿ ೨೦೧೪ ರ ಮಾರ್ಚ್ ಅಂತ್ಯದಲ್ಲಿದ್ದಂತೆ ವಿಭಾಗವಾರು ಟ್ರಾನ್ಸ್‌ಫಾರ್ಮರ್ಸ್‌ಗಳ ವಿವರ**

| ಕ್ರ.ಸಂ | ಟ್ರಾನ್ಸ್‌ಫಾರ್ಮರ್ಸ್ | ವಿಭಾಗಗಳು | | | |
|---|---|---|---|---|---|
| | | ತಿಪಟೂರು | ಮಧುಗಿರಿ | ತುಮಕೂರು | ಒಟ್ಟು |
| ೧ | ೧೫ ಕೆ.ವಿ.ಎ | ೧೬೦ | ೯೮ | ೧೦೩ | ೩೬೧ |
| ೨ | ೨೫ ಕೆ.ವಿ.ಎ | ೪೦೮೭ | ೬೦೨೧ | ೫೯೨೨ | ೧೬೦೩೦ |
| ೩ | ೬೩ ಕೆ.ವಿ.ಎ | ೨೮೦೭ | ೪೪೨೦ | ೪೬೦೨ | ೧೧೮೨೯ |
| ೪ | ೧೦೦ ಕೆ.ವಿ.ಎ | ೧೮೪೫ | ೨೭೪೮ | ೪೧೧೮ | ೮೭೧೧ |
| ೫ | ೨೫೦ ಕೆ.ವಿ.ಎ | ೫೪ | ೭೫ | ೪೧೯ | ೫೪೮ |
| ೬ | ೨೦೦ ಕೆ.ವಿ.ಎ | ೦ | ೦ | ೧೧ | ೧೧ |
| ೭ | ೩೦೦ ಕೆ.ವಿ.ಎ | ೦ | ೦ | ೧ | ೧ |
| ೮ | ೪೦೦ ಕೆ.ವಿ.ಎ | ೦ | ೦ | ೦ | ೦ |
| ೯ | ೫೦೦ ಕೆ.ವಿ.ಎ | ೦ | ೦ | ೭೫ | ೭೫ |

**ಆಧಾರ: ವೃತ್ತ ಕಛೇರಿ, ಬೆಸ್ಕಾಂ, ತುಮಕೂರು.**

## ಕೋಷ್ಟಕ ೫.೨ ಜಿಲ್ಲೆಯಲ್ಲಿ ೨೦೧೪ ರ ಮಾರ್ಚ್ ಅಂತ್ಯದಲ್ಲಿದ್ದಂತೆ ವರ್ಗವಾರು ವಿದ್ಯುತ್ ಬಳಕೆಯ ವಿವರ

| ಕ್ರ. ಸಂ | ವರ್ಗಗಳು | ವಿದ್ಯುತ್ ಬಳಕೆ (ಮಿ. ಯೂನಿಟ್‌ಗಳಲ್ಲಿ) | ಅನುಭೋಗಿಗಳ (ಸಂಖ್ಯೆ) | ಪ್ರತಿಶತ ಅನುಭೋಗಿಗಳು | ಪ್ರತಿಶತ ವಿದ್ಯುತ್ ಬಳಕೆ |
|---|---|---|---|---|---|
| ೧ | ಗೃಹಬಳಕೆ/ಸರ್ವವಿದ್ಯುತ್ ಗೃಹಬಳಕೆ | ೨೦೩.೪೭ | ೫೩೯೮೫೫ | ೫೪.೩೫ | ೭.೯೭ |
| ೨ | ವಾಣಿಜ್ಯ ವಿದ್ಯುತ್ | ೫೫.೪೩ | ೬೧೩೪೫ | ೬.೧೮ | ೨.೧೬ |
| ೩ | ಕೈಗಾರಿಕೆ | ೫೦.೫೨ | ೧೬೪೯೮ | ೧.೬೬ | ೧.೯೭ |
| ೪ | ಕುಡಿಯುವ ನೀರು | ೭೦.೯೪ | ೭೭೧೭ | ೦.೭೮ | ೨.೭೭ |
| ೫ | ನೀರಾವರಿ ಪಂಪ್‌ಸೆಟ್ಟುಗಳು | ೧೭೯೮.೬೬ | ೨೦೫೦೯೮ | ೨೦.೬೫ | ೭೦.೧೫ |
| ೬ | ಬೀದಿ ದೀಪಗಳು | ೨೮.೮೫ | ೬೬೧೮ | ೦.೬೭ | ೧.೧೨ |
| ೭ | ಹೆಚ್.ಟಿ. ಸೌಲಭ್ಯಗಳು | ೩೩೨.೬೩ | ೪೪೮ | ೦.೦೫ | ೧೨.೯೭ |
| ೮ | ಭಾಗ್ಯ ಜ್ಯೋತಿ | ೨೨.೭೧ | ೧೫೫೮೦೪ | ೧೫.೭೮ | ೦.೮೯ |
| ಒಟ್ಟು | | ೨,೫೬೬.೩.೨೧ | ೯,೯೩,೩೮೩ | ೧೦೦.೦೦ | ೧೦೦.೦೦ |

ಆಧಾರ: ವೃತ್ತ ಕಛೇರಿ, ಬೆಸ್ಕಾಂ, ತುಮಕೂರು.

## ಕೋಷ್ಟಕ ೫.೩ ಜಿಲ್ಲೆಯಲ್ಲಿ ೩೧-೦೩-೨೦೧೪ ರಲ್ಲಿದ್ದಂತೆ ವಿದ್ಯುತ್ ಪಡೆದ ತಾಲೂಕುವಾರು ಗ್ರಾಮ, ಉಪಗ್ರಾಮ ಮತ್ತು ನೀರಾವರಿ ಪಂಪ್‌ಸೆಟ್ಟುಗಳ ವಿವರ

| ಕ್ರ.ಸಂ | ತಾಲೂಕು | (ವಿದ್ಯುತ್ ಸೌಲಭ್ಯ ಪಡೆದಿರುವ ಗ್ರಾಮಗಳು, ಉಪಗ್ರಾಮಗಳು ಮತ್ತು ನೀರಾವರಿ ಪಂಪ್‌ಸೆಟ್ಟುಗಳು) | | |
|---|---|---|---|---|
| | | (ಗ್ರಾಮಗಳು) | (ಉಪಗ್ರಾಮಗಳು) | (ನೀರಾವರಿ ಪಂಪ್‌ಸೆಟ್ಟುಗಳು) |
| ೧ | ತುಮಕೂರು | ೩೭೩ | ೩೭೫ | ೨೭೧೨೦ |
| ೨ | ಗುಬ್ಬಿ | ೩೪೬ | ೩೩೪ | ೩೫೦೩೬ |
| ೩ | ಕುಣಿಗಲ್ | ೩೧೪ | ೩೨೧ | ೧೬೭೪೭ |
| ೪ | ತಿಪಟೂರು | ೨೩೧ | ೨೪೦ | ೨೦೮೫೮ |
| ೫ | ತುರುವೇಕೆರೆ | ೨೪೩ | ೨೪೫ | ೨೦೦೩೮ |
| ೬ | ಚಿಕ್ಕನಾಯಕನಹಳ್ಳಿ | ೨೩೪ | ೨೫೧ | ೧೮೨೨೯ |
| ೭ | ಶಿರಾ | ೨೪೯ | ೪೫೪ | ೨೨೬೪೭ |
| ೮ | ಕೊರಟಗೆರೆ | ೨೫೧ | ೫೧೦ | ೧೧೯೨೩ |
| ೯ | ಮಧುಗಿರಿ | ೩೨೦ | ೪೨೪ | ೧೯೮೧೫ |
| ೧೦ | ಪಾವಗಡ | ೧೪೭ | ೩೬೦ | ೧೨೬೫೬ |
| ಒಟ್ಟು | | ೨,೭೦೮ | ೩,೫೧೪ | ೨,೦೫,೦೪೯ |

ಆಧಾರ: ವೃತ್ತ ಕಛೇರಿ, ಬೆಸ್ಕಾಂ, ತುಮಕೂರು.

## ಕೋಷ್ಟಕ ೫.೪ ಜಿಲ್ಲೆಯಲ್ಲಿ ೩೧-೦೩-೨೦೧೪ ರಲ್ಲಿದ್ದಂತೆ ತಾಲೂಕುವಾರು ಮತ್ತು ಘಟಕವಾರು ವಿದ್ಯುತ್ ಬಳಕೆದಾರರ ವಿವರ(ಸಂಖ್ಯೆಗಳಲ್ಲಿ)

| ಕ್ರ. ಸಂ | ತಾಲೂಕು | ಗೃಹ ಬಳಕೆ | ಕೈಗಾರಿಕಾ ಬಳಕೆ | ವಾಣಿಜ್ಯ ಬಳಕೆ | ನೀರಾವರಿ ಪಂಪ್‌ಸೆಟ್ಟುಗಳು | ಇತರೆ | ಒಟ್ಟು |
|---|---|---|---|---|---|---|---|
| ೧ | ಚಿಕ್ಕನಾಯಕನಹಳ್ಳಿ | ೫೬೫೫೩ | ೧೩೫೫ | ೩೪೭೭ | ೧೮೨೧೦ | ೧೨೪೭ | ೮೦೮೪೨ |
| ೨ | ಗುಬ್ಬಿ | ೬೬೩೬೫ | ೧೮೦೦ | ೪೪೬೦ | ೩೫೦೩೬ | ೧೫೪೨ | ೧೦೯೨೦೩ |
| ೩ | ಕೊರಟಗೆರೆ | ೩೨೨೯೫ | ೫೯೯ | ೨೬೫೬ | ೧೧೯೨೩ | ೧೦೫೯ | ೪೮೫೩೨ |
| ೪ | ಕುಣಿಗಲ್ | ೬೨೬೪೯ | ೧೦೨೧ | ೪೭೯೨ | ೧೬೭೪೭ | ೧೪೩೪ | ೮೬೬೪೩ |
| ೫ | ಮಧುಗಿರಿ | ೬೪೬೫೮ | ೧೦೬೦ | ೪೧೨೫ | ೧೯೮೧೫ | ೨೨೬೦ | ೯೧೯೧೮ |
| ೬ | ಪಾವಗಡ | ೪೮೯೬೦ | ೧೦೭೬ | ೩೦೯೩ | ೧೨೬೫೬ | ೧೨೩೭ | ೬೭೦೨೨ |
| ೭ | ಶಿರಾ | ೬೭೧೪೧ | ೧೧೫೬ | ೪೫೦೪ | ೨೨೬೭೪ | ೧೫೮೫ | ೯೭೦೬೦ |
| ೮ | ತಿಪಟೂರು | ೬೮೫೨೩ | ೩೪೭೧ | ೮೨೬೩ | ೨೦೮೬೭ | ೧೫೮೦ | ೧೦೨೭೦೪ |
| ೯ | ತುಮಕೂರು | ೧೭೧೬೧೭ | ೪೫೭೪ | ೯೩೧೩ | ೨೨೪೪೨ | ೫೪೦೫ | ೨೧೩೩೫೧ |
| ೧೦ | ತುರುವೇಕೆರೆ | ೪೯೮೧೩ | ೭೭೭ | ೩೨೬೮ | ೨೦೦೫೦ | ೧೦೨೬ | ೭೪೯೩೪ |
| ಜಿಲ್ಲಾ ಮೊತ್ತ | | ೬,೮೮,೫೭೪ | ೧೬,೮೮೯ | ೪೭,೯೫೧ | ೨,೦೦,೪೨೦ | ೧೮,೩೭೫ | ೯,೭೨,೨೦೯ |

ಆಧಾರ: ವೃತ್ತ ಕಛೇರಿ, ಬೆಸ್ಕಾಂ, ತುಮಕೂರು.

## ಕೋಷ್ಟಕ ೫.೫ ಜಿಲ್ಲೆಯಲ್ಲಿ ೨೦೧೪ ರ ಮಾರ್ಚಿ ಅಂತ್ಯದಲ್ಲಿದ್ದಂತೆ ತಾಲೂಕುವಾರು ಮತ್ತು ಘಟಕವಾರು ವಿದ್ಯುಚ್ಛಕ್ತಿಯ ಬಳಕೆದಾರರ ವಿವರ

(ಮಿ. ಯೂನಿಟ್‌ಗಳಲ್ಲಿ)

| ಕ್ರ.ಸಂ | ತಾಲೂಕು | ಗೃಹ ಬಳಕೆ | ಕೈಗಾರಿಕಾ ಬಳಕೆ | ವಾಣಿಜ್ಯ ಬಳಕೆ | ನೀರಾವರಿ ಪಂಪ್‌ಸೆಟ್ಟುಗಳು | ಇತರೆ | ಒಟ್ಟು |
|---|---|---|---|---|---|---|---|
| ೧ | ಚಿಕ್ಕನಾಯಕನಹಳ್ಳಿ | ೮.೩೮ | ೧.೪೮ | ೨.೩೭ | ೧೩೬.೪೨ | ೧೦.೭೬ | ೧೫೯.೪೧ |
| ೨ | ಗುಬ್ಬಿ | ೧೩.೨೫ | ೩.೨೭ | ೩.೬೯ | ೩೪೮.೧೫ | ೧೫.೩೯ | ೩೮೩.೭೫ |
| ೩ | ಕೊರಟಗೆರೆ | ೮.೮೧ | ೧.೦೭ | ೧.೯೨ | ೯೩.೨೪ | ೯.೬೨ | ೧೧೪.೬೬ |
| ೪ | ಕುಣಿಗಲ್ | ೧೬.೦೭ | ೩.೫೪ | ೫.೫೭ | ೧೬೯.೨೨ | ೧೧೩.೯೯ | ೩೦೮.೩೯ |
| ೫ | ಮಧುಗಿರಿ | ೧೨.೭೪ | ೧.೫೭ | ೩.೨೭ | ೧೪೮.೨೪ | ೧೨.೪೪ | ೧೭೮.೨೬ |
| ೬ | ಪಾವಗಡ | ೯.೨೬ | ೧.೭೮ | ೨.೮೭ | ೧೩೧.೦೯ | ೯.೧೮ | ೧೫೪.೧೮ |
| ೭ | ಶಿರಾ | ೧೭.೨೮ | ೨.೪೩ | ೪.೫೪ | ೨೩೧.೪೭ | ೨೬.೮೭ | ೨೮೨.೫೯ |
| ೮ | ತಿಪಟೂರು | ೧೮.೬ | ೯.೫೧ | ೫.೭೯ | ೧೨೯.೫೨ | ೧೭.೦೩ | ೧೮೦.೪೫ |
| ೯ | ತುಮಕೂರು | ೯೦.೪೩ | ೨೪.೫೬ | ೨೩.೩೨ | ೨೭೫.೪೦ | ೨೦೯.೭೯ | ೬೨೩.೫ |
| ೧೦ | ತುರುವೇಕೆರೆ | ೮.೬೫ | ೧.೩೧ | ೨.೦೯ | ೧೩೫.೯೧ | ೩೪.೮೨ | ೧೮೨.೭೮ |
| ಜಿಲ್ಲಾ ಮೊತ್ತ | | ೨೦೩.೪೭ | ೫೦.೫೨ | ೫೫.೪೩ | ೧೭೯೮.೬೬ | ೪೫೯.೮೯ | ೨೫೬೭.೯೭ |

ಆಧಾರ: ವೃತ್ತ ಕಛೇರಿ, ಬೆಂಗಳೂರು ವಿದ್ಯುತ್ ಸರಬರಾಜು ನಿಗಮ, ತುಮಕೂರು.

**ಕೋಷ್ಟಕ ೫.೬ ತುಮಕೂರು ಜಿಲ್ಲೆಯಲ್ಲಿ ೨೦೧೩-೧೪ ರಲ್ಲಿದ್ದ ತಾಲೂಕುವಾರು ಬೇಡಿಕೆ, ನೀಡಿಕೆ ಹಾಗೂ ಕೊರತೆಯ ವಿವರ.**

| ಕ್ರ.ಸಂ | ತಾಲೂಕು | ವಿದ್ಯುತ್ ಬೇಡಿಕೆ (ಮೆ.ವ್ಯಾ) | ವಿದ್ಯುತ್ ನೀಡಿಕೆ (ಮೆ.ವ್ಯಾ) | ಬೇಡಿಕೆಯನ್ನು ಪೂರೈಸಲು ಬೇಕಾಗಿರುವ ವಿದ್ಯುತ್ (ಮೆ.ವ್ಯಾ) |
|---|---|---|---|---|
| ೧ | ತುಮಕೂರು | ೧೫೦ | ೧೨೦ | ೩೦ |
| ೨ | ಗುಬ್ಬಿ | ೯೦ | ೭೦ | ೨೦ |
| ೩ | ಕುಣಿಗಲ್ | ೭೫ | ೬೦ | ೧೫ |
| ೪ | ತಿಪಟೂರು | ೪೫ | ೩೫ | ೧೦ |
| ೫ | ತುರುವೇಕೆರೆ | ೪೫ | ೩೫ | ೧೦ |
| ೬ | ಚಿಕ್ಕನಾಯಕನಹಳ್ಳಿ | ೪೦ | ೩೦ | ೧೦ |
| ೭ | ಶಿರಾ | ೬೦ | ೪೫ | ೧೫ |
| ೮ | ಕೊರಟಗೆರೆ | ೩೫ | ೨೫ | ೧೦ |
| ೯ | ಮಧುಗಿರಿ | ೪೦ | ೩೦ | ೧೦ |
| ೧೦ | ಪಾವಗಡ | ೪೦ | ೩೦ | ೧೦ |
| ಜಿಲ್ಲಾ ಮೊತ್ತ | | ೬೨೦ | ೪೮೦ | ೧೪೦ |

ಆಧಾರ: ವೃತ್ತ ಕಛೇರಿ, ಬೆಂಗಳೂರು ವಿದ್ಯುತ್ ಸರಬರಾಜು ನಿಗಮ, ತುಮಕೂರು.

## ಕೈಗಾರಿಕಾ ಪ್ರಕಾರಗಳು

ಜಿಲ್ಲೆಯಲ್ಲಿ ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು, ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕೆಗಳು, ಖಾದಿ ಮತ್ತು ಗ್ರಾಮೋದ್ಯೋಗ ಕೈಗಾರಿಕೆಗಳು, ಕೈಮಗ್ಗ ಮತ್ತು ವಿದ್ಯುತ್ ಮಗ್ಗಗಳು ಮತ್ತು ರೇಷ್ಮೆ ಕೈಗಾರಿಕೆ ಎಂದು ಐದು ಪ್ರಕಾರಗಳಾಗಿ ವಿಂಗಡಿಸಿ, ಪ್ರತೀ ಪ್ರಕಾರದಲ್ಲಿ ಬರುವ ಕೈಗಾರಿಕೆಗಳ ಸ್ಥಿತಿಗತಿಗಳನ್ನು ತಿಳಿದುಕೊಳ್ಳುವುದರಿಂದ ಅವುಗಳ ಚಿತ್ರಣ ಸ್ಪಷ್ಟವಾಗಿ ಗೋಚರಿಸುವುದು. ಇವುಗಳ ಜೊತೆಗೆ ಕೈಗಾರಿಕಾ ಬೆಳವಣಿಗೆಗೆ ಪೂರಕವಾಗಿರುವ ಸಾಧನ ಸೌಲಭ್ಯಗಳನ್ನು ಸಹ ವಿವರವಾಗಿ ತಿಳಿದುಕೊಳ್ಳುವುದು ಅತ್ಯಾವಶ್ಯಕ. ಜಿಲ್ಲೆಯ ಸಾಧನ ಸೌಲಭ್ಯಗಳ ಪೈಕಿ ಈಗಾಗಲೇ ವಿವರಿಸಲಾಗಿರುವ ಸರ್ಕಾರದ ಕೈಗಾರಿಕಾ ನೀತಿ ಮತ್ತು ವಿದ್ಯುಚ್ಛಕ್ತಿಯನ್ನು ಹೊರತುಪಡಿಸಿ ಉಳಿದವುಗಳಾದ ಕೈಗಾರಿಕಾ ಕ್ಷೇತ್ರ ಮತ್ತು ಕೈಗಾರಿಕಾ ವಸಾಹತು, ಕೈಗಾರಿಕಾ ತರಬೇತಿ ಸಂಸ್ಥೆಗಳು ಮತ್ತು ಕುಶಲಕರ್ಮಿ ತರಬೇತಿ ಸಂಸ್ಥೆಗಳು, ಮಾರುಕಟ್ಟೆ ಸೌಲಭ್ಯ, ಸಾರಿಗೆ ಮತ್ತು ಸಂಪರ್ಕ, ಹಣಕಾಸು ಸೌಲಭ್ಯ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಯೋಜನೆಗಳು ಮೊದಲಾದವುಗಳು ಕೈಗಾರಿಕಾ ಬೆಳವಣಿಗೆಯ ಸಾಧನಗಳಾಗಿದ್ದು, ಕೈಗಾರಿಕೋದ್ಯಮಿಗಳಿಗೆ ಪೂರಕ ನೆರವನ್ನೊದಗಿಸುತ್ತವೆ.

ಜಿಲ್ಲೆಯಲ್ಲಿ ೨೦೧೨ರ ಮಾರ್ಚಿ ಅಂತ್ಯಕ್ಕೆ ೨೪ ಬೃಹತ್ ಪ್ರಮಾಣದ ಕೈಗಾರಿಕೆಗಳಿದ್ದು, ರೂ. ೨೩೧.೫೮ ಕೋಟಿ ಬಂಡವಾಳದೊಂದಿಗೆ ೬೪೪೫ ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿದ್ದವು. ಸದರಿ ಸಾಲಿನಲ್ಲಿ ಒಂಬತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳಿದ್ದು, ರೂ. ೯೭.೮೮ ಕೋಟಿ ಬಂಡವಾಳದೊಂದಿಗೆ, ೭೫೯ ಮಂದಿ ಕಾರ್ಮಿಕರಿಗೆ ಉದ್ಯೋಗ ಒದಗಿಸಿದ್ದವು. ಹಾಗೆಯೇ ೨೩,೮೦೪ ಸಣ್ಣ ಮತ್ತು ಅತೀ ಸಣ್ಣ ಪ್ರಮಾಣದ ಕೈಗಾರಿಕಾ ಘಟಕಗಳಿದ್ದು, ರೂ. ೬೮.೯೮ ಕೋಟಿ ಬಂಡವಾಳದೊಂದಿಗೆ ೧,೩೨,೨೩೫ ಮಂದಿ ಕಾರ್ಮಿಕರಿಗೆ ಉದ್ಯೋಗ ನೀಡಿದ್ದವು. ಜಿಲ್ಲೆಯಲ್ಲಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ಮಂಡಳಿಯ ಸದಸ್ಯತ್ವ ಪಡೆದಿದ್ದ ನೇಕಾರರು ೮೦೦, ಅಸಂಘಟಿತ ನೇಕಾರರು ೫,೫೦೦ ಮತ್ತು ೨೦ ಕೈಮಗ್ಗ ನೇಕಾರ ಸಹಕಾರ ಸಂಘಗಳ ೪,೯೭೦ ಸದಸ್ಯರು ಸೇರಿ ಒಟ್ಟು ೧೧,೨೭೦ ಕೈಮಗ್ಗ ನೇಕಾರರು ಕಾರ್ಯನಿರ್ವಹಿಸುತ್ತಿದ್ದರು. ಜಿಲ್ಲೆಯಲ್ಲಿ ಆರು ವಿದ್ಯುತ್‌ಮಗ್ಗಗಳಿದ್ದು, ೧,೨೦೦ ಸದಸ್ಯರನ್ನು ಹೊಂದಿದ್ದವು. ಇವುಗಳ ಜೊತೆಗೆ ಅಸಂಘಟಿತ ೨,೩೫೫ ನೇಕಾರರೂ ಸೇರಿ ಒಟ್ಟು ೩,೫೫೫ ನೇಕಾರರು ವಿದ್ಯುತ್ ಮಗ್ಗಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ೨೦೧೨ರ ಮಾರ್ಚ್

ಅಂತ್ಯಕ್ಕೆ ಒಟ್ಟು ೪೯,೧೬೫ ಕುಶಲಕರ್ಮಿಗಳು ವಿವಿಧ ಕಸುಬುಗಳಲ್ಲಿ ತೊಡಗಿದ್ದರು. ಇದೇ ಅವಧಿಯಲ್ಲಿ ಜಿಲ್ಲೆಯಲ್ಲಿ ೧,೦೬೩ ಹಳ್ಳಿಗಳು ರೇಷ್ಮೆ ಕೃಷಿಯಲ್ಲಿ ತೊಡಗಿದ್ದು ೩೦೫೮.೭೪೦ ಹೆ. ಗಳಲ್ಲಿ ಹಿಪ್ಪುನೇರಳೆ ಬೆಳೆದಿದ್ದರು. ೫೦೪ ಪ.ಜಾತಿಯವರು, ೩೫೨ ಪ.ಪಂಗಡದವರು, ೧೪ ಅಲ್ಪಸಂಖ್ಯಾತರರು ಹಾಗೂ ೭೭೮೧ ಇತರರು ಸೇರಿದಂತೆ ಒಟ್ಟು ೮೬೫೧ ರೇಷ್ಮೆ ಕುಟುಂಬಗಳು ರೇಷ್ಮೆ ಕೃಷಿಯಲ್ಲಿ ತೊಡಗಿದ್ದು, ೧೪೯೫.೦೫೭ ಟನ್ ಮಿಶ್ರತಳಿ ಹಾಗೂ ೨೮೩.೯೭೮ ಟನ್ ದ್ವಿತಳಿ ರೇಷ್ಮೆಗೂಡನ್ನು ಉತ್ಪಾದಿಸಿದ್ದವು. ಅಲ್ಲದೆ ೪೪೯ ಟನ್ ದ್ವಿತಳಿಯನ್ನು ಶುದ್ಧ ಮೈಸೂರು ತಳಿಯಾಗಿ ಕುಣಿಗಲ್ ಬಿತ್ತನೆ ಪ್ರದೇಶದಲ್ಲಿ ಉತ್ಪಾದಿಸಲಾಗಿತ್ತು. ೧೦೦ ಮೊಟ್ಟೆಗೆ ಇಳುವರಿಯಾದ ರೇಷ್ಮೆಗೂಡಿನ ಪ್ರಮಾಣ ಮಿಶ್ರತಳಿಯಲ್ಲಿ ೬೩.೭೩ ಕೆ.ಜಿ. ಆಗಿದ್ದರೆ, ದ್ವಿತಳಿಯಲ್ಲಿ ೬೩.೩೭ ಕೆ.ಜಿ. ಗಳಾಗಿತ್ತು. ಇದು ದ್ವಿತಳಿಯಲ್ಲಿ ಶುದ್ಧ ಮೈಸೂರು ತಳಿ ಕುಣಿಗಲ್ ಬಿತ್ತನೆ ಪ್ರದೇಶದಲ್ಲಿ ೩೩.೩೦ ಕೆ.ಜಿ. ಆಗಿತ್ತು. ಹಾಗೆಯೇ ಜಿಲ್ಲೆಯಲ್ಲಿ ೩೨ ಚರಕ, ನಾಲ್ಕು ಫಿಲೇಚರ್‌ಗಳು ಹಾಗೂ ಒಂದು ಮಲ್ಟಿಯೆಂಡ್ ಉಪಕರಣಗಳ ಮೂಲಕ ನೂಲು ತೆಗೆಯಲಾಗುತ್ತಿತ್ತು. ಕರ್ನಾಟಕದಲ್ಲಿ ೨೦೧೫-೧೬ನೇ ಆರ್ಥಿಕ ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ಶೇ ೨೪ರಷ್ಟು ಉದ್ಯೋಗಾವಕಾಶಗಳು ಸೃಷ್ಟಿಯಾಗಿದ್ದು, ಈ ಮೂಲಕ ಉದ್ಯೋಗ ಸೃಷ್ಟಿಯಲ್ಲಿ ಕರ್ನಾಟಕವು ದೇಶದಲ್ಲಿಯೇ ಪ್ರಥಮ ಸ್ಥಾನದಲ್ಲಿದೆ ಎಂದು ಉದ್ಯಮ ಸಂಘಟನೆಗಳಿಗೆ ಸಂಬಂಧಿಸಿದ **'ಅಸೋಚರ'** ಸಮೀಕ್ಷೆ ಹೇಳಿದೆ.

## ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು

### ೧. ಮೈಸೂರು ಸಿಮೆಂಟ್ಸ್ ಲಿಮಿಟೆಡ್

ತುರುವೇಕೆರೆ ತಾಲೂಕು ಅಮ್ಮಸಂದ್ರದ ಸಮೀಪ ಸಿಮೆಂಟ್ ತಯಾರಿಕೆಗೆ ಅವಶ್ಯಕವಾಗಿ ಬೇಕಾಗುವ ಕಚ್ಚಾವಸ್ತುಗಳಾದ ಸುಣ್ಣದಕಲ್ಲು, ಮರಳು ಮತ್ತು ಜೇಡಿಮಣ್ಣು ಯಥೇಚ್ಛವಾಗಿ ಸಿಗುತ್ತಿರುವುದರಿಂದ ಮತ್ತು ಜಿಪ್ಸಂ ಪಕ್ಕದ ರಾಜ್ಯವಾದ ತಮಿಳುನಾಡಿನಲ್ಲಿ ಸುಲಭ ದರದಲ್ಲಿ ದೊರಕುತ್ತಿರುವುದರಿಂದ ಮತ್ತು ಸಾಗಾಣಿಕೆಗೆ ಅನುಕೂಲ ಕಲ್ಪಿಸುವ ಅಮ್ಮಸಂದ್ರ ರೈಲ್ವೆ ಸ್ಟೇಷನ್ ಹಾಗೂ ಬೆಂಗಳೂರು ಹೊನ್ನಾವರ ರಾಷ್ಟ್ರೀಯ ಹೆದ್ದಾರಿ ಇಲ್ಲಿಗೆ ಸಮೀಪವಿರುವುದರಿಂದ ರಾಜ್ಯ ಸರ್ಕಾರ ಇಲ್ಲಿ ಒಂದು ಸಿಮೆಂಟ್ ಫ್ಯಾಕ್ಟರಿಯನ್ನು ಸ್ಥಾಪಿಸುವ ಉದ್ದೇಶವನ್ನು ಹೊಂದಿತ್ತಾದರೂ ಯೋಜನಾ ಆಯೋಗದ ಸಲಹೆ ಮೇರೆಗೆ ಅದನ್ನು ಖಾಸಗಿಯವರಿಗೆ ಬಿಟ್ಟು ಕೊಡಬೇಕಾಯಿತು. ಆಗ ರಾಜ್ಯದ ಗಣಿ ಉದ್ಯಮಿಯಾದ ಪಿ.ಕೆ.ಸಾರಂಗಪಾಣಿ ಮೊದಲಿಯಾರ್ ಸಿಮೆಂಟ್ ಕಾರ್ಖಾನೆಯನ್ನು ಸ್ಥಾಪಿಸಲು ಮುಂದೆ ಬಂದು ದಿ ೧೩-೦೫-೧೯೫೮ರಲ್ಲಿ ಒಂದು ಕಂಪನಿಯನ್ನು ಸ್ಥಾಪಿಸಿ ಜುಲೈ ೧೯೪೯ರಲ್ಲಿ ರಾಜ್ಯ ಸರ್ಕಾರದಿಂದ ಕೈಗಾರಿಕಾ ಸ್ಥಾಪನೆಗೆ ಪರವಾನಗಿಯನ್ನು ಹಾಗೂ ೧೫೮.೧೨ ಎಕರೆ ಭೂಮಿಯನ್ನು ಪಡೆದುದೇ ಅಲ್ಲದೆ ಅದೇ ವರ್ಷ ನವೆಂಬರ್‌ನಲ್ಲಿ ಕೇಂದ್ರ ಸರ್ಕಾರದಿಂದ ಬಂಡವಾಳದ ಬಿಡುಗಡೆಗೆ ಒಪ್ಪಿಗೆಯನ್ನು ಪಡೆದುಕೊಳ್ಳಲಾಯಿತು. ದಿ ೨೭-೧೧-೧೯೬೦ರಲ್ಲಿ ಕಂಪನಿಯ ಉದ್ಘಾಟನಾ ಸಮಾರಂಭ ಹಾಗೂ ಆಡಳಿತ ಬ್ಲಾಕಿಗೆ ಅಡಿಗಲ್ಲು ಹಾಕುವ ಸಮಾರಂಭವಾಯಿತು. ಮೊಟ್ಟಮೊದಲ ಸಿಮೆಂಟ್ ಉತ್ಪಾದನಾ ಸ್ಥಾವರವು ವರ್ಷಕ್ಕೆ ಒಂದು ಲಕ್ಷ ಟನ್ ಉತ್ಪಾದನಾ ಸಾಮರ್ಥ್ಯದೊಂದಿಗೆ ಅಕ್ಟೋಬರ್ ೧೯೬೨ರಲ್ಲಿ ಉತ್ಪಾದನಾ ಕಾರ್ಯವನ್ನಾರಂಭಿಸಿತು.

ಫ್ಯಾಕ್ಟರಿಯ ತಾಂತ್ರಿಕತೆ, ನಕ್ಷೆ ಮತ್ತು ನಿರ್ಮಾಣ ಕಾರ್ಯವನ್ನು ಅಮೆರಿಕ ಸಂಯುಕ್ತ ಸಂಸ್ಥಾನದ ಹೆಸರಾಂತ ಕಂಪನಿಯಾದ 'ಕೈಸರ್ ಎಂಜಿನಿಯರ್ಸ್ ಓವರ್‌ಸೀಸ್ ಕಾರ್ಪೋರೇಷನ್'ನಿಂದ ಪಡೆದುಕೊಂಡು ಈಕ್ವಿಟಿ ಷೇರು ಬಂಡವಾಳದೊಂದಿಗೆ ಪಾಲುಗಾರಿಕೆಯನ್ನು ಪಡೆದುಕೊಳ್ಳುವುದರ ಮೂಲಕ ವಿದೇಶಿ ಕಂಪನಿಯ ಪ್ರವೇಶವಾಯಿತು. ಪಿ.ಕೆ.ಸಾರಂಗಪಾಣಿ ಮೊದಲಿಯಾರ್ ಕಂಪನಿಯ ವ್ಯವಹಾರದಿಂದ ದೂರ ಉಳಿಯಲು ಇಚ್ಛಿಸಿದಾಗ ಕೈಸರ್ ಕಾರ್ಪೋರೇಷನ್ ಫ್ಯಾಕ್ಟರಿಯ ಆಡಳಿತಾತ್ಮಕ ಜವಾಬ್ದಾರಿಯನ್ನು ದಿ ೦೧-೦೯-೧೯೬೪ರಲ್ಲಿ ವಹಿಸಿಕೊಂಡು, ಜನವರಿ ೧೯೬೬ರಲ್ಲಿ ಅದನ್ನು ಮೆ.ಬಿರ್ಲಾ ಸಹೋದರರಿಗೆ ವಹಿಸಿಕೊಟ್ಟಿತು. ಬಿರ್ಲಾ ಸಹೋದರರು ಫ್ಯಾಕ್ಟರಿಯ ಉತ್ಪಾದನಾ ಸಾಮರ್ಥ್ಯವನ್ನು ವರ್ಷಕ್ಕೆ ಒಂದು ಲಕ್ಷ ಟನ್ ಇದ್ದುದನ್ನು ಎರಡು ಲಕ್ಷ ಟನ್‌ಗೆ ಹೆಚ್ಚಳಗೊಳಿಸಲು ಅವಶ್ಯಕವಾಗಿ ಬೇಕಾಗುವ ಯಂತ್ರೋಪಕರಣಗಳನ್ನು ಪಶ್ಚಿಮ ಜರ್ಮನಿಯ ಮೆ.ಕ್ಲೋಕ್ನರ್ ಹಂ ಬೋಲ್ಟ್ ಡೆಯುಟ್ ಕಂಪನಿಯಿಂದ ವರ್ಷಕ್ಕೆ ಒಂದು ಲಕ್ಷ ಟನ್ ಸಾಮರ್ಥ್ಯದ ಯಂತ್ರವನ್ನು ಹಾಗೂ ಮೆ.ಆಲ್ಗೆಮೆಸಿನ್ ಇಲೆಕ್ಟ್ರಿಸಿಟಾಸ್ ಗೆಲ್‌ಯಸ್ ಚಾಫ್ಟ್ (ಎ.ಇ.ಜಿ)ಯಿಂದ ಇಲೆಕ್ಟ್ರಿಕಲ್ ಇಕ್ವಿಪ್‌ಮೆಂಟುಗಳನ್ನು ಪಡೆದು ಎರಡನೇ ಉತ್ಪಾದನಾ ಘಟಕವನ್ನು ೧೯೬೬ರಲ್ಲಿ ಸ್ಥಾಪಿಸಲಾಯಿತು. ಆನಂತರ ಭಾರತದ ದುರ್ಗಾಪುರದಲ್ಲಿನ ಎಸಿಸಿ ವಿಕರ್ಸ್ ಬಾಬ್‌ಕಾಕ್ ಲಿಮಿಟೆಡ್‌ನಿಂದ ವರ್ಷಕ್ಕೆ ಎರಡು ಲಕ್ಷ ಟನ್ ಸಿಮೆಂಟ್

ಉತ್ಪಾದನಾ ಸಾಮರ್ಥ್ಯದ ಯಂತ್ರವನ್ನು ಪಡೆದು ೧೯೬೮ರಲ್ಲಿ ಸ್ಥಾಪಿಸುವುದರ ಮೂಲಕ ತನ್ನ ಉತ್ಪಾದನೆಯನ್ನು ವರ್ಷಕ್ಕೆ ನಾಲ್ಕು ಲಕ್ಷ ಟನ್‌ಗೆ ಹೆಚ್ಚಿಸಿಕೊಂಡು ಅತ್ಯುತ್ತಮ ಗುಣಮಟ್ಟದ ಜಲರಹಿತ ಪೋರ್ಟ್‌ಲ್ಯಾಂಡ್ ಸಿಮೆಂಟನ್ನು ಉತ್ಪಾದಿಸಲಾರಂಭಿಸಿತು. ಇಲ್ಲಿ ಉತ್ಪಾದಿಸುವ ಸಿಮೆಂಟ್ ಪೋರ್ಟ್‌ಲ್ಯಾಂಡ್‌ನಲ್ಲಿ ದೊರಕುವ ಕಲ್ಲಿನ ಬಣ್ಣವನ್ನು ಹೋಲುವುದರಿಂದ ಇದಕ್ಕೆ ಪೋರ್ಟ್‌ಲ್ಯಾಂಡ್ ಸಿಮೆಂಟ್ ಎಂದು ಕರೆಯಲಾಗುತ್ತಿದೆ. ಫ್ಯಾಕ್ಟರಿಗೆ ಸುಮಾರು ೨೦ ಕಿ.ಮೀ. ದೂರದಲ್ಲಿರುವ ವಜ್ರ ಬೆಟ್ಟದಲ್ಲಿನ ಓಬಳಾಪುರ ಗಣಿಯಿಂದ ಶ್ರೇಷ್ಠಮಟ್ಟದ ಸುಣ್ಣದಕಲ್ಲನ್ನು ಪಡೆಯುತ್ತಿರುವುದರಿಂದ ಇಲ್ಲಿ ತಯಾರಿಸುವ ಸಿಮೆಂಟಿಗೆ ವಜ್ರ ಅಥವಾ ಡೈಮಂಡ್ ಗುರುತನ್ನು ಕೊಡಲಾಗಿದೆ.

ಕಂಪನಿಗೆ ಮೀಸಲಿಟ್ಟ ಬಂಡವಾಳ ರೂ. ಮೂರು ಕೋಟಿಯಾಗಿದ್ದು, ರೂ. ೧.೮ ಕೋಟಿಗಳನ್ನು ಬಿಡುಗಡೆ ಮಾಡಲಾಗಿತ್ತು. ಇದರಲ್ಲಿ ಸರ್ಕಾರದ ಸಹಭಾಗಿತ್ವದ ನೆರವು ರೂ. ೧೫ ಲಕ್ಷಗಳು. ಅಮೇರಿಕ ಸಂಯುಕ್ತ ಸಂಸ್ಥಾನದ ಆಯಾತ ಮತ್ತು ನಿರ್ಯಾತ ಬ್ಯಾಂಕಿನಿಂದ ಮಂಜೂರಾದ ಸಾಲ ರೂ. ೫೫ ಲಕ್ಷಗಳು; ಅಮೇರಿಕ ಸಂಯುಕ್ತ ಸಂಸ್ಥಾನದ ಅಂತರಾಷ್ಟ್ರೀಯ ಏಜೆನ್ಸಿಯಿಂದ ದೊರೆತ ಸಾಲ  ರೂ. ೮೨.೫೦ ಲಕ್ಷಗಳು ಮತ್ತು ಭಾರತದ ಇಂಡಸ್ಟ್ರಿಯಲ್ ಕ್ರೆಡಿಟ್ ಮತ್ತು ಇನ್ವೆಸ್ಟ್‌ಮೆಂಟ್ ಕಾರ್ಪೋರೇಷನ್‌ನಿಂದ ದೊರೆತ ಸಾಲದ ಮೊತ್ತ ರೂ. ೬೪.೩೩ ಲಕ್ಷಗಳು ಸೇರಿವೆ.

೨೦೦೮-೦೯ನೇ ಸಾಲಿನಲ್ಲಿ ಕಂಪನಿಯು ದಿನವಹಿ ೧೬೦೦ ಟನ್ ಉತ್ಪಾದನಾ ಸಾಮರ್ಥ್ಯದ ಯಂತ್ರವನ್ನು ಹೊಂದಿದ್ದು, ಪೋರ್ಟ್‌ಲ್ಯಾಂಡ್ ಸಿಮೆಂಟನ್ನು ಉತ್ಪಾದಿಸುತ್ತಿತ್ತು. ಕಂಪನಿಯು ಗುಬ್ಬಿ ತಾಲೂಕಿನ ಯರೆಕಟ್ಟೆ ಮತ್ತು ಚಿಕ್ಕನಾಯಕನಹಳ್ಳಿ ತಾಲೂಕಿನ ದೊಡ್ಡರಾಮಪುರದಲ್ಲಿ ಸುಣ್ಣದಕಲ್ಲಿನ ಗಣಿಯನ್ನು ಹೊಂದಿದ್ದು, ಆಧುನಿಕ ತಾಂತ್ರಿಕ ನೆರವಿನೊಂದಿಗೆ ಸಾಗಾಣಿಕಾ ಕಾರ್ಯವನ್ನು ನಡೆಸುತ್ತಿದೆ. ಮೈಸೂರು ಸಿಮೆಂಟ್ಸ್ ಲಿಮಿಟೆಡ್‌ನಲ್ಲಿ ಉತ್ಪಾದಿಸಲಾಗುತ್ತಿರುವ ಸಿಮೆಂಟಿಗೆ ಕರ್ನಾಟಕದಾದ್ಯಂತ ಮತ್ತು ತಮಿಳುನಾಡು ಹಾಗೂ ಕೇರಳ ರಾಜ್ಯಗಳ ಕೆಲವು ಭಾಗಗಳೊಂದಿಗೆ ಮಾರುಕಟ್ಟೆ ಸೌಲಭ್ಯವಿದೆ. ೩೧-೦೩-೨೦೦೮ರಲ್ಲಿದ್ದ ಕಂಪನಿಯ ಬಂಡವಾಳ ರೂ. ೧೭೯.೬೮ ಲಕ್ಷಗಳಾಗಿದ್ದು, ೬೦೦ ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿತ್ತು. ಇದೇ ಕಾಲಾವಧಿಯಲ್ಲಿ ಸುಮಾರು ಮೂರು ಲಕ್ಷ ಮೆಟ್ರಿಕ್ ಟನ್ ಸಿಮೆಂಟನ್ನು ಉತ್ಪಾದಿಸಿ ಮಾರಾಟ ಮಾಡಿದೆ.

### ೨. ಹೆಚ್.ಎಂ.ಟಿ. ವಾಚಸ್ ಲಿಮಿಟೆಡ್, ತುಮಕೂರು

ತುಮಕೂರಿನ ಹೆಚ್.ಎಂ.ಟಿ. ವಾಚ್ ಫ್ಯಾಕ್ಟರಿಯು ಬೆಂಗಳೂರಿನಲ್ಲಿರುವ ಹೆಚ್.ಎಂ.ಟಿ. ವಾಚ್ ಮಾರ್ಕೆಟಿಂಗ್ ವಿಭಾಗದ ಪೂರಕ ಕಾರ್ಖಾನೆಯಾಗಿ ೧೯೭೮ ರಲ್ಲಿ ಕಾರ್ಯಾರಂಭಗೊಂಡಿತು. ಇಲ್ಲಿ ತಯಾರಿಸಲಾಗುತ್ತಿದ್ದ ಕೈಗಡಿಯಾರಗಳನ್ನು ಫ್ಯಾಕ್ಟರಿಯ ಬಿಡಿಭಾಗಗಳ ಮಾರಾಟ ಮಳಿಗೆಗಳು ಹಾಗೂ ಅಧಿಕೃತ ಮಾರಾಟಗಾರರ ಮೂಲಕ ಮಾರಾಟ ಮಾಡಲಾಗುತ್ತಿತ್ತು. ಇದಕ್ಕೆ ಬೇಕಾಗುವ ಕಚ್ಚಾ ಸರಕಾದ ಸ್ಟೀಲ್ ಹಾಗೂ ಹಿತ್ತಾಳೆಯನ್ನು ದೇಶದ ಅಧಿಕೃತ ಮಾರಾಟಗಾರರಿಂದ ಕೊಂಡುಕೊಳ್ಳಲಾಗುತ್ತಿತ್ತು. ೩೧-೦೩-೨೦೦೯ರ ಅಂತ್ಯಕ್ಕೆ ಇದರಲ್ಲಿ ತೊಡಗಿಸಲಾಗಿದ್ದ ಬಂಡವಾಳ  ರೂ. ೬.೧೧ ಕೋಟಿ ಇದ್ದು, ೬೪೭ ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದರು. ಈ ಕಾರ್ಖಾನೆಯ ವಾರ್ಷಿಕ ಉತ್ಪಾದನೆಯ ಸಾಮರ್ಥ್ಯ ಒಂಬತ್ತು ಲಕ್ಷ ಕೈಗಡಿಯಾರಗಳು. ೨೦೦೮-೦೯ರಲ್ಲಿ ರೂ. ೮.೭೬ ಲಕ್ಷ ಮೌಲ್ಯದ ೧,೬೬,೬೦೦ ಕೈಗಡಿಯಾರಗಳನ್ನು ಉತ್ಪಾದಿಸಿದ್ದು, ೧,೭೨,೧೨೦ ಕೈಗಡಿಯಾರಗಳನ್ನು ರೂ. ೮೮೮ ಲಕ್ಷಗಳ ಮೌಲ್ಯಕ್ಕೆ ಮಾರಾಟ ಮಾಡಲಾಯಿತು. ಪ್ರಸ್ತುತ ಈ  ಕಾರ್ಖಾನೆಯಲ್ಲಿ ಉತ್ಪಾದನೆ ಸ್ಥಗಿತಗೊಂಡಿದೆ.

### ೩. ತುಮಕೂರು ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ

ಈ ಒಕ್ಕೂಟದ ಕಾರ್ಯಚಟುವಟಿಕೆಯು ೧೯೭೫ರಲ್ಲೇ ಆರಂಭಗೊಂಡರೂ, ಮಾರ್ಚ್ ೩೦, ೧೯೭೭ರಲ್ಲಿ ನೋಂದಣಿಗೊಂಡಿದೆ. ಹಾಲಿನಲ್ಲಿರುವ ಜೀವಾಣುಗಳ ಶಕ್ತಿ ಗುಂದಿಸಲು ಹಾಲನ್ನು ಪ್ಯಾಶ್ಚರ್ ಸಂಸ್ಕಾರಕ್ಕೆ ಒಳಪಡಿಸಿ (ಪ್ಯಾಶ್ಚರೈಸೇಷನ್), ಹಾಲಿನಲ್ಲಿರುವ ಜಿಡ್ಡನ್ನು ಒಂದು ನಿಶ್ಚಿತ ಮಟ್ಟಕ್ಕೆ ತಂದು ಪಾಲಿಥೀನ್ ಚೀಲಗಳಲ್ಲಿ ತುಂಬಿ ಮಾರಾಟ ಮಾಡಲಾಗುತ್ತದೆ. ಹಾಲಿನ ಉಪ ಉತ್ಪನ್ನಗಳಾದ ಬೆಣ್ಣೆ, ಗಿಣ್ಣು, ತುಪ್ಪ, ಪೇಡ, ಮಸಾಲೆ ಮಜ್ಜಿಗೆ ಹಾಗೂ ಶೀತಲೀಕರಣದ ಅವಶ್ಯಕತೆಯಿಲ್ಲದ ೪೫ ದಿವಸಗಳವರೆಗೆ ಇಡಬಹುದಾದ "ಗುಡ್‌ಲೈಫ್" ಹೆಸರಿನ ಹಾಲು, 'ಅಮುಲ್' ಹೆಸರಿನಲ್ಲಿ ಪ್ಲಾಸ್ಟಿಕ್ ಡಬ್ಬಗಳಲ್ಲಿ ಭರ್ತಿ ಮಾಡಿದ ಮೊಸರು, ಪಾಲಿಥೀನ್ ಚೀಲಗಳಲ್ಲಿ ತುಂಬಿದ ಮೊಸರು ಇತ್ಯಾದಿ ವಸ್ತುಗಳನ್ನು ತಯಾರಿಸಿ ಒಕ್ಕೂಟವು ಮಾರಾಟ ಮಾಡುತ್ತಿದೆ. ಎಲ್ಲಾ ವಸ್ತುಗಳ ಚೀಲದ ಮೇಲೆ 'ನಂದಿನಿ' ಎಂಬ ಟ್ರೇಡ್ ಮಾರ್ಕ್ ಇರುತ್ತದೆ.

ಒಕ್ಕೂಟದ ಆಡಳಿತ ಕಛೇರಿ ಮತ್ತು ಉತ್ಪಾದನಾ ಘಟಕ ಬಿ.ಹೆಚ್.ರಸ್ತೆಯ ಮಲ್ಲಸಂದ್ರದಲ್ಲಿದ್ದು, ISO ೨೨೦೦೦:೨೦೦೫ ದೃಢೀಕೃತ ಡೈರಿಯಾಗಿ ಕಾರ್ಯನಿರ್ವಹಿಸುತ್ತಿದೆ. ಈ ಉದ್ಯಮವು ಸಹಕಾರ ತತ್ವದ ಆಧಾರದ ಮೇಲೆ ಸ್ಥಾಪನೆಯಾಗಿದ್ದು, ಪ್ರಸ್ತುತ ಜಿಲ್ಲೆಯಲ್ಲಿ ೧೦೫೯(೧೦೧೭) ಕಾರ್ಯನಿರ್ವಹಿಸುತ್ತಿರುವ ಹಾಲು ಉತ್ಪಾದಕರ ಸಂಘಗಳು ಇದರ ಸದಸ್ಯರಾಗಿವೆ. ಹಾಲು ಉತ್ಪಾದನೆ ಮತ್ತು ಮಾರಾಟ, ಉತ್ತಮ ತಳಿಗಳ ಅಭಿವೃದ್ಧಿ, ದನಗಳ ರೋಗ ನಿವಾರಣೆಗೆ ಏರ್ಪಾಡು, ಹಸುಗಳಿಗೆ ಪೌಷ್ಠಿಕ ಆಹಾರ ಪೂರೈಕೆ ಮತ್ತು ಸಂಶೋಧನೆ ಹಾಗೂ ಅಭಿವೃದ್ಧಿ ಮುಂತಾದ ಕಾರ್ಯಗಳನ್ನು ಈ ಒಕ್ಕೂಟವೇ ನೋಡಿಕೊಳ್ಳುತ್ತದೆ.

ತುಮಕೂರು ಒಕ್ಕೂಟದ ವ್ಯಾಪ್ತಿಯಲ್ಲಿ ೨೦೦೬–೦೭ರಲ್ಲಿ ೭೩೧ (೬೭೨) ಹಾಲು ಉತ್ಪಾದಕರ ಸಹಕಾರಿ ಸಂಘಗಳು ಕಾರ್ಯಾರಂಭ ಮಾಡಿದ್ದವು. ಆವರಣದಲ್ಲಿ ನೀಡಿರುವುದು ಕಾರ್ಯನಿರ್ವಹಿಸುತ್ತಿರುವ ಸಂಘಗಳಾಗಿವೆ. ೨೦೦೯–೧೦ರಲ್ಲಿ ೮೮೮(೮೩೨) ಹಾಗೂ ೨೦೧೩–೧೪ರಲ್ಲಿ ೧೦೫೯(೧೦೧೭) ಕಾರ್ಯಾರಂಭಗೊಂಡಿದ್ದವು. ಇವುಗಳಲ್ಲಿ ೧೨೧ ಸ್ಟೆಪ್ ಮಹಿಳಾ ಸಂಘಗಳು ಮತ್ತು ೧೦೪ ಸಾಮಾನ್ಯ ಮಹಿಳಾ ಸಂಘಗಳಾಗಿವೆ. ಈ ಸಂಘಗಳಲ್ಲಿ ಒಟ್ಟು ೨,೪೫,೮೮೫ ಸದಸ್ಯರಿದ್ದು, ಇವರಲ್ಲಿ ೨೪,೦೬೪ ಹರಿಜನರು, ೧೯,೪೭೮ ಗಿರಿಜನರು ಹಾಗೂ ೭೧,೦೩೮ ಮಹಿಳಾ ಸದಸ್ಯರಿದ್ದರು. ೨೦೧೩–೧೪ ನೇ ಸಾಲಿನ ಅಂತ್ಯಕ್ಕೆ ಒಕ್ಕೂಟವು ರೂ. ೧೪.೦೯ ಕೋಟಿ ಮೊತ್ತದ ಷೇರು ಬಂಡವಾಳ ಹೊಂದಿತ್ತು.

ಒಕ್ಕೂಟದಲ್ಲಿ ೨೦೧೧–೧೨ರಲ್ಲಿ ದಿನವಹಿ ಸರಾಸರಿ ೩.೮೯ ಲಕ್ಷ ಕೆ.ಜಿ. ಹಾಲು ಶೇಖರಣೆಯಾಗಿದ್ದು, ೨೦೧೦–೧೧ ನೇ ಸಾಲಿಗಿಂತ ಶೇ.೧೭ ರಷ್ಟು ಹೆಚ್ಚಳಗೊಂಡಿರುತ್ತದೆ. ೨೦೧೩–೧೪ ರ ಸಾಲಿನಲ್ಲಿ ೪.೨೨ ಲಕ್ಷ ಕೆ.ಜಿ. ಹಾಲು ಶೇಖರಣೆಯಾಗಿತ್ತು. ಜಿಲ್ಲೆಯ ಎಡಿಯೂರಿನಲ್ಲಿ ೬೦ ಟಿ.ಎಲ್.ಪಿ.ಡಿ, ಶಿರಾದಲ್ಲಿ ೨೦ ಟಿ.ಎಲ್.ಪಿ.ಡಿ, ಕಿಬ್ಬನಹಳ್ಳಿಯಲ್ಲಿ ೬೦ ಟಿ.ಎಲ್.ಪಿ.ಡಿ ಹಾಗೂ ಮಧುಗಿರಿಯಲ್ಲಿ ೬೦ ಟಿ.ಎಲ್.ಪಿ.ಡಿ ಹೀಗೆ ಒಟ್ಟು ೨೦೦ ಟಿ.ಎಲ್ಪಿ.ಡಿ ಸಾಮರ್ಥ್ಯದ ನಾಲ್ಕು ಚಿಲ್ಲಿಂಗ್ ಕೇಂದ್ರಗಳಿದ್ದವು. ಅಲ್ಲದೆ ೨೮ ಬಲ್ಕ್ ಮಿಲ್ಕ್ ಕೂಲರ್ ಕೇಂದ್ರಗಳು ಹಾಗೂ ೨೭೪ ಸ್ವಯಂಚಾಲಿತ ಹಾಲು ಶೇಖರಣಾ ಕೇಂದ್ರಗಳಿದ್ದವು. ಹಾಲನ್ನು ಸಂಗ್ರಹಿಸಲು ಉತ್ಪಾದಕರ ಸಹಕಾರ ಸಂಘಗಳಿಗೆ ಸ್ಟೆಯಿನ್‌ಲೆಸ್ ಸ್ಟೀಲ್ ಪಾತ್ರೆಗಳನ್ನು ಕೊಡಲಾಗಿದೆ. ಹಾಲು ಹಿಂಡಲು ಸಹಕಾರ ಸಂಘಗಳಿಗೆ ಒಕ್ಕೂಟವು ರೂ. ೧.೪೫ ಲಕ್ಷ ಬೆಲೆ ಬಾಳುವ ಹಾಲು ಹಿಂಡುವ ಯಂತ್ರಗಳನ್ನು ನೀಡಿದೆ. ಪ್ರತಿ ಕೆ.ಜಿ. ಹಾಲಿನ ದರವನ್ನು ಜಿಡ್ಡು ಮತ್ತು ಎಸ್.ಎನ್.ಎಫ್ ಹಾಲಿನ ಗುಣಮಟ್ಟದ ಮೇಲೆ ಮಾಡಲಾಗುತ್ತದೆ. ಮೂಲದರವನ್ನು ಶೇ.೩೫ ಜಿಡ್ಡು ಮತ್ತು ಶೇ.೮.೫೦ ಎಸ್.ಎನ್.ಎಫ್. ಮೇಲೆ ನಿಗದಿಪಡಿಸಲಾಗುತ್ತದೆ. ಅಕ್ಟೋಬರ್ ೨೦೧೨ ರಂತೆ ಹಾಲು ಉತ್ಪಾದಕರ ಸಂಘಗಳು ಒಕ್ಕೂಟಕ್ಕೆ ಸರಬರಾಜು ಮಾಡುವ ಪ್ರತಿ ಕೆ.ಜಿ. ಹಾಲಿಗೆ ರೂ. ೧೮.೫೧ ಹಾಗೂ ಸಂಘಗಳಿಂದ ಉತ್ಪಾದಕರುಗಳಿಗೆ ರೂ. ೧೮ ರಂತೆ ನೀಡಲಾಗಿದೆ.

ತುಮಕೂರು ಹಾಲು ಒಕ್ಕೂಟವು ಕಳೆದ ಹತ್ತು ವರ್ಷಗಳಿಂದ ಸತತವಾಗಿ ಲಾಭಗಳಿಸುತ್ತಾ ಬಂದಿದ್ದು, ೨೦೧೧–೧೨ರಲ್ಲಿ ಒಕ್ಕೂಟದ ತಾತ್ಕಾಲಿಕ ಆರ್ಥಿಕ ತ:ಖ್ತೆಗಳ ಪ್ರಕಾರ ರೂ. ೩೬೮.೬೧ ಕೋಟಿ ವಹಿವಾಟು ನಡೆಸಿ ರೂ. ೯೫.೯೫ ಲಕ್ಷ ನಿವ್ವಳ ಲಾಭಗಳಿಸಿರುತ್ತದೆ. ೨೦೧೩–೧೪ ನೇ ಸಾಲಿನಲ್ಲಿ ರೂ. ೪.೦೯ ಕೋಟಿ ನಿವ್ವಳ ಲಾಭಗಳಿಸಿರುತ್ತದೆ.

**೪. ಸಿದ್ಧಗಂಗಾ ಆಯಿಲ್ ಎಕ್ಸ್‌ಟ್ರಾಕ್ಷನ್ಸ್ ಪ್ರೈ.ಲಿ., ತುಮಕೂರು**

ಸಿದ್ಧಗಂಗಾ ಆಯಿಲ್ ಎಕ್ಸ್‌ಟ್ರಾಕ್ಷನ್ಸ್ ಪ್ರೈ.ಲಿ., ದಿ: ೩೦–೦೯–೧೯೭೨ರಂದು ತುಮಕೂರಿನಲ್ಲಿ ಸ್ಥಾಪನೆಗೊಂಡು ೦೨–೦೯–೧೯೭೪ರಲ್ಲಿ ಉತ್ಪಾದನಾ ಕಾರ್ಯವನ್ನಾರಂಭಿಸಿತು. ಎನ್.ಆರ್.ಜಗದೀಶ್ ಮತ್ತು ಯರಪ್ಪ ತಾಂಡಲೆ ಇವರು ಇದರ ಸ್ಥಾಪಕರು. ಇದು ಅಕ್ಕಿ ತೌಡಿನಿಂದ ವೈವಿಧ್ಯ ವಿಧಾನಗಳ ಮೂಲಕ ಎಣ್ಣೆ ಎಕ್ಸ್‌ಟ್ರಾಕ್ಷನ್ ಮಾಡುತ್ತಿರುವುದಕ್ಕಾಗಿ ದ ಸಾಲ್ವೆಂಟ್ ಎಕ್ಸ್‌ಟ್ರಾಕ್ಟರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಇವರಿಂದ ೨೦೦೦–೨೦೦೧ ರಿಂದ ೨೦೦೭–೦೮ ರವರೆಗೂ ರಾಷ್ಟ್ರೀಯ ಬಹುಮಾನವನ್ನು ಪಡೆದಿದೆ. ಇದಕ್ಕೆ ಬೇಕಾಗುವ ಕಚ್ಚಾ ಸರಕಾದ ಅಕ್ಕಿ ತೌಡನ್ನು ಅಕ್ಕಿಗಿರಣಿಗಳಿಂದ ಕೊಳ್ಳಲಾಗುತ್ತದೆ. ಇಲ್ಲಿ ಉತ್ಪಾದಿಸಲ್ಪಡುವ ಎಣ್ಣೆಯನ್ನು ನೇರವಾಗಿ ಮಾರಾಟ ಮಾಡಲಾಗುತ್ತದೆ. ೨೦೧೪–೧೫ರಲ್ಲಿದ್ದಂತೆ ಇದರಲ್ಲಿ ತೊಡಗಿಸಲ್ಪಟ್ಟಿದ್ದ ಬಂಡವಾಳ ರೂ. ೫೩.೨೭ ಕೋಟಿ ಇದ್ದು, ೯೨ ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿತ್ತು. ಈ ಕಾರ್ಖಾನೆಯು ದಿನಕ್ಕೆ ೩೫೦ ಮೆ.ಟನ್ ಅಕ್ಕಿ ತೌಡನ್ನು ಬಳಕೆ ಮಾಡುವಷ್ಟು ಉತ್ಪಾದನಾ ಸಾಮರ್ಥ್ಯ ಹೊಂದಿದೆ.

೨೦೧೪-೧೫ ರಲ್ಲಿ ೬೧,೫೫೦ ಮೆ.ಟನ್. ಅಕ್ಕಿ ತೌಡಿನ ಎಣ್ಣೆಯನ್ನು ಉತ್ಪಾದಿಸಿ, ಪ್ರತಿ ಮೆ. ಟನ್‌ಗೆ ರೂ. ೪೯,೦೦೦ರ ದರದಲ್ಲೂ, ೫೦,೮೭೯ ಮೆ.ಟನ್ ಅಕ್ಕಿ ತೌಡಿನ ಹಿಂಡಿಯನ್ನು ಉತ್ಪಾದಿಸಿ ಪ್ರತಿ ಮೆ.ಟನ್‌ಗೆ ರೂ. ೧೦,೫೦೦ ದರದಲ್ಲೂ ಮಾರಾಟ ಮಾಡಿದ್ದು, ಕಂಪನಿಯು ಲಾಭದಲ್ಲಿದೆ.

### ೫. ಇಂಡೋ ಸ್ವಿಸ್ ಆಂಟಿ ಶಾಕ್ ಲಿಮಿಟೆಡ್, ತುಮಕೂರು.

ಇಂಡೋ ಸ್ವಿಸ್ ಆಂಟಿ ಶಾಕ್ ಲಿಮಿಟೆಡ್, ತುಮಕೂರು, ಇದು ಸ್ವಯಂ ಚಾಲಿತ ವಾಹನಗಳ ಮತ್ತು ಗಡಿಯಾರಗಳ ನಿಖರವಾದ ಬಿಡಿಭಾಗಗಳನ್ನು ಉತ್ಪಾದಿಸುವ ಉದ್ದೇಶದಿಂದ ೧೯೮೫ರಲ್ಲಿ ಕಾರ್ಯಾರಂಭಗೊಂಡಿತು. ಇದು ಜಂಟಿ ವ್ಯವಸ್ಥಾಪಕತ್ವವನ್ನು ಹೊಂದಿದ್ದು, ಹೆಚ್.ಕೆ.ಪಾಟೀಲ್ ಮತ್ತು ಸಿ.ಕೆ. ಪಾಟೀಲ್ ಇದರ ಪೂರ್ಣಾವಧಿಯ ನಿರ್ದೇಶಕರಾಗಿದ್ದಾರೆ. ಸ್ವಿಡ್ಜರ್‌ಲ್ಯಾಂಡಿನ ಮೆ.ಗಸ್ಸರ್ ರವುಸ್ಸಿನ್‌ನ ಸಹಭಾಗಿತ್ವವನ್ನು ಪಡೆದುಕೊಂಡಿದೆ. ಕಂಪನಿಯು ನಿಖರವಾದ ಸಿ.ಎನ್.ಸಿ ಲೇತ್ಸ್, ಸ್ಲೈಡಿಂಗ್ ಹೆಡ್‌ಸ್ಟಾಕ್ ಆಟೋಮ್ಯಾಟ್ಸ್, ಆಧುನಿಕ ಟೂಲ್ ರೂಂ, ನಿಖರವಾದ ಅಳತೆ ಹಾಗೂ ಗುಣ ಭರವಸೆಯ ಸಾಧನಗಳನ್ನು ಹೊಂದಿದೆ. ಈ ಕಂಪನಿಯು ವಿದ್ಯುಚ್ಛಕ್ತಿ ಮಂಡಳಿಯಿಂದ ೨೫೦ ಕೆ.ವಿ.ಎ. ವಿದ್ಯುತ್ ಪಡೆದುಕೊಳ್ಳುತ್ತಿರುವುದರ ಜೊತೆಗೆ ತನ್ನದೇ ಆದ ೧೦೦ ಕೆ.ವಿ.ಎ ಎರಡು ಕ್ಯಾಪ್ಟೀವ್ ಜನರೇಟರ್‌ಗಳನ್ನು ಹೊಂದಿದೆ. ಇದು ನೇರವಾಗಿ ಗಿರಾಕಿಗಳಿಗೆ ಮಾರಾಟ ಮಾಡಲಾಗುತ್ತದೆ. ೩೧-೦೩-೨೦೧೯ರಲ್ಲಿ ಇದರ ಒಟ್ಟು ಬಂಡವಾಳ ರೂ. ೧೯.೨೩ ಕೋಟಿ ಇದ್ದು, ೧೫೦ ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿತ್ತು. ಇದರ ಉತ್ಪಾದನಾ ಸಾಮರ್ಥ್ಯ ತಿಂಗಳಿಗೆ ೧.೭ ದಶಲಕ್ಷ ಬಿಡಿಭಾಗಗಳಾಗಿದ್ದು, ಇದೇ ಸಾಲಿನಲ್ಲಿ ರೂ. ೯.೭೬ ಕೋಟಿ ಮೌಲ್ಯದ ೧,೮೮,೨೮,೧೦೪ ಬಿಡಿಭಾಗಗಳನ್ನು ಉತ್ಪಾದಿಸಿ ಮಾರಾಟ ಮಾಡಿರುವುದು. ಈ ಕಂಪನಿಯು ISO/TS ೧೬೯೪೯.೨೦೦೨ ಸರ್ಟಿಫೈಡ್ ಕಂಪನಿಯಾಗಿದೆ. ಪ್ರಿಸಿಷನ್ ಟರ್ನಡ್ ಬಿಡಿಭಾಗಗಳು, ಮೋಟಾರು ವಾಹನಗಳಿಗೆ ಸಂಬಂಧಿಸಿದ ಸೀಟ್ ಮೆಟಲ್ ಬಿಡಿಭಾಗಗಳು ಎಲೆಕ್ಟ್ರಿಕಲ್ಸ್ ಅಂಡ್ ಎಲೆಕ್ಟ್ರಾನಿಕ್ಸ್ ಕೈಗಾರಿಕೆಗಳಿಗೆ ಬೇಕಾಗುವ ಬಿಡಿಭಾಗಗಳು, ಪ್ರೆಸ್‌ಟೂಲ್ಸ್ ಜಿಗ್ಸ್ ಅಂಡ್ ಫಿಕ್ಸರ್ಸ್ ಮೊದಲಾದ ಬಿಡಿಭಾಗಗಳನ್ನು ಉತ್ಪಾದಿಸಿ ಮೈಕೋ ಬೆಂಗಳೂರು ಆಡುಗೋಡಿ ಹಾಗೂ ನಾಗನಾಥಪುರ ಯೂನಿಟ್‌ಗಳಿಗೆ ಮೈಕೋ ಜೈಪುರ, ರಾಜಸ್ಥಾನ ರೋಬಟ್ ಬೋಸ್ಚ್ ಇಂಡಿಯಾ (ಲಿ) ಘಟಕಗಳಿಗೆ ಸಿದ್ಧ ವಸ್ತುಗಳನ್ನು ಪೂರೈಸಲಾಗುತ್ತಿದೆ.

### ೬. ಬೇಲೂರ್ ಬೆಯಿರ್ ಬಯೋಟೆಕ್ ಲಿಮಿಟೆಡ್, ತುಮಕೂರು.

ಮೆ. ಬೇಲೂರ್ ಬೆಯಿರ್ ಬಯೋಟೆಕ್ ಲಿಮಿಟೆಡ್, ತುಮಕೂರಿನ ಸತ್ಯಮಂಗಲ ಕೈಗಾರಿಕಾ ಪ್ರದೇಶದಲ್ಲಿ ಹರ್ಬಲ್ ಎಕ್ಸ್‌ಟ್ರಾಕ್ಟ್ಸ್, ಸಿಂಥಟಿಕ್ ಡ್ರಗ್ಸ್ ಮೊದಲಾದ ಔಷಧಿಗಳನ್ನು ತಯಾರಿಸಿ ನಿರ್ಯಾತ ಮಾಡುವ ಉದ್ದೇಶದಿಂದ ೨೦೦೫ರಲ್ಲಿ ಪ್ರಾರಂಭಗೊಂಡಿದೆ. ಇದರ ಉತ್ಪಾದನೆಗೆ ಅವಶ್ಯಕವಾಗಿ ಬೇಕಾಗುವ ಕಚ್ಚಾ ಸರಕುಗಳಾದ ಕೋಲಿಯೊಸ್ (Coleous) ಮತ್ತು ಸಾಲ್ವೆಂಟ್ಸ್‌ಗಳನ್ನು ಸ್ಥಳೀಯ ಮಾರುಕಟ್ಟೆಯಿಂದ ಪಡೆದುಕೊಳ್ಳುತ್ತದೆ. ೩೧-೦೩-೨೦೧೯ರಲ್ಲಿದ್ದ ಇದರ ಒಟ್ಟು ಬಂಡವಾಳ ರೂ. ೧೨ ಕೋಟಿ ಆಗಿದ್ದು, ಇದರಲ್ಲಿ ೧೦೦ ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದರು. ಇದರ ವಾರ್ಷಿಕ ಉತ್ಪಾದನೆಯ ಸಾಮರ್ಥ್ಯ ೧೫೦-೧೬೦ ಮೆ.ಟನ್.ಆಗಿತ್ತು. ೨೦೦೮-೦೯ನೇ ಸಾಲಿನಲ್ಲಿ ಇದರ ಉತ್ಪಾದನೆ ೭೦-೮೦ ಮೆ.ಟನ್‌ಗಳಷ್ಟಿದ್ದು, ರೂ. ೯,೨೦,೪೭,೫೦೧ ಆದಾಯ ರೂಪದಲ್ಲಿ ಬಂದ ಹಣವನ್ನು ಬಂಡವಾಳವಾಗಿ ತೊಡಗಿಸಲಾಗಿದೆ.

### ೭. ಮನ್ ಮತ್ತು ಹ್ಯುಮೆಲ್ ಫಿಲ್ಟರ್ ಪ್ರೈ ಲಿಮಿಟೆಡ್, ತುಮಕೂರು

ತುಮಕೂರಿನ ಮನ್ ಮತ್ತು ಹ್ಯುಮೆಲ್ ಫಿಲ್ಟರ್ ಪ್ರೈ.ಲಿ., ಕಂಪನಿಯು ಬೆಂಗಳೂರಿನಲ್ಲಿ ನೋಂದಣಿಗೊಂಡಿರುವ ಮನ್ ಮತ್ತು ಹ್ಯುಮೆಲ್ ಕಂಪನಿಯ ಅಧೀನ ಕಂಪನಿಯಾಗಿದ್ದು, ಸಂಶೋಧನೆ ಹಾಗೂ ಮಾರಾಟ ಕಾರ್ಯ ನಿರ್ವಹಿಸುತ್ತಿದೆ. ಈ ಕಂಪನಿಯ ಸಹಾಯಕ ಕಛೇರಿಗಳು ದೆಹಲಿ ಮತ್ತು ಪುಣೆಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಬೆಂಗಳೂರು ಮತ್ತು ತುಮಕೂರು ಘಟಕಗಳೆರಡೂ ಸೇರಿದಂತೆ ಇವುಗಳಲ್ಲಿ ತೊಡಗಿಸಲಾಗಿರುವ ಬಂಡವಾಳ ರೂ. ೫೮ ಕೋಟಿ ಇದ್ದು, ೧೩೮ ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿದ್ದವು.

ಇವು ಕೈಗಾರಿಕಾ ಮತ್ತು ಆಟೋಮೋಟೀವ್‌ಗೆ ಬೇಕಾಗುವ ಮನ್ ಫಿಲ್ಟರ್‌ಗಳನ್ನು ಮತ್ತು ಎಂಜಿನಿಯರಿಂಗ್ ಕೈಗಾರಿಕೆಗೆ ಬೇಕಾಗುವ ಹೈಡ್ರೋ ಮೆಷಿನ್ ಸೆಂಟ್ರಲ್ ಕೂಲೆಸ್ಟ್ ಸಿಸ್ಟಮ್‌ನ್ನು ಹಾಗೂ ಪ್ಲಾಸ್ಟಿಕ್ ಕೈಗಾರಿಕೆಗೆ ಬೇಕಾಗುವ

ಪ್ರೊಟೆಕ್ ಮೆಟಿರಿಯಲ್ ಹ್ಯಾಂಡ್ಲಿಂಗ್ ಸಿಸ್ಟಂಗಳನ್ನು ಉತ್ಪಾದಿಸಿ ಮಾರಾಟ ಮಾಡುವ ಕಾರ್ಯದಲ್ಲಿ ತೊಡಗಿವೆ. ೨೦೦೭-೦೮ನೇ ಸಾಲಿನಲ್ಲಿ ತುಮಕೂರು ಕಂಪನಿಯ ವಹಿವಾಟು ರೂ. ೪೬.೪೯ ಕೋಟಿ. ಈ ಕಂಪನಿಯು ಬೋಸ್ಚ್ ಕಂಪನಿಯೊಂದಿಗೆ ೫೦:೫೦ ಅನುಪಾತದ ಸಹಭಾಗಿತ್ವವನ್ನು ಹೊಂದಿದ್ದು ಎಂ.ಎಚ್.ಬಿ. ಫಿಲ್ಟರ್ ಇಂಡಿಯ ಪ್ರೈ.ಲಿ., ಎಂಬ ಹೆಸರಿನಲ್ಲಿ ತುಮಕೂರಿನಲ್ಲಿ ಕಾರ್ಯಾರಂಭಗೊಂಡಿದ್ದು, ಆಟೋ ಮೋಟಿವ್ ಫಿಲ್ಟರ್‌ಗಳನ್ನು ತಯಾರಿಸಿ ಮನ್ ಮತ್ತು ಹ್ಯುಮೆಲ್ ಮತ್ತು ಬೋಸ್ಚ್‌ಗೆ ಪೂರೈಕೆ ಮಾಡುತ್ತಿದೆ.

ಮನ್ ಮತ್ತು ಹ್ಯುಮೆಲ್, ಎಂ.ಎಚ್.ಬಿ. ಒಂದು ಉತ್ಪಾದನಾ ಒಕ್ಕೂಟವಾಗಿದ್ದು, ಅಂತಾರಾಷ್ಟ್ರೀಯ ಸ್ವಯಂಚಾಲಿತ ಮತ್ತು ತಾಂತ್ರಿಕ ಎಂಜಿನಿಯರಿಂಗ್ ಕೈಗಾರಿಕೆಗಳಿಗೆ ಬೇಕಾಗುವ ಮೂಲ ಸಾಧನೆಗಳನ್ನು ಪೂರೈಕೆ ಮಾಡುತ್ತಿದೆ. ಇದು ವಿಶ್ವಾದ್ಯಂತ ೪೧ ಸ್ಥಳಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ೧೨,೪೦೦ ಮಂದಿಗೆ ಉದ್ಯೋಗವನ್ನೊದಗಿಸಿದೆ. ೨೦೦೮ರಲ್ಲಿ ಈ ಕಂಪನಿಯ ವಹಿವಾಟು ೧.೮೩ ಬಿಲಿಯನ್ ಯುರೋಸ್. ಇದು ಸ್ವಯಂಚಾಲಿತ ಕೈಗಾರಿಕೆ ಹಾಗೂ ವಾಹನಗಳ ರಿಪೇರಿ ಸಮಯದಲ್ಲಿ ಬೇಕಾಗುವ ಫಿಲ್ಟರ್ ಸಿಸ್ಟಂಗಳು, ಇನ್‌ಟೆಕ್ ಮ್ಯಾನಿಫೋಲ್ಡ್ ಸಿಸ್ಟಂಗಳು, ಲಿಕ್ವಿಡ್ ಫಿಲ್ಟರ್ ಸಿಸ್ಟಂಗಳು, ಕ್ಯಾಬಿನ್ ಫಿಲ್ಟರ್‌ಗಳು ಮತ್ತು ಸಿಲಿಂಡರ್ ಹೆಡ್‌ಕವರ್‌ಗಳನ್ನು ಉತ್ಪಾದಿಸುತ್ತಿದೆ. ಸಾಮಾನ್ಯ ಎಂಜಿನಿಯರಿಂಗ್ ಹಾಗೂ ಕೈಗಾರಿಕಾ ಉತ್ಪಾದನಾ ಘಟಕಗಳಿಗೆ ಬೇಕಾಗುವ ಕೈಗಾರಿಕಾ ಫಿಲ್ಟರ್‌ಗಳು, ಡೀಸೆಲ್ ಇಂಜಿನ್‌ಗಳು ಹೊರಹಾಕುವ ಇಂಗಾಲಾಮ್ಲವನ್ನು ಕಡಿತಗೊಳ್ಳುವಂತೆ ಮಾಡುವುದು. ಫಿಲ್ಟರ್ ಸಿಸ್ಟಮ್‌ಗಳು ಹಾಗೂ ಸರಾಗವಾಗಿ ಹರಿದು ಹೋಗುವ ಪ್ಲಾಸ್ಟಿಕ್‌ನ್ನು ತಡೆಹಿಡಿಯುವ ಉಪಕರಣಗಳನ್ನು ಸಹ ಇಲ್ಲಿ ಉತ್ಪಾದಿಸಲಾಗುತ್ತದೆ.

**೮. ಸೀತಾ ಗ್ರಾನೈಟ್ಸ್ ಇಂಡಸ್ಟ್ರೀಸ್ ಲಿ., ತುಮಕೂರು.**

ಸೀತಾ ಗ್ರಾನೈಟ್ಸ್ ಇಂಡಸ್ಟ್ರೀಸ್ ಲಿಮಿಟೆಡ್, ದಿ ೦೬-೦೪-೧೯೯೬ರಲ್ಲಿ ತುಮಕೂರಿನ ಸತ್ಯಮಂಗಲ ಕೈಗಾರಿಕಾ ಪ್ರದೇಶದಲ್ಲಿ ಪ್ರಾರಂಭಗೊಂಡು ಒರಟು ಗ್ರಾನೈಟ್ ಬ್ಲಾಕ್‌ಗಳ ಕಟಿಂಗ್ ಮತ್ತು ಪಾಲಿಷಿಂಗ್ ಹಾಗೂ ಟೈಲ್ಸ್ ಮತ್ತು ಮಾನೋಮೆಂಟ್ಸ್‌ಗಳ ಉತ್ಪಾದನಾ ಕಾರ್ಯದಲ್ಲಿ ತೊಡಗಿದೆ. ೨೦೦೯ರ ಮಾರ್ಚ್ ಅಂತ್ಯದ ವೇಳೆಗೆ ಇದರಲ್ಲಿ ತೊಡಗಿಸಲ್ಪಟ್ಟಿದ್ದ ಒಟ್ಟು ಬಂಡವಾಳ ರೂ. ೧೫ ಕೋಟಿ. ಇದು ೬೧ ಕಾರ್ಮಿಕರಿಗೆ ಉದ್ಯೋಗವನ್ನು ನೀಡಿತ್ತು. ಇದರ ವಾರ್ಷಿಕ ಉತ್ಪಾದನಾ ಸಾಮರ್ಥ್ಯ ೧,೨೩,೫೦೦ ಎಸ್.ಕ್ಯೂ.ಎಂ.ಟಿ. ಇದು ೨೦೦೮-೦೯ನೇ ಸಾಲಿನಲ್ಲಿ ಉತ್ಪಾದಿಸಿದ ಒಟ್ಟು ಸರಕು ೩೧,೭೫೮.೭೭ ಎಸ್.ಕ್ಯೂ.ಎಂ.ಟಿ ಯಾಗಿದ್ದು, ೨೯,೮೯೮ ಎಸ್.ಕ್ಯೂ.ಎಂ.ಟಿ.ಯಷ್ಟು ಸರಕನ್ನು ರೂ. ೬.೩೮ ಕೋಟಿಗೆ ಮಾರಾಟ ಮಾಡಿದೆ. ಈಗ ಇದು ಸ್ಥಗಿತಗೊಂಡಿದೆ.

**೯. ವಿಸಾಕ ಇಂಡಸ್ಟ್ರೀಸ್ ಲಿಮಿಟೆಡ್, ತುಮಕೂರು**

ವಿಸಾಕ ಇಂಡಸ್ಟ್ರೀಸ್ ಲಿಮಿಟೆಡ್ ೨೦೦೫ರಲ್ಲಿ ತುಮಕೂರು ತಾಲೂಕಿನ ಕೋರಾ ಹೋಬಳಿಯ ನಾಗೇನಹಳ್ಳಿಯಲ್ಲಿ ಪ್ರಾರಂಭಗೊಂಡು ಚಾವಣಿಯ ಮೇಲು ಹೊದಿಕೆಯಾಗಿ ಉಪಯೋಗಿಸುವ ಆಶ್‌ಬೆಸ್ಟೋಸ್ ಸಿಮೆಂಟ್ ರೂಫಿಂಗ್ ಷೀಟುಗಳ ಉತ್ಪಾದನಾ ಕಾರ್ಯದಲ್ಲಿ ತೊಡಗಿದೆ. ಇದಕ್ಕೆ ಅವಶ್ಯಕವಾಗಿ ಬೇಕಾಗುವ ಸಿಮೆಂಟನ್ನು ಸಿಮೆಂಟ್ ಕಾರ್ಖಾನೆಗಳಿಂದ, ಫ್ಲೈ ಆಶ್ ಅನ್ನು ಥರ್ಮಲ್ ಪವರ್ ಪ್ಲಾಂಟ್‌ನಿಂದ, ಫೈಬರನ್ನು ರಷ್ಯದಿಂದ, ಬಟ್ಟೆ ಚೂರಿನ ಪಲ್ಪನ್ನು ಸ್ಥಳೀಯ ಮಾರುಕಟ್ಟೆಯಿಂದ ಕೊಂಡು ಕೊಳ್ಳಲಾಗುತ್ತದೆ. ೨೦೦೯ರ ಮಾರ್ಚ್ ಅಂತ್ಯದ ವೇಳೆಗೆ ಇದರಲ್ಲಿ ತೊಡಗಿಸಲಾಗಿದ್ದ ಬಂಡವಾಳ ರೂ. ೨೪.೯೨ ಕೋಟಿ. ಇದೇ ಕಾಲಾವಧಿಯಲ್ಲಿ ೯೯ ಖಾಯಂ ಕೆಲಸಗಾರರು ಮತ್ತು ೧೦೦ ಗುತ್ತಿಗೆ ಆಧಾರದ ಕೆಲಸಗಾರರು ಸೇರಿ ಒಟ್ಟು ೧೯೯ ಕೆಲಸಗಾರರು ಈ ಕಾರ್ಖಾನೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಈ ಕಾರ್ಖಾನೆಯ ವಾರ್ಷಿಕ ಉತ್ಪಾದನೆಯ ಸಾಮರ್ಥ್ಯ ೧,೨೦,೦೦೦ ಮೆಟ್ರಿಕ್ ಟನ್. ಇದು ೨೦೦೮-೦೯ನೇ ಸಾಲಿನಲ್ಲಿ ರೂ. ೭೭.೩೯ ಕೋಟಿ ಮೌಲ್ಯದ ೯೦,೦೫೩ ಮೆ.ಟನ್ ಸರಕನ್ನು ಉತ್ಪಾದಿಸಿ ೮೭,೧೯೭ ಮೆ.ಟನ್ ಸರಕನ್ನು ರೂ. ೬೭.೮೩ ಕೋಟಿಗೆ ಮಾರಾಟ ಮಾಡಿತ್ತು.

**೧೦. ಕೆರ್ನ್ ಲೈಬರ್ಸ್ ಸ್ಪ್ರಿಂಗ್ಸ್ ಅಂಡ್ ಸ್ಟಾಂಪಿಂಗ್ಸ್ ಪ್ರೈ.ಇಂಡಿಯಾ ಲಿಮಿಟೆಡ್, ತುಮಕೂರು**

ಕೆರ್ನ್ ಲೈಬರ್ಸ್ ಸ್ಪ್ರಿಂಗ್ಸ್ ಅಂಡ್ ಸ್ಟಾಂಪಿಂಗ್ಸ್ ಪ್ರೈ.ಇಂಡಿಯಾ ಲಿಮಿಟೆಡ್, ತುಮಕೂರಿನ ಅಂತರಸನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ೧೯೯೬ರಲ್ಲಿ ಪ್ರಾರಂಭಗೊಂಡು, ಕೈಗಾರಿಕೆಗಳು ಹಾಗೂ ಎಂಜಿನಿಯರಿಂಗ್ ಉದ್ಯಮಗಳಿಗೆ

ಬೇಕಾಗುವ ಸ್ಪ್ರಿಂಗ್‌ಗಳ ಉತ್ಪಾದನಾ ಕಾರ್ಯದಲ್ಲಿ ತೊಡಗಿದೆ. ೨೦೦೯ರ ಮಾರ್ಚ್ ಅಂತ್ಯದ ವೇಳೆಗೆ ಇದರಲ್ಲಿ ತೊಡಗಿಸಲಾಗಿದ್ದ ಒಟ್ಟು ಬಂಡವಾಳ ರೂ. ೨೬.೫೦ ಕೋಟಿಯಾಗಿದ್ದು, ೨೬ ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿತ್ತು. ಇದರ ವಾರ್ಷಿಕ ಉತ್ಪಾದನಾ ಸಾಮರ್ಥ್ಯ ರೂ. ೧.೧೪ ಕೋಟಿ ಸ್ಪ್ರಿಂಗ್‌ಗಳು. ಇದು ೨೦೦೮-೦೯ನೇ ಸಾಲಿನಲ್ಲಿ ರೂ.೧೧.೯೪ ಕೋಟಿ ಮೌಲ್ಯದ ೭೬,೩೯,೧೯೯ ಸ್ಪ್ರಿಂಗ್‌ಗಳನ್ನು ಉತ್ಪಾದಿಸಿದ್ದು, ೭೭,೨೮,೯೪೨ ಸ್ಪ್ರಿಂಗ್‌ಗಳನ್ನು ರೂ. ೧೧.೦೭ ಕೋಟಿಗಳಿಗೆ ಮಾರಾಟ ಮಾಡಿರುತ್ತದೆ.

### ೧೧. ಮೆ॥ ರಿಟ್ ಜೆಲ್ ಇಂಡಿಯಾ ಪ್ರೈ. ಲಿ., ಕುಣಿಗಲ್

ಮೆ॥ ರಿಟ್ ಜೆಲ್ ಇಂಡಿಯಾ ಪ್ರೈ. ಲಿ., ಕುಣಿಗಲ್ ತಾಲೂಕಿನ ಅಂಚೆಪಾಳ್ಯ ಕೈಗಾರಿಕಾ ಪ್ರದೇಶದಲ್ಲಿ ೨೦೦೩ರಲ್ಲಿ ಪ್ರಾರಂಭಗೊಂಡಿದೆ. ಇದು ಉಪ್ಪಿನಕಾಯಿಗೆ ಬೇಕಾಗುವ ಮಿಡಿಸೌತೆ ಮತ್ತು ಇತರ ತರಕಾರಿಗಳ ಜೊತೆಗೆ ಅಸಿಟಿಕ್ ಆಸಿಡ್ ಮತ್ತು ವೆನಿಗರನ್ನು ಬ್ಯಾರಲ್ ಅಥವಾ ಕ್ಯಾನ್‌ಗಳಲ್ಲಿ ತುಂಬಿ ನಿರ್ಯಾತ ಮಾಡುವ ಕಾರ್ಯದಲ್ಲಿ ತೊಡಗಿದೆ. ಇದಕ್ಕೆ ಬೇಕಾಗುವ ಮಿಡಿಸೌತೆಯನ್ನು ಗುತ್ತಿಗೆದಾರರು ರೈತರಿಂದ ಕೊಂಡು ಪೂರೈಕೆ ಮಾಡುತ್ತಾರೆ. ೨೦೦೯ರ ಮಾರ್ಚ್ ಅಂತ್ಯದ ವೇಳೆಗೆ ಇದರಲ್ಲಿ ತೊಡಗಿಸಲಾಗಿದ್ದ ಒಟ್ಟು ಬಂಡವಾಳ ರೂ. ೨೩.೩೭ ಕೋಟಿ. ಇದು ಇಬ್ಬರು ಮಹಿಳಾ ಕಾರ್ಮಿಕರೂ ಸೇರಿದಂತೆ ಒಟ್ಟು ೮೪ ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿತ್ತು. ಇದು ೨೦೦೮-೦೯ನೇ ಸಾಲಿನಲ್ಲಿ ಸುಮಾರು ರೂ. ೫೨.೫೫ ಕೋಟಿ ಮೌಲ್ಯದ ಸರಕನ್ನು ವಿದೇಶಗಳಿಗೆ ನಿರ್ಯಾತ ಮಾಡಿರುತ್ತದೆ. ಹೆಚ್ಚಿನ ವಿವರಗಳಿಗೆ ಕೋಷ್ಟಕ ೫.೭ ಅನ್ನು ನೋಡಿ.

**ಕೋಷ್ಟಕ ೫.೭ ಜಿಲ್ಲೆಯಲ್ಲಿ ೨೦೧೫ರ ಮಾರ್ಚ್ ಅಂತ್ಯದಲ್ಲಿದ್ದಂತೆ ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳ ವಿವರ.**

| ಕ್ರ. ಸಂ | ಕೈಗಾರಿಕಾ ಘಟಕದ ಹೆಸರು ಮತ್ತು ವಿಳಾಸ | ಉತ್ಪಾದನೆ ಪ್ರಾರಂಭಗೊಂಡ ವರ್ಷ | ಉತ್ಪನ್ನ | ಬಂಡವಾಳ ಹೂಡಿಕೆ ಕೋಟಿ ರೂ. ಗಳಲ್ಲಿ | ಕಾರ್ಮಿಕರ ಸಂಖ್ಯೆ |
|---|---|---|---|---|---|
| ೧ | ಮೆ. ಹೆಡೆಲ್ ಬರ್ಗ್ ಸಿಮೆಂಟ್ ಇಂಡಿಯಾ ಲಿ., (ಹಿಂದಿನ ಮೈಸೂರು ಸಿಮೆಂಟ್ಸ್ ಲಿ.,) ಅಮ್ಮಸಂದ್ರ, ತುರುವೇಕೆರೆ ತಾಲೂಕು. | ೧೩-೦೫-೨೦೦೮ (೧೩-೦೫-೯೫೮) | ಸಿಮೆಂಟ್ | ೧೭೦.೧೮ | ೬೭೭ |
| ೨ | ಮೆ. ಎಚ್.ಎಂ.ಟಿ. ವಾಚ್ ಫ್ಯಾಕ್ಟರಿ ಲಿ., ಬಿ.ಎಚ್.ರಸ್ತೆ, ತುಮಕೂರು. | ೧೯೭೯ | ಕೈ ಗಡಿಯಾರಗಳು | ೫೩.೬೪ | ೩೨೫ |
| ೩ | ಮೆ. ಮನ್ ಅಂಡ್ ಹ್ಯುಮೆಲ್ ಫಿಲ್ಟರ್ ಪ್ರೈ.ಲಿ., ನಂ. ೨೭, ೨೮, ೨೯., "ಎ" ಬ್ಲಾಕ್, ೨ನೇ ಹಂತ, ಅಂತರಸನಹಳ್ಳಿ ಕೈಗಾರಿಕಾ ಪ್ರದೇಶ, ತುಮಕೂರು. | ೨೦೦೬ | ಕೈಗಾರಿಕಾ ಶೋಧಕಗಳು | ೩೨.೮೧ | ೬೮ |
| ೪ | ಮೆ.ವಿಪ್ರೊ ಲಿ. ಪ್ಲಾಟ್ ನಂ.೪ ಅಂತರಸನಹಳ್ಳಿ ಕೈಗಾರಿಕಾ ಪ್ರದೇಶ, ತುಮಕೂರು. | ೧೯೮೭ | ಫ್ಯಾಟಿಏಡ್ (ಸಂತೂರು) | ೪೨.೯೦ | ೧೬೨ |
| ೫ | ಮೆ. ಪಿ.ಜೆ. ಮಾರ್ಗೋ ಪ್ರೈ.ಲಿ.,ಪ್ಲಾಟ್ ನಂ.೩ಎ, ಅಂತರಸನಹಳ್ಳಿ ಕೈಗಾರಿಕಾ ಪ್ರದೇಶ, ತುಮಕೂರು. | ೧೯೯೧ | ನೀಮ್ ಆಯಿಲ್ ಪ್ರೊಸೆಸ್ಸಿಂಗ್ | ೧೬.೪೨ | ೧೦೧ |
| ೬ | ಮೆ.ಬೆಲೂರು ಬೈಯರ್ ಬಯೋಟೆಕ್ ಲಿ., ನಂ.೪೦-೪೩, ಸತ್ಯಮಂಗಲ ಕೈಗಾರಿಕಾ ಪ್ರದೇಶ, ತುಮಕೂರು. | ನವೆಂಬರ್ ೨೦೦೪ | ೧.ಸಗಟು ಔಷಧಿಗಳು ೨.ಗಿಡಮೂಲಿಕೆಯ ಉತ್ಪನ್ನಗಳು ೩.ಫಾರ್ಮೂಲೇಶನ್ಸ್ ೪.ಸಿಂತೆಟಿಕ್ ಕೆಮಿಕಲ್ಸ್ | ೧೨.೩೬ | ೬೬ |

| **ಕೋಷ್ಟಕ ೫.೭** (ಮುಂದು.....) | | | | | |
|---|---|---|---|---|---|
| ೭ | ಮೆ.ಇಂಡೋ ಸ್ವಿಸ್ ಆಂಟಿ ಶಾಕ್ ಲಿ., ಸತ್ಯಮಂಗಲ ಕೈಗಾರಿಕಾ ಪ್ರದೇಶ, ತುಮಕೂರು. | ೧೯೮೫ | ಆಟೋಟರ್ನ್‌ಡ್ ಕಾಂಪೊನೆಂಟ್ಸ್ | ೨೮.೬೭ | ೨೧೩ |
| ೮ | ಮೆ.ಡಿಶಾ ಇಂಡಿಯಾ ಲಿ., ನಂ. ೨೮-೩೨, ಸತ್ಯಮಂಗಲ ಕೈಗಾರಿಕಾ ಪ್ರದೇಶ, ತುಮಕೂರು | ೧೯೮೬ | ಮೌಲ್ಡಿಂಗ್ ಮೆಷನರಿ | ೨೦.೦೦ | ೯೯ |
| ೯ | ಮೆ. ಸಿಐಪಿಎಸ್‌ಎ-ರಿಕ್ ಇಂಡಿಯಾ ಪ್ರೈ.,ಲಿ., ಪ್ಲಾಟ್ ನಂ.೭&೮, ಹಿರೇಹಳ್ಳಿ ಕೈಗಾರಿಕಾ ಪ್ರದೇಶ, ತುಮಕೂರು. | ೨೦೦೬ | ಮುದ್ರಿತ ಸರ್ಕ್ಯೂಟ್ ಬೋರ್ಡ್ | ೧೯.೩೫ | ೨೮೨ |
| ೧೦ | ಮೆ. ಕಿರ್ಲೋಸ್ಕರ್ ಎಲೆಕ್ಟ್ರಿಕಲ್ ಲಿ., ಹಿರೇಹಳ್ಳಿ ಕೈಗಾರಿಕಾ ಪ್ರದೇಶ, ತುಮಕೂರು | ೧೯೯೫ | ಎಲೆಕ್ಟ್ರಿಕಲ್ ಮೋಟಾರ್ಸ್ | ೮೭.೯೦ | ೧೪೬ |
| ೧೧ | ಮೆ. ವಿಶಾಕ್ ಇಂಡಸ್ಟ್ರೀಯಲ್ ಲಿ., ನಾಗೆನಹಳ್ಳಿ, ಕೆಂಪನದೊಡ್ಡೇರಿ ಪೋ. ತುಮಕೂರು ತಾಲೂಕು. | ೨೦೦೫ | ಎ.ಸಿ.ಸೀಟ್ಸ್ | ೧೭.೪೧ | ೯೩ |
| ೧೨ | ಮೆ.ಸನ್‌ವಿಕ್ ಸ್ಟೀಲ್ಸ್ ಪ್ರೈ.ಲಿ., ಜೋಡಿದೇವರಹಳ್ಳಿ, ಕಳ್ಳಂಬೆಳ್ಳ ಹೋಬಳಿ, ಶಿರಾ ತಾಲೂಕು, ತುಮಕೂರು | ೨೦೦೩ | ಸ್ಪಾಂಜ್ ಐರನ್ | ೪೦.೦೦ | ೮೫ |
| ೧೩ | ಮೆ.ಹೆಚ್.ಆರ್.ಜಾನ್‌ಸನ್ ಇಂಡಿಯಾ ಅಂಡ್ ಜಾನ್‌ಸನ್ ಪ್ರೈ. ಲಿ., ಪ್ಲಾಟ್ ನಂ.೧-೧೨ ಕೆಐಎಡಿಬಿ ಕೈಗಾರಿಕಾ ಪ್ರದೇಶ, ಕುಣಿಗಲ್-೫೭೨೧೨೬. ತುಮಕೂರು ಜಿಲ್ಲೆ. | ೧೯೮೪ | ಸೆರಾಮಿಕ್ ಗ್ಲಾಜ್ಡ್ ಟೈಲ್ಸ್ | ೭೪.೯೦ | ೩೮೨ |
| ೧೪ | ಮೆ.ವೆನೆರ್‌ಬರ್ಗ್‌ರ್ ಬ್ರಿಕ್ ಇಂಡಸ್ಟ್ರೀ ಪ್ರೈ., ಲಿ. ಪ್ಲಾಟ್ ನಂ.೧ & ೨ ಕೆಐಎಡಿಬಿ ಕೈಗಾರಿಕಾ ಪ್ರದೇಶ, ೨ನೇ ಹಂತ, ಕುಣಿಗಲ್ ತಾಲೂಕು | ೨೦೦೮ | ವೈರ್ ಕಟ್ ಬ್ರಿಕ್ಸ್ | ೧೮೩.೨೭ | ೧೯೬ |
| ೧೫ | ಮೆ.ರಿಟ್ ಜೆಲ್‌ಇಂಡಿಯಾ ಪ್ರೈ.ಲಿ., ಪ್ಲಾಟ್ ನಂ.೯೮-೯೯, ಕೆಐಎಡಿಬಿ ಕೈಗಾರಿಕಾ ಪ್ರದೇಶ, ಅಂಚೆಪಾಳ್ಯ ಹಳ್ಳಿ, ಕುಣಿಗಲ್ ತಾಲೂಕು. | ೨೦೦೫ | ಗರ್ಕಿನ್ (ಮಿಡಿಸೌತೆ) | ೨೬.೫೬ | ೪೩೫ |
| ೧೬ | ಮೆ. ವಿಜಯಸ್ಟೀಲ್ಸ್ ಪ್ರೈ. ಲಿ., ನಂ.೮೪/೧ ಕಲ್ಲನಾಯಕನಹಳ್ಳಿ, ಕುಣಿಗಲ್ | ೨೦೦೭ | ಎಂ.ಎಸ್.ಬಿಲೆಟ್ಸ್ | ೩೨.೦೮ | ೧೩೦ |
| ೧೭ | ಮೆ.ಜೆ.ಪಿ. ಡಿಸ್ಟಿಲರೀಸ್ ಪ್ರೈ., ಲಿ., ಅಂದಲಕುಪ್ಪೆ ಕಸಬಾ ಹೋಬಳಿ, ಕುಣಿಗಲ್ ತಾಲೂಕು. | ೨೦೦೨ | ರೆಕ್ಟಿಫೈಡ್ ಸ್ಪಿರಿಟ್ | ೧೭.೦೦ | ೬೭ |
| ೧೮ | ಮೆ.ಟಿಟಿಪಿ ಟೆಕ್ನಾಲಜಿಸ್., ಪ್ರೈ.,ಲಿ., ನಂ.೩೬, ಕೆಐಎಡಿಬಿ ಕೈಗಾರಿಕಾ ಪ್ರದೇಶ, ಹಿರೇಹಳ್ಳಿ, ತುಮಕೂರು-೫೭೨೧೬೮ | ೨೦೦೯ | ಹಾಟ್ ಡಿಪ್ ಗ್ಲಾವನಿಜಿಂಗ್ ಅಂಡ್ ಟ್ರಾನ್ಸ್‌ಫಾರಂ ರೇಡಿಯೇಟರ್ಸ್. | ೨೫.೯೨ | ೫೪೬ |
| ೧೯ | ಮೆ. ತ್ರಿವೇಣಿ ಎರೋನಾಟಿಕ್ಸ್ ಪ್ರೈ., ಲಿ., ನಂ.೧೨೦, ಅಂತರಸನಹಳ್ಳಿ, ೨ನೇ ಹಂತ, ಕೆಐಎಡಿಬಿ ಕೈಗಾರಿಕಾ ಪ್ರದೇಶ, ತುಮಕೂರು. | ೨೦೦೯ | ಕಮರ್ಶಿಯಲ್ ಏರ್ ಕ್ರಾಫ್ಟ್ ಪಾರ್ಟ್ಸ್ | ೧೦.೯೮ | ೮೦ |

**ಕೋಷ್ಟಕ ೫.೭** (ಮುಂದು.....)

| | | | | | |
|---|---|---|---|---|---|
| ೨೦ | ಮೆ. ಕಿಸಾನ್ ಮೌಲ್ಡಿಂಗ್ ಪ್ರೈ., ಲಿ., ಪ್ಲಾಟ್ ನಂ. ೧೭೨ಬಿ & ೧೭೩ಎ, ಜೋನ್–೩, ವಸಂತನರಸಪುರ ಕೈಗಾರಿಕಾ ಪ್ರದೇಶ, ಕೊರ ಪೋ, ತುಮಕೂರು | ೨೦೧೧ | ಮೆಟಲ್ ಕಾಸ್ಟಿಂಗ್ | ೩೪.೨೮ | ೨೬೭ |
| ೨೧ | ಮೆ.ಕೆರ್ನ್ ಲಿಬರ್ಸ್ ಸ್ಪ್ರಿಂಗ್ಸ್ ಅಂಡ್ ಸ್ಟಾಂಪಿಂಗ್ಸ್ ಪ್ರೈ., ಲಿ. ಪ್ಲಾಟ್ ನಂ.೧೪೩–೧೫೧, ೨ನೇ ಹಂತ, ಅಂತರಸನಹಳ್ಳಿ, ಕೈಗಾರಿಕಾ ಪ್ರದೇಶ, ತುಮಕೂರು. | ೧೯೯೬ | ಸ್ಪ್ರಿಂಗ್ಸ್ | ೨೫.೯೦ | ೮೫ |
| ೨೨ | ಮೆ. ಇನ್‌ಕ್ಯಾಪ್(ಖಟಟಿಛಿಚಿ) ಕನ್‌ಟ್ರಾಕ್ಟ್ ಮ್ಯಾನುಫ್ಯಾಕ್ಚರಿಂಗ್ ಸರ್ವಿಸ್ಸ್ ಪ್ರೈ., ಲಿ., ಹಿರೇಹಳ್ಳಿ ತುಮಕೂರು. | ೩೧–೦೫–೨೦೦೭ | ಇನ್‌ವರ್ಟರ್ ಯುಪಿಎಸ್, ಪಿಸಿಬಿ, ಅಸೆಂಬ್ಲಿ | ೨೨.೪೫ | ೧೮೪ |
| ೨೩ | ಮೆ. ಸೆಮಿ ಲಾಬ್ಸ್ ಲಿ., ಪ್ಲಾಟ್ ನಂ.೩೦–೩೫, ಕೆಐಎಡಿಬಿ ಕೈಗಾರಿಕಾ ಪ್ರದೇಶ, ಕುಣಿಗಲ್ ತುಮಕೂರು ಜಿಲ್ಲೆ. | ಜುಲೈ ೧೯೯೭ | ಹರ್ಬಲ್ ಎಕ್ಸ್‌ಟ್ರಾಕ್ಟ್ಸ್ | ೨೦.೮೩ | ೨೬೦ |
| ೨೪ | ಮೆ. ಇಂಡೊ ಸ್ಪಾನಿಷ್ ಟೇಸ್ಟಿ ಫುಡ್ಸ್ ಪ್ರೈ., ಲಿ., ಪ್ಲಾಟ್ ನಂ–೭೮ –೮೧ ಕೆಐಎಡಿಬಿ ಕೈಗಾರಿಕಾ ಪ್ರದೇಶ, ಕುಣಿಗಲ್. | ೨೦೦೫ | ಗರ್ಕಿನ್ ಮತ್ತು ಇತರ ತರಕಾರಿ ಉಪ್ಪಿನಕಾಯಿಗಳು | ೧೫.೬೩ | ೩೬೧ |
| ೨೫ | ಮೆ. ಸಿದ್ದಗಂಗಾ ಆಯಿಲ್ ಎಕ್ಸ್‌ಟ್ರಾಕ್ಷನ್ ಪ್ರೈ., ಲಿ., ಪಿಬಿ ನಂ.೧೩೩, ಎನ್‌ಎಚ್–೪, ಬಿ.ಎಚ್.ರಸ್ತೆ, ತುಮಕೂರು | ೧೯೭೨ | ಅಕ್ಕಿ ಹೊಟ್ಟು ತೈಲ | ೧೨.೮೭ | ೯೦ |
| ೨೬ | ಮೆ. ಇಂಡೊ ಸ್ಪಾನಿಷ್ ಟೇಸ್ಟಿ ಫುಡ್ಸ್ ಪ್ರೈ., ಲಿ., ಪ್ಲಾಟ್ ನಂ–೭೮ –೮೧ ಕೆಐಎಡಿಬಿ, ಕೈಗಾರಿಕಾ ಪ್ರದೇಶ, ಕುಣಿಗಲ್. | ೨೦೦೧ | ಗರ್ಕಿನ್ ಮತ್ತು ಇತರ ತರಕಾರಿ ಉಪ್ಪಿನಕಾಯಿಗಳು | ೧೬.೦೧ | ೬೬ |
| ೨೭ | ವೆಕ್ಟಸ್ ಇಂಡಸ್ಟ್ರೀಯಲ್ ಲಿ., ಪ್ಲಾಟ್ ನಂ.೯೮&೯೯–ಎ, ವಸಂತನರಸಪುರ ಕೈಗಾರಿಕಾ ಪ್ರದೇಶ, ತುಮಕೂರು | ೨೦೧೩ | ಪ್ಲಾಸ್ಟಿಕ್ ಟ್ಯಾಂಕ್, ಪೈಪುಗಳು ಮತ್ತು ಫಿಟ್ಟಿಂಗ್ಸ್ | ೧೩.೪೦ | ೬೫ |
| ೨೮ | ಮೆ. ಗೋದ್ರೆಜ್ ಆಗ್ರೋವೆಟ್ ಲಿ., ನಂ ೨೭೫/೧, ೨೭೬/೧, ೨೭೬/೨ & ೨೭೭/೧, ಎ.ಕೆ. ಕಾವಲ್ ಹಳ್ಳಿ, ಗೂಳೂರು ಹೋಬಳಿ, ತುಮಕೂರು | ೨೦೧೪ | ಕ್ಯಾಟ್ಲೆ & ಪೌಲ್ಟ್ರಿ ಫೀಡ್ | ೧೨.೦೦ | ೫೬ |
| ೨೯ | ಶ್ರೀ. ಸಪ್ತಗಿರಿ ಆಗ್ರೋ ಇಂಡಸ್ಟ್ರೀ, ಪ್ಲಾಟ್ ನಂ. ೩ಡಿ, ಕೆಐಎಡಿಬಿ ಕೈಗಾರಿಕಾ ಪ್ರದೇಶ, ಅಂತರಸನಹಳ್ಳಿ, ತುಮಕೂರು. | ೨೦೧೪ | ಹಲ್ಲಿಂಗ್ ಆಫ್ ಪ್ಯಾಡಿ | ೧೦.೮೫ | ೧೦೫ |

**ಮಧ್ಯಮ ಪ್ರಮಾಣದ ಕೈಗಾರಿಕೆಗಳು**

| | | | | | |
|---|---|---|---|---|---|
| ೩೦ | ಮೆ. ನಿಯೋ ಫುಡ್ಸ್ ಪ್ರೈ., ಲಿ., ಪ್ಲಾಟ್ ನಂ.೧೦೭/೧೦೮/೧೨೧ & ೧೨೨, ಕೆಐಎಡಿಬಿ ಕೈಗಾರಿಕಾ ಪ್ರದೇಶ, ಅಂತರಸನಹಳ್ಳಿ, ತುಮಕೂರು | ೨೦೦೫ | ಗರ್ಕಿನ್ಸ್/ ಕೊರ್‌ನಿಕೊನ್ಸ್ | ೭.೦೦ | ೨೫೩ |
| ೩೧. | ಮೆ. ಸಿಸ್ಟಮ್ ಕನ್ಸಲ್ಟಂಟ್ ಇನ್‌ಫರ್‌ಮೇಶನ್ ಇಂಡಿಯಾ ಪ್ರೈ.ಲಿ., ಅಂತರಸನಹಳ್ಳಿ, ಕೈಗಾರಿಕಾ ಪ್ರದೇಶ, ತುಮಕೂರು. | ೨೦೦೯ | ಸಾಫ್ಟ್‌ವೇರ್ ಡೆವೆಲಪ್‌ಮೆಂಟ್ | ೧೦.೦೦ | ೧೪೬ |

| **ಕೋಷ್ಟಕ ೫.೭** (ಮುಂದು.....) | | | | | |
|---|---|---|---|---|---|
| ೩೨ | ಮೆ.ಜೆಮ್ ಪ್ರಾಪರ್‌ಟಿಸ್ ಪ್ರೈ.,ಲಿ., ಪ್ಲಾಟ್ ನಂ.೬ ಮತ್ತು ೭ ಸತ್ಯಮಂಗಲ ಕೈಗಾರಿಕಾ ಪ್ರದೇಶ, ತುಮಕೂರು | ೧೯೮೩ | ಪ್ಲಾಸ್ಟಿಕ್ ವೊವೆನ್ ಫ್ಯಾಬ್ರಿಕ್ ಅಂಡ್ ಸಾಕ್ಸ್ | ೮.೫೧ | ೧೯೨ |
| ೩೩ | ಮೆ. ಸಿಸ್ಟಮ್ ಕನ್ಸಲ್ಟಂಟ್ ಇನ್‌ಫರ್‌ಮೇಶನ್ ಇಂಡಿಯಾ ಪ್ರೈ.ಲಿ., ಅಂತರಸನಹಳ್ಳಿ, ಕೈಗಾರಿಕಾ ಪ್ರದೇಶ, ತುಮಕೂರು. | ೨೦೦೯ | ಸಾಫ್ಟ್‌ವೇರ್ ಸರ್ವಿಸ್ | ೧೦.೦೦ | ೫೦ |
| ೩೪ | ಮೆ.ಕಾರ್‌ಮೊಬೈಲ್ಸ್ ಲಿ, ಪ್ಲಾಟ್ ನಂ.೩೬ಬಿ ಅಂಡ್ ೩೭, ಹಿರೇಹಳ್ಳಿ, ಕೈಗಾರಿಕಾ ಪ್ರದೇಶ, ತುಮಕೂರು ಜಿಲ್ಲೆ. | ೧೯೮೩ | ಲೋಕೋಮೋಟಿವ್ ಎಂಜಿನ್ ಕವಾಟಗಳು | ೧೦.೦೦ | ೧೬೭ |
| ೩೫ | ಮೆ.ಎಕೊ ವಿನಲ್ ಇಂಟರ್‌ನ್ಯಾಷನಲ್ ಪ್ರೈ., ಲಿ., ಪ್ಲಾಟ್ ನಂ.೮೨–೮೫, ಕೆಐಎಡಿಬಿ ಕೈಗಾರಿಕಾ ಪ್ರದೇಶ, ಕುಣಿಗಲ್, ತುಮಕೂರು ಜಿಲ್ಲೆ. | ಮಾರ್ಚ್ ೨೦೦೦ | ವಿನೆಗರ್ ಎಕ್ಸ್‌ಟ್ರಾಕ್ಷನ್ | ೮.೨೫ | ೨೧೦ |
| ೩೬ | ಮೆ.ನೇತ್ರಾವತಿ ಡಿಸ್ಟಿಲರಿಸ್ಸ್ ಪ್ರೈ., ಲಿ., ಅವರಗೆರೆ ಗ್ರಾಮ, ಬಿ.ಎಂ.ರಸ್ತೆ, ಯಡಿಯೂರು ಹೋಬಳಿ, ಕುಣಿಗಲ್ ತಾಲೂಕು. | ೨೦೦೭ | ಬಾಟ್ಲಿಂಗ್ ಆಫ್ ರೆಕ್ಟಿಫೈಡ್ ಸ್ಪಿರಿಟ್ | ೯.೭೦ | ೧೨೭ |
| ೩೭ | ಮೆ. ಎಮ್.ಹೆಚ್.ಬಿ ಫಿಲ್ಟರ್ ಇಂಡಿಯ ಪ್ರೈ., ಲಿ., ಅಂತರಸನಹಳ್ಳಿ ಕೈಗಾರಿಕಾ ಪ್ರದೇಶ, ತುಮಕೂರು | ೧೯೯೬ | ಆಟೋಮೊಟಿವ್ ಫಿಲ್ಟರ್ಸ್, ಆಯಿಲ್ ಫ್ಯುಲ್, ಏರ್ ಫಿಲ್ಟರ್ಸ್ | ೯.೪೦ | ೧೬೬ |
| ೩೮ | ಮೆ. ಗವಿರಂಗ ಎಂಟರ್‌ಪ್ರೈಸ್ಸ್, ಪ್ಲಾಟ್ ನಂ. ಸಿ–೯, ಕೆಎಸ್‌ಎಸ್‌ಐಡಿಸಿ ಕೈಗಾರಿಕಾ ಎಸ್ಟೇಟ್, ತುಮಕೂರು | ಫೆಬ್ರವರಿ ೨೦೧೫ | ಇಲೆಕ್ಟ್ರಾನಿಕ್ ಕಾಂಪೋನೆಂಟ್ಸ್ | ೧೧.೩೭ | ೧೪೮ |

ಆಧಾರ: ಜಿಲ್ಲಾ ಕೈಗಾರಿಕಾ ಕೇಂದ್ರ, ತುಮಕೂರು.

## ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕೆಗಳು

೧೯೬೦ರಲ್ಲಿ ಸ್ಥಾಪಿತವಾದ ತುಮಕೂರು ಜಿಲ್ಲಾ ಸಣ್ಣ ಕೈಗಾರಿಕಾ ಸಂಘವು ೧೯೭೯–೮೦ರ ವೇಳೆಗೆ ಜಿಲ್ಲೆಯ ವಿವಿಧ ಕಡೆಗಳಿಂದ ಬಂದಿದ್ದ ೧೪೬ಕ್ಕೂ ಹೆಚ್ಚು ಸದಸ್ಯರನ್ನು ಹೊಂದಿತ್ತು. ಇದು ಸಣ್ಣ ಕೈಗಾರಿಕೋದ್ಯಮಗಳಿಗೆ ತರಬೇತಿ ಸೌಲಭ್ಯವನ್ನೊದಗಿಸುವುದರ ಜೊತೆಗೆ ಬ್ಯಾಂಕ್‌ಗಳಿಂದ ವರ್ಕಿಂಗ್ ಕ್ಯಾಪಿಟಲ್, ಫೈನಾನ್ಸ್ ಕಾರ್ಪೋರೇಷನ್‌ನಿಂದ ಕಟ್ಟಡ ಹಾಗೂ ಯಂತ್ರಗಳಿಗೆ ಸಾಲ ಸೌಲಭ್ಯ ಮತ್ತು ಸ್ಮಾಲ್ ಇಂಡಸ್ಟ್ರೀಸ್ ಕಾರ್ಪೋರೇಷನ್‌ನಿಂದ ಕಂತುಗಳಲ್ಲಿ ಯಂತ್ರಗಳನ್ನು ಕೊಳ್ಳಲು ನೆರವನ್ನೊದಗಿಸಿದೆ. ಜಿಲ್ಲಾ ಕೈಗಾರಿಕಾ ವಸಾಹತುವಿನಲ್ಲಿ ಜಿಲ್ಲಾ ಖಾದಿ ಗ್ರಾಮೋದ್ಯೋಗ ಸಹಕಾರ ಸಂಘ, ಆದರ್ಶ ಇಂಡಸ್ಟ್ರೀಸ್ ಆಟೋಮೊಬೈಲ್ಸ್, ಸತ್ಯನಾರಾಯಣ ಸೋಪ್ ನೆಟ್‌ವರ್ಕ್ಸ್, ಲಕ್ಷ್ಮೀ ಇಂಡಸ್ಟ್ರೀಸ್, ಆರ್ಯನ್ ಪೇಯಿಂಟ್ಸ್, ಜಿತೇಂದ್ರ ಸೋಪ್ ಫ್ಯಾಕ್ಟರಿ, ಲಾಜರ್ ಆಟೋಮೊಬೈಲ್ಸ್ ವರ್ಕ್‌ಷಾಪ್, ಮಹಾವೀರ ಇಂಡಸ್ಟ್ರೀಸ್, ಗೌರಿಶಂಕರ ಇಂಡಸ್ಟ್ರೀಸ್, ಮಂಜುನಾಥ ಕೈಗಾರಿಕಾ ಸಹಕಾರ ಸಂಘ, ಜಯ ಪದ್ಮ ಮೆಟಲ್ ಇಂಡಸ್ಟ್ರೀಸ್, ಆರ್. ಕೆ.ವೈರ್ ಇಂಡಸ್ಟ್ರೀಸ್, ಕ್ಲೀನ್ ಕಾಟನ್ ಅಂಡ್ ಅಲೈಡ್ ಪ್ರಾಡಕ್ಟ್ಸ್, ರತ್ನಾಕರ ಟ್ರೇಡರ್ಸ್ ಮೊದಲಾದ ಸಣ್ಣ ಕೈಗಾರಿಕೆಗಳು ಕಾರ್ಯಾರಂಭಗೊಂಡಿವೆ. ಕೈಗಾರಿಕಾ ವಸಾಹತುವಿನಲ್ಲಿರುವ ಕೈಗಾರಿಕೆಗಳೇ ಅಲ್ಲದೆ ಜಿಲ್ಲೆಯ ಇತರ ಕಡೆಗಳಲ್ಲೂ ಅನೇಕ ಸಣ್ಣ ಪ್ರಮಾಣದ ಕೈಗಾರಿಕೆಗಳಿವೆ. ಅವುಗಳಲ್ಲಿ ಮುಖ್ಯವಾದವುಗಳು ತುಮಕೂರಿನಲ್ಲಿರುವ ಆರ್.ಕೆ.ಇಂಡಸ್ಟ್ರೀಸ್, ಆರ್ಯನ್ ಪೋರ್ಜ್ ಫ್ಯಾಕ್ಟರಿ, ಆರ್ಯನ್ ಇಂಡಸ್ಟ್ರೀಸ್ ಅಂಡ್ ಎಂಜಿನಿಯರಿಂಗ್ ವರ್ಕ್ಸ್, ಆರ್ಯನ್ ಮೆಟಲ್ ಪ್ರಾಡಕ್ಟ್ಸ್, ಬಿ.ಪಿ. ಆಟೋಮೊಬೈಲ್ಸ್ ವರ್ಕ್‌ಷಾಪ್, ಜನರಲ್ ಎಲೆಕ್ಟ್ರಿಕಲ್ ವರ್ಕ್ಸ್, ಲಾಜರ್ ವರ್ಕ್‌ಷಾಪ್, ಮೋಟಾರ್ಸ್ ಅಂಡ್

ಮೋಟಾರ್ಸ್, ಮೈಸೂರು ಸ್ಟ್ರಕ್ಚರಲ್ಸ್ ಲಿ., ನರಸಿಂಹ ಫರ್ನಿಚರ್ ವರ್ಕ್ಸ್ (ಲಾರಿ ಬಾಡಿ ಬಿಲ್ಡಿಂಗ್), ಪ್ರಕಾಶ ಇಂಡಸ್ಟ್ರೀಸ್, ರಾಜಾ ಇಂಡಸ್ಟ್ರೀಸ್, ಮಹಾಲಕ್ಷ್ಮೀ ಎಂಜಿನಿಯರಿಂಗ್ ವರ್ಕ್ಸ್, ಬ್ಲಾಕ್‌ಸ್ಮಿತ್ ಅಂಡ್ ಕಾರ್ಪೆಂಟರಿ ವರ್ಕ್ಸ್, ಆದರ್ಶ ಇಂಡಸ್ಟೀಸ್, ಸ್ಟ್ಯಾಂಡರ್ಡ್ ಆಟೋ ಎಂಜಿನಿಯರಿಂಗ್ ವರ್ಕ್ಸ್, ಸನದೇವನ ಎಲೆಕ್ಟ್ರಿಕಲ್ಸ್ ಎಂಜಿನಿಯರಿಂಗ್ ವರ್ಕ್ಸ್, ಉಮಾ ಇಂಡಸ್ಟ್ರೀಸ್ (ಲಾರಿ ಬಾಡಿ ಬಿಲ್ಡ್ಸ್), ವೆಂಕಟೇಶ ಇಂಡಸ್ಟ್ರೀಸ್, ವಿಶ್ವೇಶ್ವರ ಫುಡ್ ಅಂಡ್ ಮೆಟಲ್ ಇಂಡಸ್ಟ್ರೀಸ್, ಶಿವ ಡೀಸಲ್ ಎಂಜಿನಿಯರ್ಸ್, ಜಯ ಇಂಡಸ್ಟ್ರೀಸ್, ಅಮೀನ್ ಬಾಡಿ ಬಿಲ್ಡರ್ಸ್, ಆದರ್ಶ ಇಂಡಸ್ಟ್ರೀಸ್, ಮಹಾಲಕ್ಷ್ಮಿ ಇಂಡಸ್ಟ್ರೀಸ್, ಆರ್ಯನ್ ಪೆಯಿಂಟ್ಸ್, ವಿನಾಯಕ ಪ್ಲಾಸ್ಟಿಕ್ ಇಂಡಸ್ಟ್ರೀಸ್, ಶಿವಾ ಇಂಡಸ್ಟ್ರೀಸ್ ಮತ್ತು ಗಜಾನನ ಇಂಡಸ್ಟ್ರೀಸ್, ಮೊದಲಾದವುಗಳು ತುಮಕೂರಿನಲ್ಲೂ, ಅಲ್ಲದೆ ಅಧಿಕ ಪ್ರಮಾಣದ ಕೈಗಾರಿಕೆಗಳು ಜಿಲ್ಲೆಯಾದ್ಯಂತ ಹರಡಿವೆ.

ತುಮಕೂರು ಜಿಲ್ಲೆಯು ಕೈಮಗ್ಗಗಳ ಸಹಾಯದಿಂದ ನೇಯ್ಗೆ ಕೆಲಸ ಮಾಡುವುದು, ಗಾಣಗಳ ಸಹಾಯದಿಂದ ಎಣ್ಣೆ ತೆಗೆಯುವುದು, ಮಣ್ಣಿನಿಂದ ಮಡಿಕೆ ತಯಾರಿಸುವುದು, ಮರದಿಂದ ಬಾಚಣಿಗೆ ಮತ್ತು ವ್ಯವಸಾಯೋಪಕರಣಗಳನ್ನು ತಯಾರಿಸುವುದು, ಬಳಪದ ಕಲ್ಲನ್ನು ಪುಡಿ ಮಾಡಿ ಬಳಪ ತಯಾರಿಸುವುದು, ಮೊದಲಾದ ಸರಕುಗಳನ್ನು ಉತ್ಪಾದಿಸುವ ಸಣ್ಣ ಮತ್ತು ಅತೀ ಸಣ್ಣ  ಕೈಗಾರಿಕೆಗಳಿಗೆ ಬಹಳ ಹಿಂದಿನಿಂದಲೂ ಪ್ರಸಿದ್ಧಿ ಪಡೆದಿದೆ. ನೇಕಾರ (ಮಗ್ಗದವರು), ಕಮ್ಮಾರ, ಚಮ್ಮಾರ, ಕುಂಬಾರ, ಗಾಣಿಗ ಮೊದಲಾದ ಜಾತಿಗಳು ಅವರ ಕಸುಬಿನಿಂದ ಹುಟ್ಟಿದವುಗಳಾಗಿವೆ. ೩೧-೦೩-೨೦೧೨ರಲ್ಲಿ ಜಿಲ್ಲೆಯಲ್ಲಿ ವಿವಿಧ ಪ್ರವರ್ಗಗಳಿಗೆ ಸೇರಿದ ಒಟ್ಟು ೨೩,೮೦೪ ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕಾ ಘಟಕಗಳಿದ್ದು, ಒಟ್ಟು ೧,೩೨,೨೩೫ ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿದ್ದವು. ಇವುಗಳಲ್ಲಿ ತೊಡಗಿಸಲ್ಪಟ್ಟಿದ್ದ ಒಟ್ಟು ಬಂಡವಾಳ ಸುಮಾರು ರೂ. ೬೮,೯೮೪ ಲಕ್ಷಗಳು. ಜಿಲ್ಲೆಯಲ್ಲಿನ ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕೆಗಳನ್ನು ಪ್ರಧಾನವಾಗಿ ಆಹಾರ ಮತ್ತು ಆಹಾರ ಸಂಸ್ಕರಣೆ, ರೇಷ್ಮೆ ಜವಳಿ ಮತ್ತು ಸಿದ್ಧ ಉಡುಪು, ಮರದ ಕೈಗಾರಿಕೆಗಳು, ಮುದ್ರಣ ಮತ್ತು ಲೇಖನ ಸಾಮಗ್ರಿಗಳು, ಚರ್ಮೋದ್ಯಮ, ರಬ್ಬರ್ ಮತ್ತು ಪ್ಲಾಸ್ಟಿಕ್, ರಾಸಾಯನಿಕ ಕೈಗಾರಿಕೆ, ಜನರಲ್ ಮತ್ತು ಮೆಕಾನಿಕಲ್ ಎಂಜಿನಿಯರಿಂಗ್, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್, ದುರಸ್ತಿ ಮತ್ತು ಸೇವಾಕಾರ್ಯಗಳು ಹಾಗೂ ಇತರೆ ಕೈಗಾರಿಕೆಗಳೆಂದು ವಿಂಗಡಿಸಿ ಈ ಮುಂದೆ ವಿವರಿಸಲಾಗಿದೆ.

## ೧. ಆಹಾರ ಮತ್ತು ಆಹಾರ ಸಂಸ್ಕರಣೆ

ಜಿಲ್ಲೆಯ ಆಹಾರ ಮತ್ತು ಪಾನೀಯ ಕೈಗಾರಿಕೆಗಳ ವ್ಯಾಪ್ತಿಗೆ ಅಕ್ಕಿಗಿರಣಿ, ಹಿಟ್ಟಿನ ಗಿರಣಿ, ಎಣ್ಣೆ ಮಿಲ್ಲು, ಐಸ್ ಕ್ರೀಮ್ ತಯಾರಿಕೆ, ಹಣ್ಣಿನರಸ, ಸೋಡಾ, ಹುಣಸೆ ಹಣ್ಣಿನ ಪೌಡರ್, ರಾಗಿ ಮಾಲ್ಟ್, ಕಾಫಿಪುಡಿ ಮೊದಲಾದವುಗಳು ಆಹಾರ ಮತ್ತು ಆಹಾರ ಸಂಸ್ಕರಣಾ ಘಟಕಗಳಾಗಿವೆ. ಇವನ್ನು ಜಿಲ್ಲೆಯ ಎಲ್ಲಾ ತಾಲೂಕು ಕೇಂದ್ರಗಳಲ್ಲಿ ಪ್ರಧಾನವಾಗಿ ಕಾಣಬಹುದು. ಇವು ೩೧-೦೩-೨೦೧೨ರವರೆಗೆ ನೋಂದಣಿಗೊಂಡ ೨,೭೩೪ ಘಟಕಗಳಿದ್ದು, ೮,೧೯೦ ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿದ್ದವು. ಇವುಗಳಲ್ಲಿ ತೊಡಗಿಸಲಾಗಿದ್ದ ಬಂಡವಾಳ ರೂ. ೧೨,೭೦೦ ಲಕ್ಷಗಳಾಗಿದೆ.

## ೨. ರೇಷ್ಮೆ ಜವಳಿ ಮತ್ತು ಸಿದ್ಧ ಉಡುಪು

ಹತ್ತಿ ಮತ್ತು ರೇಷ್ಮೆ ನೂಲು ತೆಗೆಯುವುದು, ಬಟ್ಟೆ ನೇಯುವುದು, ಉಣ್ಣೆಯಿಂದ ನೂಲು ತೆಗೆಯುವುದು ಮತ್ತು ಕಂಬಳಿ ನೇಯುವುದು, ಹತ್ತಿ ಮತ್ತು ಉಣ್ಣೆ ಬಟ್ಟೆಯಿಂದ ಸಿದ್ಧ ಉಡುಪು ತಯಾರಿಸುವುದು ಮೊದಲಾದವುಗಳು ಜವಳಿ ಮತ್ತು ಸಿದ್ಧ ಉಡುಪುಗಳ ಕೈಗಾರಿಕಾ ವ್ಯಾಪ್ತಿಗೊಳಪಡುತ್ತವೆ. ಜಿಲ್ಲೆಯ ಗುಬ್ಬಿ ತಾಲೂಕಿನ ಚೇಳೂರು ಮತ್ತು ಕಲ್ಲೂರುಗಳಲ್ಲಿ, ತಿಪಟೂರು ಮತ್ತು ತುರುವೇಕೆರೆ ತಾಲೂಕುಗಳಲ್ಲಿ ರೇಷ್ಮೆ ಮತ್ತು ಹತ್ತಿ ವಸ್ತ್ರಗಳ ತಯಾರಿಕಾ ಘಟಕಗಳು ಪ್ರಧಾನವಾಗಿ ಕಾಣಬರುತ್ತವೆ. ಚಿಕ್ಕನಾಯಕನಹಳ್ಳಿ, ಮಧುಗಿರಿ, ಶಿರಾ ಮತ್ತು ಪಾವಗಡಗಳಲ್ಲಿ ಉಣ್ಣೆಯಿಂದ ಕಂಬಳಿ ನೇಯಲಾಗುತ್ತದೆ. ಸಿದ್ಧ ಉಡುಪುಗಳ ತಯಾರಿಕಾ ಘಟಕಗಳು ತುಮಕೂರು ಮತ್ತು ತಿಪಟೂರುಗಳಲ್ಲಿವೆ. ೩೧-೦೩-೨೦೧೨ರವರೆಗೆ ನೋಂದಣಿಗೊಂಡ ೪,೬೩೩ ಘಟಕಗಳಿದ್ದು, ೧೨,೯೬೦ ಕಾರ್ಮಿಕರಿಗೆ ಉದ್ಯೋಗ ಒದಗಿಸಿವೆ. ಇವುಗಳಲ್ಲಿ ರೂ. ೬,೭೫೮ ಲಕ್ಷ ಬಂಡವಾಳ ತೊಡಗಿಸಲಾಗಿತ್ತು.

## ೩. ಮರ ಆಧಾರಿತ ಕೈಗಾರಿಕೆ

ಸಾಮಿಲ್ಲುಗಳು ಮರಗಳನ್ನು ತುಂಡರಿಸಿ, ಹಲಗೆ, ಗೃಹೋಪಯೋಗಿ ಸರಕುಗಳಾದ ಬಾಗಿಲು, ಕಿಟಕಿ, ಕಂಬ, ತೊಲೆ ಮೊದಲಾದವುಗಳನ್ನು ಬಡಗಿಗಳಿಗೆ ಅನುಕೂಲವಾಗುವ ಅಳತೆಗನುಗುಣವಾಗಿ ಸಿದ್ಧಪಡಿಸಿಕೊಡುತ್ತವೆ. ತುಂಡರಿಸಲ್ಪಟ್ಟ

ಮರ, ವ್ಯವಸಾಯೋಪಕರಣಗಳು, ಪೀಠೋಪಕರಣಗಳು, ಆಟದ ಸಾಮಾನುಗಳು, ಫೋಟೋ ಕಟ್ಟುಗಳು, ಮೊದಲಾದವುಗಳನ್ನು ತಯಾರಿಸುವ ಘಟಕಗಳು ಮರ ಆಧಾರಿತ ಕೈಗಾರಿಕಾ ಘಟಕಗಳೆನಿಸುತ್ತವೆ. ಇವುಗಳಲ್ಲಿ ಕೆಲವು ಜಿಲ್ಲೆಯಾದ್ಯಂತ ಹರಡಿದ್ದರೆ, ಮತ್ತೆ ಕೆಲವು ಸೀಮಿತ ಪ್ರದೇಶದಲ್ಲಿ ಕೇಂದ್ರೀಕೃತಗೊಂಡಿವೆ. ವ್ಯವಸಾಯೋಪಕರಣಗಳ ತಯಾರಿಕಾ ಘಟಕಗಳು ಗ್ರಾಮಾಂತರ ಪ್ರದೇಶದಲ್ಲಿ ನೆಲೆಸಿದ್ದರೆ, ಸಾಮಿಲ್ಲುಗಳು ಮತ್ತು ಪೀಠೋಪಕರಣಗಳ ತಯಾರಿಕಾ ಘಟಕಗಳು ಪಟ್ಟಣ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿವೆ. ೩೧-೦೩-೨೦೧೨ರವರೆಗೆ ನೋಂದಣಿಗೊಂಡ ೩,೩೨೮ ಕೈಗಾರಿಕಾ ಘಟಕಗಳಿದ್ದು, ೯,೯೧೫ ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿದ್ದವು. ಇವುಗಳಲ್ಲಿ ತೊಡಗಿಸಲಾಗಿದ್ದ ಬಂಡವಾಳ ಸುಮಾರು ರೂ. ೪,೪೨೮ ಲಕ್ಷಗಳಾಗಿತ್ತು.

### ೪. ಮುದ್ರಣ ಮತ್ತು ಲೇಖನ ಸಾಮಗ್ರಿಗಳು

ಜಿಲ್ಲೆಯ ಮುದ್ರಣ ಮತ್ತು ಲೇಖನ ಸಾಮಗ್ರಿಗಳ ವ್ಯಾಪ್ತಿಗೆ ಮುದ್ರಣಾಲಯಗಳು, ಪೇಪರ್ ಕೈಚೀಲ ತಯಾರಿಕೆ, ಪೇಪರ್ ಕವರ್‌ಗಳ ತಯಾರಿಕೆ, ವ್ಯಾಕ್ಸ್ ಕೋಟೆಡ್ ಕಾರ್ಡ್‌ಬೋರ್ಡ್‌ಗಳು, ಗಮ್ಡ್ ಪೇಪರ್ ಟೇಪು, ಕಾರ್ಡ್‌ಬೋರ್ಡ್ ಬಾಕ್ಸ್‌ಗಳು, ರಬ್ಬರ್ ಸ್ಟಾಂಪ್‌ಗಳು, ಸ್ಕ್ರೀನ್ ಪ್ರಿಂಟಿಂಗ್, ಝೆರಾಕ್ಸ್, ಹ್ಯಾಂಡ್‌ಮೇಡ್ ಪೇಪರ್, ಟಿಷ್ಯು ಪೇಪರ್ ಮೊದಲಾದವುಗಳು ಸೇರುತ್ತವೆ. ೩೧-೦೩-೨೦೧೨ರವರೆಗೆ ಜಿಲ್ಲೆಯಲ್ಲಿ ಒಟ್ಟು ೩೩೮ ಘಟಕಗಳು ಮುದ್ರಣ ಮತ್ತು ಲೇಖನ ಸಾಮಗ್ರಿಗಳ ಉತ್ಪಾದನೆಯಲ್ಲಿ ತೊಡಗಿದ್ದವು. ಇವುಗಳಲ್ಲಿ ತೊಡಗಿಸಲ್ಪಟ್ಟಿದ್ದ ಬಂಡವಾಳ ಸುಮಾರು ರೂ. ೨,೩೪೫ ಲಕ್ಷಗಳು. ಇವು ೧೦,೧೨೫ ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿದ್ದವು. ಮುದ್ರಣ ಮತ್ತು ಲೇಖನ ಸಾಮಗ್ರಿಕಾ ಘಟಕಗಳು ಜಿಲ್ಲಾ ಮತ್ತು ತಾಲೂಕು ಕೇಂದ್ರಗಳಲ್ಲಿ ಕೇಂದ್ರೀಕೃತಗೊಂಡಿವೆ.

### ೫. ಚರ್ಮೋದ್ಯಮ

ಚರ್ಮ ಆಧಾರಿತ ಕೈಗಾರಿಕೆಗಳ ವ್ಯಾಪ್ತಿಗೆ ಚರ್ಮ ಹದ ಮಾಡುವುದು, ಪಾದರಕ್ಷೆಗಳನ್ನು ತಯಾರಿಸುವುದು ಮತ್ತು ರಿಪೇರಿ ಮಾಡುವುದು, ಚರ್ಮದ ಚೀಲ, ಬೆಲ್ಟ್, ಕುದುರೆ ಜೀನ್, ಡೋಲು, ತಮಟೆ, ಮೃದಂಗ ಮೊದಲಾದವುಗಳ ತಯಾರಿಕಾ ಘಟಕಗಳು ಸೇರುತ್ತವೆ. ಈ ಉದ್ಯಮ ಬಹಳ ಹಿಂದಿನಿಂದ ಸ್ಥಳೀಯ ಬೇಡಿಕೆಗನುಗುಣವಾಗಿ ಉತ್ಪಾದನಾ ಕಾರ್ಯವನ್ನು ನಿರ್ವಹಿಸುತ್ತಾ ಬಂದಿದ್ದು, ಜಿಲ್ಲೆಯಾದ್ಯಂತ ಹರಡಿವೆ. ೩೧-೦೩-೨೦೧೨ ರವರೆಗೆ ಜಿಲ್ಲೆಯಾದ್ಯಂತ ನೋಂದಣಿಗೊಂಡು ಕಾರ್ಯನಿರ್ವಹಿಸುತ್ತಿದ್ದ ಇವುಗಳ ಸಂಖ್ಯೆ ೩೩೮ ಆಗಿತ್ತು. ಇವುಗಳಲ್ಲಿ ತೊಡಗಿಸಲಾಗಿದ್ದ ಬಂಡವಾಳ ಸುಮಾರು ರೂ. ೧,೫೧೦ ಲಕ್ಷಗಳು. ಇವು ೩,೫೩೦ ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿದ್ದವು.

### ೬. ರಬ್ಬರ್ ಮತ್ತು ಪ್ಲಾಸ್ಟಿಕ್

ಜಿಲ್ಲೆಯ ರಬ್ಬರ್ ಮತ್ತು ಪ್ಲಾಸ್ಟಿಕ್ ಕೈಗಾರಿಕೆಗಳ ವ್ಯಾಪ್ತಿಗೆ ಟೈರ್‌ಗಳ ರೀ-ಟ್ರೇಡಿಂಗ್, ರಬ್ಬರ ಮೌಲ್ಡೆಡ್ ಗೂಡ್ಸ್, ರಬ್ಬರ್ ಸ್ಟಾಂಪ್ಸ್, ಪಾಲಿಥಿನ್ ಚೀಲಗಳು, ಪ್ಲಾಸ್ಟಿಕ್ ಕುರ್ಚಿ, ಬಾಟಲ್ಸ್, ಹವಾಯ್ ಚಪ್ಪಲಿಗಳು ಮೊದಲಾದವುಗಳ ತಯಾರಿಕಾ ಘಟಕಗಳು ಸೇರುತ್ತವೆ. ೩೧-೦೩-೨೦೧೨ರವರೆಗೆ ಜಿಲ್ಲೆಯಲ್ಲಿದ್ದ ರಬ್ಬರ್ ಮತ್ತು ಪ್ಲಾಸ್ಟಿಕ್ ಕೈಗಾರಿಕಾ ಘಟಕಗಳ ಸಂಖ್ಯೆ ೨೭೬. ಇವುಗಳಲ್ಲಿ ತೊಡಗಿಸಲಾಗಿದ್ದ ಬಂಡವಾಳ ಸುಮಾರು ರೂ. ೪,೧೮೯ ಲಕ್ಷಗಳು. ಇವು ೩,೧೫೦ ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿದ್ದವು. ಈ ಕೈಗಾರಿಕಾ ಘಟಕಗಳು ಪ್ರಧಾನವಾಗಿ ಜಿಲ್ಲೆಯ ನಗರ ಪ್ರದೇಶದಲ್ಲಿ ಕೇಂದ್ರೀಕೃತಗೊಂಡಿವೆ.

### ೭. ರಾಸಾಯನಿಕ ಕೈಗಾರಿಕೆ

ಜಿಲ್ಲೆಯ ರಾಸಾಯನಿಕ ಕೈಗಾರಿಕಾ ವ್ಯಾಪ್ತಿಗೆ ಸೋಪು, ಸೋಪಿನ ದ್ರವ, ಅಗರಬತ್ತಿ, ಫಿನಾಯಿಲ್, ಲಾಂಡ್ರಿಸೋಪು, ಬ್ಲೀಚಿಂಗ್ ಪೌಡರ್, ಡಿಟರ್‌ಜೆಂಟ್ ಪೌಡರ್ ಹಾಗೂ ಸೋಪು, ಬೆಂಕಿಕಡ್ಡಿ, ಮೊದಲಾದವುಗಳ ತಯಾರಿಕಾ ಘಟಕಗಳು ಸೇರುತ್ತವೆ. ೩೧-೦೩-೨೦೧೨ರವರೆಗೆ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ರಾಸಾಯನಿಕ ಘಟಕಗಳ ಸಂಖ್ಯೆ ೩೩೮. ಇವುಗಳಲ್ಲಿ ತೊಡಗಿಸಲಾಗಿದ್ದ ಬಂಡವಾಳ ರೂ. ೧,೫೧೦ ಲಕ್ಷಗಳು. ಇವು ೩,೫೩೦ ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿದ್ದವು.

## ೮. ಜನರಲ್ ಮತ್ತು ಮೆಕಾನಿಕಲ್ ಎಂಜಿನಿಯರಿಂಗ್

ಜನರಲ್ ಮತ್ತು ಮೆಕಾನಿಕಲ್ ಎಂಜಿನಿಯರಿಂಗ್ ವ್ಯಾಪ್ತಿಗೆ ಫ್ಯಾಬ್ರಿಕೇಷನ್ ವೆಲ್ಡಿಂಗ್, ಗೋಬರ್‌ಗ್ಯಾಸ್ ಪ್ಲಾಂಟ್, ವ್ಯವಸಾಯೋಪಕರಣಗಳು, ಸ್ಟೀಲ್ ಫರ್ನಿಚರ್, ಅಲ್ಯುಮಿನಿಯಂ ಪಾತ್ರೆಗಳು, ಮಿಲ್ಕ್ ಕ್ಯಾನ್‌ಗಳು, ಗೇಟು ಮತ್ತು ಗ್ರಿಲ್ಸ್, ರೋಲಿಂಗ್ ಷಟರ್ಸ್, ಆಟೋ ಮೊಬೈಲ್‌ನ ಬಿಡಿ ಭಾಗಗಳು ಮೊದಲಾದವು ಜನರಲ್ ಮತ್ತು ಮೆಕಾನಿಕಲ್ ಎಂಜಿನಿಯರಿಂಗ್ ಘಟಕಗಳಿಗೆ ಸೇರುತ್ತವೆ. ೩೧-೦೩-೨೦೧೨ರವರೆಗೆ ಜಿಲ್ಲೆಯಲ್ಲಿ ಒಟ್ಟು ೫೩೦ ಜನರಲ್ ಮತ್ತು ಮೆಕಾನಿಕಲ್ ಎಂಜಿನಿಯರಿಂಗ್ ಘಟಕಗಳು ಕಾರ್ಯನಿರ್ವಹಿಸುತ್ತಿದ್ದವು. ಇವು ಪ್ರಧಾನವಾಗಿ ನಗರ ಪ್ರದೇಶದಲ್ಲಿ ಕೇಂದ್ರೀಕೃತಗೊಂಡಿವೆ. ಇವುಗಳಲ್ಲಿ ತೊಡಗಿಸಲಾಗಿದ್ದ ಬಂಡವಾಳ ಸುಮಾರು ರೂ. ೧,೧೦೩ ಲಕ್ಷಗಳು ಇದ್ದು, ೯,೯೧೦ ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿದ್ದವು.

## ೯. ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್

ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಕೈಗಾರಿಕೆಗಳ ವ್ಯಾಪ್ತಿಗೆ ಸಣ್ಣ ಟ್ರಾನ್ಸ್‌ಫಾರ್ಮರ್ಸ್, ಮೋಟಾರ್ ರೀವೈಂಡಿಂಗ್ ವೋಲ್ಟೇಜ್ ಸ್ಟೆಬಿಲೈಸರ್, ಪಿ.ವಿ.ಸಿ. ವೈರ್‌ಕೇಬಲ್, ಎಲೆಕ್ಟ್ರಾನಿಕ್ಸ್ ಚೋಕ್ಸ್, ಎಲೆಕ್ಟ್ರಿಕಲ್ ಲೈಟ್ ಫಿಟಿಂಗ್, ಎಮರ್ಜೆನ್ಸಿ ಲ್ಯಾಂಪ್ಸ್, ಜಂಕ್ಷನ್ ಬಾಕ್ಸ್, ರೇಡಿಯೋ, ಟೆಲಿವಿಷನ್, ಕಂಪ್ಯೂಟರ್, ಮೊದಲಾದ ತಯಾರಿಕಾ ಘಟಕಗಳು ಈ ಗುಂಪಿಗೆ ಸೇರುತ್ತವೆ. ೩೧-೦೩-೨೦೧೨ರವರೆಗೆ ಜಿಲ್ಲೆಯಲ್ಲಿ ಒಟ್ಟು ೩೮೮ ಎಲೆಕ್ಟ್ರಿಕಲ್ಸ್ ಮತ್ತು ಎಲೆಕ್ಟ್ರಾನಿಕ್ಸ್ ಘಟಕಗಳಿದ್ದು, ೨,೦೦೦ ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿದ್ದವು. ಇವುಗಳಲ್ಲಿ ತೊಡಗಿಸಲಾಗಿದ್ದ ಬಂಡವಾಳ ಸುಮಾರು ರೂ. ೧,೮೮೦ ಲಕ್ಷಗಳು.

## ೧೦. ದುರಸ್ತಿ ಮತ್ತು ಸೇವಾ ಕಾರ್ಯಗಳು

ಜಿಲ್ಲೆಯ ದುರಸ್ತಿ ಮತ್ತು ಸೇವಾ ಕಾರ್ಯಗಳ ವ್ಯಾಪ್ತಿಗೆ ವಾಚ್ ರಿಪೇರಿ, ಸ್ಕೂಟರ್ ಮತ್ತು ಮೋಟಾರು ಬೈಕ್‌ಗಳ ರಿಪೇರಿ, ಟೈರ್‌ಗಳ ರಿ-ಟ್ರೇಡಿಂಗ್, ಯಂತ್ರೋಪಕರಣಗಳ ರಿಪೇರಿ, ನೀರಾವರಿ ಪಂಪ್‌ಸೆಟ್‌ಗಳ ರಿಪೇರಿ, ಬೋರ್‌ವೆಲ್ ಪಂಪ್‌ಸೆಟ್ಟುಗಳ ರಿಪೇರಿ, ವಾಚು, ರೆಫ್ರಿಜರೇಟರ್ ಮೊದಲಾದವುಗಳ ದುರಸ್ತಿ ಮತ್ತು ಸೇವಾ ಕಾರ್ಯಗಳು ಸೇರುತ್ತವೆ. ೩೧-೦೩-೨೦೧೨ರವರೆಗೆ ಜಿಲ್ಲೆಯಲ್ಲಿ ದುರಸ್ತಿ ಮತ್ತು ಸೇವಾ ಕಾರ್ಯದಲ್ಲಿ ನಿರತವಾಗಿದ್ದ ಘಟಕಗಳ ಸಂಖ್ಯೆ ೨,೧೩೪. ಇವುಗಳಲ್ಲಿ ತೊಡಗಿಸಲಾಗಿದ್ದ ಬಂಡವಾಳ ಸುಮಾರು ರೂ. ೧೨,೯೮೪ ಲಕ್ಷಗಳಿದ್ದು, ೨೦,೦೦೦ ಕಾರ್ಮಿಕರಿಗೆ ಉದ್ಯೋಗವನ್ನೊದಗಿಸಿದ್ದವು.

## ೧೧. ಇತರ ಕೈಗಾರಿಕೆಗಳು

ಜಿಲ್ಲೆಯ ಇತರೆ ಕೈಗಾರಿಕೆಗಳ ವ್ಯಾಪ್ತಿಗೆ ಆಟೋಮೊಬೈಲ್ಸ್, ಫೆರಸ್ ಮತ್ತು ನಾನ್ ಫೆರಸ್, ಟ್ರಾನ್ಸ್‌ಪೋರ್ಟ್, ರೇಷ್ಮೆಗೂಡಿನಿಂದ ನೂಲು ಬಿಚ್ಚುವುದು, ವಿದ್ಯುತ್ ಮತ್ತು ಕೈಮಗ್ಗಗಳನ್ನು ರಿಪೇರಿ ಮಾಡುವುದು, ಅಲಂಕಾರಿಕ ವಸ್ತುಗಳನ್ನು ತಯಾರಿಸುವುದು, ಪ್ರವಾಸೋದ್ಯಮ, ಫೋಟೋ ಸ್ಟುಡಿಯೋ, ಬ್ಯೂಟಿಪಾರ್ಲರ್, ಇಂಟರ್‌ನೆಟ್ ಸರ್ವಿಸ್, ಗಾಜು ಮತ್ತು ಪಿಂಗಾಣಿ ಸಾಮಾನುಗಳನ್ನು ತಯಾರಿಸುವುದು, ಸಿಮೆಂಟ್ ಹಾಲೋಬ್ಲಾಕ್ ತಯಾರಿಸುವುದು, ಟೇಬಲ್ ಮೌಲ್ಡೆಡ್ ಬ್ರಿಕ್ಸ್, ಡೆಕೋರೇಟಿವ್ ಟೈಲ್ಸ್, ಮೊದಲಾದವುಗಳ ತಯಾರಿಕಾ ಘಟಕಗಳು ಸೇರುತ್ತವೆ. ೩೧-೦೩-೨೦೧೨ರಲ್ಲಿ ಜಿಲ್ಲೆಯಲ್ಲಿದ್ದ ಇತರೆ ಕೈಗಾರಿಕಾ ಘಟಕಗಳ ಸಂಖ್ಯೆ ೭,೪೭೧. ಇವುಗಳಲ್ಲಿ ೩೪,೦೯೬ ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದರು. ಇವುಗಳಲ್ಲಿ ತೊಡಗಿಸಲಾಗಿದ್ದ ಬಂಡವಾಳ ರೂ. ೨೦,೦೫೬ ಲಕ್ಷಗಳಾಗಿತ್ತು. ಇವು ಸಾಮಾನ್ಯವಾಗಿ ನಗರ ಪ್ರದೇಶಗಳಲ್ಲಿ ಕೇಂದ್ರೀಕೃತಗೊಂಡಿವೆ. ಮಾರ್ಚಿ ೨೦೧೫ರ ಅಂತ್ಯದಲ್ಲಿದ್ದಂತೆ ಪ್ರವರ್ಗವಾರು ಸಣ್ಣ ಕೈಗಾರಿಕಾ ಘಟಕಗಳ ವಿವರಗಳಿಗೆ ಕೋಷ್ಟಕ ೫.೮ ಹಾಗೂ ತಾಲೂಕುವಾರು ಉದ್ದಿಮೆಗಳು, ಅವುಗಳಲ್ಲಿ ತೊಡಗಿಸಿದ ಬಂಡವಾಳ ಹಾಗೂ ಉದ್ಯೋಗಿಗಳ ಸಂಖ್ಯೆಯನ್ನು ಕೋಷ್ಟಕ ೫.೯ ರಲ್ಲಿ ನೀಡಿದೆ.

### ಕೋಷ್ಟಕ ೫.೮ ಜಿಲ್ಲೆಯಲ್ಲಿ ೩೧-೦೩-೨೦೧೫ರಲ್ಲಿದ್ದಂತೆ ಪ್ರವರ್ಗವಾರು ಸಣ್ಣ ಕೈಗಾರಿಕಾ ಘಟಕಗಳ ವಿವರ.

| ಕ್ರ.ಸಂ | ಪ್ರವರ್ಗವಾರು ಘಟಕಗಳ ಹೆಸರು | ಘಟಕಗಳ ಸಂಖ್ಯೆ | ಬಂಡವಾಳ ಹೂಡಿಕೆ (ರೂ. ಲಕ್ಷಗಳಲ್ಲಿ) | ಕಾರ್ಮಿಕ ಸಂಖ್ಯೆ |
|---|---|---|---|---|
| ೧ | ಆಹಾರ ಮತ್ತು ತಂಪು ಪಾನೀಯ ಘಟಕಗಳು | ೨೮೧೩ | ೧೪೨೦೦ | ೯೩೯೦ |
| ೨ | ಜವಳಿ ಮತ್ತು ಸಿದ್ಧ ಉಡುಪು ಘಟಕಗಳು | ೪೯೮೫ | ೮೨೮೮ | ೧೪೫೬೦ |
| ೩ | ಮರ ಮತ್ತು ಮರ ಆಧಾರಿತ ಕೈಗಾರಿಕೆಗಳು | ೪೪೦೫ | ೫೯೪೮ | ೧೧೪೧೫ |
| ೪ | ಮುದ್ರಣ ಮತ್ತು ಲೇಖನ ಸಾಮಗ್ರಿ | ೫೮೯ | ೩೪೪೫ | ೧೨೨೫ |
| ೫ | ಚರ್ಮ ಮತ್ತು ಚರ್ಮ ಆಧಾರಿತ ಕೈಗಾರಿಕೆಗಳು | ೩೪೮ | ೨೪೯೦ | ೪೩೯೦ |
| ೬ | ರಬ್ಬರ್ ಮತ್ತು ಪ್ಲಾಸ್ಟಿಕ್ ಆಧಾರಿತ ಕೈಗಾರಿಕೆಗಳು | ೩೨೭ | ೧೯೮೯ | ೪೧೩ |
| ೭ | ರಾಸಾಯನಿಕ ಆಧಾರಿತ ಕೈಗಾರಿಕೆಗಳು | ೫೦೯ | ೨೭೦೯ | ೧೧೩೫ |
| ೮ | ಖನಿಜ ಆಧಾರಿತ ಕೈಗಾರಿಕೆಗಳು | ೫೬೫ | ೨೦೩೫ | ೪೧೫೬ |
| ೯ | ಜನರಲ್ ಎಂಜಿನಿಯರಿಂಗ್ ಮತ್ತು ಅಲಾಯಿಡ್ | ೬೪೬ | ೧೭೩೫ | ೧೧೪೭೦ |
| ೧೦ | ಬೇಸಿಕ್ ಮೆಟಲ್ ಕೈಗಾರಿಕೆಗಳು | ೫೧೯ | ೧೭೪೨ | ೧೩೩೯೦ |
| ೧೧ | ಎಲೆಕ್ಟ್ರಿಕಲ್ ಟ್ರಾನ್ಸ್‌ಪೋರ್ಟ್ ಅಂಡ್ ಎಕ್ವಿಪ್‌ಮೆಂಟ್ಸ್ ಕೈಗಾರಿಕೆಗಳು | ೪೧೦ | ೪೬೦೨ | ೨೮೩೬ |
| ೧೨ | ದುರಸ್ತಿ ಮತ್ತು ಸೇವಾ ಘಟಕಗಳು | ೪೦೬೪ | ೧೫೫೮೪ | ೨೨೬೩೦ |
| ೧೩ | ಕಾಗದ ಮತ್ತು ಉತ್ಪನ್ನಗಳು | ೧೧೮೬ | ೩೨೭೫ | ೧೧೨೧೫ |
| ೧೪ | ಇತರೆ ಸೇವಾ ಘಟಕಗಳು | ೫೯೫೬ | ೨೪೧೬೭.೮೧ | ೪೨೪೩೧ |
| | ಒಟ್ಟು | **೨೭೩೨೨** | **೯೨೨೦೯.೮೧** | **೧೫೦೬೫೬** |

ಆಧಾರ: ಜಿಲ್ಲಾ ಕೈಗಾರಿಕಾ ಕೇಂದ್ರ, ತುಮಕೂರು

### ಕೋಷ್ಟಕ ೫.೯ ಜಿಲ್ಲೆಯಲ್ಲಿ ೩೧-೦೩-೨೦೧೫ರವರೆಗೆ ತಾಲೂಕುವಾರು ನೋಂದಣಿಯಾದ ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕೆಗಳ ವಿವರ

| ಕ್ರ.ಸಂ | ತಾಲೂಕು | ಉದ್ದಿಮೆಗಳ ಸಂಖ್ಯೆ | ಬಂಡವಾಳ ಹೂಡಿಕೆ (ರೂ. ಲಕ್ಷಗಳಲ್ಲಿ) | ಉದ್ಯೋಗಿಗಳ ಸಂಖ್ಯೆ |
|---|---|---|---|---|
| ೧ | **ತುಮಕೂರು** | ೧೯೭೦ | ೧೧೦೪೭.೩೫ | ೮೫೫೯ |
| ೨ | **ಗುಬ್ಬಿ** | ೨೦೪೭ | ೭೦೨೮.೪ | ೯೮೯೪ |
| ೩ | **ಕುಣಿಗಲ್** | ೧೬೨೪ | ೧೭೯೩೩.೨ | ೫೭೫೩ |
| ೪ | **ತುರುವೇಕೆರೆ** | ೨೩೫೬ | ೮೯೧೩.೧೫ | ೧೩೨೩೫ |
| ೫ | **ತಿಪಟೂರು** | ೨೪೮೬ | ೯೫೦೦.೯೨ | ೧೦೬೩೬ |
| ೬ | **ಚಿಕ್ಕನಾಯಕನಹಳ್ಳಿ** | ೨೫೦೮ | ೮೬೧೨.೭೫ | ೯೮೩೮ |
| ೭ | **ಕೊರಟಗೆರೆ** | ೨೦೭೮ | ೨೭೫೩.೬ | ೧೦೨೨೩ |
| ೮ | **ಮಧುಗಿರಿ** | ೪೨೦೧ | ೬೮೫೭.೬೬ | ೨೪೪೧೬ |
| ೯ | **ಪಾವಗಡ** | ೫೯೮೧ | ೧೩೭೦೦.೨೨ | ೪೮೩೯೭ |
| ೧೦ | **ಶಿರಾ** | ೨೦೭೧ | ೫೮೬೨.೫೬ | ೯೭೦೫ |
| | **ಒಟ್ಟು** | **೨೭೩೨೨** | **೯೨೨೦೯.೮೧** | **೧೫೦೬೫೬** |

ಆಧಾರ: ಜಿಲ್ಲಾ ಕೈಗಾರಿಕಾ ಕೇಂದ್ರ, ತುಮಕೂರು

# ಮೆಗಾ ಫುಡ್ ಪಾರ್ಕ್, ತುಮಕೂರು

ತುಮಕೂರು ನಗರದ ಹೊರವಲಯದಲ್ಲಿರುವ ವಸಂತನರಸಾಪುರ ಕೈಗಾರಿಕಾ ಪ್ರದೇಶದಲ್ಲಿ ದೇಶದ ಭವಿಷ್ಯದ ಉದ್ಯಮವೆಂದೇ ಪರಿಗಣಿಸಲಾಗಿರುವ ಆಹಾರ ಸಂಸ್ಕರಣೆ ಉದ್ಯಮಕ್ಕೆ ಸಂಬಂಧಿಸಿದ ಬೃಹತ್ ಫುಡ್ ಪಾರ್ಕ್, ೨೪ನೇ ಸೆಪ್ಟೆಂಬರ್ ೨೦೧೪ ರಂದು ಭಾರತದ ಪ್ರಧಾನ ಮಂತ್ರಿಗಳಿಂದ ಉದ್ಘಾಟನೆಗೊಂಡಿತು. ಇದು ಏಷ್ಯಾದಲ್ಲೇ ಅತೀ ದೊಡ್ಡದಾಗಿದ್ದು, ಸಾರ್ವಜನಿಕ, ಖಾಸಗಿ ಸಹಭಾಗಿತ್ವದಲ್ಲಿ ಸ್ಥಾಪಿಸಲಾಗಿದೆ. ಆಹಾರ ಸಂಸ್ಕರಣಾ ಕೈಗಾರಿಕಾ ಸಚಿವಾಲಯ ವಿವಿಧ ಹಂತಗಳಲ್ಲಿ ಸಹಾಯಧನ ನೀಡಿದೆ.

ದೇಶದಲ್ಲಿ ಇಂಥ ೩೦ ಪಾರ್ಕ್‌ಗಳನ್ನು ಸ್ಥಾಪಿಸುವ ಉದ್ದೇಶವನ್ನು ಕೇಂದ್ರ ಸರ್ಕಾರ ಹೊಂದಿದ್ದು, ಹನ್ನೊಂದನೆ ಪಂಚ ವಾರ್ಷಿಕ ಯೋಜನೆಯ ಭಾಗವಾಗಿ ಫುಡ್ ಪಾರ್ಕ್‌ಗಳಿಗೆ ಚಾಲನೆ ನೀಡಲಾಗಿದೆ. ಮೊದಲ ಹಂತವಾಗಿ ದೇಶದ ವಿವಿಧ ಭಾಗಗಳಲ್ಲಿ ೧೦ ಪಾರ್ಕ್‌ಗಳಿಗೆ ಅನುಮೋದನೆ ನೀಡಲಾಗಿದ್ದು, ತುಮಕೂರಿನ ಇಂಡಿಯಾ ಫುಡ್ ಪಾರ್ಕ್ ಕಾರ್ಯಾರಂಭ ಮಾಡುತ್ತಿರುವುದರಲ್ಲಿ ಮೊದಲನೆಯದಾಗಿದೆ.

ಬಹುಬೇಗ ಹಾಳಾಗುವ ಹಣ್ಣು, ತರಕಾರಿಗಳನ್ನು ಸಂಸ್ಕರಣೆ ಮಾಡುವುದು, ಮೌಲ್ಯವರ್ಧನೆ ಸೇರಿಸಿ ಉಪ ಉತ್ಪನ್ನಗಳನ್ನು ತಯಾರಿಸುವುದು ಉದ್ಯಮದ ಮುಖ್ಯ ಗುರಿಯಾಗಿದೆ. ಜಿಲ್ಲೆ ಮಾತ್ರವಲ್ಲದೇ ರಾಜ್ಯದ ೧೨ ಜಿಲ್ಲೆಗಳಿಗೆ ಇದರ ಪ್ರಯೋಜನ ಲಭ್ಯವಾಗಲಿದ್ದು, ೨೦೦ ಕಿ.ಮೀ. ವ್ಯಾಪ್ತಿಯಲ್ಲಿ ಇದು ಕಾರ್ಯಾಚರಿಸಲಿದೆ.

ಕೃಷಿ ಮೂಲಸೌಕರ್ಯದಲ್ಲಿ ಉಂಟಾಗಿರುವ ಕೊರತೆ ತುಂಬುವುದು ಹಾಗೂ ಉದ್ದಿಮೆಯ ಸುತ್ತಮುತ್ತಲ ಪ್ರದೇಶದಲ್ಲಿ ಆಹಾರ ಸಂಸ್ಕರಣೆಗೆ ಅಗತ್ಯ ತಾಂತ್ರಿಕ ಸೌಲಭ್ಯ ಒದಗಿಸುವ ಗುರಿ ಹೊಂದಲಾಗಿದೆ. ರೈತರಿಗೆ ತರಬೇತಿ, ತಾಂತ್ರಿಕ ಸಹಾಯ, ಸಂಸ್ಕರಣೆ, ಮೌಲ್ಯವರ್ದನೆ, ತರಬೇತಿ ನೀಡುವ ಉದ್ದೇಶವಿದೆ. ಕ್ಯಾಪಿಟಲ್ ಫುಡ್ಸ್ ಲಿಮಿಟೆಡ್, ಪ್ಯಾಂಟಲೂಂ ರಿಟೈಲ್ಸ್, ಸತ್ವಾ ಡೆವಲಪರ್ಸ್ ಪ್ರವರ್ತಕ ಕಂಪೆನಿಗಳಾಗಿವೆ.

೧೧೦ ಎಕರೆ ಪ್ರದೇಶದಲ್ಲಿ ಹರಡಿಕೊಂಡಿರುವ ಉದ್ದಿಮೆಯು ಒಂದೇ ಸೂರಿನಡಿ ಎಲ್ಲಾ ಸೌಲಭ್ಯಗಳನ್ನು ಒಳಗೊಂಡಿದೆ. ಆಹಾರ ಸಂಸ್ಕರಣೆ ಸಂಬಂಧಿಸಿದಂತೆ ಬೃಹತ್ ಕೈಗಾರಿಕಾ ಶೆಡ್ ಒಂದೆಡೆ ಇದ್ದರೆ, ಪಕ್ಕದಲ್ಲೇ ಮೌಲ್ಯವರ್ಧಿತ ಘಟಕಗಳ ಮೂರು ಅಂತಸ್ತಿನ ಶೆಡ್ ಇದೆ. ಮತ್ತೊಂದೆಡೆ ಆಡಳಿತ ಕಟ್ಟಡವಿದೆ.

ವಿವಿಧ ಜಿಲ್ಲೆಗಳಲ್ಲಿ ಪ್ರಾಥಮಿಕ ಸಂಸ್ಕರಣಾ ಘಟಕಗಳನ್ನು (ಪಿಪಿಸಿ) ಸ್ಥಾಪಿಸಲಿದ್ದು, ಅಲ್ಲಿಂದ ವಸಂತನರಸಾಪುರದ ಕೇಂದ್ರೀಯ ಸಂಸ್ಕರಣಾ ಘಟಕಕ್ಕೆ (ಸಿಸಿ) ಹಣ್ಣು, ತರಕಾರಿಗಳನ್ನು ತರಲಾಗುತ್ತದೆ. ಪ್ರಾಥಮಿಕ ಕೇಂದ್ರಗಳಿಂದ ಐದು ಗಂಟೆಯೊಳಗೆ ಕೇಂದ್ರೀಯ ಸಂಸ್ಕರಣಾ ಘಟಕಕ್ಕೆ ಉತ್ಪನ್ನಗಳನ್ನು ರವಾನಿಸಲಾಗುತ್ತದೆ. ರೈತರು ಪಿಪಿಸಿ ಕೇಂದ್ರಗಳಿಗೆ ಉತ್ಪನ್ನಗಳನ್ನು ಮಾರಾಟ ಮಾಡಬಹುದಾಗಿದೆ.

ಆಹಾರ ಸಂಸ್ಕರಣಾ ಯೋಜನೆಯಡಿ ಇದಕ್ಕೆ ಕೇಂದ್ರ ಸರ್ಕಾರ ಸಹಾಯ ಧನ ನೀಡಿದೆ. ಆರಂಭಿಕವಾಗಿ ರೂ. ೨೫೦ ಕೋಟಿ ಹೂಡಿಕೆ ಮಾಡಲಾಗುತ್ತಿದೆ. ಕೇಂದ್ರ ಸರ್ಕಾರ ವಿವಿಧ ಹಂತಗಳಲ್ಲಿ ರೂ. ೫೦ ಕೋಟಿ ಸಹಾಯಧನ ನೀಡಲಿದೆ. ಒಟ್ಟಾರೆ ಮುಂದಿನ ದಿನಗಳಲ್ಲಿ ನೇರವಾಗಿ ರೂ. ಒಂದು ಸಾವಿರ ಕೋಟಿ ಹೂಡಿಕೆ ಮಾಡಲಿದ್ದು, ನೇರವಾಗಿ, ಪರೋಕ್ಷವಾಗಿ ೧೦ ಸಾವಿರ ಉದ್ಯೋಗ ಸೃಷ್ಟಿಯ ನಿರೀಕ್ಷೆಯಿದೆ. 'ಸದ್ಯಕ್ಕೆ ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ, ಮಾಲೂರು, ಚಾಮರಾಜನಗರ, ಶಿವಮೊಗ್ಗ, ಚಿಕ್ಕಮಗಳೂರಿನಲ್ಲಿ ಆರು ಸಂಗ್ರಹ ಘಟಕಗಳನ್ನು ತೆರೆಯಲಾಗುವುದು. ರೈತರು ಉತ್ಪನ್ನಗಳನ್ನು ಇಲ್ಲಿ ಮಾರಬಹುದು. ಮಾರುಕಟ್ಟೆ ಬೇಡಿಕೆ ಆಧರಿಸಿ ಉತ್ಪನ್ನ ಖರೀದಿಸಲಾಗುವುದು'.

ಆಹಾರ ಉತ್ಪನ್ನಗಳನ್ನು ಎರಡು ವಿಭಾಗಗಳಾಗಿ ವಿಂಗಡಿಸಲಾಗಿದ್ದು, ಬಹುಬೇಗ ಕೆಡುವ ಹಣ್ಣು ಮತ್ತು ತರಕಾರಿ ಪ್ರಾಥಮಿಕ ವಲಯದಲ್ಲಿಯೂ, ಆಹಾರ ಧಾನ್ಯ, ಬೇಳೆ, ಸಾಂಬಾರ ಪದಾರ್ಥಗಳನ್ನು ದ್ವಿತೀಯ ವಲಯವಾಗಿ ಗುರುತಿಸಲಾಗಿದ್ದು, ರಾಜ್ಯದ ಎಲ್ಲ ಭಾಗಗಳಿಂದ ಖರೀದಿಸಬಹುದಾಗಿದೆ.

**ಕೈಮಗ್ಗ ಮತ್ತು ವಿದ್ಯುತ್ ಮಗ್ಗಗಳು**

ಜಿಲ್ಲೆಯು ಬಹಳ ಹಿಂದಿನಿಂದಲೂ ಕೈಮಗ್ಗದ ಉತ್ಪಾದನೆಗೆ ಪ್ರಸಿದ್ಧಿಯಾಗಿದೆ. ಇದರಲ್ಲಿ ಹತ್ತಿ ನೂಲಿನ ನೇಯ್ಗೆ, ಉಣ್ಣೆ ನೂಲಿನ ನೇಯ್ಗೆ, ಹಾಗೂ ರೇಷ್ಮೆ ನೂಲಿನ ನೇಯ್ಗೆ ಪ್ರಮುಖವಾದವುಗಳು. ಜಿಲ್ಲೆಯಲ್ಲಿ ೧೯೬೭–೬೮ರಲ್ಲಿ ಸು. ೯,೦೦೦ ನೋಂದಣಿಗೊಂಡ ಕೈಮಗ್ಗಗಳು ಕಾರ್ಯನಿರ್ವಹಿಸುತ್ತಿದ್ದವು. ಇವುಗಳಲ್ಲಿ ಶೇ. ೩೩ ರಷ್ಟು ಹತ್ತಿನೂಲಿನ ಕೈಮಗ್ಗಗಳು, ಶೇ. ೨೫ ರಷ್ಟು ರೇಷ್ಮೆನೂಲಿನ ಮಗ್ಗಗಳು ಮತ್ತು ಶೇ. ೪೨ ರಷ್ಟು ಉಣ್ಣೆ ನೂಲಿನ ಮಗ್ಗಗಳು (ಕಂಬಳಿ ನೇಯ್ಗೆ) ಆಗಿದ್ದವು. ಹತ್ತಿ ಬಟ್ಟೆ ತಯಾರಿಕಾ ಘಟಕಗಳು ಸು. ೩,೦೦೦ ಕುಟುಂಬಗಳಿಗೂ, ರೇಷ್ಮೆ ನೂಲು ಮತ್ತು ನೇಯ್ಗೆ ಘಟಕಗಳು ಸು. ೧,೫೦೦ ಕುಟುಂಬಗಳಿಗೂ, ಉಣ್ಣೆ ನೂಲು ಮತ್ತು ಕಂಬಳಿ ತಯಾರಿಕಾ ಘಟಕಗಳು ಸು. ೫,೦೦೦ ಜನರಿಗೂ ಪೂರ್ಣ ಕಾಲಾವಧಿಯ ಉದ್ಯೋಗವನ್ನೊದಗಿಸಿದ್ದವು. ಒಟ್ಟು ಕೈಮಗ್ಗಗಳ ಪೈಕಿ ಶೇ. ೮೦ ರಷ್ಟು ಕೈಮಗ್ಗಗಳು ಸಹಕಾರಿ ವಲಯದ ವ್ಯಾಪ್ತಿಗೊಳಪಟ್ಟಿದ್ದು, ಉಳಿದ ಶೇ. ೨೦ ರಷ್ಟು ಕೈಮಗ್ಗಗಳು ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿದ್ದವು. ಜಿಲ್ಲೆಯ ಕೈಮಗ್ಗಗಳ ಶೇ. ೫೦ ರಷ್ಟು ಮಗ್ಗಗಳು ಗ್ರಾಮಾಂತರ ಪ್ರದೇಶದ ಗೃಹ ಕೈಗಾರಿಕೆಗಳಾಗಿದ್ದವು.

ಹತ್ತಿ ಬಟ್ಟೆ ತಯಾರಿಕಾ ಕೈಮಗ್ಗಗಳು ಜಿಲ್ಲೆಯ ತಿಪಟೂರು ತಾಲೂಕಿನ ಹಳೇಪಾಳ್ಯ, ಗುಬ್ಬಿ ತಾಲೂಕಿನ ಗುಬ್ಬಿ, ಕಲ್ಲೂರು ಮತ್ತು ಸೋಮಲಾಪುರಗಳಲ್ಲೂ, ತುರುವೇಕೆರೆ ತಾಲೂಕಿನ ಮಾವಿನಕೆರೆ, ಪಾವಗಡ ತಾಲೂಕಿನ ವೈ.ಎನ್. ಹೊಸಕೋಟೆ ಮತ್ತು ಗಂಗಸಂದ್ರ ಇವುಗಳಲ್ಲಿ ಪ್ರಧಾನವಾಗಿದ್ದು, ಸು. ೩,೦೦೦ ದೇವಾಂಗ ಕುಟುಂಬಗಳಿಗೆ ಉದ್ಯೋಗ ನೀಡಿದ್ದವು. ೧೯೬೪ರಲ್ಲಿ ೩,೧೭೦ ನೋಂದಣಿಗೊಂಡ ಹತ್ತಿ ಬಟ್ಟೆ ತಯಾರಿಕಾ ಕೈಮಗ್ಗಗಳಿದ್ದು, ೨,೪೧೬ ಮಗ್ಗಗಳು ಸಹಕಾರಿ ವಲಯ ವ್ಯಾಪ್ತಿಗೊಳಪಟ್ಟಿದ್ದವು. ಕೈಮಗ್ಗಗಳಿಗೆ ಬೇಕಾಗುವ ಕಚ್ಚಾ ಸರಕುಗಳಾದ ಹತ್ತಿ ನೂಲು, ಕಚ್ಚಾ ರೇಷ್ಮೆನೂಲು, ಬಣ್ಣ ಮತ್ತು ರಾಸಾಯನಿಕಗಳನ್ನು ಬೆಂಗಳೂರಿನಿಂದ ಕೊಂಡುಕೊಳ್ಳಲಾಗುತ್ತಿತ್ತು. ಇವುಗಳಲ್ಲಿ ತಯಾರಿಸಲ್ಪಟ್ಟ ಸೀರೆ ಮತ್ತು ಬಟ್ಟೆಯನ್ನು ಬೆಂಗಳೂರಿನ ಹ್ಯಾಂಡ್‌ಲೂಂ ಸೊಸೈಟಿ ಮೂಲಕ ಮತ್ತು ಸ್ಥಳೀಯ ಮಾರುಕಟ್ಟೆಯಲ್ಲಿ ಮಾರಾಟ ಮಾಡಲಾಗುತ್ತಿತ್ತು. ೧೯೬೭ರಲ್ಲಿ ೧೮ ಹತ್ತಿ ಬಟ್ಟೆ ತಯಾರಿಕಾ ಕೈಮಗ್ಗಗಳ ಸಹಕಾರ ಸಂಘಗಳಿದ್ದು, ೨,೭೫೭ ಸದಸ್ಯರನ್ನು ಹೊಂದಿದ್ದವು. ಈ ೧೮ ಸಹಕಾರ ಸಂಘಗಳು, ತುಮಕೂರು, ಗುಬ್ಬಿ ತಾಲೂಕಿನ ಸೋಮಲಾಪುರ, ಕಲ್ಲೂರು ಮತ್ತು ಗುಬ್ಬಿ, ತಿಪಟೂರು ತಾಲೂಕಿನ ಹಳೇಪಾಳ್ಯ, ಮಧುಗಿರಿ ತಾಲೂಕಿನ ಇಟಕದಿಬ್ಬನಹಳ್ಳಿ, ಅಕ್ಕಲಪುರ (ಯಂಗಲಮ್ಮನಹಳ್ಳಿ), ಚಿಕ್ಕನಾಯಕನಹಳ್ಳಿ, ಕುಣಿಗಲ್, ಪಾವಗಡ ತಾಲೂಕಿನ ಗಂಗಸಾಗರ, ವೈ.ಎನ್. ಹೊಸಕೋಟೆ, ಗುಮ್ಮನಘಟ್ಟ, ಹೊಸೂರು ಇಂಟುರಾಯನಹಳ್ಳಿ ಮತ್ತು ಪಾವಗಡ, ತುರುವೇಕೆರೆ ತಾಲೂಕಿನ ಮುನಿಯೂರು ಮತ್ತು ಮಾವಿನಕೆರೆ, ಕೊರಟಗೆರೆ ತಾಲೂಕಿನ ಸೋಮಪುರ (ಹೊಸಹಳ್ಳಿ) ಇವುಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ವೈ.ಎನ್.ಹೊಸಕೋಟೆ ಮತ್ತು ಸೋಮಲಾಪುರ ಕೈಮಗ್ಗ ಸಹಕಾರ ಸಂಘಗಳಲ್ಲಿ ಬಟ್ಟೆಗೆ ಹಾಕುವ ಬಣ್ಣವನ್ನು ತಯಾರಿಸಲಾಗುತ್ತಿತ್ತು.

ಕಳೆದ ಶತಮಾನದಿಂದಲೂ ಜಿಲ್ಲೆಯು ಕಂಬಳಿ ತಯಾರಿಕೆಗೆ ಪ್ರಸಿದ್ಧಿ ಪಡೆದಿರುವುದನ್ನು ಕಾಣಬಹುದು. ೧೯೫೩ರಲ್ಲಿ ಜಿಲ್ಲೆಯಲ್ಲಿ ೧,೮೨೨ ಕಂಬಳಿ ತಯಾರಿಕಾ ಕೈಮಗ್ಗಗಳಿದ್ದವು. ಜಿಲ್ಲೆಯ ಸು.೫,೦೦೦ ಕುರುಬ ಜನಾಂಗದವರು ಕಂಬಳಿ ತಯಾರಿಕೆಯನ್ನು ತಮ್ಮ ಉಪ ಕಸುಬನ್ನಾಗಿಸಿಕೊಂಡಿದ್ದರೆ, ೧,೭೦೦ ಜನರು ಇದನ್ನು ತಮ್ಮ ಮುಖ್ಯ ಕಸುಬನ್ನಾಗಿಟ್ಟುಕೊಂಡಿದ್ದರು. ಈ ಉದ್ಯಮ ಶಿರಾ, ಮಧುಗಿರಿ, ಚಿಕ್ಕನಾಯಕನಹಳ್ಳಿ ಮತ್ತು ಪಾವಗಡ ತಾಲೂಕುಗಳಲ್ಲಿ ಪ್ರಧಾನವಾಗಿಯೂ, ಗುಬ್ಬಿ ಮತ್ತು ತಿಪಟೂರು ತಾಲೂಕುಗಳಲ್ಲಿ ಅಲ್ಪ ಪ್ರಮಾಣದಲ್ಲೂ ಕಾರ್ಯನಿರ್ವಹಿಸಲ್ಪಡುತ್ತಿತ್ತು. ಈ ಉದ್ಯಮವು ಚಿಕ್ಕನಾಯಕನಹಳ್ಳಿ, ಬೇವಿನಹಳ್ಳಿ, ಹಾಗಲವಾಡಿ, ಇಟಕದಿಬ್ಬನಹಳ್ಳಿ, ವೈ.ಎನ್.ಹೊಸಕೋಟೆ ಮತ್ತು ಗಂಗನಘಟ್ಟಗಳಲ್ಲಿ ಪ್ರಧಾನವಾಗಿ ಕೇಂದ್ರೀಕೃತಗೊಂಡಿತ್ತು. ಜಿಲ್ಲೆಯಲ್ಲಿ ೧೯೬೪ರಲ್ಲಿ ೩,೭೬೨ ಉಣ್ಣೆ ಕೈಮಗ್ಗಗಳಿದ್ದವು. ಇವುಗಳಲ್ಲಿ ೨,೮೮೬ ಮಗ್ಗಗಳು ಸಹಕಾರಿ ಸಂಘದ ವ್ಯಾಪ್ತಿಗೊಳಪಟ್ಟಿದ್ದವು. ಜಿಲ್ಲೆಯಲ್ಲಿ ೧೯೬೭ರಲ್ಲಿ ೧೭ ಉಣ್ಣೆ ನೇಕಾರರ ಸಹಕಾರ ಸಂಘಗಳಿದ್ದು, ೩,೯೦೭ ಮಗ್ಗಗಳು ಮತ್ತು ೩,೩೭೬ ಸದಸ್ಯರನ್ನು ಹೊಂದಿದ್ದವು. ಈ ೧೭ ಸಹಕಾರ ಸಂಘಗಳು ಜಿಲ್ಲೆಯ ಶಿರಾ ತಾಲೂಕಿನ ಬೇವಿನಹಳ್ಳಿ, ದ್ವಾರನಕುಂಟೆ, ಶಿರಾ, ಬರಗೂರು, ಕಾಮಗೊಂಡನಹಳ್ಳಿ ಮತ್ತು ಚಿರತಹಳ್ಳಿ, ಗುಬ್ಬಿ ತಾಲೂಕಿನ ಹಾಗಲವಾಡಿ, ಮಧುಗಿರಿ ತಾಲೂಕಿನ ಇಟಕದಿಬ್ಬನಹಳ್ಳಿ, ತಿಪಟೂರು ತಾಲೂಕಿನ ಕೊಡಿಗೇನಹಳ್ಳಿ ಮತ್ತು ಗಂಗನ ಘಟ್ಟ, ಪಾವಗಡ ತಾಲೂಕಿನ ವೈ.ಎನ್.ಹೊಸಕೋಟೆ, ವೆಂಕಟಾಪುರ ಮತ್ತು ಪಾವಗಡ, ಚಿಕ್ಕನಾಯಕನಹಳ್ಳಿ ತಾಲೂಕಿನ ಯಳನಾಡು ಮತ್ತು ಚಿಕ್ಕನಾಯಕನಹಳ್ಳಿ, ಕೊರಟಗೆರೆ ತಾಲೂಕಿನ ಅರಸಾಪುರ ಮತ್ತು ಕುಣಿಗಲ್ ತಾಲೂಕಿನ ಶಿವನಹಳ್ಳಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದವು.

ಜಿಲ್ಲೆಯ ಗೃಹ ಕೈಗಾರಿಕಾ ಉತ್ಪಾದನೆಯ ಸುಮಾರು ಪ್ರತಿ ಶತ ೩೦ರಷ್ಟು ಉತ್ಪಾದನೆಯು ರೇಷ್ಮೆ ಕೈಮಗ್ಗದ ಉತ್ಪಾದನೆಯಾಗಿದ್ದು, ರೇಷ್ಮೆ ಕೈಮಗ್ಗಗಳು ಗುಬ್ಬಿ ತಾಲೂಕಿನ ಕಲ್ಲೂರು, ಚೇಳೂರು ಮತ್ತು ಗುಬ್ಬಿಯಲ್ಲೂ, ತಿಪಟೂರು ತಾಲೂಕಿನ ಹಳೇಪಾಳ್ಯ, ಕೋಟನಾಯಕನಹಳ್ಳಿ ಮತ್ತು ನೊಣವಿನಕೆರೆಯಲ್ಲೂ, ಚಿಕ್ಕನಾಯಕನಹಳ್ಳಿ ತಾಲೂಕಿನ ಚಿಕ್ಕನಾಯಕನಹಳ್ಳಿ ಮತ್ತು ಕಡೇನ ಹಳ್ಳಿಯಲ್ಲೂ, ಪಾವಗಡ ತಾಲೂಕಿನ ಕೃಷ್ಣಾಪುರದಲ್ಲೂ, ತುಮಕೂರಿನಲ್ಲಿ ಅಲ್ಪ ಪ್ರಮಾಣದಲ್ಲೂ ಕೇಂದ್ರೀಕೃತಗೊಂಡಿದ್ದವು. ಜಿಲ್ಲೆಯಲ್ಲಿ ೧೯೬೪ರಲ್ಲಿ ೨,೨೪೯ ರೇಷ್ಮೆ ಕೈಮಗ್ಗಗಳು ನೋಂದಣಿಗೊಂಡಿದ್ದವು. ಇವುಗಳ ಪೈಕಿ ೧,೭೭೪ ರೇಷ್ಮೆ ಕೈಮಗ್ಗಗಳು ಸಹಕಾರ ಸಂಘಗಳ ವ್ಯಾಪ್ತಿಗೊಳಪಟ್ಟಿದ್ದವು. ಇವುಗಳಿಗೆ ಬೇಕಾಗುವ ಕಚ್ಚಾ ಸರಕನ್ನು ಬೆಂಗಳೂರಿನ ಪ್ರಧಾನ ರೇಷ್ಮೆ ಸಂಘವು ಪೂರೈಕೆ ಮಾಡುತ್ತಿತ್ತು. ೧೯೬೭ ರಲ್ಲಿ ೧೫ ರೇಷ್ಮೆ ಕೈಮಗ್ಗ ನೇಕಾರರ ಸಹಕಾರ ಸಂಘಗಳಿದ್ದು, ೨,೩೮೯ ಮಗ್ಗಗಳನ್ನು ಮತ್ತು ೧,೮೨೨ ಸದಸ್ಯರನ್ನು ಹೊಂದಿದ್ದವು. ಇವು ಜಿಲ್ಲೆಯ ತುಮಕೂರು, ತುರುವೇಕೆರೆ ತಾಲೂಕಿನ ದಂಡಿನಶಿವರ ಮತ್ತು ಮುನಿಯೂರು, ಗುಬ್ಬಿ ತಾಲೂಕಿನ ಕಲ್ಲೂರು, ಗುಬ್ಬಿ ಮತ್ತು ಚೇಳೂರು, ತಿಪಟೂರು ತಾಲೂಕಿನ ಕೋಟನಾಯಕನಹಳ್ಳಿ, ನೊಣವಿನಕೆರೆ, ಅಣ್ಣಾಪುರ ಮತ್ತು ಹಳೇ ಪಾಳ್ಯ, ತುರುವೇಕೆರೆ ತಾಲೂಕಿನ ಮಾವಿನಕೆರೆ, ಪಾವಗಡ ತಾಲೂಕಿನ ಕೃಷ್ಣಾಪುರ, ಚಿಕ್ಕನಾಯಕನಹಳ್ಳಿ ತಾಲೂಕಿನ ಚಿಕ್ಕನಾಯಕನಹಳ್ಳಿ ಮತ್ತು ಕಡೇನಹಳ್ಳಿಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ಈ ಸಹಕಾರ ಸಂಘಗಳಿಂದ ಹಾಗೂ ಕುಶಲ ಕರ್ಮಿಗಳಿಂದ ಉತ್ಪಾದಿಸಲ್ಪಟ್ಟ ಸರಕನ್ನು ಮಾರಾಟ ಮಾಡುವ ಮತ್ತು ಪ್ರದರ್ಶನ ಸೌಲಭ್ಯವನ್ನೊದಗಿಸುವ ದೃಷ್ಟಿಯಿಂದ ತುಮಕೂರು, ತಿಪಟೂರು ಮತ್ತು ಮಧುಗಿರಿಗಳಲ್ಲಿ ತಲಾ ಒಂದೊಂದು ವ್ಯಾಪಾರ ಮಳಿಗೆಯನ್ನು ತೆರೆದು ಪ್ರಚಾರ ಮತ್ತು ಮಾರಾಟ ಕಾರ್ಯದಲ್ಲಿ ತೊಡಗಿಸಲಾಗಿತ್ತು. ಜಿಲ್ಲೆಯಲ್ಲಿ ೩೧-೦೩-೨೦೦೮ರಲ್ಲಿ ೨೦ ಕೈಮಗ್ಗ ನೇಕಾರರ ಸಹಕಾರ ಸಂಘಗಳಿದ್ದು, ೪,೯೭೦ ಸದಸ್ಯರನ್ನು ಹೊಂದಿದ್ದವು. ಇವರ ಜೊತೆಗೆ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಸದಸ್ಯತ್ವ ಹೊಂದಿದ್ದವರು ೮೦೦, ಅಸಂಘಟಿತ ನೇಕಾರರು (ಸ್ವತಂತ್ರ ನೇಕಾರರು) ೫,೫೦೦ ಸೇರಿದಂತೆ, ಒಟ್ಟು ೧೧,೨೭೦ ನೇಕಾರರು ಜಿಲ್ಲೆಯ ಸುಮಾರು ಅರ್ಧದಷ್ಟು ತಾಲೂಕುಗಳ ೨೯ ಗ್ರಾಮಗಳಲ್ಲಿ ನೇಯ್ಗೆ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು. ಇವರಿಗೆ ವರ್ಷಕ್ಕೆ ೪೬,೨೫೦ಕೆ.ಜಿ. ರೇಷ್ಮೆ ಮತ್ತು ೭೦,೦೫೦ ಕೆ.ಜಿ ಉಣ್ಣೆ ಬೇಕಾಗುತ್ತದೆ. ಇವರು ನೇಯ್ದ ಸೀರೆ, ಕಂಬಳಿಗಳನ್ನು ಸ್ಥಳೀಯ ಮತ್ತು ಬೆಂಗಳೂರು ಮಾರುಕಟ್ಟೆಯಲ್ಲಿ ಮಾರಾಟ ಮಾಡಲಾಗುತ್ತದೆ. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು ತನ್ನ ಸದಸ್ಯತ್ವವನ್ನು ಹೊಂದಿರುವವರಿಗೆ ಧನ ಸಹಾಯ ಮತ್ತು ಮಾರುಕಟ್ಟೆ ಸೌಲಭ್ಯವನ್ನೊದಗಿಸುತ್ತಿದೆ. ಜಿಲ್ಲೆಯಲ್ಲಿ ೨೦೧೩ ರ ಮಾರ್ಚ್ ಅಂತ್ಯಕ್ಕೆ ಕೈಮಗ್ಗಗಳ ಕ್ಷೇತ್ರದಲ್ಲಿ ೪೦ ಸಹಕಾರಿ ಸಂಘಗಳಿದ್ದು, ಇವುಗಳಲ್ಲಿ ೪,೨೫೦ ನೇಕಾರರಿದ್ದರು, ಕರ್ನಾಟಕ ಕೈಮಗ್ಗ ಅಭಿವೃದ್ಧಿ ಮಂಡಳಿಯ ಸದಸ್ಯತ್ವ ಪಡೆದ ೧,೪೫೦ ನೇಕಾರರು ಹಾಗೂ ೧೩,೭೫೩ ಅಸಂಘಟಿತ ನೇಕಾರರಿದ್ದರು. ಹೀಗೆ ಕೈಮಗ್ಗ ಕ್ಷೇತ್ರದಲ್ಲಿ ಒಟ್ಟು ೧೯,೪೫೩ ನೇಕಾರರಿದ್ದರು. ಹೆಚ್ಚಿನ ವಿವರಗಳಿಗೆ ಕೋಷ್ಟಕ ೫.೧೦ ಅನ್ನು ನೋಡಿ.

## ವಿದ್ಯುತ್ ಮಗ್ಗಗಳು

ಜಿಲ್ಲೆಯಲ್ಲಿ ಮೊಟ್ಟಮೊದಲು ೧೯೫೯-೬೦ ರಲ್ಲಿ ವಿದ್ಯುತ್ ಮಗ್ಗಗಳು ಕಾರ್ಯಾರಂಭಗೊಂಡವು. ಪ್ರಾರಂಭದಲ್ಲಿ ೭೪ ವಿದ್ಯುತ್ ಮಗ್ಗಗಳಿದ್ದು, ಆನಂತರ ನಿಧಾನವಾಗಿ ಅವುಗಳ ಸಂಖ್ಯೆ ಹೆಚ್ಚಳಗೊಂಡವು. ೧೯೬೪ರಲ್ಲಿ ೪೦೦ ವಿದ್ಯುತ್ ಮಗ್ಗಗಳು ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು. ಇವುಗಳ ಪೈಕಿ ೩೦೦ ವಿದ್ಯುತ್ ಮಗ್ಗಗಳು ತಿಪಟೂರು ತಾಲೂಕಿನ ಹಳೇಪಾಳ್ಯದಲ್ಲಿದ್ದವು. ಒಟ್ಟು ವಿದ್ಯುತ್ ಮಗ್ಗಗಳ ಪೈಕಿ ೮೬ ವಿದ್ಯುತ್ ಮಗ್ಗಗಳು ಸಹಕಾರ ಸಂಘಗಳ ವ್ಯಾಪ್ತಿಗೊಳಪಟ್ಟಿದ್ದವು. ಈ ವಿದ್ಯುತ್ ಮಗ್ಗಗಳಿಂದ ವರ್ಷಕ್ಕೆ ರೂ. ೧೭.೫ ಲಕ್ಷಗಳ ಮೌಲ್ಯದ ಹತ್ತಿ ವಸ್ತ್ರಗಳನ್ನು ಉತ್ಪಾದಿಸಲಾಗುತ್ತಿತ್ತು. ಇವು ೬೦೦ ಕಸುಬುದಾರರಿಗೆ ಉದ್ಯೋಗವನ್ನೊದಗಿಸಿದ್ದವು. ೧೯೬೭ರಲ್ಲಿ ಜಿಲ್ಲೆಯಲ್ಲಿದ್ದ ವಿದ್ಯುತ್ ಮಗ್ಗಗಳ ಸಂಖ್ಯೆ ೫೦೦, ಎರಡು ವಿದ್ಯುತ್ ಮಗ್ಗಗಳ ನೇಕಾರರ ಸಂಘಗಳಿದ್ದು, ಅವು ತನ್ನ ಸದಸ್ಯರಿಗೆ ಕಚ್ಚಾ ಸರಕು ಮತ್ತು ಸಿದ್ಧವಸ್ತುಗಳ ಮಾರಾಟ ಸೌಲಭ್ಯವನ್ನೊದಗಿಸುತ್ತಿದ್ದವು.

ಜಿಲ್ಲೆಯಲ್ಲಿ ವಿದ್ಯುತ್ ಮಗ್ಗಗಳ ಮೂಲಕ ನೇಯ್ಗೆ ಕಾರ್ಯದಲ್ಲಿ ತೊಡಗಿದ್ದ ೩,೫೫೫ ನೇಕಾರರ ಪೈಕಿ ೧,೨೦೦ ನೇಕಾರರು ಸಹಕಾರ ಸಂಘಗಳ ಸದಸ್ಯತ್ವವನ್ನು ಹೊಂದಿದ್ದರೆ, ೨,೩೫೫ ನೇಕಾರರು ಅಸಂಘಟಿತರಾಗಿರುವರು. ಇವರಿಗೆ ವರ್ಷಕ್ಕೆ ೧,೧೮,೦೦೦ ಕೆ.ಜಿ. ಆರ್ಟ್ ಸಿಲ್ಕ್ ಬೇಕಾಗುತ್ತದೆ. ಇವರು ನೇಯ್ದ ಸೀರೆ ಮತ್ತು ಬಟ್ಟೆ ಸ್ಥಳೀಯ ಮತ್ತು ಬೆಂಗಳೂರು ಮಾರುಕಟ್ಟೆಯಲ್ಲಿ ಮಾರಾಟಗೊಳ್ಳುತ್ತವೆ. ಜಿಲ್ಲೆಯಲ್ಲಿರುವ ಆರು ವಿದ್ಯುತ್ ಮಗ್ಗಗಳ ನೇಕಾರ ಸಂಘಗಳಲ್ಲಿ ಮೂರು

ನೇಕಾರ ಸಂಘಗಳು ತಿಪಟೂರಿನಲ್ಲೂ, ಎರಡು ನೇಕಾರ ಸಂಘಗಳು ತುರುವೇಕೆರೆ ತಾಲೂಕಿನ ಮುನಿಯೂರಿನಲ್ಲೂ ಮತ್ತು ಒಂದು ನೇಕಾರ ಸಂಘವು ಗುಬ್ಬಿ ತಾಲೂಕಿನ ಸೋಮಲಾಪುರದಲ್ಲೂ ಇವೆ. ಜಿಲ್ಲೆಯಲ್ಲಿ ೨೦೧೩ರ ಮಾರ್ಚ್ ಅಂತ್ಯಕ್ಕೆ ಏಳು ವಿದ್ಯುತ್ ಮಗ್ಗಗಳ ನೇಕಾರರ ಸಹಕಾರಿ ಸಂಘಗಳಿದ್ದು, ಇವುಗಳಲ್ಲಿ ೮೦೦ ಮಂದಿ ಸದಸ್ಯರಿದ್ದರು. ಈ ಕ್ಷೇತ್ರದಲ್ಲಿ ೯,೯೩೭ ಅಸಂಘಟಿತ ವಲಯದ ನೇಕಾರರಿದ್ದರು. ಹೀಗೆ ಒಟ್ಟು ೧೦,೭೩೭ ನೇಕಾರರಿದ್ದರು. ಹೆಚ್ಚಿನ ವಿವರಗಳಿಗೆ ಕೋಷ್ಟಕ ೫.೧೧ ಅನ್ನು ನೋಡಿ.

**ಕೋಷ್ಟಕ ೫.೧೦ ಜಿಲ್ಲೆಯಲ್ಲಿ ೨೦೧೩ರ ಮಾರ್ಚ್ ಅಂತ್ಯಕ್ಕೆ ತಾಲ್ಲೂಕುವಾರು ಕೈಮಗ್ಗಗಳಿರುವ ಗ್ರಾಮಗಳು ಮತ್ತು ಕೈಮಗ್ಗ ಅವಲಂಬಿತ ನೇಕಾರರ ವಿವರ**

| ಕ್ರ. ಸಂ | ತಾಲೂಕು | ಗ್ರಾಮಗಳು | ಸಹಕಾರ ಸಂಘಗಳ ಸಂಖ್ಯೆ | ಸಹಕಾರ ಸಂಘಗಳ ನೇಕಾರರ ಸಂಖ್ಯೆ | ಕ.ಕೈಮಗ್ಗ ಅಭಿವೃದ್ಧಿ ಮಂಡಳಿಯ ಸದಸ್ಯತ್ವ ಪಡೆದ ನೇಕಾರರು | ಅಸಂಘಟಿತ ನೇಕಾರರ ಸಂಖ್ಯೆ | ಒಟ್ಟು ನೇಕಾರರು |
|---|---|---|---|---|---|---|---|
| ೧ | **ಗುಬ್ಬಿ** | ಚೇಳೂರು, ಕಲ್ಲೂರು, ಬಿದರೆ, ಸೋಮಲಾಪುರ, ಹಿಂಡಿಸ್ಕೆರೆ, ಸಾತೇನಹಳ್ಳಿ ತಿರುಮಲ ದೇವರಹಟ್ಟಿ ಗೇಟ್, ಎಂ.ಎನ್. ಕೋಟೆ, ಇಡಕನಹಳ್ಳಿ, ಗೌರಿಪುರ, ಮಂಚಿಹಳ್ಳಿ, ಬಾರೆತೋಟ, ಜನಕದೇವನಹಳ್ಳಿ, ತ್ಯಾಗಟೂರು, ಆದಲಗೆರೆ, ಸೂಲಯ್ಯನಪಾಳ್ಯ, ನಿಂಬೆಕಟ್ಟೆ, ಹಾಗಲವಾಡಿ, ಅಪ್ಪನಹಳ್ಳಿ | ೬ | ೫೦೦ | ೫೦೦ | ೨೦೦೦ | ೩೦೦೦ |
| ೨ | **ತಿಪಟೂರು** | ತಿಪಟೂರು–ಟೌನ್ (ಗಾಯಿತ್ರಿನಗರ, ಹೊಸಪಾಳ್ಯ, ಹಳೇಪಾಳ್ಯ, ಮಂಜುನಾಥ ನಗರ, ಆದಿಲಕ್ಷ್ಮಿನಗರ)ಅಣ್ಣಾಪುರ, ಕೋಟನಾಯಕನಹಳ್ಳಿ, ಬಳವನೇರಳು, ಹೊನ್ನವಳ್ಳಿ, ಗಂಗನಘಟ್ಟ, ಗಂಜಲಘಟ್ಟ, ಗ್ಯಾರಘಟ್ಟ, ಅಂಚೆಕೊಪ್ಪಲು, ಹಿಂಡಿಸ್ಕೆರೆ, ಮುದ್ದೇನಹಳ್ಳಿ, ನೊಣವಿನಕೆರೆ, ದೊಡ್ಡಯ್ಯನ ಪಾಳ್ಯ, ಚಿಕ್ಕಲಕ್ಕಪಾಳ್ಯ, ಚಿಕ್ಕಬಿದರೆ, ಶಂಕರಿಕೊಪ್ಪಲು, ಕೊನೇನಹಳ್ಳಿ | ೧೭ | ೧೦೦೦ | ೧೫೦ | ೩೦೦೦ | ೪೧೫೦ |
| ೩ | **ತುರುವೇಕೆರೆ** | ತುರುವೇಕೆರೆ, ಮುನಿಯೂರು, ವಿವೇಕಾನಂದನಗರ,ಮಾವಿನ ಕೆರೆ, ಕರಡೀಗೆರೆ, ದಂಡಿನ ಶಿವರ, ದೊಡ್ಡಘೋರಘಟ್ಟ, ಮಗ್ಗದಪಾಳ್ಯ, | – | – | ೧೦೦ | ೫೦೦ | ೬೦೦ |
| ೪ | **ಚಿಕ್ಕನಾಯಕನಹಳ್ಳಿ** | ಚಿಕ್ಕನಾಯಕನಹಳ್ಳಿ, ಕಾಡೇನಹಳ್ಳಿ, ಹಮದನಕೆರೆ, ಹುಳಿಯಾರು, ಯಳನಾಡು, ಶೆಟ್ಟಿಕೆರೆ, ರಾಯಪ್ಪನಪಾಳ್ಯ, ಕುರುಬರಹಳ್ಳಿ, ಗೌಡನಹಳ್ಳಿ, ಯಸರಹಳ್ಳಿ, ದಾಸಕೆರೆ, ಅಜ್ಜನಕೆರೆಪಾಳ್ಯ, ಕಲ್ಲೇನಹಳ್ಳಿ, ಪಿನ್ನೇನಹಳ್ಳಿ, ವಡೆಕೆರೆ, ಸಾಲಕಟ್ಟೆಪಾಳ್ಯ, ಬಗ್ಗನಹಳ್ಳಿ, ಗುಳ್ಳೇನಹಳ್ಳಿ | ೩ | ೫೦೦ | ೧೦೦ | ೨೫೦೦ | ೩೧೦೦ |

| ಕೋಷ್ಟಕ ೫.೧೦ (ಮುಂದು.....) | | | | | | | |
|---|---|---|---|---|---|---|---|
| ೫ | **ಪಾವಗಡ** | ಪಾವಗಡ, ವೈ.ಎನ್. ಹೊಸಕೋಟೆ,ಸಿದ್ದಾಪುರ, ಕಿಲಾರ್ಲಹಳ್ಳಿ, ಬಿ. ಅಚ್ಚಮ್ಮನಹಳ್ಳಿ, ತಿಮ್ಮಮ್ಮನಹಳ್ಳಿ, ಆರ್.ಡಿ. ರೊಪ್ಪ, ಪೆಂಡ್ಲಿಜೀವಿ, ವೆಂಕಟಾಪುರ, ಎಂದ್ರಬೆಟ್ಟ, ಗುಮ್ಮಘಟ್ಟ, ಜಾಲೋಡು, ವೆಂಕಟಮ್ಮನ ಹಳ್ಳಿ,ಎಸ್.ಆರ್.ಪಾಳ್ಯ, ರಂಗಸಮುದ್ರ, ಸಾಸಲುಕುಂಟೆ, | ೮ | ೧೫೦೦ | ೬೦೦ | ೪೫೦೦ | ೬೬೦೦ |
| ೬ | **ಶಿರಾ** | ದೊಡ್ಡಹುಲಿಕುಂಟೆ, ಬಾಣಗೆರೆ, ಬೇವಿನಹಳ್ಳಿ, ಬರಗೂರು, ಕಾಮಗೊಂಡನಹಳ್ಳಿ, ತಡಕಲೂರು, ಶಿರಾಟೌನ್, ದ್ವಾರಕುಂಟೆ, ಬೈರನಹಳ್ಳಿ, ಪಟ್ಟನಾಯಕನಹಳ್ಳಿ, ಯಗ್ಗನಹಳ್ಳಿ | ೬ | ೭೫೦ | – | ೧೨೦೦ | ೧೯೫೦ |
| ೭ | **ತುಮಕೂರು** | ಸೋಪನಹಳ್ಳಿ, ಮೆಳೆಕುಂಟೆ | – | – | – | ೮ | ೮ |
| ೮ | **ಕೊರಟಗೆರೆ** | ಮಲ್ಲೇಶ್ವರ | – | – | – | ೨೦ | ೨೦ |
| ೯ | **ಮಧುಗಿರಿ** | ಪಾರ್ಥಹಳ್ಳಿ, ದೊಡ್ಡ ಮಾಲೂರು, ಮೊಸರಪಾಡಿ, ವಾಗೇನಹಳ್ಳಿ, ಐ.ಡಿ.ಹಳ್ಳಿ, ಹೊಸಹಳ್ಳಿ, ಕಡಗತ್ತೂರು, ಗುಟ್ಟಿಕಾಳೇನಹಳ್ಳಿ, ಸಿಂಗೇನಹಳ್ಳಿ, ಕುರುಹೀನಹಳ್ಳಿ, ಸಿದ್ದುಗುಂಟೆ, | – | – | – | ೨೫ | ೨೫ |
| | | **ಒಟ್ಟು** | **೪೦** | **೪೨೫೦** | **೧೪೫೦** | **೧೩೭೫೩** | **೧೯೪೫೩** |

**ಆಧಾರ: ಉಪ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ತುಮಕೂರು**

## ಕೋಷ್ಟಕ ೫.೧೧ ಜಿಲ್ಲೆಯಲ್ಲಿ ೨೦೧೩ ರ ಮಾರ್ಚ ಅಂತ್ಯಕ್ಕೆ ತಾಲೂಕುವಾರು ವಿದ್ಯುತ್‌ಮಗ್ಗಗಳಿದ್ದ ಗ್ರಾಮಗಳು ಮತ್ತು ಅವುಗಳಲ್ಲಿದ್ದ ನೇಕಾರರ ವಿವರ

| ಕ್ರ. ಸಂ | ತಾಲೂಕು | ಸ್ಥಳ | ನೇಕಾರರ ಸಹಕಾರ ಸಂಘಗಳ ಸಂಖ್ಯೆ | ಸಹಕಾರ ಸಂಘಗಳ ಸದಸ್ಯರ ಸಂಖ್ಯೆ | ಅಸಂಘಟಿತ ವಲಯದ ನೇಕಾರರ ಸಂಖ್ಯೆ | ಒಟ್ಟು ನೇಕಾರರು |
|---|---|---|---|---|---|---|
| ೧ | **ಗುಬ್ಬಿ** | ಗುಬ್ಬಿಟೌನ್, ಚೇಳೂರು | ೧ | ೧೦೦ | ೧೫೦೦ | ೧೬೦೦ |
| ೨ | **ತಿಪಟೂರು** | ತಿಪಟೂರು ಟೌನ್, ಗಾಯಿತ್ರಿನಗರ, ಶಾಂತಿನಗರ, ಹೊಸಪಾಳ್ಯ, ದೊಡ್ಡಯ್ಯನಪಾಳ್ಯ, ಹಳೇಪಾಳ್ಯ, ಆದಿಲಕ್ಷ್ಮೀನಗರ, ಅಣ್ಣಾಪುರ, ಚಿಕ್ಕಲಕ್ಕಿಪಾಳ್ಯ, ಕೋಟನಾಯಕನಹಳ್ಳಿ, ಹೊನ್ನವಳ್ಳಿ, ಗಂಜಲಘಟ್ಟ, ಹಿಂಡಿಸ್ಕೆರೆ, ನೊಣವಿನಕೆರೆ | ೪ | ೫೦೦ | ೬೫೦೦ | ೭೦೦೦ |
| ೩ | **ತುರುವೇಕೆರೆ** | ತುರುವೇಕೆರೆ ಟೌನ್, ಮುನಿಯೂರು, ವಿವೇಕಾನಂದ ನಗರ, ಮಗ್ಗದಪಾಳ್ಯ, ಹುಲಿಕೆರೆ | ೨ | ೨೦೦ | ೧೫೦೦ | ೧೭೦೦ |

| ಕೋಷ್ಟಕ ೫.೧೧ (ಮುಂದು.....) | | | | | | |
|---|---|---|---|---|---|---|
| ೪ | ಚಿಕ್ಕನಾಯಕನಹಳ್ಳಿ | ಚಿಕ್ಕನಾಯಕನಹಳ್ಳಿ ಟೌನ್, ಕಾಡೇನಹಳ್ಳಿ, ಹಂದನಕೆರೆ, ಹುಳಿಯಾರು | – | – | ३೦೦ | ३೦೦ |
| ೫ | ಪಾವಗಡ | ಗುಮ್ಮಗಟ್ಟ | – | – | ೧೦೦ | ೧೦೦ |
| ೬ | ಮಧುಗಿರಿ | ವೆಂಕಮ್ಮನಹಳ್ಳಿ, ಕಾಸಿನಾಯಕನಹಳ್ಳಿ | – | – | ೧೦ | ೧೦ |
| ೭ | ಕೊರಟಗೆರೆ | ಕೊರಟಗೆರೆ ಟೌನ್ | – | – | ೧೫ | ೧೫ |
| ೮ | ತುಮಕೂರು | ತುಮಕೂರು ಟೌನ್, ಹಿರೇಹಳ್ಳಿ | – | – | ೧೨ | ೧೨ |
| ಒಟ್ಟು | | | ೭ | ೮೦೦ | ೯೩೩೭ | ೧೦೭೩೭ |

ಆಧಾರ: ಉಪ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ತುಮಕೂರು

## ಬೀಡಿ ಉದ್ಯಮ

ತುಮಕೂರಿನಲ್ಲಿ ಬೀಡಿ ಕೈಗಾರಿಕೆಗಳಿಗೆ ಸಂಬಂಧಿಸಿದಂತೆ ಅನ್ವರ್ ಬೀಡಿ ವರ್ಕ್ಸ್, ಮಲಬಾರ್ ಬೀಡಿ ವರ್ಕ್ಸ್, ಕೃಷ್ಣ ಬೀಡಿ ವರ್ಕ್ಸ್, ಮಂಗಳೂರು ಗಣೇಶ ಬೀಡಿ ವರ್ಕ್ಸ್, ಜೆ.ಎಸ್.ರಾಜು ಬೀಡಿ ವರ್ಕ್ಸ್‌ಗಳು ಬೀಡಿ ಉದ್ಯಮದಲ್ಲಿ ತೊಡಗಿವೆ.

## ಅಕ್ಕಿ ಮತ್ತು ಎಣ್ಣೆ ಗಿರಣಿಗಳು

ತುಮಕೂರು ಅಕ್ಕಿ ಮತ್ತು ಎಣ್ಣೆ ಗಿರಣಿಗಳಿಗೆ ಪ್ರಸಿದ್ಧಿಯಾಗಿದೆ. ಇದರ ವ್ಯಾಪ್ತಿಯಲ್ಲಿ ಅಪ್ಪಣ್ಣ ಶೆಟ್ಟಿ ಅಂಡ್ ಸನ್ಸ್ ಆಯಿಲ್ ಅಂಡ್ ರೈಸ್ ಮಿಲ್ಸ್, ಜಿ.ಎಂ.ಬಸಪ್ಪ ಅಂಡ್ ಸನ್ಸ್ ರೈಸ್ ಮಿಲ್ಸ್, ಗಂಗಾಧರೇಶ್ವರ ರೈಸ್ ಮಿಲ್ಸ್, ಗೌರಿಶಂಕರ ಆಯಿಲ್ ಮಿಲ್ಸ್, ಮಂಜುನಾಥ ರೈಸ್ ಮಿಲ್ಸ್, ಕೆ.ನಾರಾಯಣ ಶೆಟ್ಟಿ ಅಂಡ್ ಸನ್ಸ್ ಮಿಲ್ಸ್, ಮಹಾವೀರ ಆಯಿಲ್ ಮಿಲ್ಸ್, ಮಂಜುನಾಥ ರೈಸ್ ಮಿಲ್ಸ್, ನಟರಾಜ ಆಯಿಲ್ ಇಂಡಸ್ಟ್ರೀಸ್, ನೀಲಕಂಠೇಶ್ವರ ಆಯಿಲ್ ಮಿಲ್ಸ್, ನಿರಂಜನ್ ಅಂಡ್ ಟಿ.ಎಸ್.ಸಿದ್ಧಲಿಂಗಪ್ಪ ರೈಸ್ ಮಿಲ್ಸ್, ಶ್ರೀ ರಾಮ ರೈಸ್ ಮಿಲ್ಸ್, ಶ್ರೀರಂಗನಾಥ ಆಯಿಲ್ ರೋಟರೀಸ್, ಎನ್.ರುದ್ರಯ್ಯ ಅಂಡ್ ಸನ್ಸ್ ಮಿಲ್ಸ್, ಶಿವಾನಂದ ರೈಸ್ ಮಿಲ್ಸ್, ಸಿದ್ಧಗಂಗಾ ಆಯಿಲ್ ಎಕ್ಸ್‌ಟ್ರಾಕ್ಷನ್, ಶ್ರೀ ಚೆನ್ನಬಸವೇಶ್ವರ ಆಯಿಲ್ ಇಂಡಸ್ಟ್ರೀಸ್, ವೆಂಕಟೇಶ್ವರ ರೈಸ್ ಮಿಲ್ಸ್, ವಿಜಯಲಕ್ಷ್ಮಿ ಆಯಿಲ್ ಇಂಡಸ್ಟ್ರೀಸ್ ಮತ್ತು ಕೆ.ಜಿ.ಯಡಿಯೂರಪ್ಪ ಅಂಡ್ ಸನ್ಸ್, ಇವುಗಳಲ್ಲದೇ ಜಿಲ್ಲೆಯಲ್ಲಿ ಇನ್ನೂ ಕೆಲವು ರೈಸ್ ಮತ್ತು ಆಯಿಲ್ ಮಿಲ್‌ಗಳು ಕಾರ್ಯನಿರ್ವಹಿಸುತ್ತಿವೆ.

## ಖಾದಿ ಮತ್ತು ಗ್ರಾಮೋದ್ಯೋಗ

ಗ್ರಾಮೀಣ ಪ್ರದೇಶದ ತೀವ್ರತರ ಸಮಸ್ಯೆಗಳಾದ ನಿರುದ್ಯೋಗ ಮತ್ತು ಬಡತನಗಳ ನಿರ್ಮೂಲನೆಗೆ ಪರಿಹಾರ ಮಾರ್ಗವೊಂದಿರಬೇಕೆಂದು ಮನಗಂಡ ಗಾಂಧೀಜಿಯವರು ಖಾದಿ ಮತ್ತು ಗ್ರಾಮೋದ್ಯೋಗಗಳ ಪುನರುತ್ಥಾನಕ್ಕೆ ರಾಷ್ಟ್ರೀಯ ಆಂದೋಲನವನ್ನಾರಂಭಿಸಿದರು. ಸ್ವದೇಶಿ ಚಳವಳಿಯಿಂದ ಖಾದಿ ನೂಲು ಮತ್ತು ನೇಯ್ಗೆಗೆ ಪ್ರಾಮುಖ್ಯತೆ ದೊರಕಿತು. ಸ್ವಾತಂತ್ರ್ಯ ಪೂರ್ವದಲ್ಲಿ ಖಾದಿ ಬಟ್ಟೆ ಸ್ವಾತಂತ್ರ್ಯ ಹೋರಾಟಗಾರರ ಸಮವಸ್ತ್ರವಾಗಿತ್ತು. ಖಾದಿ ತೊಡುವ ಜನರು ಗಾಂಧೀಜಿಯ ಹಾಗೆ ಚರಕ ಸಂಘದ ಜನಕರಾದರು. ಕರ್ನಾಟಕ ಸರ್ಕಾರ ೧೯೫೭ರಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯನ್ನು ಶಾಸನಬದ್ಧ ಸಂಸ್ಥೆಯನ್ನಾಗಿ ಮಾಡಿ, ಗ್ರಾಮೀಣ ಕುಶಲಕರ್ಮಿಗಳು, ಕಸುಬುದಾರರು, ವಿದ್ಯಾವಂತ ನಿರುದ್ಯೋಗಿಗಳು ಮತ್ತು ಮಹಿಳೆಯರು ಇವರಿಗೆ ತಾವಿರುವ ಸ್ಥಳದಲ್ಲಿಯೇ ಉದ್ಯೋಗ ದೊರಕಿಸಿ ಕೊಡುವಂತೆ ಮಾಡಿದೆ. ಗ್ರಾಮೀಣ ಪ್ರದೇಶದಲ್ಲಿ ಖಾದಿ ಮತ್ತು ಗ್ರಾಮೋದ್ಯೋಗಗಳನ್ನು ಕೈಗೊಂಡು ನಡೆಸುವ ವೈಯಕ್ತಿಕ ಕಸುಬುದಾರರಿಗೆ ನೋಂದಾಯಿತ ಸಂಘ ಸಂಸ್ಥೆಗಳಿಗೆ ಹಣಕಾಸಿನ ನೆರವು ಮತ್ತು ತಾಂತ್ರಿಕ ಮಾರ್ಗದರ್ಶನ ನೀಡುವ ಕಾರ್ಯವನ್ನು ಈ ಮಂಡಳಿಯು ನಿರ್ವಹಿಸುತ್ತಿದೆ. ಕೇಂದ್ರದ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗವು ಆಯವ್ಯಯ ಹಂಚಿಕೆಯ ಮೂಲಕ ನೀಡುವ ಹಣಕಾಸನ್ನು ರಾಜ್ಯ ಮಂಡಳಿಯು ಪ್ರತಿ ವರ್ಷ ತಯಾರಿಸುವ ಕ್ರಿಯಾಯೋಜನೆಯ

ರೀತ್ಯ ವೈಯಕ್ತಿಕ ಕಸುಬುದಾರರಿಗೆ ನೋಂದಾಯಿತ ಸಂಘಸಂಸ್ಥೆಗಳಿಗೆ ಹಾಗೂ ಸಹಕಾರ ಸಂಘಗಳಿಗೆ ಖಾದಿ ಮತ್ತು ಗ್ರಾಮೋದ್ಯೋಗವನ್ನು ನಡೆಸಲು ಖಾದಿ ಆಯೋಗವು ಗೊತ್ತು ಪಡಿಸಿರುವ "ಧನಸಹಾಯ ಸ್ವರೂಪ" ದನ್ವಯ ವಿತರಣೆ ಮಾಡುತ್ತದೆ.

ಸರ್ಕಾರದ ಪರವಾಗಿ ಮೊಟ್ಟ ಮೊದಲು ಖಾದಿ ಮತ್ತು ಗ್ರಾಮೋದ್ಯೋಗವನ್ನು ಪ್ರಾರಂಭಿಸಿದ ಕೀರ್ತಿ ಅಂದಿನ ಮೈಸೂರು ಮಹಾರಾಜರ ಸರ್ಕಾರಕ್ಕೆ ಸಲ್ಲುತ್ತದೆ. ಸರ್ ಮಿರ್ಜಾ ಇಸ್ಮಾಯಿಲ್‌ರವರು ಗಾಂಧೀಜಿಯವರ ಭೇಟಿಯ ಸವಿನೆನಪಿಗಾಗಿ ೧೯೨೭ರಲ್ಲಿ ಮೈಸೂರು ಜಿಲ್ಲೆಯ " ಬದನವಾಳು" ಮತ್ತು ಚಿತ್ರದುರ್ಗ ಜಿಲ್ಲೆಯ " ಐಮಂಗಲ" ಗಳಲ್ಲಿ ಸರ್ಕಾರದ ಪರವಾಗಿ ಖಾದಿ ಕಾರ್ಯವನ್ನಾರಂಭಿಸಿದರು. ಇದೇ ಸಮಯದಲ್ಲಿ ಚರಖಾ ಸಂಘ, ಅಖಿಲ ಭಾರತ ನೂಲುವವರ ಸಂಘ, ಸರ್ವ ಸೇವಾ ಸಂಘ ಮೊದಲಾದವುಗಳು ಪ್ರಾರಂಭಗೊಂಡವು. ಅಖಿಲ ಭಾರತ ಗ್ರಾಮೋದ್ಯೋಗ ಮಂಡಳಿ ರಚನೆಯಾದದ್ದು ಇದೇ ಕಾಲಾವಧಿಯಲ್ಲಿ. ತಾಂತ್ರಿಕತೆಯಲ್ಲಿ ಅನೇಕ ಸಂಶೋಧನೆಗಳು ನಡೆದು ಕದಿರುಗಳ ಅಂಬರ ಚರಖದ ಅವಿಷ್ಕಾರವಾಯಿತು. ಸುಧಾರಿತ ಸೇವಾ ಗ್ರಾಮದ ಮಾದರಿಯ ಮಗ್ಗಗಳು ತಯಾರಿಸಲ್ಪಟ್ಟವು.

ಖಾದಿ ವ್ಯಾಖ್ಯೆಯಲ್ಲಿ ಅರಳೆ ಖಾದಿಯಲ್ಲದೆ ರೇಷ್ಮೆ, ಉಣ್ಣೆ, ಮಸ್ಲಿನ್ ಮತ್ತು ಪಾಲಿ ವಸ್ತ್ರಗಳ ಉತ್ಪಾದನೆಯೂ ಸೇರಿದೆ. ಗ್ರಾಮೀಣ ಕೈಗಾರಿಕೆಯೆಂದರೆ ಕಂದಾಯ ಇಲಾಖೆಯ ದಾಖಲೆಯಂತೆ ಯಾವ ಪ್ರದೇಶವನ್ನು ಗ್ರಾಮ ಎಂದು ಪರಿಗಣಿಸಲಾಗಿದೆಯೋ ಅಂತಹ ಪ್ರದೇಶದಲ್ಲಿ ಉತ್ಪತ್ತಿ ಮಾಡಲಾಗುವ ವಸ್ತುಗಳ ಉದ್ದಿಮೆ ಹಾಗೂ ಸೇವೆ ಎಂದು ಮತ್ತು ಬಂಡವಾಳ ಹೂಡಿಕೆಯು ೧೫ ಸಾವಿರಕ್ಕಿಂತ ಅಧಿಕವಿರಕೊಡದೆಂದು ವ್ಯಾಖ್ಯಾನಿಸಲಾಗಿದೆ. ಆರಂಭದ ದಿನಗಳಲ್ಲಿ ಮಂಡಳಿಯ ವ್ಯಾಪ್ತಿಯಲ್ಲಿ ಸಾಂಪ್ರದಾಯಕವೆನ್ನಬಹುದಾದ ೨೬ ಉದ್ದಿಮೆಗಳಿದ್ದವು. ಈಗ ಆ ೨೬ ಉದ್ದಿಮೆಗಳ ಜೊತೆಗೆ ಇನ್ನೂ ಸು. ೯೦ ಉದ್ದಿಮೆಗಳು ಸೇರ್ಪಡೆಯಾಗಿವೆ. ಇವುಗಳನ್ನು ಪ್ರಧಾನವಾಗಿ ಖನಿಜ ಆಧಾರಿತ ಉದ್ದಿಮೆ, ಅರಣ್ಯಾಧಾರಿತ ಕೈಗಾರಿಕೆ, ಕೃಷಿ ಹಾಗೂ ಆಹಾರ ಉದ್ದಿಮೆಗಳು, ಪಾಲಿಮರ್ ಮತ್ತು ರಾಸಾಯನಿಕ ಉದ್ದಿಮೆಗಳು, ಎಂಜಿನಿಯರಿಂಗ್ ಹಾಗೂ ಅಸಂಪ್ರದಾಯಕ ಶಕ್ತಿ ಆಧಾರಿತ ಉದ್ದಿಮೆಗಳು, ವಸ್ತ್ರೋದ್ಯಮ (ಖಾದಿಯನ್ನು ಹೊರತುಪಡಿಸಿ) ಮತ್ತು ಸೇವಾ ಉದ್ದಿಮೆಗಳೆಂದು ವಿಂಗಡಿಸಲ್ಪಟ್ಟು ೧೧೬ ಕೈಗಾರಿಕಾ ಚಟುವಟಿಕೆಗಳು ಇದರ ಕಕ್ಷೆಗೆ ಸೇರಲ್ಪಟ್ಟಿವೆ.

**ಖಾದಿ ಆಯೋಗ ಮತ್ತು ಮಂಡಳಿ**

ಖಾದಿ ಮತ್ತು ಗ್ರಾಮೋದ್ಯೋಗಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡುವುದಕ್ಕಾಗಿ ೧೯೫೬ರ ಖಾದಿ ಮತ್ತು ಗ್ರಾಮೋದ್ಯೋಗ ಕಾಯ್ದೆಯನ್ನು ಜಾರಿಗೊಳಿಸಿದುದರ ಪರಿಣಾಮವಾಗಿ ಅಖಿಲ ಭಾರತದ ಖಾದಿ ಮಂಡಳಿಯು ಹೆಚ್ಚಿನ ಅಧಿಕಾರದೊಂದಿಗೆ ೧೯೫೭ರಲ್ಲಿ ಅಖಿಲ ಭಾರತ ಖಾದಿ ಆಯೋಗವಾಗಿ ಪರಿವರ್ತಿತಗೊಂಡಿತು. ಇದರ ಅಧಿಕೃತ ಕಾರ್ಯಗಳು ಕಚ್ಚಾ ಮಾಲು ಸಂಗ್ರಹಿಸುವುದು ಮತ್ತು ಪೂರೈಸುವುದು, ಸಿದ್ಧ ವಸ್ತುಗಳನ್ನು ವಿಲೇವಾರಿ ಮಾಡುವುದು, ಕಸುಬುದಾರರ ತರಬೇತಿಯ ಮೇಲ್ವಿಚಾರಣೆ ನಡೆಸುವುದು, ತಾಂತ್ರಿಕ ಕಾರ್ಯಕ್ಕೆ ನೆರವನ್ನೊದಗಿಸುವುದು, ಸುಧಾರಿತ ಸಾಧನಗಳ ಪೂರೈಕೆ ಮಾಡುವುದು ಮತ್ತು ಗ್ರಾಮೋದ್ಯೋಗ ಕಾರ್ಯಗಳಿಗೆ ಸಹಾಯ ಧನ, ಸಾಲಸೌಲಭ್ಯ ಮೊದಲಾದವುಗಳನ್ನು ನಿರ್ವಹಿಸುವುದಾಗಿದೆ.

ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯು ತುಮಕೂರು ಜಿಲ್ಲಾ ಕಛೇರಿಯನ್ನು ೧೯೬೦–೬೧ ರಲ್ಲಿ ಸ್ಥಾಪಿಸಿ ಜಿಲ್ಲೆಯ ಗ್ರಾಮೀಣ ಪ್ರದೇಶದ ಕುಶಲಕರ್ಮಿಗಳಿಗೆ ಹಾಗೂ ನಿರುದ್ಯೋಗಿ ಮತ್ತು ಅರೆ ಉದ್ಯೋಗಿ ಯುವಕರಿಗೆ ಕಡಿಮೆ ಬಂಡವಾಳ ಹೂಡಿ, ಗ್ರಾಮೀಣ ಕಚ್ಚಾ ವಸ್ತುಗಳನ್ನು ಆಧರಿಸಿದ ಖಾದಿ ಮತ್ತು ಗ್ರಾಮೀಣ ಕೈಗಾರಿಕೆಗಳನ್ನು ಸ್ಥಾಪಿಸುವ ಯೋಜನೆಗಳನ್ನು ಅನುಷ್ಠಾನಗೊಳಿಸಿ ಸಾಲ, ಸಹಾಯಧನ ಮತ್ತು ತಾಂತ್ರಿಕ ಸಲಹೆಗಳನ್ನು ನೀಡುತ್ತಾ ಬಂದಿರುತ್ತದೆ.

**ಧನ ಸಹಾಯ ಸ್ವರೂಪ ಯೋಜನೆ**

ಈ ಯೋಜನೆಯು ೧೯೫೭–೫೮ರಿಂದ ೧೯೯೪–೯೫ರವರೆಗೆ ಜಾರಿಯಲ್ಲಿದ್ದು, ಖಾದಿ ಉದ್ದಿಮೆಗಳಿಗೆ ಮತ್ತು ಗ್ರಾಮೀಣ ಉದ್ದಿಮೆಗಳಿಗೆ ನೆರವನ್ನು ನೀಡಲಾಗುತ್ತಿತ್ತು. ತುಮಕೂರು ಜಿಲ್ಲೆಯ ಅರಳೆ ಖಾದಿ, ಪಾಲಿವಸ್ತ್ರ ಖಾದಿ, ರೇಷ್ಮೆ ಖಾದಿ, ಉಣ್ಣೆ ಖಾದಿ ಉದ್ದಿಮೆಗಳಿಗೆ ೨೨ ಸಂಘ ಸಂಸ್ಥೆಗಳ ಮೂಲಕ ರೂ. ೧೨೩.೦೫ ಲಕ್ಷಗಳ ಆರ್ಥಿಕ ನೆರವು

ನೀಡಲಾಗಿದ್ದು, ಈ ಘಟಕಗಳಿಂದ ಇಲ್ಲಿಯವರೆಗೆ ರೂ. ೪೬.೩೮ ಲಕ್ಷಗಳ ವಸೂಲಿ ಮಾಡಲಾಗಿದೆ. ಜಿಲ್ಲೆಯ ಐದು ಘಟಕಗಳು ಸಂಪೂರ್ಣ ಸಾಲವನ್ನು ಮರುಪಾವತಿ ಮಾಡಿದ್ದು, ಉಳಿದ ಘಟಕಗಳಿಂದ ದಿನಾಂಕ ೩೧-೦೩-೨೦೦೮ ರವರೆಗೆ ರೂ. ೭೬.೯೯ ಲಕ್ಷ ಸಾಲ ಮರು ಪಾವತಿಸದೆ ಬಾಕಿ ಉಳಿದಿತ್ತು.

## ಗ್ರಾಮೋದ್ಯೋಗ ಉದ್ದಿಮೆ

ಮಂಡಳಿಯ ೧೯೫೭-೫೮ರಿಂದ ೧೯೯೪-೯೫ನೇ ಸಾಲಿನವರೆಗೆ ೨೫ ವಿವಿಧ ಉದ್ದಿಮೆಗಳಲ್ಲಿನ ೯೮೩ ಗ್ರಾಮೋದ್ಯೋಗ ಘಟಕಗಳಿಗೆ ಒಟ್ಟು ರೂ. ೧೮೯.೨೬ ಲಕ್ಷಗಳ ಆರ್ಥಿಕ ನೆರವು ನೀಡಿರುತ್ತದೆ. ಈ ನೆರವಿನಲ್ಲಿ ಸಾಲ ರೂ. ೧೭೫.೫೯ ಲಕ್ಷಗಳಾಗಿದ್ದು, ಉಳಿಕೆ ರೂ. ೧೪.೬೭ ಲಕ್ಷಗಳು ಅನುದಾನವಾಗಿರುವುದು. ಈ ಯೋಜನೆಯಡಿಯಲ್ಲಿ ಬಿದಿರು,ಬೆತ್ತ, ಅಗರಬತ್ತಿ, ಬೆಲ್ಲ ತಯಾರಿಕೆ, ಬೇಕರಿ ಹಾಗೂ ಆಹಾರ ಉತ್ಪನ್ನಗಳು, ರೂರಲ್ ಎಂಜಿನಿಯರಿಂಗ್ ಉದ್ದಿಮೆಯ ವ್ಯಾಪ್ತಿಯಲ್ಲಿನ ಬಡಗಿ ಮತ್ತು ಕಮ್ಮಾರಿಕೆ ಘಟಕಗಳು, ಟೈಲರಿಂಗ್, ಚರ್ಮೋದ್ಯೋಗ, ಕುಂಬಾರಿಕಾ ಘಟಕಗಳು, ಎಲೆಕ್ಟ್ರಾನಿಕ್ಸ್ ಘಟಕಗಳು ಮೊದಲಾದವುಗಳು ಸೇರುತ್ತವೆ. ಈ ಯೋಜನೆಯಲ್ಲಿ ಆರ್ಥಿಕ ನೆರವು ನೀಡಿದ ಘಟಕಗಳಿಂದ ರೂ. ೧೬೯.೫೭ ಲಕ್ಷಗಳ ಸಾಲ ಮತ್ತು ಬಡ್ಡಿಯನ್ನು ದಿ ೩೧-೦೩-೨೦೦೮ರವರೆಗೆ ವಸೂಲಿ ಮಾಡಲಾಗಿದೆ. ಈ ಯೋಜನೆಯಲ್ಲಿ ಆರ್ಥಿಕ ನೆರವು ಪಡೆದ ೩೨೦ ಘಟಕಗಳು ಸಾಲ ಮತ್ತು ಬಡ್ಡಿಯನ್ನು ಸಂಪೂರ್ಣವಾಗಿ ಮರುಪಾವತಿ ಮಾಡಿವೆ. ಈ ಯೋಜನೆಯಡಿಯಲ್ಲಿ ಆರ್ಥಿಕ ನೆರವು ಪಡೆದ ೮೨ ಗ್ರಾಮೋದ್ಯೋಗ ಕೈಗಾರಿಕಾ ಘಟಕಗಳು ೨೦೦೭-೦೮ ನೇ ಸಾಲಿನಲ್ಲಿ ಸುಮಾರು ೨೨೯ ಕಸುಬುದಾರರಿಗೆ ಉದ್ಯೋಗವನ್ನೊದಗಿಸಿದ್ದು, ವಾರ್ಷಿಕ ರೂ. ೧೧೭.೭೯ ಲಕ್ಷಗಳ ಮೌಲ್ಯದಷ್ಟು ಸರಕನ್ನು ಉತ್ಪಾದಿಸಿ ರೂ. ೧೨೫.೧೭ ಲಕ್ಷಗಳಿಗೆ ಮಾರಾಟ ಮಾಡಿದ್ದವು.

## ಸಮೂಹ ಬ್ಯಾಂಕ್ ನಿಧಿ ಯೋಜನೆ

ಮಂಡಳಿಯ ೧೯೯೫-೯೬ನೇ ಸಾಲಿನಿಂದ ೧೯೯೯-೨೦೦೦ನೇ ಸಾಲಿನವರೆಗೆ ೧೦ ವಿವಿಧ ಉದ್ದಿಮೆಗಳಲ್ಲಿನ ೫೪ ಗ್ರಾಮೋದ್ಯೋಗ ಘಟಕಗಳಿಗೆ ಒಟ್ಟು ರೂ. ೨೨೦.೨೮ ಲಕ್ಷಗಳ ಆರ್ಥಿಕ ನೆರವು ನೀಡಿರುತ್ತದೆ. ಈ ನೆರವಿನಲ್ಲಿ ಸಾಲ ರೂ. ೧೫೯.೨೧ ಲಕ್ಷಗಳಿದ್ದು, ಉಳಿಕೆ ರೂ. ೬೧.೦೭ ಲಕ್ಷಗಳು ಅಂಚಿನ ಹಣ (ಮಾರ್ಜಿನ್ ಮನಿ)ವಾಗಿರುತ್ತದೆ. ಈ ಯೋಜನೆಯಲ್ಲಿ ಪ್ರಮುಖವಾಗಿ ಮೇಜುಕಟ್ಟು, ಇಟ್ಟಿಗೆ ಘಟಕಗಳು, ಅಕ್ಕಿಗಿರಣಿ ಘಟಕಗಳು ಮತ್ತು ರೂರಲ್ ಎಂಜಿನಿಯರಿಂಗ್ ಉದ್ದಿಮೆಯಲ್ಲಿನ ಮರದ ಪೀಠೋಪಕರಣ ಘಟಕಗಳನ್ನು ಸ್ಥಾಪಿಸಲು ನೆರವು ನೀಡಲಾಗಿದೆ. ಈ ಯೋಜನೆಯಡಿಯಲ್ಲಿ ಆರ್ಥಿಕ ನೆರವು ನೀಡಿದ ಘಟಕಗಳಿಂದ ೩೧-೦೩-೨೦೦೮ರವರೆಗೆ ರೂ. ೨೧೭.೪೩ ಲಕ್ಷಗಳಷ್ಟು ಸಾಲ ಮತ್ತು ಬಡ್ಡಿಯನ್ನು ವಸೂಲಿ ಮಾಡಲಾಗಿದೆ. ಈ ಯೋಜನೆಯಡಿಯಲ್ಲಿ ಆರ್ಥಿಕ ನೆರವು ಪಡೆದ ೧೬ ಘಟಕಗಳು ತಮ್ಮ ಸಾಲ ಮತ್ತು ಬಡ್ಡಿಯನ್ನು ಸಂಪೂರ್ಣವಾಗಿ ಮರುಪಾವತಿ ಮಾಡಿವೆ. ಈ ಯೋಜನೆಯಡಿಯಲ್ಲಿ ಆರ್ಥಿಕ ನೆರವು ಪಡೆದ ೨೩ ಗ್ರಾಮೋದ್ಯೋಗ ಕೈಗಾರಿಕಾ ಘಟಕಗಳಿಂದ ಸುಮಾರು ೨೨೯ ಕಸುಬುದಾರರಿಗೆ ಉದ್ಯೋಗಾವಕಾಶ ದೊರಕಿದ್ದು, ೨೦೦೭-೦೮ರ ವಾರ್ಷಿಕ ಉತ್ಪಾದನೆ, ಸುಮಾರು ರೂ. ೧೨೨.೪೮ ಲಕ್ಷಗಳಷ್ಟಿದ್ದು, ರೂ. ೧೩೭.೪೫ ಲಕ್ಷಗಳಿಗೆ ಮಾರಾಟಗೊಂಡಿರುವುದು.

## ಗ್ರಾಮೀಣ ಉದ್ಯೋಗ ಸೃಷ್ಟಿ ಯೋಜನೆ (ಅಂಚಿನ ಹಣ)

ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯು ತುಮಕೂರು ಜಿಲ್ಲೆಯಲ್ಲಿ ಗ್ರಾಮೀಣ ಉದ್ಯೋಗ ಸೃಷ್ಟಿ ಯೋಜನೆಯನ್ನು ೨೦೦೮-೦೯ ರಿಂದ ೨೦೧೧-೧೨ ರವರೆಗೂ ಅನುಷ್ಠಾನಗೊಳಿಸುತ್ತಾ ಬಂದಿರುತ್ತದೆ. ಕಳೆದ ಆರು ವರ್ಷಗಳಲ್ಲಿ ಒಟ್ಟು ೧೪೩ ಗ್ರಾಮೋದ್ಯೋಗ ಕೈಗಾರಿಕೆಗಳಿಗೆ ಅಂಚು ಹಣ ಯೋಜನೆಯಡಿಯಲ್ಲಿ ವಿವಿಧ ಬ್ಯಾಂಕುಗಳಿಂದ ಮಂಜೂರಾಗಿದ್ದ ಧನಸಹಾಯವನ್ನು ಮಂಡಳಿಯು ವಾರ್ಷಿಕ ಬಿಡುಗಡೆ ಮಾಡಿರುವುದರ ವಿವರವನ್ನು ಕೋಷ್ಟಕ.೫.೧೨ ರಲ್ಲಿ ನೀಡಿದೆ.

### ಕೋಷ್ಟಕ ೫.೧೨ ಮಂಡಳಿಯು ಬಿಡುಗಡೆ ಮಾಡಿದ ಧನ ಸಹಾಯದ ವಿವರ.

| ವರ್ಷ | ನಿಗದಿಪಡಿಸಿದ ಗುರಿ | | ಸಾಧಿಸಿದ ಪ್ರಗತಿ | |
|---|---|---|---|---|
| | ಭೌತಿಕ ಗುರಿ (ಘಟಕಗಳು) | ಆರ್ಥಿಕ ಗುರಿ (ರೂ. ಲಕ್ಷಗಳು) | ಭೌತಿಕಗುರಿ (ಘಟಕಗಳು) | ಆರ್ಥಿಕ ಗುರಿ (ರೂ. ಲಕ್ಷಗಳು) |
| ೨೦೦೮-೨೦೦೯ | ೫೩ | ೬೩.೭೫ | ೧೬ | ೪೦.೭೦ |
| ೨೦೦೯-೨೦೧೦ | ೫೩ | ೬೩.೭೫ | ೧೬ | ೨೦.೭೪ |
| ೨೦೧೦-೨೦೧೧ | ೩೭ | ೫೧.೯೯ | ೧೭ | ೩೦.೨೨ |
| ೨೦೧೧-೨೦೧೨ | - | - | ೨೬ | ೭೯.೭೪ |
| ಒಟ್ಟು | ೧೪೩ | ೧೭೯.೧೯ | ೭೫ | ೧೭೧.೪೦ |

ಆಧಾರ: ಜಿಲ್ಲಾ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ತುಮಕೂರು.

ಈ ಯೋಜನೆಯಲ್ಲಿ ೨೦೦೭-೦೮ನೇ ಸಾಲಿನಲ್ಲಿ ೬೭ ಘಟಕಗಳಿಗೆ ಭೌತಿಕ ಗುರಿ ಮತ್ತು ರೂ. ೭೭.೦೦ ಲಕ್ಷಗಳ ಆರ್ಥಿಕ ಗುರಿಯನ್ನು ನಿಗದಿಪಡಿಸಲಾಗಿದ್ದು, ದಿ ೩೧-೦೩-೨೦೦೮ರ ಅಂತ್ಯಕ್ಕೆ ೮೭ ಘಟಕಗಳಿಗೆ ಆರ್ಥಿಕ ನೆರವು ಮಂಜೂರಾತಿ ಕೋರಿ ವಿವಿಧ ಬ್ಯಾಂಕುಗಳಿಗೆ ಶಿಫಾರಸ್ಸು ಮಾಡಲಾಗಿದೆ. ಅದರಲ್ಲಿ ೪೩ ಘಟಕಗಳಿಗೆ ಸಾಲ ಮಂಜೂರಾಗಿರುತ್ತದೆ. ಈ ೪೩ ಘಟಕಗಳಿಗೆ ರೂ. ೬೧.೯೫ ಲಕ್ಷಗಳ ಮಾರ್ಜಿನ್ ಹಣವನ್ನು ಮಂಡಳಿಯಿಂದ ಮಂಜೂರು ಮಾಡಿ ಬಿಡುಗಡೆ ಮಾಡಲಾಗಿದೆ. ಮಾರ್ಜಿನ್ ಮನಿ ಯೋಜನೆಯಲ್ಲಿ ನೆರವು ಪಡೆದ ೧೦೨ ಗ್ರಾಮೋದ್ಯೋಗ ಕೈಗಾರಿಕಾ ಘಟಕಗಳಿಂದ ೨೦೦೭-೦೮ನೇ ಸಾಲಿನವರೆಗೆ ಸುಮಾರು ೧,೧೭೭ ಜನರಿಗೆ ಉದ್ಯೋಗಾವಕಾಶ ಕಲ್ಪಿಸಲಾಗಿದೆ. ಈ ಘಟಕಗಳಿಂದ ವಾರ್ಷಿಕ ರೂ. ೮೭೬.೧೯ ಲಕ್ಷಗಳ ಉತ್ಪಾದನೆಯಾಗಿದ್ದು, ರೂ. ೧,೦೩೬.೭೬ ಲಕ್ಷಗಳಿಗೆ ಮಾರಾಟವಾಗಿರುತ್ತದೆ.

## ಕೈಗಾರಿಕಾ ವಿಕಾಸ ಯೋಜನೆ

ಡಾ. ಡಿ.ಎಂ.ನಂಜುಂಡಪ್ಪ ವರದಿ ಪ್ರಕಾರ ಕರ್ನಾಟಕ ಸರ್ಕಾರವು ಅತ್ಯಂತ ಹಿಂದುಳಿದ ತಾಲೂಕುಗಳಲ್ಲಿ ಕೈಗಾರಿಕಾ ವಿಕಾಸ ಯೋಜನೆಯನ್ನು ಜಾರಿಗೊಳಿಸಿದ್ದರಿಂದ ತುಮಕೂರು ಜಿಲ್ಲೆಯ ಅತೀ ಹಿಂದುಳಿದ ತಾಲೂಕುಗಳಾದ ಗುಬ್ಬಿ, ಕುಣಿಗಲ್, ಮಧುಗಿರಿ, ಶಿರಾ ಮತ್ತು ಪಾವಗಡ ತಾಲೂಕುಗಳನ್ನು ಗುರುತಿಸಿದ್ದು, ಈ ತಾಲೂಕುಗಳಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಚಟುವಟಿಕೆಯನ್ನು ಪ್ರಾರಂಭಿಸಲು ಮೂರು ಖಾದಿ ಸಂಘಗಳನ್ನು ಆಯ್ಕೆ ಮಾಡಲಾಗಿದೆ. ಮಧುಗಿರಿ ತಾಲೂಕಿನ ಐ.ಡಿ.ಹಳ್ಳಿ ಗ್ರಾಮದಲ್ಲಿ ನೂಲಿನ ಮತ್ತು ನೇಯ್ಗೆ ಕೇಂದ್ರವನ್ನು ತೆರೆಯಲು ೨೦೦೫-೦೬ನೇ ಸಾಲಿಗೆ ಧನ ಸಹಾಯ ಮಂಜೂರಾತಿ ಕೋರಿ ರಾಜ್ಯ ಸರ್ಕಾರಕ್ಕೆ ರಾಜ್ಯ ಖಾದಿ ಮಂಡಳಿಯ ಮೂಲಕ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಆದರೆ ಆಯ್ಕೆ ಮಾಡಿದ ಸಂಸ್ಥೆಯ ಹೆಸರಿನಲ್ಲಿ ಸ್ವಂತ ನಿವೇಶನವಿಲ್ಲದೆ ಇರುವುದರಿಂದ ಪ್ರಸ್ತಾವನೆ ಬಾಕಿ ಉಳಿದಿತ್ತು. ೨೦೦೭-೦೮ನೇ ಸಾಲಿಗೆ ಗುಬ್ಬಿ ತಾಲೂಕಿನ ಕಲ್ಲೂರು ಗ್ರಾಮದಲ್ಲಿ ರೇಷ್ಮೆ ನೂಲು ಮತ್ತು ನೇಯ್ಗೆ ಉದ್ದಿಮೆಯ ಕೇಂದ್ರವನ್ನು ತೆರೆಯಲು ಯೋಜನಾ ವರದಿಯನ್ನು ತಯಾರಿಸಿ ಕೇಂದ್ರ ಕಛೇರಿಗೆ ಕಳುಹಿಸಲಾಗಿತ್ತು.

## ಕುಶಲ ಕರ್ಮಿಗಳು

ಜಿಲ್ಲೆಯಲ್ಲಿ ಕಮ್ಮಾರಿಕೆ, ಚಮ್ಮಾರಿಕೆ, ಬಡಗಿ, ಕುಂಬಾರಿಕೆ, ಜೇನುಕೃಷಿ, ಬೆತ್ತ, ಅಗರಬತ್ತಿ, ದೋಬಿ, ಕ್ಷೌರಿಕ, ದರ್ಜಿ ಮೊದಲಾದ ಒಟ್ಟು ೫೯೮೯ ಕುಶಲ ಕರ್ಮಿಗಳಿದ್ದು, ಜಿಲ್ಲೆಯ ಸರ್ವತೋಮುಖ ಏಳಿಗೆಗೆ ಕಾರಣರಾಗಿದ್ದಾರೆ. ಕುಶಲ ಕರ್ಮಿಗಳು ಆರ್ಥಿಕವಾಗಿ ಸ್ವಾವಲಂಬಿಗಳಾಗಿ ಇತರರಿಗೂ ನೆರವಾಗುತ್ತಿದ್ದಾರೆ. ೨೦೧೫ರ ಮಾರ್ಚ್ ಅಂತ್ಯಕ್ಕೆ ಜಿಲ್ಲೆಯಲ್ಲಿದ್ದ ಕುಶಲ ಕರ್ಮಿಗಳ ವಿವರಗಳನ್ನು ಕೋಷ್ಟಕ.೫.೧೩ ರಲ್ಲಿ ನೀಡಿದೆ.

**ಕೋಷ್ಟಕ.೫.೧೩ ೩೧-೦೩-೨೦೧೫ರ ಅಂತ್ಯಕ್ಕೆ ತುಮಕೂರು ಜಿಲ್ಲೆಯಲ್ಲಿ ವಿವಿಧ ಕುಶಲಕರ್ಮಿ/ಕಸುಬುದಾರರ ವಿವರ.**

| ಕ್ರ.ಸಂ. | ಕುಶಲ ಕರ್ಮಿ/ಕಸುಬು | ಕುಶಲ ಕರ್ಮಿಗಳ ಸಂಖ್ಯೆ |
|---|---|---|
| ೧ | ಬಡಗಿ | ೪೮೯ |
| ೨ | ಕಮ್ಮಾರಿಕೆ | ೩೬೫ |
| ೩ | ಚಮ್ಮಾರಿಕೆ | ೨೯೮ |
| ೪ | ಉಣ್ಣೆ ನೇಯ್ಗೆ | ೧೬೮ |
| ೫ | ರೇಷ್ಮೆ ನೇಯ್ಗೆ (ಕೈ ಮಗ್ಗ) | ೪೫೯ |
| ೬ | ರೇಷ್ಮೆ ನೇಯ್ಗೆ (ವಿದ್ಯುತ್) | ೬೪೫ |
| ೭ | ಕುಂಬಾರಿಕೆ | ೨೩೨ |
| ೮ | ಜೇನುಕೃಷಿ | ೨೨೭ |
| ೯ | ಬಿದಿರು (ಬ್ಯಾಂಬು) | ೩೩೮ |
| ೧೦ | ಬೆತ್ತ | ೨೮೫ |
| ೧೧ | ಅಗರಬತ್ತಿ | ೬೪೭ |
| ೧೨ | ತೆಂಗು | ೨೩೮ |
| ೧೩ | ದೋಬಿ | ೪೮೭ |
| ೧೪ | ಕ್ಷೌರಿಕೆ | ೪೪೫ |
| ೧೫ | ದರ್ಜಿ | ೪೪೮ |
| ೧೬ | ಕಡ್ಡಿ ಪೊರಕೆ ತಯಾರಿಕೆ | ೧೩೮ |
| **ಒಟ್ಟು** | | **೫೯೦೯** |

**ಆಧಾರ: ಜಿಲ್ಲಾ ಕೈಗಾರಿಕಾ ಕೇಂದ್ರ, ತುಮಕೂರು.**

ತುಮಕೂರು ಜಿಲ್ಲೆಯಲ್ಲಿ ೨೦೦೭-೦೮ನೇ ಸಾಲಿನವರೆಗೆ ನೋಂದಣಿಗೊಂಡಿದ್ದ ಖಾದಿ ಸಂಘ ಸಂಸ್ಥೆಗಳು ೧೬, ಇವುಗಳಲ್ಲಿ ಐದು ಸಂಘ ಸಂಸ್ಥೆಗಳು ಮಾತ್ರ ಕಾರ್ಯನಿರ್ವಹಿಸುತ್ತಿದ್ದು, ಉಳಿದ ೧೧ ಸಂಘ ಸಂಸ್ಥೆಗಳು ಸ್ಥಗಿತಗೊಂಡಿವೆ. ೨೦೦೭-೦೮ನೇ ಸಾಲಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಐದು ಖಾದಿ ಸಂಘ ಸಂಸ್ಥೆಗಳನ್ನು ಈ ಮುಂದೆ ವಿವರಿಸಲಾಗಿದೆ.

**ಜಿಲ್ಲಾ ಖಾದಿ ಗ್ರಾಮೋದ್ಯೋಗ ಸಹಕಾರಿ ಸಂಘ (ನಿ), ತುಮಕೂರು**

ಈ ಸಂಘವು ೧೯೬೦ನೇ ಸಾಲಿನಲ್ಲಿ ಅರಳೆ ಖಾದಿಯನ್ನು ಉತ್ಪಾದಿಸುವ ಉದ್ದೇಶದೊಡನೆ ಪ್ರಾರಂಭಗೊಂಡಿತು. ಇದು ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಿಂದ ಒಟ್ಟು ರೂ. ೯.೭೮ ಲಕ್ಷಗಳ ಸಾಲ ಮತ್ತು ರೂ. ೦.೧೪ ಲಕ್ಷಗಳ ಅನುದಾನವನ್ನು ಪಡೆದಿದ್ದು, ರೂ. ೪.೮೬ ಲಕ್ಷಗಳನ್ನು ಮಂಡಳಿಗೆ ಮರುಪಾವತಿ ಮಾಡಿದೆ. ಇದು ೨೦೦೭-೦೮ನೇ ಸಾಲಿನಲ್ಲಿ ೩೧ ಮಂದಿಗೆ ಉದ್ಯೋಗವನ್ನೊದಗಿಸಿ, ರೂ. ೫.೩೦ ಲಕ್ಷ ಮೌಲ್ಯದ ಸರಕನ್ನು ಉತ್ಪಾದಿಸಿ, ರೂ. ೮.೯೪ ಲಕ್ಷಗಳಿಗೆ ಮಾರಾಟ ಮಾಡಿದೆ.

ಉಣ್ಣೆ ಕೈಮಗ್ಗದ ಉತ್ಪಾದನಾ ಮತ್ತು ಮಾರಾಟ ಸಹಕಾರ ಸಂಘ (ನಿ), ಬರಗೂರು, ಶಿರಾ ತಾಲೂಕು

ಈ ಸಹಕಾರ ಸಂಘವು ಉಣ್ಣೆ ಖಾದಿ (ಕಂಬಳಿ)ಯನ್ನು ಉತ್ಪಾದಿಸುವ ಸಲುವಾಗಿ ೧೯೬೫ರಲ್ಲಿ ಪ್ರಾರಂಭಗೊಂಡಿತು. ಇದು ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಿಂದ ಒಟ್ಟು ರೂ. ೪.೫೫ ಲಕ್ಷಗಳ ಸಾಲವನ್ನು ಪಡೆದಿದ್ದು, ರೂ. ೨.೦೩ ಲಕ್ಷಗಳನ್ನು ಮಂಡಳಿಗೆ ಮರುಪಾವತಿ ಮಾಡಿದೆ.

**ಉಣ್ಣೆ ಮತ್ತು ರೇಷ್ಮೆ ಕೈಮಗ್ಗದ ಉತ್ಪಾದನಾ ಮತ್ತು ಮಾರಾಟ ಸಹಕಾರ ಸಂಘ (ನಿ) ವೆಂಕಟಾಪುರ, ಪಾವಗಡ ತಾಲ್ಲೂಕು**

ಈ ಸಹಕಾರ ಸಂಘವು ೧೯೬೮ರಲ್ಲಿ ಉಣ್ಣೆ ಖಾದಿ (ಕಂಬಳಿ)ಯನ್ನು ಉತ್ಪಾದಿಸುವ ಸಲುವಾಗಿ ಪ್ರಾರಂಭಗೊಂಡಿತು. ಇದು ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಿಂದ ಒಟ್ಟು ರೂ. ೩೪.೧೧ ಲಕ್ಷಗಳ ಸಾಲ, ರೂ. ೦.೯೯ ಲಕ್ಷಗಳ ಅನುದಾನವನ್ನು ಪಡೆದಿದ್ದು, ರೂ. ೧೬.೭೩ ಲಕ್ಷಗಳನ್ನು ಮಂಡಳಿಗೆ ಮರುಪಾವತಿ ಮಾಡಿದೆ. ಈ ಸಂಘವು ೨೦೦೭–೦೮ನೇ ಸಾಲಿನಲ್ಲಿ ರೂ. ೯.೬೫ ಲಕ್ಷಗಳ ಮೌಲ್ಯದ ಸರಕನ್ನು ಉತ್ಪಾದಿಸಿ ರೂ. ೧೩.೦೦ ಲಕ್ಷಗಳಿಗೆ ಮಾರಾಟ ಮಾಡಿರುವುದರ ಜೊತೆಗೆ ೩೬೫ ಜನರಿಗೆ ಉದ್ಯೋಗವನ್ನೊದಗಿಸಿತ್ತು.

**ಖಾದಿ ಗ್ರಾಮೋದ್ಯೋಗ ಸಂಘ (ರಿ), ಅಣ್ಣಾಪುರ, ತಿಪಟೂರು ತಾಲ್ಲೂಕು**

ಈ ಸಂಘವು ಪಾಲಿವಸ್ತ್ರ ಮತ್ತು ಅರಳೆ ಖಾದಿಯನ್ನು ಉತ್ಪಾದಿಸುವ ಉದ್ದೇಶದೊಂದಿಗೆ ೧೯೯೨ರಲ್ಲಿ ಪ್ರಾರಂಭಗೊಂಡಿತು. ಇದು ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಿಂದ ಒಟ್ಟು ರೂ. ೧೨.೦೦ ಲಕ್ಷಗಳ ಸಾಲ ಮತ್ತು ರೂ. ೦.೦೮ ಲಕ್ಷಗಳ ಅನುದಾನವನ್ನು ಪಡೆದಿದ್ದು, ರೂ. ೩.೬೩ ಲಕ್ಷಗಳನ್ನು ಮಂಡಳಿಗೆ ಮರುಪಾವತಿ ಮಾಡಿದೆ. ಇದು ೨೦೦೭–೦೮ನೇ ಸಾಲಿನಲ್ಲಿ ರೂ. ೩೭.೭೨ ಲಕ್ಷಗಳ ಸರಕನ್ನು ಉತ್ಪಾದಿಸಿ, ರೂ. ೬೫.೫೭ ಲಕ್ಷಗಳಿಗೆ ಮಾರಾಟ ಮಾಡಿರುವುದರ ಜೊತೆಗೆ ೧೨೩ ಜನರಿಗೆ ಉದ್ಯೋಗವನ್ನೊದಗಿಸಿತ್ತು.

**ಮಧುಗಿರಿ ಖಾದಿ ಮತ್ತು ಗ್ರಾಮೋದ್ಯೋಗ ಸಂಘ (ರಿ), ಮಧುಗಿರಿ**

ಈ ಸಂಘವು ಅರಳೆ ಖಾದಿ ಉತ್ಪಾದಿಸುವ ಸಲುವಾಗಿ ೧೯೯೪ರಲ್ಲಿ ಪ್ರಾರಂಭಗೊಂಡಿತು. ಇದು ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಿಂದ ಒಟ್ಟು ರೂ. ೬.೬೮ ಲಕ್ಷಗಳ ಸಾಲ ಮತ್ತು ರೂ. ೦.೧೧ ಲಕ್ಷಗಳ ಅನುದಾನ ಪಡೆದಿದ್ದು, ರೂ. ೩.೧೬ ಲಕ್ಷಗಳನ್ನು ಮಂಡಳಿಗೆ ಮರುಪಾವತಿ ಮಾಡಿದೆ. ಇದು ೨೦೦೭–೦೮ನೇ ಸಾಲಿನಲ್ಲಿ ರೂ. ೭.೯೪ ಲಕ್ಷ ಮೌಲ್ಯದ ಸರಕನ್ನು ಉತ್ಪಾದಿಸಿದ್ದು, ರೂ. ೧೬.೦೯ ಲಕ್ಷಗಳಿಗೆ ಮಾರಾಟ ಮಾಡಿರುತ್ತದೆ ಮತ್ತು ೨೬ ಜನರಿಗೆ ಉದ್ಯೋಗವನ್ನೊದಗಿಸಿತ್ತು. ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸ್ಥಗಿತಗೊಂಡಿರುವ ಸಂಘಗಳ ವಿವರಗಳನ್ನು ಕೋಷ್ಟಕ ೫.೧೪ ರಲ್ಲಿ ನೀಡಿದೆ.

**ಕೋಷ್ಟಕ ೫.೧೪ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ಕಾರಣಾಂತರದಿಂದ ಸ್ಥಗಿತಗೊಂಡಿರುವ ಸಂಘ ಸಂಸ್ಥೆಗಳ ವಿವರ.**

(ರೂ. ಲಕ್ಷಗಳಲ್ಲಿ)

| ಸಂಘ ಸಂಸ್ಥೆಯ ಹೆಸರು | ಪ್ರಾರಂಭಗೊಂಡ ವರ್ಷ | ಉತ್ಪಾದಿಸಲಾಗುತ್ತಿದ್ದ ಸರಕು | ಮಂಡಳಿಯಿಂದ ಮಂಜೂರಾದ ಸಾಲ | ಮಂಡಳಿಯಿಂದ ಮಂಜೂರಾದ ಅನುದಾನ | ಮಂಡಳಿಗೆ ಮರುಪಾವತಿಯಾದ ಸಾಲ |
|---|---|---|---|---|---|
| ರೂರಲ್ ಇಂಡಸ್ಟ್ರಿಯಲ್ ಕೋ ಅಪರೇಟಿವ್ ಸೊಸೈಟಿ, ತುರುವೇಕೆರೆ | ೧೯೬೧ | ಅರಳೆ ಖಾದಿ | ೦.೧೨ | ೦.೦೫ | ೦.೦೪ |
| ತುಮಕೂರು ರೇಷ್ಮೆ ಗ್ರಾಮೋದ್ಯೋಗ ಸಂಘ, ಯಲ್ಲಾಪುರ, ತುಮಕೂರು ತಾ | ೧೯೯೩ | ರೇಷ್ಮೆ ಖಾದಿ | ೧೦.೫೫ | – | ೦.೦೫ |
| ಗುರು ರೇವಣಸಿದ್ಧೇಶ್ವರ ಕಂಬಳಿ ಮಾರಾಟ ಸಹಕಾರ ಸಂಘ, ಶಿರಾ | ೧೯೬೫ | ಉಣ್ಣೆ ಖಾದಿ (ಕಂಬಳಿ) | ೧.೫೬ | ೦.೦೯ | ೧.೪೬ |
| ಉಣ್ಣೆ ಕೈಮಗ್ಗದ ನೇಕಾರರ ಉತ್ಪಾದನಾ ಮತ್ತು ಮಾರಾಟ ಸಹಕಾರ ಸಂಘ, ಕಾಮಗೊಂಡನಹಳ್ಳಿ, ಶಿರಾ ತಾಲ್ಲೂಕು | ೧೯೬೮ | ಕಂಬಳಿ | ೭.೬೫ | – | ೪.೪೫ |

| | | | | | |
|---|---|---|---|---|---|
| **ಕೋಷ್ಟಕ ೫.೧೪** (ಮುಂದು.....) | | | | | |
| ಸಿದ್ಧಲಿಂಗೇಶ್ವರ ಉಣ್ಣೆ ಕೈಮಗ್ಗದ ನೇಕಾರರ ಉತ್ಪಾದನಾ ಮತ್ತು ಮಾರಾಟ ಸಹಕಾರ ಸಂಘ, ಬೇವಿನಹಳ್ಳಿ, ಶಿರಾ ತಾಲೂಕು | ೧೯೬೯ | ಕಂಬಳಿ | ೪.೫೮ | ೦.೦೧ | ೨.೫೮ |
| ಉಣ್ಣೆ ಕೈಮಗ್ಗದ ನೇಕಾರರ ಉತ್ಪಾದನಾ ಮತ್ತು ಮಾರಾಟ ಸಹಕಾರ ಸಂಘ, ದ್ವಾರನಕುಂಟೆ, ಶಿರಾ ತಾಲೂಕು | ೧೯೬೮ | ಕಂಬಳಿ | ೦.೧೩ | – | ೦.೧೦ |
| ಉಣ್ಣೆ ಕೈಮಗ್ಗದ ನೇಕಾರರ ಸಹಕಾರ ಸಂಘ, ಅರಸಾಪುರ, ಕೊರಟಗೆರೆ ತಾಲೂಕು | ೧೯೬೮ | ಕಂಬಳಿ | ೧.೦೫ | – | ೦.೭೦ |
| ಮೈಲಾರ ಲಿಂಗೇಶ್ವರ ಕೈಮಗ್ಗದ ನೇಕಾರರ ಉತ್ಪಾದನಾ ಮತ್ತು ಮಾರಾಟ ಸಹಕಾರ ಸಂಘ (ನಿ), ಚಟ್ಟನಹಳ್ಳಿ, ಕೊರಟಗೆರೆ ತಾಲೂಕು | ೧೯೬೮ | ಕಂಬಳಿ | ೦.೧೮ | – | – |
| ಮೈಲಾರ ಲಿಂಗೇಶ್ವರ ಕೈಮಗ್ಗದ ನೇಕಾರರ ಉತ್ಪಾದನಾ ಮತ್ತು ಮಾರಾಟ ಸಹಕಾರ ಸಂಘ(ನಿ) ಐ.ಡಿ.ಹಳ್ಳಿ, ಮಧುಗಿರಿ ತಾಲೂಕು | ೧೯೬೭ | ಕಂಬಳಿ | ೦.೮೬ | – | ೦.೮೩ |
| ರೇವಣಸಿದ್ಧೇಶ್ವರ ಉಣ್ಣೆ ನೇಕಾರರ ಉತ್ಪಾದನಾ ಮತ್ತು ಮಾರಾಟ ಸಹಕಾರ ಸಂಘ, ಪಾವಗಡ | ೧೯೭೭ | ಕಂಬಳಿ | ೨.೪೩ | ೦.೦೮ | ೦.೭೬ |
| ಸಿದ್ಧಲಿಂಗೇಶ್ವರ ಉಣ್ಣೆ ನೇಕಾರರ ಉತ್ಪಾದನಾ ಮತ್ತು ಮಾರಾಟ ಸಹಕಾರ ಸಂಘ, ವೈ.ಎನ್. ಹೊಸಕೋಟೆ, ಪಾವಗಡ ತಾಲೂಕು | ೧೯೬೬ | ಕಂಬಳಿ | ೧೨.೨೬ | ೦.೫೪ | ೩.೩೦ |

**ಆಧಾರ: ಜಿಲ್ಲಾ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ತುಮಕೂರು.**

## ಜೇನುಸಾಕಣೆ

ವ್ಯವಸಾಯ ಪ್ರಧಾನವಾಗಿರುವ ತುಮಕೂರು ಜಿಲ್ಲೆಯಲ್ಲಿ ರೈತರು ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳಲು ಜೇನುತುಪ್ಪ, ಜೇನು ಮೇಣ ತಯಾರಿಕೆ ಮೊದಲಾದವುಗಳು ಸಹಕಾರಿಯಾಗಲಿವೆ. ನಮ್ಮ ದೇಶದಲ್ಲಿ ಹೆಜ್ಜೇನು (ಬಂಡೆಜೇನು, ಮರಜೇನು), ತುಡುವ ಜೇನು (ಪೊಟರೆ ಜೇನು), ಕೋಲ್ಜೇನು (ಕಡ್ಡಿಜೇನು, ಕಿರುಜೇನು), ಮಜಂಟೆ ಜೇನು (ರಾಳ ಜೇನು), ಇಟಾಲಿಯನ್ ಜೇನು (ಯೂರೋಪಿಯನ್ ಜೇನು) ಎಂದು ಐದು ಜಾತಿಯ ಜೇನುನೊಣಗಳು ಕಾಣಬರುತ್ತವೆ. ಹೆಜ್ಜೇನು ನೊಣಗಳು ಇತರ ಜೇನು ನೊಣಗಳಿಗಿಂತ ದೊಡ್ಡದಿದ್ದು, ಎತ್ತರವಾದ ಸ್ಥಳಗಳಲ್ಲಿ ವಾಸಿಸುತ್ತವೆ. ಇವು ಸಾಮಾನ್ಯವಾಗಿ ಮುಂಗೋಪಿಯಾಗಿರುತ್ತವೆ ಮತ್ತು ತಮ್ಮ ವಾಸಸ್ಥಳವನ್ನು ಆಹಾರ ದೊರಕುವ ಕಡೆಗೆ ಬದಲಾಯಿಸುತ್ತಿರುತ್ತವೆ. ಇವು ಉತ್ಪಾದಿಸುವ ಜೇನುತುಪ್ಪ ತೆಳುವಾಗಿದ್ದು ಕಡಿಮೆ ರುಚಿಯಿಂದ ಕೂಡಿರುತ್ತದೆ. ಇವು ಒಂದು ಕಡೆಯಿಂದ ಇನ್ನೊಂದು

ಕಡೆಗೆ ವಲಸೆ ಹೋಗುವ ಸ್ವಭಾವದವುಗಳಾಗಿರುವುದರಿಂದ ಸಾಕುವುದು ಕಷ್ಟ. ತುಡುವೆ ಜೇನುನೊಣಗಳಲ್ಲಿ ಬೆಟ್ಟದ ಸೀಮೆಯ ದೊಡ್ಡ ನೊಣ, ಬಯಲು ಸೀಮೆಯ ಚಿಕ್ಕನೊಣಗಳೆಂದು ಎರಡು ವಿಧಗಳು. ಇವುಗಳ ಬಣ್ಣದಲ್ಲಿ ಮಾತ್ರ ವ್ಯತ್ಯಾಸವಿದ್ದು, ಪ್ರಬೇದದಲ್ಲಿ ವ್ಯತ್ಯಾಸವಿರುವುದಿಲ್ಲ. ಇವು ಹೆಜ್ಜೇನು ನೊಣಗಳಿಗಿಂತಲೂ ಗಾತ್ರದಲ್ಲಿ ಚಿಕ್ಕದಿದ್ದು, ಕತ್ತಲಿರುವ ಸ್ಥಳಗಳಲ್ಲಿ ಅಂದರೆ ಮರದ ಪೊಟರೆಗಳಲ್ಲಿ, ಗೋಡೆಗಳ ಸಂದುಗಳಲ್ಲಿ ಮತ್ತು ಹುತ್ತಗಳಲ್ಲಿ ವಾಸಿಸುತ್ತವೆ. ಇವು ಒಂದು ಸ್ಥಳದಲ್ಲಿ ಹೆಚ್ಚು ಕಾಲ ವಾಸಿಸುವುದರಿಂದ ಮತ್ತು ಹೆಚ್ಚು ಜೇನನ್ನು ಸಂಗ್ರಹಿಸುವುದರಿಂದ ಜೇನು ಪೆಟ್ಟಿಗೆಗಳಲ್ಲಿಟ್ಟು ಸಾಕಬಹುದು. ಕೋಲ್ಜೇನು ನೊಣಗಳು ತುಡುವೆ ಜೇನುನೊಣಗಳಿಗಿಂತಲೂ ಆಕಾರದಲ್ಲಿ ಚಿಕ್ಕದಿದ್ದು, ಅತೀ ಸಣ್ಣ ಹೂವುಗಳಿಂದ ಮಧುವನ್ನು ಸಂಗ್ರಹಿಸುವುದರಿಂದ ರುಚಿಯಾದ ಜೇನನ್ನು ಸಂಗ್ರಹಿಸಬಹುದು. ಇವು ಸಹ ಹೆಜ್ಜೇನಿನಂತೆ ವಲಸೆ ಹೋಗುವ ಸ್ವಭಾವದವುಗಳಾಗಿರುವುದರಿಂದ ಸಾಕಲು ಸಾಧ್ಯವಿರುವುದಿಲ್ಲ. ಇಟಾಲಿಯನ್ ಜೇನುನೊಣಗಳು ತುಡುವೆ ಜೇನುನೊಣಗಳಿಗಿಂತ ಗಾತ್ರದಲ್ಲಿ ದೊಡ್ಡದಿದ್ದು, ಹೆಚ್ಚು ಜೇನು ಸಂಗ್ರಹಿಸಲು ಸಮರ್ಥವಾಗಿವೆ. ಇವು ಉತ್ತರ ಭಾರತದಲ್ಲಿ ಸಾಕಷ್ಟು ಪ್ರಚಾರದಲ್ಲಿವೆ. ನಮ್ಮ ರಾಜ್ಯದಲ್ಲಿಯೂ ಸಹಾ ಇವುಗಳ ಅಭಿವೃದ್ಧಿಗೆ ಪ್ರಯತ್ನ ನಡೆಸಲಾಗಿದೆ. ಮಂಜೆಂಟಿ ಜೇನುನೊಣಗಳು ಎಲ್ಲಾ ಜಾತಿಯ ಜೇನುನೊಣಗಳಿಗಿಂತ ಗಾತ್ರದಲ್ಲಿ ಚಿಕ್ಕದಿದ್ದು, ಮರದ ಪೊಟರೆಗಳಲ್ಲಿ ಮತ್ತು ಗೋಡೆಗಳ ಸಂದುಗಳಲ್ಲಿ ವಾಸಿಸುತ್ತವೆ. ಇವುಗಳಿಗೆ ಚುಚ್ಚುವ ಮುಳ್ಳುಗಳಿರುವುದಿಲ್ಲ. ಇವುಗಳನ್ನು ಸಾಕುವುದು ಬಹಳ ಸುಲಭ. ಆದರೆ ಹೆಚ್ಚು ಜೇನುತುಪ್ಪ ದೊರಕುವುದಿಲ್ಲ.

ಜೇನುಹುಳುವಿನಿಂದ ಜೇನು ಮತ್ತು ಜೇನುಮೇಣವೇ ಅಲ್ಲದೇ ಅವು ಮರಿನೊಣಗಳಿಗೆ ಆಹಾರಕ್ಕಾಗಿ ಸಂಗ್ರಹಿಸಿಡುವ ಪರಾಗದಲ್ಲಿ ವಿಟಮಿನ್ ಜೀವಸತ್ವಗಳು, ಕಾರ್ಬೋಹೈಡ್ರೇಟ್‌ಗಳು, ಪ್ರೋಟೀನ್‌ಗಳು, ಕೊಬ್ಬು, ಲವಣಗಳು, ಅಮೀನೋಆಸಿಡ್‌ಗಳು, ಎನ್‌ಜೈಮ್‌ಗಳು, ಆಂಟಿ ಬಯೋಟಿಕ್ ಕಾಂಪೌಂಡ್‌ಗಳು ತುಂಬಿರುತ್ತವೆ. ಪಾಶ್ಚಿಮಾತ್ಯ ದೇಶಗಳಲ್ಲಿ ಪರಾಗವನ್ನು ಮಾನವ ಉಪಯೋಗಕ್ಕಾಗಿ ಸಂಗ್ರಹಿಸಿ ಕ್ಯಾಪ್ಸೂಲ್, ಹರಳು ಮಾತ್ರೆ, ಹುಡಿರೂಪದಲ್ಲಿ ಪರಿವರ್ತಿಸಿ ಉಪಯೋಗಿಸುತ್ತಾರೆ. ಜೇನ್ನೊಣದಿಂದ ಸಿಗುವ ಇನ್ನೊಂದು ಪ್ರಮುಖ ವಸ್ತು ರಾಯಲ್ ಜೆಲ್ಲಿ ಅಥವಾ ರಾಜಶಾಹಿ ರಸ. ಇದು ಸೂಕ್ಷ್ಮಾಣು ನಿರೋಧಕವಾಗಿದ್ದು, ಅನೇಕ ಶಕ್ತಿವರ್ಧಕ ಔಷಧಿಗಳಲ್ಲಿ ಉಪಯೋಗಿಸುತ್ತಾರೆ. ಇದಕ್ಕೆ ಅಮೆರಿಕಾ, ಜಪಾನ್ ಹಾಗೂ ಯೂರೋಪ್ ದೇಶಗಳಲ್ಲಿ ಅಧಿಕ ಬೇಡಿಕೆ ಇದೆ. ಕಾರ್ಮಿಕ ನೊಣಗಳ ಹಿಂಭಾಗದಲ್ಲಿರುವ ಮುಳ್ಳಿನ ಜೊತೆಗೆ ವಿಷದ ಚೀಲವು ಅಂಟಿಕೊಂಡಿದ್ದು ಅದರಲ್ಲಿ ವಿಷ ಸಂಗ್ರಹವಾಗಿರುತ್ತದೆ. ಇದನ್ನು ಔಷಧಿಯಾಗಿ ಉಪಯೋಗಿಸಲಾಗುತ್ತದೆ.

ತುಮಕೂರು ಜಿಲ್ಲೆಯು ಜೇನು ಸಾಕಣೆಗೆ ಪ್ರಸಿದ್ಧಿವಾಗಿಲ್ಲದಿದ್ದರೂ ಜಿಲ್ಲೆಯ ಕೆಲವು ಹಳ್ಳಿಗಳಲ್ಲಿ ಈ ಉದ್ಯಮವಿದ್ದುದನ್ನು ಕಾಣಬಹುದು. ೧೯೬೭-೬೮ರಲ್ಲಿ ಜಿಲ್ಲೆಯ ತುಮಕೂರು ಮತ್ತು ಗುಬ್ಬಿಗಳಲ್ಲಿ ಜೇನು ಸಾಕಣಾ ಕೇಂದ್ರಗಳಿದ್ದು, ಜೇನು ಸಾಕಣೆದಾರರಿಗೆ ನೆರವನ್ನೊದಗಿಸುತ್ತಿದ್ದವು. ತುಮಕೂರಿನಲ್ಲಿ ಜೇನುಸಾಕಣೆದಾರರ ಕೈಗಾರಿಕಾ ಸಹಕಾರ ಸಂಘ ಕಾರ್ಯನಿರ್ವಹಿಸುತ್ತಿದ್ದು, ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯಿಂದ ರೂ. ೭,೭೧೦ ಗಳ ಅನುದಾನ ಮತ್ತು ರೂ. ೨,೦೦೦ಗಳ ಸಾಲದ ರೂಪದಲ್ಲಿ ಒಟ್ಟು ರೂ. ೯,೭೧೦ ಗಳ ಆರ್ಥಿಕ ನೆರವನ್ನು ನೀಡಲಾಗಿದೆ. ಜೇನುಸಾಕಣಾ ಉದ್ಯಮವು ತುಮಕೂರು ಮತ್ತು ಗುಬ್ಬಿ ತಾಲೂಕುಗಳಲ್ಲಿ ಕೇಂದ್ರೀಕೃತಗೊಂಡಿದ್ದು, ಉಳಿದ ತಾಲೂಕುಗಳಲ್ಲಿ ವಿರಳವಾಗಿದ್ದುದನ್ನು ಕಾಣಬಹುದು. ಜಿಲ್ಲೆಯಲ್ಲಿ ೧೯೬೭-೬೮ರಲ್ಲಿ ಒಟ್ಟು ೯೧೬ ಜೇನು ಸಾಕಣೆ ಪೆಟ್ಟಿಗೆಗಳಿದ್ದು, ಅವುಗಳಲ್ಲಿ ೪೨೫ ಪೆಟ್ಟಿಗೆಗಳು ತುಮಕೂರು ತಾಲೂಕಿನಲ್ಲೂ, ೧೧೯ ಪೆಟ್ಟಿಗೆಗಳು ಗುಬ್ಬಿ ತಾಲುಕಿನಲ್ಲೂ ಉಳಿದವುಗಳು ಇತರ ತಾಲೂಕುಗಳಲ್ಲೂ ಹಂಚಿ ಹೋಗಿದ್ದವು. ಇದೇ ಕಾಲಾವಧಿಯಲ್ಲಿ ಜಿಲ್ಲೆಯ ಒಟ್ಟು ಜೇನು ಉತ್ಪಾದನೆ ೯,೨೦೦ ಕಿ.ಗ್ರಾಂ.

ಜಿಲ್ಲೆಯಲ್ಲಿ ೨೦೦೭-೦೮ನೇ ಸಾಲಿನಲ್ಲಿ ಒಟ್ಟು ೦೬ ಜೇನುಕೃಷಿ ಕೇಂದ್ರಗಳಿದ್ದು, ಎಲ್ಲಾ ೧೦ ತಾಲೂಕುಗಳಲ್ಲಿಯೂ ಜೇನುಕೃಷಿಗೆ ಉಪಯುಕ್ತವಾದ ಏಳು ದಿನಗಳ ತರಬೇತಿಯನ್ನು ನೀಡಿ ಒಂದು ಜೇನು ಪೆಟ್ಟಿಗೆಯನ್ನು ಪ್ರತಿಶತ ೫೦ ರಿಯಾಯಿತಿ ದರದಲ್ಲಿ ನೀಡಲಾಗುವುದು. ಜಿಲ್ಲೆಯ ಮಧುಗಿರಿ, ಕೊರಟಗೆರೆ, ಗುಬ್ಬಿ, ಕುಣಿಗಲ್, ಶಿರಾ ತಾಲೂಕಿನ ಕಳ್ಳಂಬೆಳ್ಳ ಮತ್ತು ತುಮಕೂರು ತಾಲೂಕಿನ ಹಿರೇಹಳ್ಳಿಗಳಲ್ಲಿ ಜೇನು ಕೃಷಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದವು. ಜಿಲ್ಲೆಯಲ್ಲಿ ತುಮಕೂರು, ಕೊರಟಗೆರೆ, ಮಧುಗಿರಿ, ಪಾವಗಡ, ಗುಬ್ಬಿ, ತಿಪಟೂರು, ತುರುವೇಕೆರೆ, ಚಿಕ್ಕನಾಯಕನಹಳ್ಳಿ, ಕುಣಿಗಲ್ ಹಾಗೂ ಶಿರಾ ತಾಲೂಕಿನ ಕಳ್ಳಂಬೆಳ್ಳಗಳಲ್ಲಿ ಜೇನುಕೃಷಿಯ ಬಗ್ಗೆ ತರಬೇತಿಯನ್ನು ನೀಡಲಾಗುತ್ತದೆ.

## ರೇಷ್ಮೆ ಕೈಗಾರಿಕೆ

ರೇಷ್ಮೆ ಕೈಗಾರಿಕೆಯು ಜಿಲ್ಲೆಯ ಗೃಹ ಕೈಗಾರಿಕೆಗಳಲ್ಲೊಂದಾಗಿರುವುದರ ಜೊತೆಗೆ ವ್ಯವಸಾಯಾವಲಂಬಿಗಳ ಆದಾಯಕ್ಕೆ ಪೂರಕ ನೆರವನ್ನೊದಗಿಸುತ್ತಿದೆ. ರಾಜ್ಯದಲ್ಲಿ ರೇಷ್ಮೆ ಬೆಳವಣಿಗೆಯನ್ನು ಹದಿನೆಂಟನೆಯ ಶತಮಾನದ ಉತ್ತರಾರ್ಧದಿಂದ ಕಾಣಬಹುದು. ಟಿಪ್ಪುಸುಲ್ತಾನನು ಮೈಸೂರು ರಾಜ್ಯವನ್ನು ಪ್ರಪಂಚದ ರೇಷ್ಮೆ ಉತ್ಪಾದಿಸುವ ರಾಜ್ಯಗಳಲ್ಲೊಂದನ್ನಾಗಿ ಮಾಡಬೇಕೆಂಬ ಮಹದಾಕಾಂಕ್ಷೆಯನ್ನು ಹೊಂದಿದ್ದು, ತನ್ನ ರಾಜ್ಯದ ದಕ್ಷಿಣ ಭಾಗದಲ್ಲಿ ರೇಷ್ಮೆ ಹುಳುಗಳ ಸಾಕಣಿಕಾ ಘಟಕಗಳನ್ನು ಸ್ಥಾಪಿಸಿ, ಜಪಾನ್ ಮತ್ತು ಚೀನಾ ತಳಿಯ ಮೂಲಕ ಸುಧಾರಣೆಗೊಂಡ ತಳಿಯನ್ನು ಆ ಭಾಗದಲ್ಲಿ ಬೆಳೆಸಿರುವುದನ್ನು ಕಾಣಬಹುದು. ೧೯೧೪ರಲ್ಲಿ ಇಟಲಿಯಿಂದ ಹನ್ನೆರಡು ಜಾತಿಯ ರೇಷ್ಮೆ ಹುಳುಗಳನ್ನು ತರಿಸಿ, ಅಭಿವೃದ್ಧಿ ಪಡಿಸಿದುದೇ ಅಲ್ಲದೇ ೧೯೧೫ರಲ್ಲಿ ಮೈಸೂರು ತಳಿ ಮತ್ತು ಇಟಲಿ ತಳಿಯನ್ನು ಸೇರಿಸಿ ಅಧಿಕ ಇಳುವರಿ ತಳಿಯನ್ನು ಪಡೆಯಲಾಗಿದೆ. ಇದೇ ಕಾಲಾವಧಿಯಲ್ಲಿ ಅನೇಕ ರೇಷ್ಮೆ ಕೃಷಿ ಕ್ಷೇತ್ರಗಳು ಮತ್ತು ರೇಷ್ಮೆ ಹುಳು ಸಾಕಣೆ ಕೇಂದ್ರಗಳು ಪ್ರಾರಂಭಗೊಂಡವು. ತುಮಕೂರು ಜಿಲ್ಲೆಯಲ್ಲಿನ ವಾತಾವರಣ ಮತ್ತು ಭೂಮಿ ರೇಷ್ಮೆ ಕೃಷಿಗೆ ಪೂರಕವಾಗಿರುವುದರ ಜೊತೆಗೆ ಇಲ್ಲಿನ ಕೃಷಿಕರ ಪರಿಣತಿಯು ಜಿಲ್ಲೆಯನ್ನು ರೇಷ್ಮೆ ತಳಿಯ ಮೂಲ ಪ್ರದೇಶವಾಗುವಂತೆ ಮಾಡಿವೆ. ಇಲ್ಲಿನ ರೇಷ್ಮೆಯು ಶುದ್ಧ ಮೈಸೂರು ತಳಿಯೆಂದು ಪ್ರಖ್ಯಾತಿ ಪಡೆದಿದೆ. ಈ ತಳಿಯನ್ನು ಜಿಲ್ಲೆಯ ಕುಣಿಗಲ್, ಗುಬ್ಬಿ, ತುಮಕೂರು ಮತ್ತು ತುರುವೇಕೆರೆ ತಾಲೂಕುಗಳಲ್ಲಿ ಪ್ರಧಾನವಾಗಿ ಕಾಣಬಹುದು. ಇತ್ತೀಚಿಗೆ ರೇಷ್ಮೆ ಕೃಷಿಯನ್ನು ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲೂ ಅಭಿವೃದ್ಧಿ ಪಡಿಸಿರುವುದನ್ನು ಕಾಣಬಹುದಾಗಿದೆ. ಈ ಶುದ್ಧ ರೇಷ್ಮೆ ತಳಿಯ ಹುಳುಗಳಿಗೆ ರೋಗ ಸಹಿಷ್ಣುತೆ ಹೆಚ್ಚಾಗಿರುವುದರಿಂದ ಜಿಲ್ಲೆಯ ಪಕ್ಕದಲ್ಲಿನ ಬೆಂಗಳೂರು ಗ್ರಾಮಾಂತರ ಮತ್ತು ಮಂಡ್ಯ ಜಿಲ್ಲೆಗಳ ಕೆಲವು ತಾಲೂಕುಗಳಲ್ಲಿಯೂ ಅಭಿವೃದ್ಧಿಪಡಿಸಲಾಗಿದೆ. ಜಿಲ್ಲೆಯ ಕುಣಿಗಲ್ ತಾಲೂಕು ರಾಜ್ಯದ ಸುಧಾರಿತ ತಳಿಯನ್ನು ಉತ್ಪಾದಿಸಿ ವಿತರಣೆ ಮಾಡುವ ಕೇಂದ್ರಗಳಲ್ಲಿ ಒಂದಾಗಿರುವುದರಿಂದ ಜಿಲ್ಲೆಯು ರೇಷ್ಮೆ ಕೃಷಿ ಮತ್ತು ಕೈಗಾರಿಕೆಯಲ್ಲಿ ತನ್ನದೇ ಆದ ಸ್ಥಾನವನ್ನು ಪಡೆದಿದೆ. ದಿ:೩೧-೧೦-೨೦೦೮ರ ಅಂತ್ಯದಲ್ಲಿ ಜಿಲ್ಲೆಯ ೧೪೧೦ ಹಳ್ಳಿಗಳಲ್ಲಿ ೧೧,೩೫೧ ಕುಟುಂಬಗಳು ೩,೯೪೯.೦೬ ಹೆ. ಪ್ರದೇಶದಲ್ಲಿ ಹಿಪ್ಪುನೇರಳೆಯನ್ನು ಬೆಳೆಯುವುದರ ಮೂಲಕ ರೇಷ್ಮೆ ಕೃಷಿ ಮತ್ತು ರೇಷ್ಮೆ ಉತ್ಪಾದನೆಯಲ್ಲಿ ತೊಡಗಿದ್ದವು. ೨೦೧೨ ರ ಮಾರ್ಚ್ ಅಂತ್ಯಕ್ಕೆ ೧,೦೬೩ ಹಳ್ಳಿಗಳಲ್ಲಿ ೩೦೫೮.೭೪೦ ಹೆ ನಲ್ಲಿ ಹಿಪ್ಪುನೇರಳೆ ಬೆಳೆ ಬೆಳೆಯಲಾಗಿತ್ತು. ಹೆಚ್ಚಿನ ವಿವರಗಳಿಗೆ ಕೋಷ್ಟಕ ೫.೧೫, ೫.೧೬ ಹಾಗೂ ಕೋಷ್ಟಕ ೫.೧೭ ಅನ್ನು ನೋಡಿ.

**ಕೋಷ್ಟಕ ೫.೧೫ ಜಿಲ್ಲೆಯಲ್ಲಿ ೩೧-೦೩-೨೦೧೨ರಲ್ಲಿದ್ದ ತಾಲೂಕುವಾರು ಹಿಪ್ಪುನೇರಳೆ ಬೆಳೆಯುತ್ತಿದ್ದ ಹಳ್ಳಿಗಳ ಸಂಖ್ಯೆ ಮತ್ತು ಹಿಪ್ಪುನೇರಳೆ ಬೆಳೆದ ಕ್ಷೇತ್ರದ ವಿವರ.**

| ಕ್ರ.ಸಂ | ತಾಲೂಕು | ಹಿಪ್ಪುನೇರಳೆ ಬೆಳೆದಿದ್ದ ಹಳ್ಳಿಗಳ ಸಂಖ್ಯೆ | ಹಿಪ್ಪುನೇರಳೆ ಕ್ಷೇತ್ರ (ಹೆ.ಗಳಲ್ಲಿ) |
|---|---|---|---|
| ೧ | ತುಮಕೂರು | ೫೬ | ೭೨.೩೯ |
| ೨ | ತಿಪಟೂರು | ೫೬ | ೪೪.೮೬ |
| ೩ | ತುರುವೇಕೆರೆ | ೫೮ | ೮೩.೯೨ |
| ೪ | ಚಿಕ್ಕನಾಯಕನಹಳ್ಳಿ | ೭೨ | ೮೭.೯೫ |
| ೫ | ಗುಬ್ಬಿ | ೪೪ | ೬೫.೯೮ |
| ೬ | ಮಧುಗಿರಿ | ೧೫೯ | ೫೨೯.೩೬ |
| ೭ | ಪಾವಗಡ | ೧೪೪ | ೫೬೪.೭೭ |
| ೮ | ಕೊರಟಗೆರೆ | ೧೧೫ | ೩೧೨.೭೬ |
| ೯ | ಶಿರಾ | ೯೭ | ೩೯೭.೪೯ |
| ೧೦ | ಕುಣಿಗಲ್ (ಬಿತ್ತನೆ ಪ್ರದೇಶ) | ೨೬೨ | ೮೮೯.೨೬ |
| ಒಟ್ಟು | | ೧೦೬೩ | ೩೦೫೮.೭೪೦ |

ಆಧಾರ: ರೇಷ್ಮೆ ಉಪನಿರ್ದೇಶಕರು, ಜಿಲ್ಲಾ ಪಂಚಾಯತ್, ತುಮಕೂರು

**ಕೋಷ್ಟಕ ೫.೧೬ ಜಿಲ್ಲೆಯಲ್ಲಿ ೩೧-೦೩-೨೦೧೨ರಲ್ಲಿದ್ದ ತಾಲೂಕುವಾರು ವಿವಿಧ ರೇಷ್ಮೆ ಕುಟಂಬಗಳ ವಿವರ.**

| ಕ್ರ.ಸಂ | ತಾಲೂಕು | ವಿವಿಧ ರೇಷ್ಮೆ ಕುಟುಂಬಗಳ ವಿವರ | | | | |
|---|---|---|---|---|---|---|
| | | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಅಲ್ಪ ಸಂಖ್ಯಾತರು | ಇತರೆ | ಒಟ್ಟು |
| ೧ | ತುಮಕೂರು | ೧೨ | ೦೬ | – | ೧೪೪ | ೧೬೨ |
| ೨ | ತಿಪಟೂರು | ೨೩ | ೦೬ | – | ೧೧೩ | ೧೪೨ |
| ೩ | ತುರುವೇಕೆರೆ | ೦೯ | ೦೮ | – | ೧೫೨ | ೧೬೯ |
| ೪ | ಚಿಕ್ಕನಾಯಕನಹಳ್ಳಿ | ೩೪ | ೦೯ | – | ೧೪೩ | ೧೮೬ |
| ೫ | ಗುಬ್ಬಿ | ೦೮ | ೦೬ | – | ೭೯ | ೯೩ |
| ೬ | ಮಧುಗಿರಿ | ೫೯ | ೯೮ | ೦೩ | ೮೪೯ | ೧೦೦೯ |
| ೭ | ಪಾವಗಡ | ೯೬ | ೧೩೫ | ೦೬ | ೮೪೭ | ೧೦೮೪ |
| ೮ | ಕೊರಟಗೆರೆ | ೩೧ | ೧೮ | ೦೩ | ೫೨೨ | ೫೭೪ |
| ೯ | ಶಿರಾ | ೧೮ | ೨೩ | ೦೨ | ೫೦೮ | ೫೫೧ |
| ೧೦ | ಕುಣಿಗಲ್(ಬಿತ್ತನೆ ಪ್ರದೇಶ) | ೨೧೪ | ೪೩ | – | ೪೪೨೪ | ೪೬೮೧ |
| | ಒಟ್ಟು | ೫೦೪ | ೩೫೨ | ೧೪ | ೭೭೮೧ | ೮೬೫೧ |

ಆಧಾರ: ರೇಷ್ಮೆ ಉಪನಿರ್ದೇಶಕರು, ಜಿಲ್ಲಾ ಪಂಚಾಯತ್, ತುಮಕೂರು

**ಕೋಷ್ಟಕ ೫.೧೭ ಜಿಲ್ಲೆಯಲ್ಲಿ ೨೦೧೨ ರ ಮಾರ್ಚ್ ಅಂತ್ಯಕ್ಕೆ ತಾಲೂಕುವಾರು ರೇಷ್ಮೆ ಹುಳುಗಳ ತಳಿವಾರು ಸಾಕಾಣಿಕೆ ಮತ್ತು ಇಳುವರಿಯಾದ ರೇಷ್ಮೆ ಗೂಡಿನ ಪ್ರಮಾಣ ಇವುಗಳ ವಿವರ**

| ಕ್ರ.ಸಂ | ತಾಲೂಕು | ರೇಷ್ಮೆಹುಳುಗಳ ತಳಿವಾರು ಸಾಕಾಣಿಕೆ (ಮೆ. ಟನ್.ಗಳಲ್ಲಿ) | | ಇಳುವರಿಯಾದ ರೇಷ್ಮೆಗೂಡಿನ ಪ್ರಮಾಣ (ಕೆ.ಜಿ.ಗಳಲ್ಲಿ) | |
|---|---|---|---|---|---|
| | | ಮಿಶ್ರತಳಿ ಇಳುವರಿ | ದ್ವಿತಳಿ ಇಳುವರಿ | ಮಿಶ್ರತಳಿ ಇಳುವರಿ | ದ್ವಿತಳಿ ಇಳುವರಿ |
| ೧ | ತುಮಕೂರು | ೨೫.೨೮೭ | ೨೮.೦೭೮ | ೭೧.೫೭ | ೬೮.೬೮ |
| ೨ | ತಿಪಟೂರು | ೧.೮೪೭ | ೨೮.೩೪೫ | ೬೦.೩೬ | ೬೦.೪೪ |
| ೩ | ತುರುವೇಕೆರೆ | ೨.೦೬೯ | ೩೮.೩೮೬ | ೭೨.೬೦ | ೫೮.೬೫ |
| ೪ | ಚಿಕ್ಕನಾಯಕನಹಳ್ಳಿ | ೧೧.೯೪೩ | ೨೫.೦೧೧ | ೬೧.೨೫ | ೫೭.೧೯ |
| ೫ | ಗುಬ್ಬಿ | ೨೨.೭೪ | ೧೩.೫೪೩ | ೬೩.೦೪ | ೬೫.೬೮ |
| ೬ | ಮಧುಗಿರಿ | ೪೦೭.೯೫೯ | ೨೯.೧೭೯ | ೬೪.೫೫ | ೬೭.೦೮ |
| ೭ | ಪಾವಗಡ | ೩೧೬.೪೦೫ | ೫೧.೭೧೧ | ೬೩.೮೫ | ೬೫.೧೩ |
| ೮ | ಕೊರಟಗೆರೆ | ೩೩೩.೮೯೧ | ೨೨.೫೩೭ | ೬೩.೭೦ | ೬೧.೬೯ |
| ೯ | ಶಿರಾ | ೪೭೧.೧೦೬ | ೪೭.೮೯೬ | ೬೫.೭೨ | ೬೪.೯೩ |
| | **ಒಟ್ಟು** | **೧೫೯೩.೦೫೭** | **೨೮೪.೬೮೬** | **೫೮೬೬.೪** | **೫೬೯.೪೭** |
| ೧೦ | ಕುಣಿಗಲ್(ಬಿತ್ತನೆ ಪ್ರದೇಶ) | ಶುದ್ಧ ಮೈಸೂರು ತಳಿ | ೪೫೯.೦೦ | ಶುದ್ಧ ಮೈಸೂರು ತಳಿ | ೩೩.೩೦ |

ಆಧಾರ: ರೇಷ್ಮೆ ಉಪನಿರ್ದೇಶಕರು, ಜಿಲ್ಲಾ ಪಂಚಾಯತ್, ತುಮಕೂರು

## ಹೋಟೆಲ್ ಉದ್ಯಮ

ತುಮಕೂರು ಜಿಲ್ಲೆಯಲ್ಲಿರುವ ಯಡಿಯೂರು ಶ್ರೀ ಸಿದ್ಧಲಿಂಗೇಶ್ವರ, ದೇವರಾಯನದುರ್ಗ, ಸಿದ್ಧರಬೆಟ್ಟ, ಕೈದಾಳ, ಅರಳಗುಪ್ಪೆ, ನೊಣವಿನಕೆರೆ, ಶ್ರೀ ಸಿದ್ಧಗಂಗಾ ಕ್ಷೇತ್ರ, ಮೊದಲಾದ ಪ್ರೇಕ್ಷಣೀಯ ಸ್ಥಳಗಳು, ೨೩೦೮ (೧೩೮೫೯೩) ಕಿರಿಯ ಪ್ರಾಥಮಿಕ ಶಾಲೆಗಳು, ೧೬೮೪ (೧೨೯೬೯೭) ಹಿರಿಯ ಪ್ರಾಥಮಿಕ ಶಾಲೆಗಳು, ೭೪೮ (೧೨೧೭೩೭) ಪ್ರೌಢಶಾಲೆಗಳು, ೨೧೧ (೨೬೨೨೭) ಪದವಿ ಪೂರ್ವ ಕಾಲೇಜುಗಳು, ೧೯(೨೩೨೮೪) ಸಾಮಾನ್ಯ ಪದವಿ ಕಾಲೇಜುಗಳು (ಸರ್ಕಾರಿ), ೪೧ (೧೨೯೬೮) ಸಾಮಾನ್ಯ ಪದವಿ ಕಾಲೇಜುಗಳು (ಖಾಸಗಿ), ೧ (೧೪೬) ಭಾರತೀಯ ವೈದ್ಯ ಕಾಲೇಜು, ೧ (೫೪) ದಂತ ಕಾಲೇಜು, ೨ (೬೨೫) ಸರ್ಕಾರಿ ಪಾಲಿಟೆಕ್ನಿಕ್‌ಗಳು, ೧೨ (೨೯೩೪) ಖಾಸಗಿ ಪಾಲಿಟೆಕ್ನಿಕ್‌ಗಳು, ೮ (೨೯೩೭) ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳು ಹಾಗೂ ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು ಪ್ರವಾಸಿಗರನ್ನು, ವಿದ್ಯಾರ್ಥಿಗಳನ್ನು ಮತ್ತು ಉದ್ಯೋಗಾಕಾಂಕ್ಷಿಗಳನ್ನು ಆಕರ್ಷಿಸುತ್ತಿರುವುದರಿಂದ ಅವರಿಗೆ ತಾತ್ಕಾಲಿಕ ಊಟ, ವಸತಿ, ಸೌಲಭ್ಯವನ್ನೊದಗಿಸುವ ಕಾರ್ಯವನ್ನು ಹೋಟೆಲುಗಳು ನಿರ್ವಹಿಸಬೇಕಾಗುತ್ತದೆ. ತುಮಕೂರು ನಗರದಲ್ಲಿ ಹೋಟೆಲುಗಳು ಯಾವಾಗ ಪ್ರಾರಂಭಗೊಂಡವು ಎಂಬುದನ್ನು ನಿಖರವಾಗಿ ಹೇಳಲು ಸಾಧ್ಯವಿಲ್ಲವಾದರೂ ಕಳೆದ ಶತಮಾನದ ಆದಿ ಭಾಗದಿಂದಲೂ ಕಾರ್ಯ ನಿರ್ವಹಿಸುತ್ತಿದ್ದುದನ್ನು ಕಾಣಬಹುದು. ಪ್ರಾರಂಭದಲ್ಲಿ ತುಮಕೂರು ಹೋಟೆಲು ಜನಕರು ವೀರಶೈವ ಜನಾಂಗದವರಿದ್ದಂತೆ ಕಂಡು ಬರುತ್ತದೆ. ಸ್ವಾತಂತ್ರ್ಯಾನಂತರ ದಕ್ಷಿಣ ಕನ್ನಡದವರು ಹೋಟೆಲುಗಳನ್ನು ಪ್ರಾರಂಭಿಸಿದ ಮೇಲೆ ಅವುಗಳ ರೂಪುರೇಷೆಗಳು ಬದಲಾಗಿರುವುದು ಸ್ಪಷ್ಟವಾಗಿದೆ. ತುಮಕೂರಿನಲ್ಲಿ ಹೋಟೆಲುಗಳಿಗಾಗಿಯೆ ಮೀಸಲಿದ್ದ ರಸ್ತೆಯಿದ್ದು, ಅದನ್ನು 'ಹೋಟೆಲ್ ಸ್ಟ್ರೀಟ್' ಎಂದು ಕರೆಯಲ್ಪಟ್ಟಿದೆ. ಇದು ಹಳೇ ಮಂಡಿಪೇಟೆಗೆ ಹೊಂದಿಕೊಂಡಂತೆ ಇದ್ದು ಉತ್ತಮ ವ್ಯಾಪಾರ ನಡೆಯುತ್ತಿದುದರಿಂದ ಇಲ್ಲಿ ಹೆಚ್ಚು ಹೋಟೆಲುಗಳು ಕೇಂದ್ರೀಕೃತಗೊಂಡು 'ಹೋಟೆಲು ಸ್ಟ್ರೀಟ್' ಎಂಬ ಹೆಸರನ್ನು ಪಡೆದುಕೊಂಡಿತ್ತು. ದಿವಂಗತ ಎಲ್ಲಮ್ಮ, ಗಂಗಣ್ಣ, ವಿರುಪಣ್ಣ, ಸಿದ್ಧಲಿಂಗಪ್ಪ, ನಂಜುಂಡಪ್ಪ, ಈ ರಸ್ತೆಯ ಪ್ರಮುಖ ಹೋಟೆಲ್ ಉದ್ದಿಮೆದಾರರಾಗಿದ್ದರು. ಹೋಟೆಲುಗಳಿಗಾಗಿಯೇ ಮೀಸಲಿಟ್ಟ ರಸ್ತೆಯಿಂದಾಗಿ ತುಮಕೂರಿನಲ್ಲಿ ಹೋಟೆಲು ಉದ್ಯಮ ಬಹಳ ಹಿಂದೆಯೇ ಜನಪ್ರಿಯವಾಗಿತ್ತೆಂದು ತಿಳಿದು ಬರುತ್ತದೆ.

ವಿರೂಪಣ್ಣನವರ ಹೋಟೆಲು ತಿಂಡಿ ತಿನಿಸುಗಳಿಗೆ ಹೆಸರುವಾಸಿಯಾಗಿದ್ದಂತೆಯೇ ರಾಜಕೀಯ ಚಟುವಟಿಕೆಗಳ ತಾಣವಾಗಿತ್ತು. ವಿರುಪಣ್ಣನವರ ಸೇವೆಯನ್ನು ಗುರುತಿಸಿ, ೧೯೬೧ರಲ್ಲಿ ನಡೆದ ರಾಜ್ಯ ಮಟ್ಟದ ಹೋಟೆಲು ಮಾಲೀಕರ ಸಮ್ಮೇಳನದಲ್ಲಿ ಸನ್ಮಾನಿಸಲಾಗಿದೆ. ವಿರೂಪಣ್ಣನವರ ಹೋಟೆಲಿನಂತೆಯೇ ದಿವಂಗತ ಟಿ.ವಿ.ಶೇಖರಪ್ಪನವರ ಹೋಟೆಲು ಕೂಡ ಪ್ರಸಿದ್ಧಿಯಾಗಿದ್ದು, ಬಡ ವಿದ್ಯಾರ್ಥಿಗಳಿಗೆ ಹಾಗೂ ಊರಿನ ಗಣ್ಯರಿಗೆ ಸದಾ ನೆರವು ನೀಡುತ್ತಿತ್ತು. ಶೇಖರಪ್ಪನವರ ತಂದೆ ವೀರಶೆಟ್ಟಪ್ಪನವರ ಹೋಟೆಲಿನಲ್ಲಿ ತಯಾರಿಸಲಾಗುತ್ತಿದ್ದ 'ಬಾದೂಷಾ' ಮಹಾರಾಜರ ಅರಮನೆಗೆ ಹೋಗಿರುವ ಖ್ಯಾತಿಯೂ ಇದಕ್ಕಿದೆ. ಜಿ.ಎನ್.ಮಧೂಡಯ್ಯ ಹಾಗೂ ಅವರ ಸಹೋದರರಾದ ವೀರಯ್ಯನವರು ತುಮಕೂರಿನಲ್ಲಿ ಮೊದಲು ವಸತಿ (ಲಾಡ್ಜಿಂಗ್) ಸೌಲಭ್ಯವಿರುವ ಹೋಟೆಲು ಪ್ರಾರಂಭಿಸಿದ ಖ್ಯಾತಿ ಪಡೆದಿರುವರು. ಹೋಟೆಲ್ ಸ್ಟ್ರೀಟ್‌ನಲ್ಲಿದ್ದ 'ಮಿಲನ್' ಮತ್ತು ಬಿಸ್ಮಿಲ್ಲಾ ಹೋಟೆಲುಗಳು ಮಾಂಸಹಾರಿಗಳಿಗೆ ಜನಪ್ರಿಯ ಹೋಟೆಲುಗಳಾಗಿದ್ದುವು. ಶಿವಣ್ಣನವರ ಹೋಟೆಲು ತಟ್ಟೆ ಇಡ್ಲಿಗೆ ಪ್ರಸಿದ್ದಿಯಾಗಿದ್ದು, ಇಡೀ ತುಮಕೂರಿಗೆ ಹೆಸರು ತಂದ ಹೋಟೆಲ್. ತುಮಕೂರಿನ ಗುಬ್ಬಿಗೇಟ್ ಬಳಿಯಿದ್ದ 'ಚನ್ನಬಸವೇಶ್ವರ ಭವನ' ಹಳೇ ತಲೆಮಾರಿನ ಹೆಸರುವಾಸಿಯಾದ ಹೋಟೆಲ್. ಹೋಟೆಲ್ ರಸ್ತೆಯಲ್ಲಿದ್ದ ಬಸವರಾಜುರವರ ಹೋಟೆಲು ಕೂಡ ಹೆಸರು ಮಾಡಿದ್ದ ಹೋಟೆಲ್ ಆಗಿತ್ತು.

ಹಳೇ ಮಾರುಕಟ್ಟೆ ಬಳಿಯಿದ್ದ ಬಂಡೆಯ ಮೇಲೆ ಇಡ್ಲಿ ಮಾರುತ್ತಿದ್ದ ಇಡ್ಲಿ ಬಸಪ್ಪ, ದೋಸೆ–ಮಾಂಸದ ಸಾರಿನ ಖ್ಯಾತಿಯ ಕನ್ನಯ್ಯ ಹೋಟೆಲು, ಲೇಕ್‌ವ್ಯೂವ್‌ನ ಎಂ.ಡಿ.ಸ್ವಾಮಿ, ಮೊದಲಾದವರು ಹಳೆಯ ತಲೆಮಾರಿನ ಹೋಟೆಲಿನವರು. ಚಿಕ್ಕಮಾರುಕಟ್ಟೆ ಬಳಿಯಿದ್ದ ಭೋಜಣ್ಣನವರ ಹೋಟೆಲಿನ ಪ್ರತಿ ತಿನಿಸಿನ ಬೆಲೆ ಕೇವಲ ಒಂದೂವರಾಣಿ (ಒಂಬತ್ತು ಪೈಸೆ) ಇದ್ದು ಬಡವರಿಗೆ ಆಶ್ರಯವಾಗಿದ್ದ ಹೋಟೆಲ್ ಆಗಿತ್ತು. ಚಿಕ್ಕಪೇಟೆ ವೃತ್ತದ ಬಳಿಯಿದ್ದ 'ಮಂಜುನಾಥ ಕಾಫಿಬಾರ್' ದಕ್ಷಿಣ ಕನ್ನಡ ಮೂಲದ ಗೋಪಾಲರಾಯರದು. ರಮಾನಂದ ಹೆಬ್ಬಾರರ 'ಮಾಡ್ರನ್ ಹೋಟೆಲ್' ೧೯೫೫ರ ಸುಮಾರಿಗೆ ಪ್ರಾರಂಭಗೊಂಡಿತ್ತು. ಇದು ೧೯೩೯ರ ಸುಮಾರಿನಲ್ಲೇ 'ಮದ್ರಾಸ್ ಅಯ್ಯರ್ ಹೋಟೆಲ್' ಎಂಬ ಹೆಸರಿನಲ್ಲಿ

ಪ್ರಾರಂಭಗೊಂಡಿರುವುದನ್ನು ಕಾಣಬಹುದು. ಈ ಮಾಡ್ರನ್ ಹೋಟೆಲ್ 'ವಾಂಗಿಬಾತ್, ಮತ್ತು 'ಬಿಸಿಬೇಳೆ ಬಾತ್'ಗೆ ಪ್ರಸಿದ್ಧಿ ಪಡೆದಿದೆ. ತುಮಕೂರಿಗೆ ಮೊಟ್ಟ ಮೊದಲು ಬಂದ ದಕ್ಷಿಣ ಕನ್ನಡಿಗರ ಹೋಟೆಲು ೧೯೦೦ ರ ಆದಿ ಭಾಗದಲ್ಲಿ ಪ್ರಾರಂಭಗೊಂಡ ದಿವಂಗತ ಬಿ.ಎನ್. ಪದ್ಮನಾಭಯ್ಯನವರ "ರೈಲ್ವೆ ಸ್ಟೇಷನ್ ಹೋಟೆಲು". ಇದು ಹೋಳಿಗೆ ಮತ್ತು ಆಂಬೊಡೆಗೆ ಪ್ರಸಿದ್ಧಿ ಪಡೆದಿತ್ತು. ಈಗ ಇವರ ಮಗ ಬಿ.ಪಿ.ನಾಗಭೂಷಣರಾವ್ 'ಶ್ರೀ ಧಾಮ' ಲಾಡ್ಜ್ ನಡೆಸುತ್ತಿದ್ದಾರೆ. ಗುಂಚಿ ಚೌಕದಲ್ಲಿದ್ದ 'ಆನಂದ ಭವನ' ಎಂಬ ಹೆಸರಿನ ಹೋಟೆಲನ್ನು ಎಂ.ವಾಸುದೇವರಾಯರ (ವಾಸಣ್ಣ) ತಂದೆ ಶ್ರೀನಿವಾಸ ಭಟ್ಟರು ಪ್ರಾರಂಭಿಸಿದ್ದರು. ವಾಸಣ್ಣನವರು ಅದನ್ನು ಪ್ರಖ್ಯಾತಗೊಳಿಸಿದರು. ಮಂಡಿಪೇಟೆಯಲ್ಲಿದ್ದ 'ಬಾಂಬೆ ಆನಂದ ಭವನ'ದ ಮಾಲೀಕರು ರಾಮಚಂದ್ರ ಸೇಠ್. ಇದು ಉತ್ತರ ಭಾರತದ ಸಿಹಿ ತಿಂಡಿಗಳಿಗೆ ಹಾಗೂ ಪೂರಿ ಮತ್ತು ಬಾಂಬೆ ಸಾಗುಗಳಿಗೆ ಹೆಸರುವಾಸಿಯಾಗಿತ್ತು. ತುಮಕೂರು ನಗರದಲ್ಲಿ ಈಜು ಕೊಳವಿರುವ 'ವುಡ್‌ಲ್ಯಾಂಡ್ ಹೋಟೆಲ್' ನಿರ್ಮಿಸಿದ ಖ್ಯಾತಿ ಬಳ್ಳುಕ ರಾಯರಿಗೆ ಸಲ್ಲುತ್ತದೆ. ತುಮಕೂರು ನಗರದ ಜನತೆಗೆ ರವೆ ದೋಸೆ ರುಚಿ ತೋರಿದ ಖ್ಯಾತಿ 'ದ್ವಾರಕಾ ಹೋಟೆಲ್'ನ ಎಂ.ಎಸ್.ವೆಂಕಟಾಚಲರವರದು.

ಶಿರಾಣಿ ರಸ್ತೆಯಲ್ಲಿದ್ದ ಗೋವಿಂದಪ್ಪನ ಮಾಂಸಾಹಾರಿ ಹೋಟೆಲ್, ಜನಾರ್ಧನ ರಾಯರ ರಾಜಕಮಲ್ ಹೋಟೆಲ್, ಜಯಣ್ಣನವರ ಹೆಲ್ತ್ ಕ್ಯಾಂಟೀನ್, ವಾಸುದೇವ ಉಡುಪರ ಕರ್ನಾಟಕ ರತ್ನ ಭವನ, ಮಲ್ಲಿಕ್ ರೆಹಮಾನ್‌ರ ಮಾಂಸಹಾರಿ ಹೋಟೆಲ್ ಮೊದಲಾದವುಗಳು ಹಳೆಯ ಕಾಲದ ಹೋಟೆಲುಗಳಾಗಿದ್ದು, ರುಚಿಕರವಾದ ತಿಂಡಿ ಊಟಗಳಿಗೆ ಹೆಸರುವಾಸಿಯಾಗಿದ್ದುವು. ಕೋರ್ಟ್ ಕ್ಯಾಂಟೀನ್, ಅಯ್ಯಂಗಾರ್ ಹೋಟೆಲ್, ವಿದ್ಯಾರ್ಥಿ ಭವನ, ರಾಜಾ ಭವನ, ಕಲ್ಯಾಣ ಭವನ, ಚೈತನ್ಯ ಹೋಟೆಲ್, ಮೊದಲಾದವುಗಳು ನಗರದ ಪ್ರಸಿದ್ಧ ಹೋಟೆಲುಗಳು. 'ಗುರುರಾಜ ಭವನ' ತುಮಕೂರಿನಲ್ಲಿ ತುಪ್ಪದ ದೋಸೆಗೆ ಹೆಸರುವಾಸಿಯಾಗಿತ್ತು. ಇದರ ಮಾಲೀಕರು ಜಿ.ಎಂ.ರಾಜಾಚಾರ್ಯರು. ಬಿ.ಜನಾರ್ಧನರವರು ತುಮಕೂರಿನ ಬಸ್ ನಿಲ್ದಾಣದ ಹೋಟೆಲಿನ ಮಾಲೀಕರಾಗಿದ್ದು, ಮೊಟ್ಟಮೊದಲು ಊಟದ ಹೋಟೆಲನ್ನು ಸ್ಥಾಪಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಕೆ.ಎಸ್. ಗೋಪಾಲಕೃಷ್ಣರಾವ್ ಸಿಹಿ ಮತ್ತು ಖಾರ ತಿಂಡಿಗೆ ಹೆಸರಾದ ಪವನ್ ಸ್ಟೋರ್ಸ್‌ನ ಮಾಲೀಕರು. ದಿವಂಗತ ಪುಟ್ಟರಾಯರು ತುಮಕೂರಿನ ಖ್ಯಾತ ಹೋಟೆಲ್ ಉದ್ಯಮಿ. ನಂಜುಂಡೇಶ್ವರ ಹೋಟೆಲುಗಳ ಮೂಲಕ ಪ್ರಸಿದ್ಧಿಗೆ ಬಂದಿರುವ ಸಿ.ವಿ.ಮಹದೇವಯ್ಯನವರು ತುಮಕೂರು ಹೋಟೆಲುಗಳಿಗೆ ಹೊಸಬಗೆಯ ಸಂಸ್ಕಾರ ನೀಡಿದ್ದಾರೆ. ಬೇಕರಿಯಿಂದ ಹಿಡಿದು ಉತ್ತರ ಭಾರತದ ತಿಂಡಿ ತಿನಿಸುಗಳಿಗೆ ಇವರ ಹೋಟೆಲು ಪ್ರಸಿದ್ಧಿ ಪಡೆದಿದೆ. ಶ್ರೀಧರ್ ಕೊರಡಿಯವರ ಅಕ್ಷಯ ಉಪಹಾರ್, ಶ್ರೀನಿವಾಸ ಹತ್ವಾರರ ವೈಭವ ರಿಫ್ರೆಷ್‌ಮೆಂಟ್, ಜಿ.ಕೆ.ಶ್ರೀನಿವಾಸರ ಸನ್ಮಾನ್ ಹೋಟೆಲ್, ರಾಜೇಂದ್ರ ಪ್ರಸಾದರ 'ಬೇಬಿ ಮಿಲ್ಕ್ ಬಾರ್', ಹೋಟೆಲ್ ಸುನೀತ್, ರಾಧಾಕೃಷ್ಣ ಶೆಟ್ಟಿಯವರ ವೈಶಾಲಿ ಹೋಟೆಲ್, ರಾಘವೇಂದ್ರ ರಾವ್‌ರವರ 'ಬಾಂಧವ್ಯ' ಕೆ.ಎಸ್.ಶಶಿಧರರವರ ಕಪಾಲಿ ಹೋಟೆಲ್, ರಂಗನಾಥರವರ 'ಹಟ್', ನಾಗಭೂಷಣ್‌ರವರ 'ಕುಬೇರ ಹೋಟೆಲ್', ಟಿ.ವಿ.ಎಸ್.ಮೂರ್ತಿಯವರ 'ಪ್ರಿನ್ಸ್ ಕಾಟೇಜ್', ವೀರಣ್ಣಗೌಡರ 'ಅಲಂಕಾರ್ ಬಾರ್', ಚಿಕ್ಕರಾಮಯ್ಯನವರ 'ಶಶಿ ಮಾಂಸಹಾರ ಹೋಟೆಲ್', ಯು ಸುರೇಶ್ ಹೊಳ್ಳರವರ 'ಹೋಟೆಲ್ ಶ್ರೀ ಗಾಯತ್ರಿ', ಬಸವರಾಜ್‌ರವರ 'ಶ್ರೀ ನಂಜುಂಡೇಶ್ವರ ಸ್ವೀಟ್ಸ್', ಸಯ್ಯದ್ ಗಫಾರ್‌ರವರ 'ಮಲ್ಲಿಕ್ ರೆಹಾನ್', ಮಾಧವ ಡಿ.ನಾಯಕರ 'ಸುಧಾ ಕ್ಯಾಂಟೀನ್,' ಪಿ.ಜಗದೀಶ ಭಟ್ಟರ 'ಅನುಗ್ರಹ', ಟಿ.ವಿ.ರುದ್ರಪ್ಪನವರ ಎಸ್.ಎಸ್.ಟಿಫನ್ ರೂಂ', ಸಿದ್ಧಲಿಂಗಯ್ಯನವರ 'ಸಿದ್ಧಲಿಂಗೇಶ್ವರ ಭವನ,' ಟಿ.ಎಸ್.ನಾಗರಾಜರ 'ಶಿವಾನಂದ ರೆಸ್ಟೋರೆಂಟ್', ಮೊದಲಾದವುಗಳು ನಗರದಲ್ಲಿ ಪ್ರವರ್ಧಮಾನಕ್ಕೆ ಬಂದಿರುವ ಹೋಟೆಲುಗಳಾಗಿವೆ. ರಾಷ್ಟ್ರೀಯ ಹೆದ್ದಾರಿಯ ಪ್ರಯಾಣಿಕರಿಗೆ ಚಿರಪರಿಚಯವಾಗಿರುವ ಕ್ಯಾತ್ಸಂದ್ರದ ತಟ್ಟೆ ಇಡ್ಲಿ ಹೋಟೆಲುಗಳಾದ 'ಪವಿತ್ರ ಇಡ್ಲಿ ಹೋಟೆಲ್,' 'ನಟರಾಜ ಹೋಟೆಲ್', ರವಿ ದರ್ಶನ್ ಇಡ್ಲಿ ಹೋಟೆಲ್', ಇವು ಕ್ಯಾತ್ಸಂದ್ರದ ಪ್ರಮುಖ ಹೋಟೆಲುಗಳಾಗಿವೆ.

ಜಿಲ್ಲೆಯ ತಾಲೂಕು ಕೇಂದ್ರಗಳಲ್ಲಿ ಊಟ ಮತ್ತು ವಸತಿಯನ್ನೊದಗಿಸುವ ಹೋಟೆಲುಗಳಿದ್ದು, ಪ್ರವಾಸಿಗರು, ಉದ್ಯೋಗವನ್ನು ಹುಡುಕಿಕೊಂಡು ಬಂದವರು, ವ್ಯಾಪಾರಿಗಳು, ಹಾಗೂ ವಿದ್ಯಾರ್ಥಿಗಳಿಗೆ ಊಟ ಮತ್ತು ವಸತಿ ಸೌಲಭ್ಯವನ್ನು ಒದಗಿಸುತ್ತಿವೆ. ಗ್ರಾಮಾಂತರ ಪ್ರದೇಶದಲಿರುವ ಹೋಟೆಲುಗಳಲ್ಲಿ ಊಟ ಮತ್ತು ವಸತಿ ಸೌಲಭ್ಯವಿರುವುದಿಲ್ಲ. ಅಲ್ಲಿ ಕೇವಲ ತಿಂಡಿ, ಕಾಫಿ, ಟೀಗಳನ್ನು ಪೂರೈಸಲಾಗುತ್ತದೆ. ಜಿಲ್ಲಾ ಮತ್ತು ತಾಲೂಕು ಕೇಂದ್ರಗಳಲ್ಲಿರುವ ಹೋಟೆಲುಗಳಲ್ಲಿ ಸಿಹಿ ಮತ್ತು ಖಾರ ತಿಂಡಿ ತಿನಿಸುಗಳನ್ನು ತಯಾರಿಸುವವರು, ಊಟ ತಯಾರಿಸುವವರು, ಮ್ಯಾನೇಜರ್, ಸಪ್ಲೈರ್ಸ್, ಟೇಬಲ್ ಕ್ಲೀನರ್ಸ್, ಲೋಟ, ಪಾತ್ರೆ ತೊಳೆಯುವವರು ಮೊದಲಾದವರಿಗೆ ಉದ್ಯೋಗಾವಕಾಶವಿರುವುದು. ಗ್ರಾಮಾಂತರ

ಪ್ರದೇಶದಲ್ಲಿ ತಿಂಡಿ ತಿನಿಸು ತಯಾರಿಸುವುದು, ಸಪ್ಲೈ ಮಾಡುವುದು, ಮತ್ತು ಕ್ಯಾಷ್ ಕಲೆಕ್ಷನ್ ಮಾಡುವ ಕಾರ್ಯವನ್ನು ಹೋಟೆಲ್ ಮಾಲೀಕರೇ ನಿರ್ವಹಿಸುತ್ತಾರೆ. ಟೇಬಲ್ ಕ್ಲೀನ್ ಮಾಡುವುದು ಮತ್ತು ತಟ್ಟೆ, ಲೋಟಗಳನ್ನು ತೊಳೆಯುವ ಕೆಲಸಕ್ಕೆ ಒಬ್ಬ ಹುಡುಗನನ್ನು ನೇಮಿಸಿಕೊಂಡಿರುತ್ತಾರೆ. ಇನ್ನು ಕೆಲವು ಕಡೆಗಳಲ್ಲಿ ಈ ಎಲ್ಲಾ ಕೆಲಸಗಳನ್ನು ಮಾಲೀಕರೇ ನಿರ್ವಹಿಸುತ್ತಿರುತ್ತಾರೆ. ೨೦೧೨ ಮಾರ್ಚ್ ಅಂತ್ಯಕ್ಕೆ ಜಿಲ್ಲೆಯಲ್ಲಿ ೧೯೨ ಹೋಟೆಲ್‌ಗಳಿದ್ದು, ೯೮೨ ಮಂದಿ ಕಾರ್ಮಿಕರಿದ್ದರು. ವಿವರಗಳಿಗೆ ಕೋಷ್ಟಕ ೫.೧೮ ನೋಡಿ.

**ಕೋಷ್ಟಕ ೫.೧೮ ೨೦೧೨ ರ ಮಾರ್ಚ್ ಅಂತ್ಯಕ್ಕೆ ಜಿಲ್ಲೆಯಲ್ಲಿದ್ದ ತಾಲೂಕುವಾರು ಹೋಟೆಲ್‌ಗಳು ಮತ್ತು ಅವುಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕಾರ್ಮಿಕರ ವಿವರ.**

| ಕ್ರ.ಸಂ | ತಾಲೂಕು | ಹೋಟೆಲುಗಳ ಸಂಖ್ಯೆ | ಕಾರ್ಮಿಕರ ಸಂಖ್ಯೆ |
|---|---|---|---|
| ೧ | ೧ನೇ ವೃತ್ತ, ತುಮಕೂರು | ೧೮ | ೧೯೬ |
| ೨ | ೨ನೇ ವೃತ್ತ, ತುಮಕೂರು | ೧೯ | ೧೮೭ |
| ೩ | ಕುಣಿಗಲ್ | ೪೦ | ೧೪೯ |
| ೪ | ತುರುವೇಕೆರೆ | ೦೬ | ೨೨ |
| ೫ | ಶಿರಾ | ೨೭ | ೧೩೫ |
| ೬ | ಗುಬ್ಬಿ | ೧೮ | ೫೬ |
| ೭ | ಚಿಕ್ಕನಾಯಕನಹಳ್ಳಿ | ೧೬ | ೪೫ |
| ೮ | ತಿಪಟೂರು | ೨೩ | ೧೨೯ |
| ೯ | ಮಧುಗಿರಿ | ೦೬ | ೩೦ |
| ೧೦ | ಕೊರಟಗೆರೆ | ೦೬ | ೧೭ |
| ೧೧ | ಪಾವಗಡ | ೧೩ | ೧೬ |
| ಒಟ್ಟು | | ೧೯೨ | ೯೮೨ |

**ಆಧಾರ: ಜಿಲ್ಲಾ ಕಾರ್ಮಿಕಾಧಿಕಾರಿ, ತುಮಕೂರು**

## ಆಂತರಿಕ ಸಾಧನ ಸೌಲಭ್ಯಗಳು

ಜಿಲ್ಲಾ ಕೈಗಾರಿಕಾ ಬೆಳವಣಿಗೆಯು ಜಿಲ್ಲೆಯಲ್ಲಿ ದೊರಕುವ ವ್ಯವಸಾಯೋತ್ಪನ್ನಗಳು, ಖನಿಜ ಸಂಪತ್ತು, ಅರಣ್ಯ ಸಂಪತ್ತು, ಜಲ ಸಂಪತ್ತು, ಮೊದಲಾದವುಗಳಿಂದ ದೊರಕುವ ಕಚ್ಚಾ ವಸ್ತುಗಳನ್ನೇ ಅಲ್ಲದೇ ಇತರ ಆಂತರಿಕ ಸಾಧನ ಸೌಲಭ್ಯಗಳಾದ ಸಾರಿಗೆ–ಸಂಪರ್ಕ, ಹಣಕಾಸು ಸೌಲಭ್ಯ, ಮಾರುಕಟ್ಟೆ ಸೌಲಭ್ಯ, ಕೈಗಾರಿಕಾ ವಸಾಹತು, ಕೈಗಾರಿಕಾ ಪ್ರದೇಶ, ಮಾನವ ಸಂಪನ್ಮೂಲ, ಕೈಗಾರಿಕಾ ತರಬೇತಿ ಮೊದಲಾದವುಗಳನ್ನು ಸಹ ಅವಲಂಬಿಸಿರುತ್ತದೆ.

## ಹಣಕಾಸು ಸೌಲಭ್ಯ

ಜಿಲ್ಲೆಯ ಸಣ್ಣ ಕೈಗಾರಿಕೆಗಳಿಗೆ ರಾಷ್ಟ್ರೀಕೃತ ವಾಣಿಜ್ಯ ಬ್ಯಾಂಕುಗಳು, ಕೈಗಾರಿಕಾ ಸಹಕಾರಿ ಬ್ಯಾಂಕುಗಳು, ಕರ್ನಾಟಕ ಹಣಕಾಸು ನಿಗಮ, ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ, ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ಮತ್ತು ನಬಾರ್ಡ್ ಸಂಸ್ಥೆಗಳು ಅವಧಿ ಸಾಲಗಳ ಅಗತ್ಯವನ್ನು ಪೂರೈಸುತ್ತವೆ. ೧೯೯೦ರಲ್ಲಿ ಸ್ಥಾಪಿತವಾದ ಭಾರತದ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಬ್ಯಾಂಕ್ ಮರು ಹಣಕಾಸು ಸೌಲಭ್ಯವನ್ನೊದಗಿಸುತ್ತದೆ. ರಾಜ್ಯ ಹಣಕಾಸು ನಿಗಮವು ಏಕಗವಾಕ್ಷಿ ಯೋಜನೆ ಮತ್ತು ರಾಷ್ಟ್ರೀಯ ಈಕ್ವಿಟಿ ನಿಧಿಯ ಮೂಲಕ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ದೀರ್ಘಾವಧಿ ಸಾಲ ಸೌಲಭ್ಯವನ್ನೊದಗಿಸುತ್ತಿದೆ ಭಾರತದ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಬ್ಯಾಂಕು ಕೈಗಾರಿಕೆಗಳ ಆಧುನೀಕರಣ, ಉದ್ಯಮಶೀಲ ಮಹಿಳೆಯರಿಗೆ ಮೀಸಲಿರುವ ಯೋಜನೆಗಳಿಗೆ ಹಣಕಾಸು ಸೌಲಭ್ಯವನ್ನು ನೀಡುತ್ತಿದೆ. ಇವುಗಳ ಜೊತೆಗೆ ಕರ್ನಾಟಕ ರಾಜ್ಯ ನಾರು ಅಭಿವೃದ್ಧಿ ನಿಗಮ, ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಇವು ಆರ್ಥಿಕ ಮತ್ತು ಮಾರುಕಟ್ಟೆ ಸೌಲಭ್ಯವನ್ನೊದಗಿಸುತ್ತಿವೆ.

### ಮಾರುಕಟ್ಟೆ ಸೌಲಭ್ಯ

ಜಿಲ್ಲೆಯಲ್ಲಿರುವ ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳಲ್ಲಿ ಉತ್ಕೃಷ್ಟ ಯಂತ್ರೋಪಕರಣಗಳಿದ್ದು, ಇವುಗಳಲ್ಲಿ ಉತ್ಪಾದನೆಯಾಗುವ ಸರಕುಗಳಿಗೆ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ (ಗುಣಮಟ್ಟ) ಮಾರುಕಟ್ಟೆಯ ಸೌಲಭ್ಯವಿರುತ್ತದೆ. ಇಲ್ಲಿ ಸಣ್ಣ ಮತ್ತು ಅತೀ ಸಣ್ಣ ಪ್ರಮಾಣದ ಕೈಗಾರಿಕೆಗಳ ಹಾಗೂ ಗೃಹ ಕೈಗಾರಿಕೆಗಳ ಸರಕುಗಳಿಗೆ ಸ್ಥಳೀಯವಾಗಿ ಬೇಡಿಕೆಯಿರುತ್ತದೆ. ಜಿಲ್ಲೆಯ ಕೆಲವು ಸಹಕಾರ ಸಂಘಗಳು ತನ್ನ ಸದಸ್ಯ ಉದ್ದಿಮೆಗಳಿಗೆ ಕಚ್ಚಾ ಸರಕನ್ನು ಪೂರೈಕೆ ಮಾಡುವುದರ ಜೊತೆಗೆ ಅಲ್ಲಿ ಉತ್ಪಾದಿಸಲ್ಪಟ್ಟ ಸರಕನ್ನು ಮಾರಾಟ ಮಾಡುವ ಕಾರ್ಯವನ್ನು ನಿರ್ವಹಿಸುತ್ತಿವೆ. ಕೈಗಾರಿಕೆಗಳು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಾರುಕಟ್ಟೆಯ ಸೌಕರ್ಯವನ್ನು ಪಡೆದುಕೊಳ್ಳಬೇಕಾದರೆ ಜಿಲ್ಲೆಯಲ್ಲಿರುವ ಜಿಲ್ಲಾ ಪೂರೈಕೆ ಮತ್ತು ಮಾರುಕಟ್ಟೆ ಸಂಘ, ಖಾದಿ ಭಂಡಾರ, ಕರ್ನಾಟಕ ಸಣ್ಣ ಕೈಗಾರಿಕೆಗಳ ಮಾರುಕಟ್ಟೆ ನಿಗಮ, ಕರ್ನಾಟಕ ಕರಕುಶಲ ಅಭಿವೃದ್ಧಿ ನಿಗಮ, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ವಿದ್ಯುತ್ ಮಗ್ಗ ಅಭಿವೃದ್ಧಿ ನಿಗಮ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಮೊದಲಾದವುಗಳು ತಮ್ಮ ವ್ಯಾಪ್ತಿಗೊಳಪಡುವ ಸಣ್ಣ ಮತ್ತು ಗೃಹ ಕೈಗಾರಿಕೆಗಳಿಗೆ ಬೇಕಾಗುವ ಕಚ್ಚಾ ವಸ್ತುವನ್ನು ಪೂರೈಸಲು ಮತ್ತು ಸಿದ್ಧ ವಸ್ತುಗಳನ್ನು ಮಾರಾಟ ಮಾಡಲು ನೆರವನ್ನೊದಗಿಸುತ್ತವೆ. ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿ., ಮತ್ತು ಕೇಂದ್ರ ಗೃಹ ಕೈಗಾರಿಕೆಗಳ ಮಳಿಗೆ ಅಂತರ–ರಾಷ್ಟ್ರೀಯ ಮಾರುಕಟ್ಟೆಯ ಸೌಲಭ್ಯವನ್ನು ದೊರಕಿಸಿಕೊಡುತ್ತವೆ. ಇವುಗಳ ಜೊತೆಗೆ ಗ್ರಾಹಕರ ಸಹಕಾರ ಸಂಘಗಳು, ವಾರದ ಸಂತೆಗಳು ಸಹ ಸ್ಥಳೀಯ ಮಾರುಕಟ್ಟೆ ಸೌಲಭ್ಯವನ್ನೊದಗಿಸುತ್ತಿವೆ.

### ತರಬೇತಿ ಹಾಗೂ ಆರ್ಥಿಕ ನೆರವು

ರಾಜ್ಯ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯು ಮಧುಗಿರಿಯಲ್ಲಿ ಗ್ರಾಮಾಂತರ ಕುಶಲಕರ್ಮಿ ತರಬೇತಿ ಸಂಸ್ಥೆಯನ್ನು ೧೯೬೦ರಲ್ಲಿ ಸ್ಥಾಪಿಸಿ, ಮರಗೆಲಸ, ಕುಲುಮೆ ಕೆಲಸ, ನಾರಿನ ಕೆಲಸ, ಹತ್ತಿ ಬಟ್ಟೆ ನೇಯ್ಗೆ, ಚರ್ಮೋದ್ಯಮಕ್ಕೆ ಸಂಬಂಧಿಸಿದಂತೆ ತರಬೇತಿಯನ್ನು ನೀಡಲು ಸೌಲಭ್ಯ ಕಲ್ಪಿಸಿಕೊಟ್ಟಿದೆ. ಇದರ ಶಾಖೆ ತುಮಕೂರಿನಲ್ಲಿ ಪ್ರಾರಂಭಗೊಂಡು ಮಹಿಳೆಯರಿಗೆ ಹೊಲಿಗೆ, ಒಳ ಉಡುಪು ತಯಾರಿಕೆ, ಬೊಂಬೆಗಳ ತಯಾರಿಕೆ, ಚಾಪೆ ಹೆಣೆಯುವುದು, ಗಾಜಿನ ಮಣಿಗಳ ತಯಾರಿಕೆ, ಮೊದಲಾದವುಗಳಿಗೆ ಸಂಬಂಧಿಸಿದಂತೆ ತರಬೇತಿ ನೀಡಲಾಗುತ್ತಿದೆ. ಇವುಗಳಲ್ಲಿನ ತರಬೇತಿಯ ಅವಧಿ ಒಂದೂವರೆ ವರ್ಷ, ತರಬೇತಿಯ ಅವಧಿಯಲ್ಲಿ ತರಬೇತಿದಾರರಿಗೆ ಭತ್ಯೆ ನೀಡಲಾಗುತ್ತದೆ. ಈ ತರಬೇತಿ ಸಂಸ್ಥೆಯಲ್ಲಿ ಕೃಷಿ ಉಪಕರಣಗಳ ರಿಪೇರಿ ಹಾಗೂ ಸೇವಾ ಕಾರ್ಯಕ್ಕೆ ಸಂಬಂಧಿಸಿದಂತೆ ತರಬೇತಿ ಸೌಲಭ್ಯವಿದೆ. ಇದರಲ್ಲಿನ ತರಬೇತಿ ಕಾಲಾವಧಿ ಒಂದು ವರ್ಷ. ಕ್ರಿಶ್ಚಿಯನ್ ಮಿಷಿನರಿ ೧೮೭೭ರಲ್ಲಿ ಸ್ಥಾಪಿಸಿದ ಕೈಗಾರಿಕಾ ಶಾಲೆಯಲ್ಲಿ ಅನಾಥ ಮಕ್ಕಳಿಗೆ ಮರಗೆಲಸ, ನೇಯ್ಗೆ, ಕುಲುಮೆ ಕೆಲಸ, ಹಗ್ಗ ತಯಾರಿಕೆಗೆ ಸಂಬಂಧಸಿದಂತೆ ತರಬೇತಿ ಸೌಲಭ್ಯವಿತ್ತು. ಗುಬ್ಬಿಯ ತಾಲೂಕು ಬೋರ್ಡ್ ವತಿಯಿಂದ ಪ್ರಾರಂಭಿಸಲ್ಪಟ್ಟ ತರಬೇತಿ ಕೇಂದ್ರದಲ್ಲಿ ಎಣ್ಣೆ ಗಿರಣಿ, ವಿದ್ಯುತ್ ಮೋಟಾರ್ಸ್ ಮತ್ತು ಪಂಪ್‌ಸೆಟ್ಟುಗಳಿಗೆ ಸಂಬಂಧಿಸಿದಂತೆ ತರಬೇತಿ ಸೌಲಭ್ಯ ಒದಗಿಸಲಾಗಿದೆ.

ಜಿಲ್ಲಾ ಕೈಗಾರಿಕಾ ಕೇಂದ್ರವು ಜಿಲ್ಲೆಯಲ್ಲಿ ದೊರಕಬಹುದಾದ ಕಚ್ಚಾಮಾಲು ಹಾಗೂ ಸ್ಥಳೀಯ ಪರಿಸ್ಥಿತಿಗಳಿಗೆ ಅನುಗುಣವಾಗಿ ಕೈಗಾರಿಕೆಗಳನ್ನು ಸ್ಥಾಪಿಸಲು ಅನುಕೂಲವಾಗುವಂತೆ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ತುಮಕೂರು ಶಾಖೆಯಿಂದ ಸುಮಾರು ೪೦ ಉದ್ಯಮಿಗಳಿಗೆ ತಮ್ಮ ವಸ್ತುಗಳ ಮಾರಾಟಕ್ಕೆ ವ್ಯವಸ್ಥೆ ಕಲ್ಪಿಸಿ ಪ್ರೇರೇಪಿಸಿದುದೇ ಅಲ್ಲದೇ ಎಚ್.ಎಂ.ಟಿ. ಕೈಗಡಿಯಾರ ಕಾರ್ಖಾನೆಯ ನೆರವಿನಿಂದ ಅವರಿಗೆ ಬೇಕಾಗುವ ಅನೇಕ ಸಾಮಗ್ರಿಗಳನ್ನು ಪ್ರದರ್ಶಿಸಿ ಜಿಲ್ಲೆಯ ಉದ್ಯಮದಾರರಿಗೆ ಕೈಗಾರಿಕೆಗಳನ್ನು ಸ್ಥಾಪಿಸಿ, ಮರಗೆಲಸ, ಕಮ್ಮಾರಿಕೆ, ಕೈಮಗ್ಗ, ಹೊಲಿಗೆ ಕೆಲಸ, ಚಾಪೆ ಹೆಣಿಕೆ, ತೆಂಗಿನನಾರಿನ ಉತ್ಪಾದನಾ ವಿಭಾಗದಲ್ಲಿ ತರಬೇತಿ ಪಡೆಯಲು ಅನುಕೂಲ ಮಾಡಿಕೊಡಲಾಗಿದೆ. ಇದೇ ರೀತಿಯಲ್ಲಿ ಜೋಡಣೆ, ವೆಲ್ಡಿಂಗ್ ಹಾಗೂ ವ್ಯವಸಾಯೋತ್ಪನ್ನ ಉಪಕರಣಗಳ ತಯಾರಿಕೆಯಲ್ಲಿ ಶಿಕ್ಷಣ ಹೊಂದಲು ಅಗ್ರಿಕಲ್ಚರಲ್ ಮಿಷಿನರಿ ಕೇಂದ್ರವನ್ನು ತುಮಕೂರಿನಲ್ಲಿ ತೆರೆಯಲಾಗಿದೆ.

ಇಲಾಖಾ ವತಿಯಿಂದ ನಡೆಸಲ್ಪಡುವ ಶಿಕ್ಷಣ ಕೇಂದ್ರಗಳಲ್ಲದೇ ಗ್ರಾಮಾಂತರ ಕುಶಲ ಕರ್ಮಿಗಳಿಗೆ ತೆಂಗಿನ ನಾರಿನ ಉತ್ಪಾದನೆಗಳ ತಯಾರಿಕೆ, ರೇಡಿಯೋ ಬಿಡಿ ಭಾಗಗಳ ಜೋಡಣೆ ಮತ್ತು ದುರಸ್ತಿ ಇತರ ಯಂತ್ರೋಪಕರಣಗಳ ಜೋಡಣೆ ಮತ್ತು ದುರಸ್ತಿ, ಉಷ್ಣ ಮಾಪಕಗಳ ತಯಾರಿಕೆ ಹಾಗೂ ದುರಸ್ತಿ ಬಗ್ಗೆ ಗ್ರಾಮಾಂತರ ಕುಶಲ ಕೈಗಾರಿಕಾ ಕಾರ್ಯಕ್ರಮಗಳ

ಮೂಲಕ ತರಬೇತಿ ಕೊಡಲಾಗುತ್ತದೆ. ಕರ್ನಾಟಕ ಕೈಮಗ್ಗಗಳ ಅಭಿವೃದ್ಧಿ ಮಂಡಳಿಯ ಸಹಕಾರದಿಂದ ಕೈಮಗ್ಗಗಳ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಿಲ್ಲೆಯಲ್ಲಿ ಕೈಗೊಳ್ಳಲಾಗಿದೆ ಮತ್ತು ೧೫೦ ಕೈಮಗ್ಗಗಳನ್ನು ಕಲ್ಲೂರು, ತಿಪಟೂರು ಹಾಗೂ ಚೇಳೂರುಗಳಲ್ಲಿ ಈ ಯೋಜನೆಯನ್ವಯ ಪ್ರಾರಂಭಿಸಲಾಗಿದೆ ಮತ್ತು ಈ ಮಗ್ಗಗಳಿಗೆ ಕಚ್ಚಾ ರೇಷ್ಮೆಯನ್ನು ಒದಗಿಸಿ ಸಿದ್ಧ ವಸ್ತುಗಳನ್ನು ಪಡೆದು ಸೂಕ್ತ ಮಜೂರಿಯನ್ನು ಕೊಡಲಾಗುತ್ತದೆ. ಇದಲ್ಲದೆ ಕೈಗಾರಿಕಾ ಉತ್ಪಾದನೆಯ ಕುಶಲತೆಯನ್ನು ಹೆಚ್ಚಿಸಲು ಕಲ್ಲೂರು ಮತ್ತು ಚೇಳೂರುಗಳಲ್ಲಿನ ೬೫ ನೇಕಾರರಿಗೆ ಸುಧಾರಿತ ಕೈಮಗ್ಗಗಳನ್ನು ಒದಗಿಸಲಾಗಿದೆ. ಎರಡು ಉಣ್ಣೆ ಹಂಜಿ ಮಾಡುವ ಯಂತ್ರಗಳನ್ನು (ಕಾರ್ಡಿಂಗ್ ಯಂತ್ರ) ಗಂಗನಘಟ್ಟ ಮತ್ತು ಚಿಕ್ಕನಾಯಕನಹಳ್ಳಿಯ ನೇಕಾರ ಸಹಕಾರ ಸಂಘಗಳಿಗೂ ಹಾಗೂ ೫೦ ಉಣ್ಣೆ ನೇಕಾರರಿಗೆ ೫೦ ನೂಲುವ ಚರಕಗಳನ್ನು ಒದಗಿಸಲಾಗಿದೆ. ರೂ. ೧೦,೦೦೦ ಗಳ ಮೊತ್ತದ ಉಪಕರಣಗಳ ಪೆಟ್ಟಿಗೆಯನ್ನು ೪೦ ಮಂದಿ ಮೇದರಿಗೂ, ರೂ. ೧೫,೦೦೦ ಗಳ ಮೊತ್ತದ ಉಪಕರಣ ಮತ್ತು ಸಾಧನ ಸಾಮಗ್ರಿಗಳನ್ನು ೬೦ ಮಂದಿ ಚಮ್ಮಾರರಿಗೂ ಒದಗಿಸಲಾಗಿದೆ. ಸು. ರೂ. ೨,೫೦೦ ಮೊತ್ತದ ಮಡಕೆಗಳ ತಯಾರಿಕಾ ಚಕ್ರವನ್ನು ಕುಂಬಾರರಿಗೆ ಒದಗಿಸಲಾಗಿದೆ.

ಜಿಲ್ಲೆಯಲ್ಲಿ ಪ್ರಸ್ತುತ ಸಾಲಿನಲ್ಲಿ (೨೦೦೮-೦೯) ಒಂದು ಕುಶಲಕರ್ಮಿ ತರಬೇತಿ ಸಂಸ್ಥೆ ಕಾರ್ಯನಿರ್ವಹಿಸುತ್ತಿದ್ದು, ಬಡಗಿ ಮತ್ತು ಕಮ್ಮಾರಿಕೆಗೆ ಸಂಬಂಧಿಸಿದಂತೆ ತರಬೇತಿ ನೀಡಲಾಗುತ್ತದೆ. ಪ್ರತಿ ವೃತ್ತಿಯಲ್ಲಿ ಐದು ಕುಶಲಕರ್ಮಿಗಳು ತರಬೇತಿ ಪಡೆಯುತ್ತಿರುವರು. ತರಬೇತಿಯ ಅವಧಿ ಆರು ತಿಂಗಳು. ಕೈಗಾರಿಕಾ ಇಲಾಖೆಯು ಪ್ರತಿ ವೃತ್ತಿಗೆ ರೂ. ೬೦,೦೦೦ಗಳ ಅನುದಾನವನ್ನು ನೀಡುತ್ತದೆ. ೨೦೦೮-೦೯ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಒಟ್ಟು ೬೦ ಕೈಗಾರಿಕಾ ತರಬೇತಿ ಸಂಸ್ಥೆಗಳಿದ್ದು, ೦೮ ಕೈಗಾರಿಕಾ ತರಬೇತಿ ಸಂಸ್ಥೆಗಳು ಸರ್ಕಾರಿ ವಲಯದಲ್ಲೂ, ಉಳಿದ ೫೨ ಕೈಗಾರಿಕಾ ತರಬೇತಿ ಸಂಸ್ಥೆಗಳು ಖಾಸಗಿ ವಲಯದಲ್ಲೂ ಕಾರ್ಯನಿರ್ವಹಿಸುತ್ತಿದ್ದವು. ಇವುಗಳಲ್ಲಿ ತರಬೇತಿ ನೀಡಲಾಗುತ್ತಿರುವ ವಿಷಯಗಳು, ಅವುಗಳ ತರಬೇತಿಯ ಕಾಲಾವಧಿ (ಆವರಣದಲ್ಲಿ ಕೊಟ್ಟಿರುವಂತೆ) ಇರುವುದು. ಫಿಟ್ಟರ್ (೨ ವರ್ಷ), ಟರ್ನರ್ (೨ ವರ್ಷ), ಎಲೆಕ್ಟ್ರಿಷಿಯನ್ (೨ ವರ್ಷ), ಎಲೆಕ್ಟ್ರಾನಿಕ್ಸ್ ಮತ್ತು ಮೆಕಾನಿಕ್ಸ್ (೨ ವರ್ಷ), ಕಂಪ್ಯೂಟರ್ ಆಪರೇಟರ್ ಮತ್ತು ಪ್ರೋಗ್ರಾಮಿಂಗ್ ಅಸಿಸ್ಟೆಂಟ್ (೧ ವರ್ಷ), ಡ್ರಾಫ್ಟ್‌ಮನ್ ಮೆಕಾನಿಕಲ್ (೨ ವರ್ಷ), ವೈರ್ ಮ್ಯಾನ್ (೧ ವರ್ಷ), ಇನ್‌ಸ್ಟ್ರುಮೆಂಟೇಷನ್ ಟೆಕ್ನಾಲಜಿ ಮತ್ತು ಇಕ್ವಿಪ್‌ಮೆಂಟ್ (೨ ವರ್ಷ), ಮೆಕಾನಿಕ್ ರೆಫ್ರಿಜರೇಟರ್ ಮತ್ತು ಏರ್ ಕಂಡೀಷನ್ (೨ ವರ್ಷ), ಕಟ್ಟಿಂಗ್ ಮತ್ತು ಹೊಲಿಗೆ (೧ ವರ್ಷ), ವೆಲ್ಡರ್ (೧ ವರ್ಷ), ಮೆಕಾನಿಕ್ ಮೋಟಾರ್ ವೆಹಿಕಲ್ಸ್ (೨ ವರ್ಷ). ಜಿಲ್ಲೆಯಲ್ಲಿ ೨೦೦೯ ರ ಮಾರ್ಚಿ ಅಂತ್ಯಕ್ಕೆ ೬೦ ಕೈಗಾರಿಕಾ ತರಬೇತಿ ಸಂಸ್ಥೆಗಳಿದ್ದು, ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ತರಬೇತಿ ನೀಡುತ್ತಿದ್ದವು. ಕೈಗಾರಿಕಾ ತರಬೇತಿ ಪಡೆಯಲಿಚ್ಛೆಯಿರುವವರ ಅನುಕೂಲಕ್ಕಾಗಿ ೪೮ ಕೈಗಾರಿಕಾ ತರಬೇತಿ ಸಂಸ್ಥೆಗಳು ಹಾಗೂ ೧೨ ಕೈಗಾರಿಕಾ ಸಂಸ್ಥೆಗಳು ಈ ಸಾಲಿನ ಅನುಮೋದನೆ ಪಡೆದಿದ್ದವು.

## ಕೈಗಾರಿಕಾ ಪ್ರದೇಶ ಮತ್ತು ಕೈಗಾರಿಕಾ ವಸಾಹತು

ಕೈಗಾರಿಕಾ ಬೆಳವಣಿಗೆಗೆ ಕೆಲವು ಮೂಲಭೂತ ಸೌಲಭ್ಯಗಳಾದ ವಿದ್ಯುಚ್ಛಕ್ತಿ, ನೀರು, ಸಾರಿಗೆ- ಸಂಪರ್ಕ ಮೊದಲಾದವುಗಳು ಸಮೀಪದಲ್ಲೇ ದೊರಕುವಂತೆ ಅನುಕೂಲ ಕಲ್ಪಿಸಿಕೊಡುವುದರ ಜೊತೆಗೆ ಸುಲಭ ದರದಲ್ಲಿ ನಿವೇಶನ ದೊರಕುವಂತೆ ಮಾಡುವುದು ಅತ್ಯಾವಶ್ಯಕ. ಈ ಕಾರ್ಯವನ್ನು ಕರ್ನಾಟಕ ಕೈಗಾರಿಕಾ ಪ್ರದೇಶದ ಅಭಿವೃದ್ಧಿ ಮಂಡಳಿ (ಕೆ.ಐ.ಎ.ಡಿ.ಬಿ) ಮತ್ತು ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮವು ಕಳೆದ ೩೦ ವರ್ಷಗಳಿಂದ ಆಯ್ದ ಪ್ರದೇಶಗಳಲ್ಲಿ ಕೈಗಾರಿಕಾ ಪ್ರದೇಶ ಮತ್ತು ಕೈಗಾರಿಕಾ ವಸಾಹತುಗಳನ್ನು ನಿರ್ಮಿಸಿ ಕೈಗಾರಿಕೋದ್ಯಮಿಗಳಿಗೆ ವಿತರಿಸುತ್ತಾ ಬಂದಿವೆ.

ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯು ೨೦೧೨ ರ ಮಾರ್ಚಿ ಅಂತ್ಯಕ್ಕೆ ಜಿಲ್ಲೆಯ ಒಂಬತ್ತು ಕೈಗಾರಿಕಾ ಪ್ರದೇಶಗಳಲ್ಲಿ ಒಟ್ಟು ೪೩೬೧.೩೮ ಎಕರೆ ಪ್ರದೇಶವನ್ನು ಅಭಿವೃದ್ಧಿ ಪಡಿಸಿ, ವಿವಿಧ ಮಾದರಿಯ ೫೬೫ ನಿವೇಶನಗಳನ್ನು ನಿರ್ಮಿಸಿ ೪೮೬ ನಿವೇಶನಗಳನ್ನು ಕೈಗಾರಿಕೋದ್ಯಮಿಗಳಿಗೆ ಹಂಚಿಕೆ ಮಾಡಿದೆ. ಕುಣಿಗಲ್‌ನ ಕೈಗಾರಿಕಾ ಪ್ರದೇಶದಲ್ಲಿ ಎರಡನೇ ಹಂತದ ಕೈಗಾರಿಕಾ ಪ್ರದೇಶವನ್ನು ನಿರ್ಮಿಸುವುದಕ್ಕಾಗಿ ೫೪.೧೭ ಎಕರೆ ಪ್ರದೇಶವನ್ನು ಅಭಿವೃದ್ಧಿಪಡಿಸಲಾಗಿದೆ. ರಾಷ್ಟ್ರೀಯ ಹೆದ್ದಾರಿ ೪ ರ ಪಕ್ಕದಲ್ಲಿರುವ ವಸಂತನರಸಾಪುರ ೧ ನೇ ಹಂತದಲ್ಲಿ ೭೮೨.೨೨ ಎಕರೆ ಭೂಮಿಯನ್ನು , ೨ ನೇ ಹಂತದಲ್ಲಿ ೧೨೪೨.೧೦ ಎಕರೆ, ೩ ನೇ ಹಂತದಲ್ಲಿ ೧೯೪೨.೧೬ ಎಕರೆ ಭೂಮಿಯನ್ನು ಅಭಿವೃದ್ಧಿ ಪಡಿಸಿದೆ. ವಿವರಗಳಿಗೆ ಕೋಷ್ಟಕ ೫.೧೯ ನ್ನು ನೋಡಿ.

**ಕೋಷ್ಟಕ ೫.೧೯ ಜಿಲ್ಲೆಯಲ್ಲಿ ೨೦೧೨ ರ ಮಾರ್ಚಿ ಅಂತ್ಯಕ್ಕೆ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆ.ಐ.ಎ.ಡಿ.ಬಿ)ಯು ಅಭಿವೃದ್ಧಿ ಪಡಿಸಿರುವ ಕೈಗಾರಿಕಾ ಪ್ರದೇಶಗಳ ವಿವರ**

| ಕ್ರ.ಸಂ | ಸ್ಥಳ | ಪ್ರಾರಂಭದ ವರ್ಷ | ಅಭಿವೃದ್ಧಿ ಪಡಿಸಿದ ವಿಸ್ತೀರ್ಣ ಎಕರೆ | ಹಂಚಿಕೆಗೆ ಲಭ್ಯ ವಿಸ್ತೀರ್ಣ | ನಿವೇಶನಗಳ ನಿರ್ಮಾಣ | ನಿವೇಶನಗಳ ಹಂಚಿಕೆ | ಸಂಪರ್ಕ ನಿವೇಶನ |
|---|---|---|---|---|---|---|---|
| ೧ | ಅಂತರಸನಹಳ್ಳಿ-೧ | ೧೯೮೪ | ೨೦೮.೦೦ | ೧೮೨.೫೦ | ೧೩೬ | ೧೩೩ | ೦೩ |
| ೨ | ಅಂತರಸನಹಳ್ಳಿ-೨ | ೧೯೯೯ | ೨೫೬.೦೦ | ೧೭೨.೦೦ | ೧೪೨ | ೧೩೯ | ೦೩ |
| ೩ | ಹಿರೇಹಳ್ಳಿ | ೧೯೮೪ | ೧೬೦.೮೬ | ೧೩೭.೦೦ | ೧೦೧ | ೯೯ | ೦೨ |
| ೪ | ಸತ್ಯಮಂಗಲ | ೧೯೮೪ | ೫೪.೫೦ | ೪೨.೨೫ | ೪೬ | ೪೫ | ೦೧ |
| ೫ | ಕುಣಿಗಲ್–೧ನೇ ಹಂತ | ೧೯೮೪ | ೧೧೨.೫೭ | ೮೪.೫೦ | ೯೦ | ೯೦ | – |
| ೬ | ಕುಣಿಗಲ್–೨ನೇ ಹಂತ | ೨೦೦೬ | ೫೨.೯೭ | ೫೦.೦೦ | ೫೦.೦೩ | ೧೧ | – |
| ೭ | ವಸಂತನರಸಾಪುರ ೧ನೇ ಹಂತ | ೨೦೦೭ | ೭೮೨.೨೨ | – | – | ೩೮೫ | – |
| ೮ | ವಸಂತನರಸಾಪುರ ೨ನೇ ಹಂತ | ೨೦೧೨ | ೧೨೪೨.೧೦ | – | – | – | – |
| ೯ | ವಸಂತನರಸಾಪುರ ೩ನೇ ಹಂತ | ೨೦೧೨ | ೧೪೯೨.೧೬ | – | – | ಮೆಗಾ ಫುಡ್ ಪಾರ್ಕ್‌ಗೆ ೧೧೦ ಎಕರೆ ಭೂಮಿ ಹಂಚಿಕೆ ಮಾಡಲಾಗಿದೆ. | – |

ಜಿಲ್ಲೆಯಲ್ಲಿ ೨೦೧೨ ರ ಮಾರ್ಚಿ ಅಂತ್ಯಕ್ಕೆ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾಭಿವೃದ್ಧಿ ನಿಗಮವು ಒಂಬತ್ತು ಕೈಗಾರಿಕಾ ಪ್ರದೇಶಗಳಲ್ಲಿ ಕೈಗಾರಿಕಾ ಶೆಡ್ ಹಾಗೂ ಪ್ಲಾಟ್‌ಗಳನ್ನು ನಿರ್ಮಿಸಿ ಹಂಚಿಕೆ ಮಾಡಿದೆ. ವಿವರಗಳಿಗೆ ಕೋಷ್ಟಕ.೫.೨೦ ಅನ್ನು ನೋಡಿ.

**ಕೋಷ್ಟಕ ೫.೨೦ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ (ಕೆ.ಎಸ್.ಎಸ್.ಐ.ಡಿ.ಸಿ)ಯು ಅಭಿವೃದ್ಧಿ ಪಡಿಸಿರುವ ಕೈಗಾರಿಕಾ ಪ್ರದೇಶಗಳ ವಿವರ**

| ಕ್ರ.ಸಂ | ಕೈಗಾರಿಕಾ ಪ್ರದೇಶದ ಹೆಸರು | ತಾಲೂಕು | ನಿರ್ಮಿಸಿದ ಶೆಡ್ ಮತ್ತು ಪ್ಲಾಟ್‌ಗಳ ಸಂಖ್ಯೆ | ವಿತರಣೆ ಮಾಡಿದ ಶೆಡ್ ಮತ್ತು ಪ್ಲಾಟ್‌ಗಳ ಸಂಖ್ಯೆ |
|---|---|---|---|---|
| ೧ | ಬಿ.ಎಚ್.ರಸ್ತೆ, ತುಮಕೂರು | ತುಮಕೂರು | ಶೇಡ್–೩೨ – ಪ್ಲಾಟ್–೪೧ | ೩೨ – ೪೧ |
| ೨ | ಅಂತರಸನಹಳ್ಳಿ ೨ನೇ ಹಂತ | ತುಮಕೂರು | ಶೇಡ್–೩೪ – ಪ್ಲಾಟ್–೧೫೩ | ೩೪ – ೧೫೩ |
| ೩ | ಹಿರೇಹಳ್ಳಿ | ತುಮಕೂರು | ಶೇಡ್–೨೦ – ಪ್ಲಾಟ್–೧೫ | ೨೦ ೧೫ |
| ೪ | ಯಲಿಯೂರು | ಶಿರಾ | ಶೇಡ್–೦ – ಪ್ಲಾಟ್–೧೧ | ೦ ೦ |
| ೫ | ಶಿರಾ | ಶಿರಾ | ಶೇಡ್–೧೫ – ಪ್ಲಾಟ್–೧೩ | ೧೫ ೧೩ |
| ೬ | ತಿಪಟೂರು | ತಿಪಟೂರು | ಶೇಡ್–೨೦ – ಪ್ಲಾಟ್–೪೪ | ೨೦ ೪೪ |
| ೭ | ಕುಣಿಗಲ್ | ಕುಣಿಗಲ್ | ಶೇಡ್–೧೬ – ಪ್ಲಾಟ್–೩೦ | ೧೬ ೩೦ |
| ೮ | ಮಧುಗಿರಿ | ಮಧುಗಿರಿ | ಶೇಡ್–೧೪ – ಪ್ಲಾಟ್–೨೨ | ೧೪ ೨೨ |
| ೯ | ಪಾವಗಡ | ಪಾವಗಡ | ಶೇಡ್–೦ – ಪ್ಲಾಟ್–೯೭ | ೦ ೯೭ |

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮವು ಜಿಲ್ಲೆಯಲ್ಲಿನ ಒಂಬತ್ತು ಕೈಗಾರಿಕಾ ವಸಾಹತುಗಳಿಗಾಗಿ ೯೯.೮೪ ಎಕರೆ ವಿಸ್ತೀರ್ಣದ ಭೂಮಿಯನ್ನು ವಶಪಡಿಸಿಕೊಂಡು ವಿವಿಧ ಮಾದರಿಯ ೧೪೪ ಮಳಿಗೆಗಳನ್ನು ನಿರ್ಮಿಸಿದೆ. ೧೩೬ ಮಳಿಗೆಗಳನ್ನು ಹಾಗೂ ೧೭೫ ನಿವೇಶನಗಳನ್ನು ನಿರ್ಮಿಸಿ, ೧೧೨ ನಿವೇಶನಗಳನ್ನು ಹಂಚಿಕೆ ಮಾಡಿರುತ್ತದೆ.

ಖಾಲಿ ಇರುವ ನಿವೇಶನಗಳನ್ನು ಹಂಚಿಕೆ ಮಾಡಲು ಜಾಹಿರಾತು ಪ್ರಕಟಿಸಿದ್ದು, ಹಂಚಿಕೆಯ ಪ್ರಕ್ರಿಯೆ ಪ್ರಗತಿಯಲ್ಲಿದೆ. ಶಿರಾ ತಾಲೂಕಿನ ಯಲಿಯೂರು ಬಳಿ ೩೨.೨೪ ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡಿದ್ದು, ಪ್ರಸ್ತುತ ಸಾಲಿನಲ್ಲಿ ೧೨೮ ನಿವೇಶನಗಳನ್ನು ಮತ್ತು ೨೦ ಎಕರೆ ಭೂಮಿಯನ್ನು ಅಭಿವೃದ್ಧಿ ಪಡಿಸಿ ಮಳಿಗೆಗಳನ್ನು ನಿರ್ಮಾಣ ಮಾಡುವ ಗುರಿಯನ್ನು ಹೊಂದಲಾಗಿದೆ. ವಿವರಗಳಿಗೆ ಕೋಷ್ಟಕ ೫.೨೧ ರಲ್ಲಿ ನೀಡಿದೆ.

**ಕೋಷ್ಟಕ ೫.೨೧ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾಭಿವೃದ್ಧಿ ನಿಗಮವು ಅಭಿವೃದ್ಧಿ ಪಡಿಸಿ ವಿತರಿಸಲಾಗಿರುವ ಮಳಿಗೆ ಮತ್ತು ನಿವೇಶನಗಳ ವಿವರ**

| ಕ್ರ.ಸಂ | ಸ್ಥಳ | ವಿಸ್ತೀರ್ಣ (ಎಕರೆಗಳಲ್ಲಿ) | ಪ್ರಾರಂಭಗೊಂಡ ವರ್ಷ | ಮಳಿಗೆಗಳ ನಿರ್ಮಾಣ | ಮಳಿಗೆಗಳ ಹಂಚಿಕೆ | ನಿವೇಶನಗಳ ನಿರ್ಮಾಣ | ಖಾಲಿ ನಿವೇಶನ |
|---|---|---|---|---|---|---|---|
| ೧ | **ತುಮಕೂರು** | ೧೫.೮೦ | ೧೯೬೫ | ೩೨ | ೩೨ | ೩೧ | ೦೧ |
| ೨ | **ಹಿರೇಹಳ್ಳಿ** | ೫.೩೫ | ೧೯೮೫ | ೨೦ | ೨೦ | ೧೨ | ೦೧ |
| ೩ | **ತಿಪಟೂರು** | ೧೦.೦೦ | ೧೯೮೨ | ೨೦ | ೧೮ | ೩೯ | ೦೧ |
| ೪ | **ಕುಣಿಗಲ್** | ೮.೧೦ | ೧೯೮೬ | ೧೬ | ೧೫ | ೨೦ | ೦೪ |
| ೫ | **ಶಿರಾ** | ೪.೦೦ | ೧೯೬೮ | ೧೫ | ೧೫ | ೧೩ | – |
| ೬ | **ಮಧುಗಿರಿ** | ೬.೩೭ | ೧೯೯೪ | ೧೪ | ೦೯ | – | ೧೪ |
| ೭ | **ಕೆ.ಎಚ್.ಟಿ–೧** | ೧೬.೦೦ | ೨೦೦೧ | ೧೮ | ೧೮ | ೦೪ | – |
| ೮ | **ಕೆ.ಎಚ್.ಟಿ–೨** | ೩೪.೨೨ | – | ೦೯ | ೦೯ | ೫೬ | ೪೨ |
| ಒಟ್ಟು | | **೯೫.೮೪** | – | **೧೪೪** | **೧೩೬** | **೧೭೫** | **೬೩** |

**ಆಧಾರ: ಜಿಲ್ಲಾ ಕೈಗಾರಿಕಾ ಕೇಂದ್ರ, ತುಮಕೂರು**

## ವಿಶ್ವ ಯೋಜನೆ

ಗ್ರಾಮಾಂತರ ಪ್ರದೇಶದಲ್ಲಿ ದೊರಕುವ ಕಚ್ಚಾ ಸರಕನ್ನು ಉಪಯೋಗಿಸಿಕೊಂಡು ಬಹು ಜನರು ಉಪಯೋಗಿಸುವಂತಹ ತಿನಿಸುಗಳನ್ನು ತಯಾರಿಸುವುದರ ಮೂಲಕ ಗ್ರಾಮಾಂತರ ಅಥವಾ ಗೃಹ ಉದ್ಯಮಿಗಳಿಗೆ ಶಾಶ್ವತ ಉದ್ಯೋಗ ದೊರಕುವಂತೆ ಮಾಡುವ ಉದ್ದೇಶದಿಂದ ರಾಜ್ಯ ಸರ್ಕಾರವು ವಿಶ್ವ ಯೋಜನೆಯನ್ನು ಕಾರ್ಯರೂಪಕ್ಕೆ ತಂದಿದೆ. ಜನರಿಗೆ ತರಬೇತಿ ನೀಡುವುದು, ಉತ್ಪಾದನಾ ಘಟಕಗಳನ್ನು ಸ್ಥಾಪಿಸುವುದು, ಪ್ರೋತ್ಸಾಹಾರ್ಥವಾಗಿ ಕಚ್ಚಾ ಸರಕುಗಳನ್ನೊದಗಿಸುವುದು ಮತ್ತು ಅವರು ತಯಾರಿಸಿದ ವಸ್ತುಗಳನ್ನು ಜಿಲ್ಲಾ ಪೂರೈಕೆ ಮತ್ತು ಮಾರುಕಟ್ಟೆ ಸೇವೆ (ಡಿ.ಎಸ್.ಎಂ.ಎಸ್.) ಹಾಗೂ ರಾಜ್ಯ ಮಟ್ಟದ ಮಂಡಳಿ ಮತ್ತು ನಿಗಮಗಳ ಮೂಲಕ ಮಾರಾಟ ಮಾಡುವುದಾಗಿದೆ. ಸಂಘ ಅಥವಾ ಸಂಸ್ಥೆಗಳಲ್ಲಿರದ ಅಸಂಘಟಿತ ಜನರಿಗೆ ಜಿಲ್ಲಾ ಕೈಗಾರಿಕಾ ಕೇಂದ್ರ ತರಬೇತಿ ಸೌಲಭ್ಯವನ್ನೊದಗಿಸುತ್ತದೆ. ಸಂಘಟಿತರಿಗೆ ರಾಜ್ಯ ಮಟ್ಟದ ಮಂಡಳಿ ಮತ್ತು ನಿಗಮಗಳು ತರಬೇತಿ ಸೌಲಭ್ಯವನ್ನೊದಗಿಸುತ್ತವೆ.

## ಕೈಗಾರಿಕಾ ಬೆಳವಣಿಗೆಗೆ ಇರುವ ಅವಕಾಶಗಳು

ರಾಜ್ಯದ ರಾಜಧಾನಿ ಬೆಂಗಳೂರಿಗೆ ಕೇವಲ ೭೦ ಕಿ.ಮೀ ದೂರದಲ್ಲಿದ್ದ ತುಮಕೂರು ಈಗ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿ ವಿಸ್ತಾರಗೊಂಡಿರುವುದರಿಂದ ಇವೆರಡು ನಗರಗಳಿಗಿರುವ ಅಂತರ ಇನ್ನೂ ಕಡಿಮೆಯಾಗಿದೆ. ರಾಷ್ಟ್ರದ ಮುಖ್ಯ ನಗರಗಳಿಗೆ ಸಂಪರ್ಕ ಕಲ್ಪಿಸುವ ಭಾರತದ ಚತುಷ್ಪಥ ರಸ್ತೆ ಯೋಜನೆಯಲ್ಲಿ ಒಂದಾದ ರಾಷ್ಟ್ರೀಯ ಹೆದ್ದಾರಿ–೪ ಜಿಲ್ಲೆಯ ಮೂಲಕ ಹಾದು ಹೋಗುತ್ತದೆ. ಇಲ್ಲಿನ ಹವಾಮಾನವು ಸಹ ಬೆಂಗಳೂರಿನ ಹವಾಮಾನದಂತೆ ಹಿತಕರವಾಗಿರುವುದು. ಹೇಮಾವತಿ ಎಡದಂಡೆ ನಾಲೆಯು ಜಿಲ್ಲೆಯ ಮೂಲಕ ಹಾದು ಹೋಗಿರುವುದರಿಂದ ಇಲ್ಲಿನ ವ್ಯವಸಾಯದ ಮತ್ತು ಕುಡಿಯುವ ನೀರಿನ ಸಮಸ್ಯೆ ಕಡಿಮೆಯಾಗಿದೆ. ದೇವನಹಳ್ಳಿಯ ಸಮೀಪ ಸ್ಥಾಪಿತಗೊಂಡಿರುವ

ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಜಿಲ್ಲೆಗೆ ಕೇವಲ ೯೦ ಕಿ.ಮೀ ದೂರದಲ್ಲಿದೆ. ರೈಲ್ವೆ ಇಲಾಖೆಯು ತುಮಕೂರು ಮತ್ತು ಬೆಂಗಳೂರು ಮಧ್ಯೆ ದ್ವಿಪಥ ನಿರ್ಮಿಸಿರುವುದಿರಂದ ಜಿಲ್ಲೆಯು ತ್ವರಿತಗತಿಯ ಸಾರಿಗೆ ಸೌಲಭ್ಯವನ್ನು ಪಡೆದುಕೊಂಡಿದೆ. ಜಿಲ್ಲೆಯು ಮಾರ್ಚ್ ೨೦೧೨ ರ ಅಂತ್ಯಕ್ಕೆ ಒಂದು ವೈದ್ಯಕೀಯ ಕಾಲೇಜು, ಒಂದು ದಂತ ವೈದ್ಯ ಕಾಲೇಜು, ಎಂಟು ಎಂಜಿನಿಯರಿಂಗ್ ಕಾಲೇಜು, ಹನ್ನೊಂದು ಪಾಲಿಟೆಕ್ನಿಕ್ ಕಾಲೇಜು, ೪೮ ಕೈಗಾರಿಕಾ ತರಬೇತಿ ಸಂಸ್ಥೆಗಳು ಮತ್ತು ಒಂದು ಕರಕುಶಲ ತರಬೇತಿ ಸಂಸ್ಥೆಯನ್ನು ಹೊಂದಿರುವುದರಿಂದ ಅಧಿಕ ಪ್ರಮಾಣದಲ್ಲಿ ತಾಂತ್ರಿಕ ತರಬೇತಿ ಪಡೆದ ಕಾರ್ಮಿಕರು ಮತ್ತು ಉದ್ದಿಮೆದಾರರನ್ನು ಪಡೆಯಬಹುದಾಗಿದೆ. ಏಷ್ಯಾ ಅಭಿವೃದ್ಧಿ ಬ್ಯಾಂಕಿನ ಆಂತರಿಕ ಸಾಧನ ಸೌಲಭ್ಯಗಳ ಯೋಜನೆಯ ಅನ್ವಯ ಬೆಂಗಳೂರಿನ ಸಮೀಪ ಉಪನಗರ ಮತ್ತು ಅಭಿವೃದ್ಧಿ ಕೇಂದ್ರಗಳನ್ನು ನಿರ್ಮಿಸಿ ಬೆಂಗಳೂರಿನಲ್ಲಿ ಸ್ಥಾಪನೆಗೊಳ್ಳುವ ಕೈಗಾರಿಕೆಗಳ ಕೇಂದ್ರೀಕರಣವನ್ನು ವಿಕೇಂದ್ರೀಕರಿಸಿ ಬೆಂಗಳೂರಿನ ಸಾರಿಗೆ ಒತ್ತಡವನ್ನು ಕಡಿಮೆ ಮಾಡುವುದರ ಜೊತೆಗೆ ಜಿಲ್ಲೆಯಲ್ಲಿ ಕೈಗಾರಿಕೆಗಳು ಬೆಳೆಯುವಂತೆ ಮಾಡಬಹುದಾಗಿದೆ.

ತುಮಕೂರು ಜಿಲ್ಲೆಯು ಮಿಡಿಸೌತೆ (ಗೆರ್‌ಕಿನ್ಸ್) ನಿರ್ಯಾತ ವಲಯ ವ್ಯಾಪ್ತಿಗೊಳಪಟ್ಟಿದ್ದು, ಕೃಷಿಕರು ಮಿಡಿಸೌತೆ ಬೆಳೆಯುವಂತೆ ಪ್ರೋತ್ಸಾಹ ನೀಡುವ ಕಾರ್ಯ ಪ್ರಾರಂಭಗೊಂಡಿದೆ. ಮಿಡಿಸೌತೆಯ ಬೇಡಿಕೆ ಯೂರೋಪ್ ಮತ್ತು ಅಮೆರಿಕ ಮಾರುಕಟ್ಟೆಯಲ್ಲಿ ಹೆಚ್ಚಾಗಿರುವುದರಿಂದ ಸಂಬಂಧಪಟ್ಟ ಇಲಾಖೆಗೆ ಅವಶ್ಯಕ ಸೌಲಭ್ಯಗಳನ್ನೊದಗಿಸುವುದರ ಮೂಲಕ ಅದಕ್ಕೆ ಸಂಬಂಧಿಸಿದ ಕೈಗಾರಿಕೆಗಳ ಬೆಳವಣಿಗೆಯನ್ನು ಸಾಧಿಸಬಹುದಾಗಿದೆ. ಜಿಲ್ಲೆಯು ರೇಷ್ಮೆಹುಳು ಸಾಕಾಣಿಕೆಗೆ ಬೇಕಾದ ಉತ್ತಮ ಹವಾಗುಣವನ್ನು ಹೊಂದಿರುವುದರಿಂದ ರೇಷ್ಮೆ ಕೈಗಾರಿಕೆಗೆ ಅವಶ್ಯಕವಾಗಿರುವ ರೇಷ್ಮೆ ಕೃಷಿಯನ್ನು ಬಲಗೊಳಿಸುವುದರ ಮೂಲಕ ರೇಷ್ಮೆ ಕೈಗಾರಿಕೆ ಬೆಳೆಯುವಂತೆ ಮಾಡಬಹುದು. ಜಿಲ್ಲೆಯು ತೋಟಗಾರಿಕೆ ಬೆಳೆಯನ್ನು ಬೆಳೆಯಲು ಅವಶ್ಯಕವಾದ ಹವಾಗುಣವನ್ನು ಹೊಂದಿದ್ದು, ತೋಟಗಾರಿಕೆ ಮತ್ತು ಹಣ್ಣು ಸಂಸ್ಕರಣ ಹಾಗೂ ತಂಪು ಪಾನೀಯ ಕೈಗಾರಿಕೆಗಳ ಬೆಳವಣಿಗೆಗೆ ಪ್ರೋತ್ಸಾಹದಾಯಕವಾಗಿದೆ. ಜಿಲ್ಲೆಯ ಬಹುತೇಕ ತಾಲೂಕುಗಳಲ್ಲಿ ತೆಂಗನ್ನು ಬೆಳೆಯಲಾಗುತ್ತದೆ. ನಾರು, ಎಣ್ಣೆ ಮತ್ತು ಕೊಬ್ಬರಿಪುಡಿ ಕಾರ್ಖಾನೆಗಳನ್ನು ಸ್ಥಾಪಿಸಿ ಲಾಭದಾಯಕವಾಗಿ ನಡೆಸಬಹುದು. ಜಿಲ್ಲೆಯು ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ಕೈಮಗ್ಗ ಮತ್ತು ಜವಳಿ ಉದ್ಯಮಗಳನ್ನು ಹೊಂದಿರುವ ಜಿಲ್ಲೆಗಳಲ್ಲಿ ಒಂದೆಂದು ಗುರುತಿಸಲ್ಪಟ್ಟಿದೆ. ಈ ಉದ್ಯಮವು ಗ್ರಾಮಾಂತರ ಪ್ರದೇಶದ ಜನರಿಗೆ ಉದ್ಯೋಗವನ್ನು ದೊರಕಿಸಿಕೊಟ್ಟು, ಅವರ ಆದಾಯದ ಮಟ್ಟ ಸುಧಾರಿಸುವಂತೆ ಮಾಡಿದೆ. ಇದರ ಉತ್ಪಾದನೆಗೆ ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಹಾಗೂ ಖಾದಿ ಮತ್ತು ಗ್ರಾಮೋದ್ಯೋಗ ನಿಗಮವು ಉತ್ತಮ ಮಾರುಕಟ್ಟೆ ಸೌಲಭ್ಯವನ್ನೊದಗಿಸಿ ಕೊಡುವುದರಿಂದ ನಬಾರ್ಡ್‌ನ ನೆರವನ್ನು ಪಡೆದು ಈ ಕೈಗಾರಿಕೆಯನ್ನು ಅಭಿವೃದ್ಧಿ ಪಡೆಸಿಕೊಳ್ಳಬೇಕಾಗಿದೆ. ಜಿಲ್ಲೆಯಲ್ಲಿ ಸ್ವ–ಉದ್ಯೋಗದ ಮೂಲಕ ಕೈಗಾರಿಕೆಗಳನ್ನು ಬೆಳೆಸಲು ಅವಕಾಶವಿದ್ದರೂ ಸಾಲ ಸೌಲಭ್ಯಗಳು ದೊರಕುವ ಬಗ್ಗೆ ಸ್ಪಷ್ಟ ತಿಳುವಳಿಕೆ ಇಲ್ಲದೆ ಸ್ವ–ಉದ್ಯೋಗವಂತರಾಗಿರುವುದಿಲ್ಲ. ವಿಚಾರಗೋಷ್ಠಿಗಳ ಮೂಲಕ ಆಸಕ್ತರಿಗೆ ಸಾಲಸೌಲಭ್ಯಗಳು ದೊರಕುವ ಪರಿಯನ್ನು ತಿಳಿಸಿಕೊಡಬೇಕಾಗಿದೆ. ಜಿಲ್ಲೆಯ ಯುವಕರಿಗೆ ಉದ್ಯೋಗಾಭಿವೃದ್ಧಿ ಯೋಜನೆಯ ಮೂಲಕ ದಕ್ಷ ಉದ್ದಿಮೆದಾರರನ್ನು ಮಾಡುವುದರ ಮೂಲಕ ಉದ್ದಿಮೆದಾರತ್ವದ ಕೊರತೆಯನ್ನು ನೀಗಿಸಬೇಕಾಗಿದೆ. ಜಿಲ್ಲೆಯ ಪ್ರತಿ ತಾಲೂಕಿನಲ್ಲೂ ನಡೆಯುವ ವಿಶೇಷ ಹಬ್ಬ ಅಥವಾ ಜಾತ್ರೆಗಳ ಸಂದರ್ಭದಲ್ಲಿ ಕೃಷಿ ಮೇಳವನ್ನು ಆಯೋಜಿಸುವುದರ ಮೂಲಕ ಸ್ವ–ಉದ್ಯೋಗ ಸಾಹಸಕ್ಕೆ ಕೈಹಾಕುವಂತೆ ಮಾಡಬೇಕಾಗಿದೆ. ಜಿಲ್ಲೆಯು ಬೆಂಗಳೂರಿಗೆ ಸಮೀಪವಿರುವುದರಿಂದ ಬಂಡವಾಳದಾರರನ್ನು ಆಕರ್ಷಿಸಲು ಜಿಲ್ಲೆಯನ್ನು ಕೈಗಾರಿಕಾ ಶೂನ್ಯ ಜಿಲ್ಲೆಯೆಂದು ಘೋಷಣೆಯಾಗುವಂತೆ ಮಾಡಬೇಕಾಗಿದೆ. ಜಿಲ್ಲೆಯಲ್ಲಿ ಕೈಗಾರಿಕೆಗಳು ತ್ವರಿತವಾಗಿ ಬೆಳೆಯಲು ಮತ್ತು ಅವು ಜಿಲ್ಲೆಯಿಂದ ಹೊರ ಹೋಗದಂತೆ ತಡೆಯಲು ಜಿಲ್ಲೆಯನ್ನು ವಿಶೇಷ ಆರ್ಥಿಕ ವಲಯವನ್ನಾಗಿ ಘೋಷಿಸಬೇಕಾಗಿದೆ. ಜಿಲ್ಲೆಯಲ್ಲಿರುವ ಕೈಗಾರಿಕಾ ಸಂಘಗಳು, ಛೇಂಬರ್ಸ್ ಆಫ್ ಕಾಮರ್ಸ್ ಮತ್ತು ಇತರ ಸಂಘಟನೆಗಳು ಅಂತಾರಾಷ್ಟ್ರೀಯ ಸಂಸ್ಥೆಗಳನ್ನು ಸ್ಥಾಪಿಸಲು ಮತ್ತು ಅನಿವಾಸಿ ಭಾರತೀಯರು ಜಿಲ್ಲೆಯಲ್ಲಿ ಬಂಡವಾಳ ತೊಡಗಿಸುವಂತೆ ಆಹ್ವಾನಿಸಬೇಕು. ಈ ಎಲ್ಲಾ ಮಾರ್ಗಗಳನ್ನು ಗಮನದಲ್ಲಿಟ್ಟುಕೊಂಡು ಕಾರ್ಯಪ್ರವೃತ್ತರಾದರೆ ಜಿಲ್ಲೆಯಲ್ಲಿ ಕೈಗಾರಿಕೆಗಳು ತ್ವರಿತಗತಿಯಲ್ಲಿ ಬೆಳೆಯಲು ಸಾಧ್ಯವಾಗುತ್ತದೆ.

ಕೈಗಾರಿಕಾ ಬೆಳವಣಿಗೆಯು ಸಂಬಂಧಾತ್ಮಕವಾಗಿರುತ್ತದೆ. ಒಂದು ಪ್ರದೇಶದಲ್ಲಿ ಎರಡು ದೊಡ್ಡ ಪ್ರಮಾಣದ ಕೈಗಾರಿಕೆಗಳು ಪ್ರಾರಂಭಿಸಲ್ಪಟ್ಟರೆ ಅದರ ಸುತ್ತಮುತ್ತ ಅನೇಕ ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು ಹುಟ್ಟಿಕೊಳ್ಳುತ್ತವೆ. ಜಿಲ್ಲೆಯಲ್ಲಿ ೩೪ ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳಿದ್ದರೂ ಎಚ್.ಎಂ.ಟಿ. ವಾಚ್ ಫ್ಯಾಕ್ಟರಿಯನ್ನು ಬಿಟ್ಟು ಉಳಿದ ಯಾವ ಫ್ಯಾಕ್ಟರಿಗೂ ಪೂರಕ ಕೈಗಾರಿಕೆಗಳಿಲ್ಲ. ಎಚ್.ಎಂ.ಟಿ. ವಾಚ್ ಫ್ಯಾಕ್ಟರಿ ಕಾರಣಾಂತರದಿಂದ ಮುಚ್ಚಿ ಹೋಗಿರುವುದರಿಂದ ಅದರ ಪೂರಕ ಕಾರ್ಖಾನೆಗಳು ಮುಚ್ಚಿ ಹೋಗುತ್ತಿವೆ. ಜಿಲ್ಲೆಯಲ್ಲಿ ಬೃಹತ್ ಪ್ರಮಾಣದ ಕೈಗಾರಿಕೆಗಳು ಸ್ಥಾಪನೆಗೊಂಡರೆ ಜಿಲ್ಲೆಯ ನಿರುದ್ಯೋಗ ಯುವಕರಿಗೆ ಉದ್ಯೋಗವಕಾಶ ದೊರಕಿ ಅವರು ಜಿಲ್ಲೆಯಿಂದ ವಲಸೆ ಹೋಗುವುದನ್ನು ತಪ್ಪಿಸಬಹುದು. ಜಿಲ್ಲೆಯಲ್ಲಿ ಈ ಕೆಳಗೆ ಕೊಟ್ಟಿರುವ ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸಲು ಹೆಚ್ಚಿನ ಅವಕಾಶವಿದೆ.

### ೧. ದ್ವಿಚಕ್ರ ವಾಹನಗಳ ಸ್ಥಾವರ

ಸರ್ಕಾರದ ಉದಾರ ನೀತಿಯು ಕೈಗಾರಿಕೆಗಳ ಏಕಸ್ವಾಮ್ಯವನ್ನು ಕೊನೆಗೊಳಿಸಿ ಪೈಪೋಟಿಗೆ ದಾರಿ ಮಾಡಿಕೊಟ್ಟಿದೆ. ೧೯೮೦ರ ಸುಮಾರಿನಲ್ಲಿ ಕೇವಲ ಎರಡು ಅಥವಾ ಮೂರು ಕಂಪನಿಗಳು ದ್ವಿಚಕ್ರವಾಹನಗಳನ್ನು ತಯಾರಿಸುತ್ತಿದ್ದವು. ಸರ್ಕಾರದ ಈ ಉದಾರ ನೀತಿಯಿಂದಾಗಿ ಹೆಚ್ಚು ಕಂಪೆನಿಗಳಿಗೆ ದ್ವಿಚಕ್ರ ವಾಹಗಳನ್ನು ತಯಾರಿಸಲು ಪರವಾನಗಿ ದೊರಕುವುದರಿಂದ ಕಂಪನಿಗಳ ಮಧ್ಯೆ ಪೈಪೋಟಿ ಹುಟ್ಟಿ ಉತ್ತಮ ಗುಣಮಟ್ಟದ ವಾಹನಗಳು ಕಡಿಮೆ ಬೆಲೆಯಲ್ಲಿ ಮಾರುಕಟ್ಟೆಗೆ ಬಿಡುಗಡೆಗೊಳ್ಳುತ್ತವೆ. ಜಿಲ್ಲೆಯ ಜನಸಂಖ್ಯೆ ಪ್ರತಿಶತ ಮೂರರಿಂದ ನಾಲ್ಕರಷ್ಟು ಹೆಚ್ಚುತ್ತಿರುವುದು ಜನಗಣತಿಯಿಂದ ಸ್ಪಷ್ಟಗೊಂಡಿದೆ. ಹೀಗೆ ಹೆಚ್ಚುತ್ತಿರುವ ಜನಸಂಖ್ಯೆಗನುಗುಣವಾಗಿ ಸಂಚಾರ ಸೌಲಭ್ಯವಿಲ್ಲದಿರುವುದು ಮತ್ತು ತ್ವರಿತ ಸಂಚಾರ ಸೌಲಭ್ಯವನ್ನು ಸಮೂಹ ಮಾಧ್ಯಮಗಳು ಪೂರೈಸಲು ಸಾಧ್ಯವಿಲ್ಲದಿರುವುದರಿಂದ ದ್ವಿಚಕ್ರ ವಾಹನಗಳು ಶ್ರೀಮಂತ ಹಾಗೂ ಮಧ್ಯಮ ವರ್ಗದ ಜನಗಳ ಅವಶ್ಯಕತೆಯನ್ನು ಪೂರೈಸಲು ಸಹಾಯಕವಾಗಬಲ್ಲವು. ಸರ್ಕಾರದ ಪರವಾನಿಗೆ ಪಡೆದು ಜಿಲ್ಲೆಯಲ್ಲಿ ದ್ವಿಚಕ್ರ ವಾಹನಗಳ ತಯಾರಿಕಾ ಘಟಕಗಳನ್ನು ಪ್ರಾರಂಭಿಸಬಹುದಾಗಿದೆ. ಇವು ಸುಲಭ ದರದಲ್ಲಿ ದೊರಕುವಂತಿದ್ದರೆ, ಗ್ರಾಮಾಂತರ ಪ್ರದೇಶದ ಜನರಿಂದಲೂ ಬೇಡಿಕೆಯನ್ನು ಹೆಚ್ಚಿಸಿಕೊಳ್ಳಬಹುದು.

### ೨. ಸಿದ್ಧ ಉಡುಪು ಸಂಕೀರ್ಣ

ಜಿಲ್ಲೆಯು ವ್ಯವಸಾಯ ಪ್ರಧಾನವಾಗಿದ್ದು, ಪ್ರತಿಶತ ೬೦ರಷ್ಟು ಜನರು ವ್ಯವಸಾಯಾವಲಂಬಿಗಳಾಗಿದ್ದಾರೆ. ಒಂದು ಸಮೀಕ್ಷೆಯ ಪ್ರಕಾರ ವ್ಯವಸಾಯಾವಲಂಬಿಗಳಿಗೆ ವರ್ಷದಲ್ಲಿ ೧೦೦ ರಿಂದ ೧೫೦ ದಿನಗಳು ಕೆಲಸವಿರುವುದರಿಂದ ಉಳಿದ ದಿನಗಳಿಗೆ ಉದ್ಯೋಗ ಹುಡುಕಿಕೊಂಡು ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಿರುತ್ತಾರೆ. ಸಿದ್ಧ ಉಡುಪು ತಯಾರಿಕೆಗೆ ಹೆಚ್ಚು ಪರಿಣತಿ ಬೇಕಿಲ್ಲದಿರುವುರಿಂದ ವ್ಯವಸಾಯದ ಅರೆ ಉದ್ಯೋಗಿಗಳಿಗೆ ಪೂರ್ಣ ಪ್ರಮಾಣದ ಉದ್ಯೋಗ ದೊರಕುವಂತೆ ಮಾಡುವುದರ ಮೂಲಕ ಅವರು ವಲಸೆ ಹೋಗುವುದನ್ನು ತಪ್ಪಿಸುವುದರ ಜೊತೆಗೆ ಅವರ ಆದಾಯದ ಮಟ್ಟ ಹೆಚ್ಚುವಂತೆ ಮಾಡಿ ಜೀವನ ಮಟ್ಟ ಸುಧಾರಿಸುವಂತೆ ಮಾಡಬಹುದಾಗಿದೆ. ವಸ್ತ್ರ ವಿನ್ಯಾಸವು ತ್ವರಿತ ಗತಿಯಲ್ಲಿ ಬದಲಾವಣೆಗೊಳ್ಳುತ್ತಿರುವುದರಿಂದ ಸಾಂಪ್ರದಾಯಿಕ ವಿನ್ಯಾಸಗಾರರಿಗೆ ಹೆಚ್ಚುತ್ತಿರುವ ಹೊಸ ಹೊಸ ವಿನ್ಯಾಸದ ಬೇಡಿಕೆಯನ್ನೂ ಪೂರೈಸಲು ಸಾಧ್ಯವಾಗದೆ ಇರುವುದರಿಂದ ಉದ್ಯಮದಾರರು ಸಿದ್ಧ ಉಡುಪುಗಳ ಸಂಕೀರ್ಣಗಳನ್ನು ಸ್ಥಾಪಿಸಲು ಅವಕಾಶವಿದೆ. ತ್ವರಿತಗತಿಯಲ್ಲಿ ಬೆಳೆಯುತ್ತಿರುವ ಬೆಂಗಳೂರು ೧೫೦–೨೦೦ ಸಿದ್ಧ ಉಡುಪಿನ ಸಂಕೀರ್ಣಗಳನ್ನು ಹೊಂದಿದ್ದು, ಬಡತನ ಹಾಗೂ ನಿರುದ್ಯೋಗಿ ಮಹಿಳೆಯರಿಗೆ ಉದ್ಯೋಗವನ್ನು ಒದಗಿಸುವುದರ ಮೂಲಕ ಅವರ ಜೀವನ ಮಟ್ಟ ಸುಧಾರಿಸುವಂತೆ ಮಾಡಿದೆ. ತುಮಕೂರು ಜಿಲ್ಲೆಯಲ್ಲೂ ಒಂದು ಅಥವಾ ಎರಡು ಸಿದ್ಧ ಉಡುಪುಗಳ ತಯಾರಿಕಾ ಘಟಕಗಳ ಸ್ಥಾಪನೆಗೆ ಅವಕಾಶವಿರುವುದನ್ನು ಸಂಬಂಧಪಟ್ಟ ಅಧಿಕಾರಿಗಳು ಉದ್ಯಮಶೀಲರಿಗೆ ವಿವರಿಸಿ ಅರೆ ಉದ್ಯೋಗಿಗಳು ಮತ್ತು ನಿರುದ್ಯೋಗಿಗಳಿಗೆ ಉದ್ಯೋಗ ದೊರಕುವಂತೆ ಮಾಡುವುದರ ಮೂಲಕ ಅವರ ಜೀವನ ಮಟ್ಟ ಸುಧಾರಿಸುವಂತೆ ಮಾಡಬಹುದಾಗಿದೆ.

### ೩. ಒಳ ಉಡುಪುಗಳ ಸಂಕೀರ್ಣ

ಬೆಂಗಳೂರಿನಲ್ಲಾಗಲಿ ಅಥವಾ ಅದರ ಸುತ್ತಮುತ್ತಲಿನ ಜಿಲ್ಲೆಗಳಲ್ಲಾಗಲಿ ಒಳ ಉಡುಪುಗಳ ಸಂಕೀರ್ಣಗಳಿರುವುದಿಲ್ಲ. ಶ್ಯಾಮರಾವ್ ಅಂಡ್ ಸನ್ಸ್ ೧೯೫೦ರ ಸುಮಾರಿನಲ್ಲಿ ಬೆಂಗಳೂರಿನಲ್ಲಿ ತಯಾರಿಸುತ್ತಿದ್ದ ಒಳ ಉಡುಪುಗಳು "ಶ್ಯಾಮ್ ಸನ್ಸ್" ಎಂಬ ಹೆಸರಿನಲ್ಲಿ ಪ್ರಸಿದ್ಧಿ ಪಡೆದಿದ್ದವು. ಕಾಲ ಕ್ರಮೇಣ ತಮಿಳುನಾಡಿನ ತಿರುಪ್ಪೂರಿನ ಕೆಲವು ಉದ್ಯಮಶೀಲರು ಒಳ ಉಡುಪಿನ ತಯಾರಿಕೆಯನ್ನು ಕಲಿತು ಅವುಗಳನ್ನು ತಯಾರಿಸಲು ಪ್ರಾರಂಭಿಸಿದರು. ಇಂದು ತಿರುಪ್ಪೂರಿನ ಒಳ ಉಡುಪು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದವುಗಳಾಗಿವೆ. ಜನಸಂಖ್ಯೆ ಬೆಳೆದಂತೆಲ್ಲಾ ಒಳ ಉಡುಪುಗಳಿಗೆ ರಾಷ್ಟ್ರೀಯ ಬೇಡಿಕೆ ಅಷ್ಟೆ ಅಲ್ಲದೇ ನಿರ್ಯಾತಕ್ಕೂ ಅವಕಾಶವಿರುವುದಿಂದ ಜಿಲ್ಲೆಯಲ್ಲಿ ೫೦ ರಿಂದ ೧೦೦ ಒಳ ಉಡುಪುಗಳ ತಯಾರಿಕಾ ಘಟಕಗಳನ್ನು ಪ್ರಾರಂಭಿಸಲು ಅವಕಾಶವಿದೆ.

### ೪. ಸಾಫ್ಟ್‌ವೇರ್ ಪಾರ್ಕ್

ಬೆಂಗಳೂರು ರಾಜ್ಯದ ರಾಜಧಾನಿಯಾಗಿರುವುದರ ಜೊತೆಗೆ ಸಾಫ್ಟ್‌ವೇರ್ ಕಂಪನಿಗಳ ರಾಜಧಾನಿಯೂ ಆಗಿದೆ. ಆದರೆ ಮಾಹಿತಿ ತಂತ್ರಜ್ಞಾನದಿಂದ ಉಂಟಾಗಿರುವ ಸಾರಿಗೆ ಒತ್ತಡದಿಂದ ಬೆಂಗಳೂರು ತತ್ತರಿಸಿ ಹೋಗಿದೆ. ತುಮಕೂರು ಬೆಂಗಳೂರಿಗೆ ಸಮೀಪದಲ್ಲಿರುವುದರಿಂದ ರೈಲು ಮತ್ತು ರಸ್ತೆ ಸಾರಿಗೆ ಸಂಪರ್ಕ ಈ ಎರಡು ಜಿಲ್ಲೆಗಳನ್ನು ಇನ್ನೂ ಸಮೀಪವಾಗುವಂತೆ ಮಾಡಿವೆ. ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ತುಮಕೂರು ಜಿಲ್ಲಾ ಕೇಂದ್ರದಿಂದ ಒಂದು ಗಂಟೆ ಪ್ರಯಾಣದ ದೂರದಲ್ಲಿರುವುದರಿಂದ ಉದ್ದಿಮೆದಾರರು ತುಮಕೂರು ಮತ್ತು ಅದರ ಅಕ್ಕಪಕ್ಕದ ತಾಲೂಕುಗಳಲ್ಲಿ ಸಾಫ್ಟ್‌ವೇರ್ ಕಂಪೆನಿಗಳನ್ನು ಸ್ಥಾಪಿಸುವುದರ ಮೂಲಕ ಬೆಂಗಳೂರನ್ನು ಸಾರಿಗೆ ಒತ್ತಡದಿಂದ ಹೊರ ಬರುವಂತೆ ಮಾಡಲು ಹೆಚ್ಚಿನ ಅವಕಾಶವಿರುವುದು. ಜಿಲ್ಲೆಯಲ್ಲಿ ಎಂಟು ಎಂಜಿನಿಯರಿಂಗ್ ಕಾಲೇಜು ಮತ್ತು ಹನ್ನೊಂದು ಪಾಲಿಟೆಕ್ನಿಕ್ಸ್ ಕಾಲೇಜುಗಳಿದ್ದು, ಪ್ರತಿಯೊಂದರಲ್ಲೂ ಕಂಪ್ಯೂಟರ್, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಕೋರ್ಸ್‌ಗಳಿರುವುದರಿಂದ ಪ್ರತಿ ವರ್ಷವು ೪೦೦-೫೦೦ ಎಂಜಿನಿಯರಿಂಗ್ ಪದವೀಧರರು ಮತ್ತು ೨೦೦-೩೦೦ ಡಿಪ್ಲೋಮಾದಾರರು ಪದವಿ ಪಡೆದು ಕೆಲಸ ಹುಡುಕಿಕೊಂಡು ಬೆಂಗಳೂರು ಮತ್ತು ಇತರ ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. ತುಮಕೂರು ಮತ್ತು ಸಮೀಪದ ಪ್ರದೇಶದಲ್ಲಿ ಮಾಹಿತಿ ತಂತ್ರಜ್ಞಾನದ ಪಾರ್ಕ್ ಸ್ಥಾಪಿಸುವುದರಿಂದ ಸ್ಥಳೀಯರಿಗೆ ಉದ್ಯೋಗ ದೊರಕುವಂತಾಗುತ್ತದೆ. ಅಲ್ಲದೇ ತಂತ್ರಜ್ಞರು ದೊಡ್ಡನಗರ ಮತ್ತು ವಿದೇಶಗಳಿಗೆ ವಲಸೆ ಹೋಗುವುದನ್ನು ತಡೆಯಲು ಸಾಧ್ಯವಾಗುತ್ತದೆ. ಸಂಬಂಧಪಟ್ಟ ಇಲಾಖೆ ಮತ್ತು ಸಂಘ ಸಂಸ್ಥೆಗಳು ಜಿಲ್ಲೆಯಲ್ಲಿ ಸಾಫ್ಟ್‌ವೇರ್ ಕಂಪೆನಿಗಳನ್ನು ಸ್ಥಾಪಿಸಲು ದೊಡ್ಡ ಕಂಪೆನಿಗಳನ್ನು ಆಹ್ವಾನಿಸಿ ನಮ್ಮ ತಂತ್ರಜ್ಞಾನ ವಿದೇಶಗಳಿಗೆ ಹೋಗದಂತೆ ತಡೆಯುವುದರಿಂದ ಜಿಲ್ಲೆಯಲ್ಲಿ ಕೈಗಾರಿಕೆಗಳು ಬೆಳೆದು ನಿರುದ್ಯೋಗ ಸಮಸ್ಯೆ ಕಡಿಮೆಯಾಗುತ್ತದೆ.

### ೫. ಬಯೋಟೆಕ್ನಾಲಜಿ ಪಾರ್ಕ್

ಬಯೋಟೆಕ್ನಾಲಜಿಯು ವಿದ್ಯಾವಂತ ನಿರುದ್ಯೋಗಿಗಳಿಗೆ ದೀರ್ಘಕಾಲದವರೆಗೆ ಉದ್ಯೋಗ ಒದಗಿಸುವ ಸಾಮರ್ಥ್ಯವನ್ನು ಹೊಂದಿದೆ. ಬೆಂಗಳೂರಿನಲ್ಲಿ ಕೆಲವು ಬಯೋಟೆಕ್ನಾಲಜಿ ಉದ್ದಿಮೆಗಳು ಪ್ರಾರಂಭಗೊಂಡು ಸಾಕಷ್ಟು ವಿದ್ಯಾವಂತರಿಗೆ ಉದ್ಯೋಗವನ್ನು ದೊರಕಿಸಿಕೊಟ್ಟಿವೆ. ಬೆಂಗಳೂರಿನ ರಸ್ತೆಗಳು ವಾಹನ ದಟ್ಟಣೆಯನ್ನು ಸಹಿಸಲು ಸಾಧ್ಯವಿಲ್ಲದಿರುವುದರಿಂದ ಇನ್ನೂ ಹೆಚ್ಚು ಬಯೋಟೆಕ್ನಾಲಜಿ ಪಾರ್ಕ್ ಸ್ಥಾಪಿಸಲು ಸಾಧ್ಯವಿಲ್ಲದಂತಾಗಿದೆ. ಬೆಂಗಳೂರಿಗೆ ನೆರೆಯ ಜಿಲ್ಲೆಯಾದ ತುಮಕೂರಿನಲ್ಲಿ ಬಯೋಟೆಕ್ನಾಲಜಿ ಪಾರ್ಕ್ ಸ್ಥಾಪಿಸಿ ಜಿಲ್ಲೆಯ ನಿರುದ್ಯೋಗಿ ಯುವಕರಿಗೆ ಉದ್ಯೋಗ ದೊರಕುವಂತೆ ಮಾಡಲು ಸಾಧ್ಯವಿರುವುದರಿಂದ ಸಂಬಂಧಪಟ್ಟ ಇಲಾಖೆ ಮತ್ತು ಸಂಘಸಂಸ್ಥೆಗಳು ಉದ್ದಿಮೆದಾರರನ್ನು ಜಿಲ್ಲೆಯಲ್ಲಿ ಬಯೋಟೆಕ್ನಾಲಜಿ ಪಾರ್ಕ್ ಸ್ಥಾಪಿಸಲು ಆಹ್ವಾನಿಸುವುದು ತ್ವರಿತ ಗತಿಯಲ್ಲಿ ಆಗಬೇಕಾಗಿದೆ.

**೬. ಆಟೋಮೊಬೈಲ್ ಕಾಂಪ್ಲೆಕ್ಸ್**

ಸರ್ಕಾರದ ಉದಾರ ನೀತಿ ರಾಜ್ಯದಲ್ಲಿ ಆಟೋ ಮೊಬೈಲ್ ಕಾರ್ಖಾನೆಗಳನ್ನು ಸ್ಥಾಪಿಸಲು ಸಹಕಾರಿಯಾಗಿದೆ. ದೊಡ್ಡ ಉದ್ದಿಮೆದಾರರಾದ ಮಹೇಂದ್ರ, ರತನ್ ಟಾಟಾ ಮೊದಲಾದವರನ್ನು ಜಿಲ್ಲೆಯಲ್ಲಿ ನಾಲ್ಕು ಚಕ್ರದ ವಾಹನಗಳನ್ನು ತಯಾರಿಸುವ ಕಾರ್ಖಾನೆಗಳನ್ನು ಸ್ಥಾಪಿಸುವಂತೆ ಆಹ್ವಾನಿಸಿ ಜಿಲ್ಲೆಯಲ್ಲಿ ಬೃಹತ್ ಪ್ರಮಾಣದ ಕೈಗಾರಿಕೆಗಳು ಪ್ರಾರಂಭಗೊಳ್ಳುವಂತೆ ಮಾಡುವುದರ ಮೂಲಕ ಪೂರಕ ಕೈಗಾರಿಕೆಗಳ ಸ್ಥಾಪನೆಗೆ ನಾಂದಿಯಾಗುತ್ತದೆ. ಇದರಿಂದ ನಿರುದ್ಯೋಗಿ ಯುವಕರಿಗೆ ಉದ್ಯೋಗ ದೊರಕುವುದರಿಂದ ಅವರು ಹೊರ ರಾಜ್ಯಗಳಿಗೆ ವಲಸೆ ಹೋಗುವುದನ್ನು ತಪ್ಪಿಸಬಹುದಾಗಿದೆ.

**೭. ಕೈ ಉಪಕರಣಗಳ ಕೇಂದ್ರ**

ಕೈ ಉಪಕರಣಗಳಾದ ಸುತ್ತಿಗೆ, ಕಟ್ಟಿಂಗ್ ಪ್ಲೇಯರ್, ಜಾಕ್ ಮೊದಲಾದ ಉಪಕರಣಗಳನ್ನು ಉತ್ಪಾದಿಸುವ ಕಾರ್ಖಾನೆಗಳು ದಕ್ಷಿಣ ಭಾರತದಲ್ಲೇ ಇಲ್ಲವಾಗಿವೆ. ಕೈ ಉಪಕರಣಗಳೆಲ್ಲಾ ಉತ್ತರ ಭಾರತದಲ್ಲೇ ತಯಾರಿಸಿ, ದಕ್ಷಿಣ ಭಾರತಕ್ಕೆ ಕಳುಹಿಸಲ್ಪಡುತ್ತಿವೆ. ಜಿಲ್ಲೆಯು ಉತ್ತಮ ಸಾರಿಗೆ ಸಂಪರ್ಕದ ಅನುಕೂಲವಿರುವುದರಿಂದ ತುಮಕೂರಿನಲ್ಲಿ ಒಂದು ಕೈ ಉಪಕರಣಗಳ ತಯಾರಿಕಾ ಕಾರ್ಖಾನೆಯನ್ನು ಸ್ಥಾಪಿಸಬಹುದಾಗಿದೆ. ರಾಜ್ಯ ಸರ್ಕಾರವು ಕೆಲವು ವರ್ಷಗಳ ಹಿಂದೆ ತುಮಕೂರಿನಲ್ಲಿ ಒಂದು ಕೈ ಉಪಕರಣಗಳ ತಯಾರಿಕಾ ಘಟಕವನ್ನು ಸ್ಥಾಪಿಸಿತ್ತಾದರೂ ಕೆಲವು ಆಂತರಿಕ ಕಾರಣಗಳಿಂದಾಗಿ ಅದು ಬಹಳ ದಿನಗಳು ಮುಂದುವರಿಯಲಿಲ್ಲ. ಕೈ ಉಪಕರಣಗಳ ತಯಾರಿಕಾ ಘಟಕವನ್ನು ಸ್ಥಾಪಿಸಲು ಆಸಕ್ತಿ ಇರುವ ಉದ್ದಿಮೆದಾರರು ಜಿಲ್ಲೆಯಲ್ಲಿನ ಸಂಬಂಧಪಟ್ಟ ಅಧಿಕಾರಿಗಳನ್ನು ಭೇಟಿ ಮಾಡಿ ಮಾಹಿತಿ ಹಾಗೂ ಅನುಮತಿ ಪಡೆದು ಸ್ಥಾಪಿಸಲು ಹೆಚ್ಚಿನ ಅವಕಾಶವಿದೆ.

**೮. ನಾರಿನ ಸಂಕೀರ್ಣ**

ತುಮಕೂರು ಜಿಲ್ಲೆಯ ಬಹುತೇಕ ತಾಲೂಕುಗಳಲ್ಲಿ ತೆಂಗನ್ನು ಬೆಳೆಯಲಾಗುತ್ತಿದೆ. ಜಿಲ್ಲೆಯಲ್ಲಿ ಕೆಲವು ಅಸಂಘಟಿತ ಕಾರ್ಖಾನೆಗಳಿದ್ದು, ತೆಂಗಿನ ನಾರಿನ ಉತ್ಪಾದನೆ ಮತ್ತು ತೆಂಗಿನ ಇತರ ಉತ್ಪಾದನೆಯಲ್ಲಿ ತೊಡಗಿವೆಯಾದರೂ ಪರಸ್ಪರ ಪೈಪೋಟಿಯಿಂದ ಕೂಡಿದವುಗಳಾಗಿವೆ. ಸುಮಾರು ೩೦-೪೦ ಉದ್ದಿಮೆದಾರರು ಜಿಲ್ಲೆಯಲ್ಲಿ ನಾರು ಮತ್ತು ನಾರಿನ ಉತ್ಪನ್ನಗಳಾದ ನಾರಿನ ಮ್ಯಾಟ್ರೆಸ್, ಕುಷನ್, ಡೋರ್ ಮ್ಯಾಟ್ರೆಸ್, ಹಗ್ಗ ಮೊದಲಾದವುಗಳನ್ನು ತಯಾರಿಸುವ ಅವಕಾಶವಿರುವುದರಿಂದ ನಾರಿನ ಕಾರ್ಖಾನೆಗಳನ್ನು ಸ್ಥಾಸಿಸಬಹುದಾಗಿದೆ. ಇದರಿಂದ ಜಿಲ್ಲೆಯಲ್ಲಿನ ವಾಣಿಜ್ಯ ಬೆಳೆಯಾದ ತೆಂಗಿಗೆ ಹೆಚ್ಚಿನ ಉತ್ತೇಜನ ಕೊಟ್ಟಂತಾಗುತ್ತದೆ ಮತ್ತು ಜಿಲ್ಲೆಯ ನಿರುದ್ಯೋಗಿ ಹಾಗೂ ಅರೆ ಉದ್ಯೋಗಿ ಯುವಕರಿಗೆ ಉದ್ಯೋಗಾವಕಾಶ ದೊರಕಿ ಜೀವನ ಮಟ್ಟ ಸುಧಾರಣೆಗೊಳ್ಳುತ್ತದೆ.

**೯. ಇತರೆ ಉತ್ಪಾದನಾ ಕ್ಷೇತ್ರಗಳು**

ಜಿಲೆಯಲ್ಲಿ ಬೃಹತ್ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳ ಬೆಳವಣಿಗೆಗೆ ಇರುವಷ್ಟೇ ಅವಕಾಶಗಳು ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕೆಗಳ ಬೆಳವಣಿಗೆಗೂ ಇದೆ. ಜಿಲ್ಲೆಯಲ್ಲಿರುವ ಸಂಪನ್ಮೂಲಗಳನ್ನು ಮತ್ತು ಮಾನವ ಶಕ್ತಿಯನ್ನು ಉತ್ಪಾದನಾ ಕ್ಷೇತ್ರದಲ್ಲಿ ತೊಡಗಿಸುವುದರ ಮೂಲಕ ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕೆಗಳು ಬೆಳೆಯುವಂತೆ ಮಾಡಬಹುದು. ಜಿಲ್ಲೆಯಲ್ಲಿನ ವ್ಯವಸಾಯೋತ್ಪಾದನೆ ಮತ್ತು ತೋಟಗಾರಿಕಾ ಉತ್ಪಾದನೆಯನ್ನು ಹೆಚ್ಚುವಂತೆ ಮಾಡುವುದರ ಜೊತೆಗೆ ಸ್ಥಳೀಯ ಬೇಡಿಕೆಯನ್ನು ಪೂರೈಸುವುದು, ಸ್ಥಳೀಯರಿಗೆ ಉದ್ಯೋಗ ಕಲ್ಪಿಸಿ ವಲಸೆ ಹೋಗದಂತೆ ತಡೆದು, ಜನರ ಆದಾಯದ ಮಟ್ಟ ಮತ್ತು ಜೀವನ ಮಟ್ಟ ಸುಧಾರಿಸುವಂತೆ ಮಾಡಬಹುದು. ಇದಕ್ಕಾಗಿ ಜಿಲ್ಲಾ ಮಟ್ಟದಲ್ಲಿರುವ ಯೋಜನೆಗಳಾದ ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ, ಉದ್ಯೋಗಿನಿ, ಚೈತನ್ಯ ಮತ್ತು ಸ್ವಾವಲಂಬನೆ ಮೊದಲಾದವುಗಳನ್ನು ಹಣಕಾಸು ಸಂಸ್ಥೆಗಳ ನೆರವಿನೊಂದಿಗೆ ಕಾರ್ಯಗತಗೊಳಿಸಬೇಕಾಗುತ್ತದೆ.

ಜಿಲ್ಲೆಯು ವ್ಯವಸಾಯ ಪ್ರಧಾನವಾಗಿರುವುದರಿಂದ ವ್ಯವಸಾಯ ಮತ್ತು ತೋಟಗಾರಿಕೆ ಉತ್ಪನ್ನಗಳನ್ನು ಉಪಯೋಗಿಸಿಕೊಂಡು ಈಗಿರುವ ಕೈಗಾರಿಕೆಗಳ ಜೊತೆಗೆ ಇನ್ನೂ ಕೆಲವು ಹಿಟ್ಟಿನ ಗಿರಣಿ, ಅಕ್ಕಿ ಗಿರಣಿ, ಎಣ್ಣೆ ಮಿಲ್ಲು, ಕುಸುಬಲಕ್ಕಿ ಮಿಲ್ಲು, ಆಲೂಗಡ್ಡೆ ಚಿಪ್ಸ್, ಹಪ್ಪಳ, ಮೆಣಸಿನಪುಡಿ, ಮಸಾಲ ಪುಡಿ, ಅರಿಶಿಣ ಪುಡಿ, ಸೆಂಟೆಡ್ ಸುಪಾರಿ, ರಾಗಿ ಮಾಲ್ಟ್, ಐಸ್ ಕ್ರೀಂ, ಸೊಡಾ ಹಣ್ಣಿನರಸ (ಜ್ಯೂಸ್), ಪಾಪ್‌ಕಾರ್ನ್ ಮೊದಲಾದವುಗಳನ್ನು ತಯಾರಿಸುವುದರ ಮೂಲಕ ಸ್ಥಳೀಯ ಬೇಡಿಕೆಯನ್ನು ಪೂರೈಸುವುದರ ಜೊತೆಗೆ ಸ್ಥಳೀಯರಿಗೆ ಉದ್ಯೋಗಾವಕಾಶವನ್ನು ಕಲ್ಪಿಸಿಕೊಡುವುದರ ಮೂಲಕ ವ್ಯವಸಾಯೋತ್ಪಾದನೆಯನ್ನು ಹೆಚ್ಚಿಸಬಹುದು.

ಜವಳಿ ಉದ್ಯಮಗಳಾದ ನೂಲು ತಯಾರಿಸುವುದು, ಬಟ್ಟೆ ನೇಯುವುದು, ಬಟ್ಟೆಗಳಿಗೆ ಬಣ್ಣ ಹಾಕುವುದು, ಬಣ್ಣ ತಯಾರಿಕೆ, ರೇಷ್ಮೆ ನೂಲು ತಯಾರಿಸುವುದು, ಸಿದ್ಧ ಉಡುಪುಗಳನ್ನು ತಯಾರಿಸುವುದು, ಕೈಮಗ್ಗ ಮತ್ತು ವಿದ್ಯುತ್ ಮಗ್ಗಗಳನ್ನು ತಯಾರಿಸುವುದು, ಸ್ಕೂಲ್ ಬ್ಯಾಗುಗಳನ್ನು ತಯಾರಿಸುವುದು, ಕಸೂತಿ ಮಾಡುವುದು, ಫ್ಯಾಷನ್ ಬಟ್ಟೆ ತಯಾರಿಸುವುದು, ಒಳ ಉಡುಪು ತಯಾರಿಸುವುದು, ಮುದ್ರಣ ಕಾರ್ಯದಲ್ಲಿ ತೊಡಗಿಸಿಕೊಳ್ಳುವುದು ಮೊದಲಾದವುಗಳಿಗೆ ಜಿಲ್ಲೆಯಲ್ಲಿ ಹೆಚ್ಚಿನ ಅವಕಾಶವಿದೆ.

ಸಾಮಿಲ್ಲುಗಳ ಸಹಾಯದಿಂದ ಮರದ ದಿಮ್ಮಿಗಳನ್ನು ಕೊಯ್ದು ಗೃಹೋಪಯೋಗಿ ಸರಕುಗಳಾದ ತೊಲೆ, ಬಾಗಿಲು, ಕಿಟಕಿ ಮೊದಲಾದವುಗಳನ್ನು ತಯಾರಿಸುವ ಕೈಗಾರಿಕೆಗಳಿಗೆ ಜಿಲ್ಲೆಯಲ್ಲಿ ಹೆಚ್ಚಿನ ಅವಕಾಶವಿದೆ. ಮರದ ಪೀಠೋಪಕರಣಗಳು, ಫೋಟೋ ಫ್ರೇಂ, ಪೀಠೋಪಕರಣಗಳ ರಿಪೇರಿ, ವ್ಯವಸಾಯೋಪಕರಣಗಳ ತಯಾರಿಕೆಗೆ ಜಿಲ್ಲೆಯಲ್ಲಿ ಹೆಚ್ಚಿನ ಅವಕಾಶವಿದೆ.

ಜಿಲ್ಲೆಯಲ್ಲಿ ಈಗಿರುವ ಮುದ್ರಣ ಮತ್ತು ಮುದ್ರಣ ಸಾಮಗ್ರಿಗಳ ಜೊತೆಗೆ ಇನ್ನೂ ಕೆಲವು ಘಟಕಗಳನ್ನು ಸ್ಥಾಪಿಸಲವಕಾಶವಿದೆ. ಪೇಪರ್ ಕವರ್‌ಗಳು, ಪೇಪರ್ ಬ್ಯಾಗ್, ಬುಕ್ ಬೈಂಡಿಂಗ್, ಡಿಟಿಪಿ ಕೇಂದ್ರ, ಕಾರ್ಡ್ ಬೋರ್ಡ್ ಬಾಕ್ಸ್‌ಗಳು, ರಬ್ಬರ್ ಸ್ಟ್ಯಾಂಪುಗಳು, ಸ್ಕ್ರೀನ್ ಪ್ರಿಂಟಿಂಗ್, ಗಮ್ ಪೇಪರ್ ತಯಾರಿಕೆ, ಹ್ಯಾಂಡ್ ಮೇಡ್ ಪೇಪರ್, ಟಿಷ್ಯು ಪೇಪರ್, ಮೊದಲಾದವುಗಳಿಗೆ ಜಿಲ್ಲೆಯಲ್ಲಿ ಹೆಚ್ಚಿನ ಬೇಡಿಕೆ ಇರುವುದರಿಂದ ಉದ್ಯಮಶೀಲರು ಈ ದಿಶೆಯಲ್ಲಿ ತೊಡಗಿಸಿಕೊಳ್ಳುವುದರ ಮೂಲಕ ಸ್ಥಳೀಯರಿಗೆ ಉದ್ಯೋಗ ದೊರಕಿಸಿಕೊಡುವುದರ ಜೊತೆಗೆ ಸ್ಥಳೀಯ ಬೇಡಿಕೆಯನ್ನು ಪೂರೈಸಬಹುದಾಗಿದೆ.

ಚರ್ಮದಿಂದ ಮಾಡಲಾಗುವ ಚಪ್ಪಲಿಗಳು ಮತ್ತು ಅವುಗಳ ರಿಪೇರಿ ಕೆಲಸ, ರೆಕ್ಸಿನ್ ಬ್ಯಾಗು, ಸೂಟ್‌ಕೇಸ್, ಪರ್ಸ್, ಸೀಟಿನ ಕವರ್‌ಗಳು, ಲೆದರ್ ಗ್ಲೌಸ್ ಮೊದಲಾದವುಗಳನ್ನು ತಯಾರಿಸಿ ಸ್ಥಳೀಯ ಮಾರುಕಟ್ಟೆಯ ಬೇಡಿಕೆಯನ್ನು ಪೂರೈಸಲು ಜಿಲ್ಲೆಯಲ್ಲಿ ಹೆಚ್ಚಿನ ಅವಕಾಶವಿರುವುದರಿಂದ ನಿರುದ್ಯೋಗಿ ಯುವಕರು ಈ ಉದ್ಯಮದಲ್ಲಿ ತೊಡಗಿಕೊಳ್ಳುವುದರ ಮೂಲಕ ತಮ್ಮ ಆದಾಯದ ಮಟ್ಟವನ್ನು ಹೆಚ್ಚಿಸಿಕೊಳ್ಳಬಹುದಾಗಿದೆ.

ರಬ್ಬರ್ ಮತ್ತು ಪ್ಲಾಸ್ಟಿಕ್‌ಗಳನ್ನು ಉಪಯೋಗಿಸಿ, ಟೈರ್‌ಗಳ ರೀಟ್ರೇಡಿಂಗ್, ರಬ್ಬರ್ ಮೌಲ್ಡೆಡ್ ಗೂಡ್ಸ್, ರಬ್ಬರ್ ಸ್ಟ್ಯಾಂಪ್ಸ್, ರೀಪ್ರೋಸೆಸ್ ಆಫ್ ವೇಸ್ಟ್ ಪ್ಲಾಸ್ಟಿಕ್ಸ್, ಪ್ಲಾಸ್ಟಿಕ್ ಬಳೆಗಳು, ಪ್ಲಾಸ್ಟಿಕ್ ಕುರ್ಚಿ, ಬ್ಯಾಗು, ಇಂಜೆಕ್ಷನ್ ಮೌಲ್ಡೆಡ್ ಪ್ಲಾಸ್ಟಿಕ್ ಪ್ರಾಡಕ್ಟ್ಸ್, ಬ್ಲೋ ಮೌಲ್ಡೆಡ್ ಪ್ಲಾಸ್ಟಿಕ್ ಕಂಟೈನರ್ಸ್, ಪಾಲಿಥೀನ್ ಬ್ಯಾಗು, ರಬ್ಬರೈಸ್ಡ್ ಕಾಯಿರ್ ಫೋಮ್ ಮ್ಯಾಟ್ರೆಸ್, ಉತ್ತಮ ಗುಣಮಟ್ಟದ ಪಿವಿಸಿ ಪೈಪ್ಸ್ ಮೊದಲಾದವುಗಳ ತಯಾರಿಕಾ ಘಟಕಗಳನ್ನು ಸ್ಥಾಪಿಸಲು ಜಿಲ್ಲೆಯಲ್ಲಿ ಹೆಚ್ಚಿನ ಅವಕಾಶವಿದೆ.

ರಾಸಾಯನಿಕ ಮತ್ತು ತತ್ಸಂಬಂಧ ಉತ್ಪಾದನೆಗಳಾದ ಅಗರಬತ್ತಿ, ಕ್ಲೀನಿಂಗ್ ಪೌಡರ್, ಕರ್ಪೂರ, ಫೀನಾಯಿಲ್, ವ್ಯಾಕ್ಸ್ ಕ್ಯಾಂಡಲ್ಸ್, ಡಿಟರ್‌ಜೆಂಟ್ ಪೌಡರ್, ಫ್ರೆಂಚ್ ಪಾಲಿಷ್, ನುಸಿಗುಳಿಗೆ, ಸಿಂಧೂರ್, ಬಿಂದಿ, ಡಿಟರ್‌ಜೆಂಟ್ಸ್

ಕೇಕ್ಸ್, ಲೂಬ್ರಿಕೇಟಿಂಗ್ ಗ್ರೀಸ್, ಮೊದಲಾದವುಗಳ ಬೇಡಿಕೆ ಜಿಲ್ಲೆಯಲ್ಲಿ ಹೆಚ್ಚಾಗಿರುವುದರಿಂದ ಇವುಗಳ ತಯಾರಿಕಾ ಕಾರ್ಯದಲ್ಲಿ ತೊಡಗಲು ಅವಕಾಶ ಹೆಚ್ಚಾಗಿರುವುದು.

ಗಾಜು ಮತ್ತು ಪಿಂಗಾಣಿ ವ್ಯಾಪ್ತಿಯಲ್ಲಿ ಬರುವ ಸೀಮೆ ಸುಣ್ಣ, ಇಟ್ಟಿಗೆ, ಮಣ್ಣಿನ ಪಾತ್ರೆ, ಹೂಕುಂಡ, ಗ್ರಾನೈಟ್ ಕಟ್ಟಿಂಗ್ ಮತ್ತು ಪಾಲಿಷಿಂಗ್, ಸಿಮೆಂಟ್ ಗ್ರಿಲ್ಸ್, ಸಿಮೆಂಟ್ ಹಾಲೋಬ್ರಿಕ್ಸ್, ಟೇಬಲ್ ಮೌಲ್ಡೆಡ್ ಬ್ರಿಕ್ಸ್ ಮೊದಲಾದವುಗಳ ಬೇಡಿಕೆ ಹೆಚ್ಚಾಗಿರುವುದರಿಂದ ಅವುಗಳ ಉತ್ಪಾದನಾ ಘಟಕಗಳನ್ನು ಪ್ರಾರಂಭಿಸಲು ಹೆಚ್ಚಿನ ಅವಕಾಶವಿದೆ.

ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಉತ್ಪಾದನಾ ವ್ಯಾಪ್ತಿಯಲ್ಲಿನ ಸಣ್ಣ ಟ್ರಾನ್ಸ್‌ಫಾರ್ಮರ್ಸ್, ಮೋಟಾರ್ ರೀವೈಂಡಿಂಗ್, ವೊಲ್ಟೇಜ್ ಸ್ಟೆಬಿಲೈಸರ್, ಪಿವಿಸಿ ವೈರ್ ಕೇಬಲ್ಸ್, ಎಲೆಕ್ಟ್ರಿಕಲ್ ಸ್ಟಾಂಪಿಂಗ್ಸ್, ಎನಾಯಲ್ಡ್ ಕಾಪರ್ ವೈರ್, ಎಲೆಕ್ಟ್ರಾನಿಕ್ ಚೋಕ್ಸ್, ಎಮರ್‌ಜೆನ್ಸಿ ಲ್ಯಾಂಪ್ಸ್, ಯುಪಿಎಸ್ ಮ್ಯಾನುಫ್ಯಾಕ್ಚರಿಂಗ್ ಮೊದಲಾದವುಗಳ ಉತ್ಪಾದನಾ ಕಾರ್ಯದಲ್ಲಿ ತೊಡಗುವುದರಿಂದ ಸ್ಥಳೀಯ ಬೇಡಿಕೆಯನ್ನು ಪೂರೈಸಬಹುದಾಗಿದೆ.

ಜನರಲ್ ಎಂಜಿನಿಯರಿಂಗ್ ವ್ಯಾಪ್ತಿಯಲ್ಲಿನ ಫ್ಯಾಬ್ರಿಕೇಷನ್, ವೆಲ್ಡಿಂಗ್, ಗೋಬರ್ ಗ್ಯಾಸ್ ಪ್ಲಾಂಟ್, ವ್ಯವಸಾಯೋಪಕರಣಗಳು, ಗೇಟ್ ಮತ್ತು ಗ್ರಿಲ್ಸ್, ರೋಲಿಂಗ್ ಷಟರ್ಸ್, ಐರನ್ ಹಿಂಜಸ್, ಆಟೋ ಮೊಬೈಲ್ಸ್‌ನ ಬಿಡಿಭಾಗಗಳು, ಅಲ್ಯೂಮಿನಿಯಂ ಬಾಗಿಲು ಮತ್ತು ಕಿಟಕಿ, ವೆಲ್ಡೆಡ್ ವೈರ್‌ಮೆಷ್ ಮೊದಲಾದವುಗಳ ಬೇಡಿಕೆ ಜಿಲ್ಲೆಯಲ್ಲಿ ಹೆಚ್ಚಾಗಿರುವುದರಿಂದ ಈ ಉದ್ಯಮವನ್ನು ಪ್ರಾರಂಭಿಸುವುದರ ಮೂಲಕ ನಿರುದ್ಯೋಗಿ ಯುವಕರಿಗೆ ಉದ್ಯೋಗಾವಕಾಶ ಕಲ್ಪಿಸಿಕೊಡಲು ಹೆಚ್ಚಿನ ಅವಕಾಶವಿದೆ.

ರಿಪೇರಿ ಮತ್ತು ಸೇವಾ ವ್ಯಾಪ್ತಿಗೊಳಪಡುವ ಟೆಲಿವಿಷನ್, ಆಟೋ ಮೊಬೈಲ್ಸ್, ನೀರಾವರಿ ಪಂಪ್ ಸೆಟ್ಟುಗಳು, ವಿದ್ಯುತ್ ಉಪಕರಣಗಳು, ಮೊಬೈಲ್ ಫೋನ್, ಬ್ಯಾಟರಿ ರೀಚಾರ್ಜ್, ಬೋರ್‌ವೆಲ್ ಪಂಪ್‌ಸೆಟ್ಟುಗಳು, ವಾಚು, ರೆಫ್ರಿಜರೇಟರ್ ಮೊದಲಾದವುಗಳ ರಿಪೇರಿ ಕಾರ್ಯ ಜಿಲ್ಲೆಯಲ್ಲಿ ಹೆಚ್ಚಾಗಿರುವುದರಿಂದ ಯುವಕರು ಈ ಕ್ಷೇತ್ರಗಳಲ್ಲಿ ತೊಡಗಿಸಿಕೊಳ್ಳುವುದರ ಮೂಲಕ ತಮ್ಮ ಆದಾಯದ ಮಟ್ಟವನ್ನು ಹೆಚ್ಚಿಸಿಕೊಳ್ಳುವುದರ ಜೊತೆಗೆ ಸ್ಥಳೀಯ ಬೇಡಿಕೆಯನ್ನು ಪೂರೈಸಬಹುದಾಗಿದೆ.

***